ಸಂವಾದ

ಆಗಸ್ಟ್ 2012 ರೂ. 20

ಒಕ್ಕಲಿಗರು ಬೇಡ್ದರೇ?

ಬೆಳಕು ತೋರಿದ ಕರುಣಾಳು

ಆರ್. ಭರಣಯ್ಯ

Since 1966

EMPIRE®

TASTE OF BANGALORE

A Division of

NKP Empire Ventures Pvt. Ltd.

Home Delivery 080 - 4041 4141

Room Reservation 080 - 4041 4041

Branches

Central Street, Church Street, Koramangala, Castle Street, Kammanahalli
Indiranagar, Vasanthnagar, Mosque Road, Orion Mall, Garuda Mall, Mysore, Maddur

www.hotelempire.in, E-mail : info@hotelempire.in

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 10

ಆಗಸ್ಟ್ 2012

ಸಂಪಾದಕ:

ಇಂದೂಧರ ಹೊನ್ನಾಪುರ

ಉಪ ಸಂಪಾದಕ:

ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ



- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ:
  - ಪಿ. ಸಿದ್ದರಾಜು ೦೬
  - ನಾ ದಿವಾಕರ ೦೭
  - ಸನತ್‌ಕುಮಾರ್ ಬೆಳಗಲಿ ೦೮
  - ಉಮಾಶಂಕರ್ ಹೆಚ್.ಡಿ. ೦೯
  - ಡಾ॥ ರಾಜೇಗೌಡ ಹೊಸಹಳ್ಳಿ ೧೦
- ಒಕ್ಕಲಿಗರು ಬೌದ್ಧರೇ?
  - ಪ್ರೊ॥ ಕೆ.ಎಸ್ ಭಗವಾನ್ ೧೨
- ಅಂಬೇಡ್ಕರ್ ಮತ್ತು ಸಮಾಜವಾದ
  - ಬಾಪೂ ಹೆದ್ದೂರಶೆಟ್ಟಿ ೧೮

- ನಾಗರಿಕತೆಗಳು: ಸಂಘರ್ಷವೋ, ಸಂವಾದವೋ
  - ಡಾ॥ ಅಸ್ಗರ್‌ಅಲಿ ಎಂಜನಿಯರ್
  - ಅನು: ಹಸನ್ ನಯೀಂ ಸುರಕೋಡ ೨೨
- ಗೋಸಂಗಿ: ಜಂಬೂ ಗುಡಿಗರ್ಭದಲ್ಲಿ ಉರಿಯುವ ರಾಗದೀಪ
  - ವಡ್ಡಗೆರೆ ನಾಗರಾಜಯ್ಯ ೨೬
- ಜಾನಪದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅಂತರ್ ಶಿಸ್ತೀಯ ಅಧ್ಯಯನದ ಅಗತ್ಯ
  - ಸಂಗಮೇಶ್ ಎಸ್. ಗಣಿ ೩೨
- ಜಾತಿವಿರೋಧಿ ಶಕ್ತಿಗಳ ಒಗ್ಗೂಡುವಿಕೆ ಅನಿವಾರ್ಯ– ತೇಲ್ತುಂಬ್ಡೆ ಸಂದರ್ಶನ
  - ಮೂಲ: ಆರ್.ಕೆ. ಬಿಜುರಾಜ್
  - ಅನು: ಡಾ॥ ಎಚ್.ಎಸ್. ಅನುಪಮಾ ೩೪
- ಬೆಳಕು ತೋರಿದ ಆರ್. ಭರಣಯ್ಯ
  - ಡಾ॥ ಅಪ್ಪಗೆರೆ ಸೋಮಶೇಖರ್ ೩೮



- ನೋಯುವ ಹಲ್ಲಿಗೆ ಹೊರಳುವ ನಾಲಿಗೆ–೯
  - ಡಾ. ಎಚ್.ಎಸ್ ಅನುಪಮಾ ೪೦
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೪
- ಮುಲ್ಲಾ ನಸ್ರುದ್ದೀನ್ ಕಥೆಗಳು ೪೮
- ಹೊಸ ಪುಸ್ತಕ ೫೧
- ಕವನ:
  - ಕಲ್ಲು ಕರಗುವ ಸಮಯ ೦೫
  - ಆಲಿಂಗನ ೪೮

ಮುಖಪುಟ ವಿನ್ಯಾಸ: ಮುರಳೀಧರ ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಿಕ್ಕಿದವರಿಗೆ ಸೀರುಂಡೆ ಸರ್ಕಾರ

ಜೆಡಿಎಸ್‌ನ ವಚನಭ್ರಷ್ಟತೆಯ ಅವಿವೇಕತನವನ್ನು ಸಮಯೋಚಿತವಾಗಿ ಬಳಸಿಕೊಂಡಾಗ್ಯೂ, ಬಿಜೆಪಿ ಪಕ್ಷಕ್ಕೆ ಸರ್ಕಾರ ರಚಿಸಲು ದೊರಕದೇಹೋದ ಸಂಖ್ಯಾಬಲವನ್ನು 'ಆಪರೇಷನ್ ಕಮಲ' ಎಂಬ ವಿನೂತನ ಭ್ರಷ್ಟಾಚಾರದ ಮೂಲಕ ಗಳಿಸಿಕೊಂಡು, ಸಮಾಜ ಸೇವೆಯೇ ಮುಖ್ಯ ಧ್ಯೇಯೋದ್ದೇಶವಾಗಿದ್ದ ರಾಜಕಾರಣವನ್ನು ಕಡುಭ್ರಷ್ಟಗೊಳಿಸಿದ ಕುಕೀರ್ತಿಗೆ ಶಿಸ್ತಿನ(?!) ಬಿಜೆಪಿ ಸರ್ಕಾರ ಭಾಜನವಾಗಿದೆ.



ಇದೀಗ ಜಾತಿರಾಜಕಾರಣವನ್ನು ತಮ್ಮ ಅನುಕೂಲ ಹಾಗೂ ಹಿತಾಸಕ್ತಿಗಳಿಗೆ ಅನುಗುಣವಾಗಿ ಬಳಸಿಕೊಳ್ಳುವ ಕುಬುದ್ಧಿವಂತಿಕೆಯಲ್ಲಿ ನಮ್ಮ ಜನಪ್ರತಿನಿಧಿಗಳು ಸಾಮಾಜಿಕ ಬದ್ಧತೆ, ವೈಯಕ್ತಿಕ ನೈತಿಕತೆ ಹಾಗು ಆತ್ಮಸಾಕ್ಷಿಗಳ ಪರಿವೆಯೇ ಇಲ್ಲದಂತೆ ವರ್ತಿಸುತ್ತಿರುವುದು ನಮ್ಮ ಶ್ರೇಷ್ಠ ಸಂವಿಧಾನದ ಮೂಲ ಆಶಯಗಳಲ್ಲೊಂದಾದ ಜಾತ್ಯಾತೀತತೆಗೆ ಎಸಗುತ್ತಿರುವ ಅಪಚಾರವಲ್ಲವೇ?

'ಆಪರೇಷನ್ ಕಮಲ'ದೊಂದಿಗೆ ಪ್ರಾರಂಭವಾದ ಬಿಜೆಪಿಯ ಕುರ್ಚಿಗಾಗಿ ಕಿತ್ತಾಟ, ಅಧಿಕಾರಕ್ಕಾಗಿ ಕಚ್ಚಾಟ 'ಬಣ'ರಾಜಕಾರಣವಾಗಿ ಇಂದು 'ಜಾತಿ'ರಾಜಕಾರಣವಾಗಿ ಮಾರ್ಪಟ್ಟಿದೆ. ಪಟ್ಟಭದ್ರ ಮೇಲ್ವರ್ಗಗಳ ಭ್ರಷ್ಟ ರಾಜಕಾರಣಿಗಳು ಕರ್ನಾಟಕದಲ್ಲಿ ಹಿಂದೆಂದೂ ಕಂಡರಿಯದ ರಾಜಕೀಯ ಅರಾಜಕತೆಗೆ ಎಡೆಮಾಡಿಕೊಟ್ಟಿದೆ. 'ರಾಜ್ಯದ ಅಭಿವೃದ್ಧಿ ಮಂತ್ರ'(?)ವನ್ನು ಪಠಿಸುತ್ತಾ, ತಮ್ಮ ಹಾಗು ತಮ್ಮ ಬೆಂಬಲಿಗ ಬಣದ ಸದಸ್ಯರ ವೈಯಕ್ತಿಕ ಅಭಿವೃದ್ಧಿಯನ್ನು ಅನೈತಿಕ ಹಾಗೂ ಭ್ರಷ್ಟ ಮಾರ್ಗಗಳಿಂದ ವೃದ್ಧಿಸಿಕೊಳ್ಳುತ್ತಾ ಸಮಗ್ರ ಆಡಳಿತಯಂತ್ರವನ್ನೇ ದಿಕ್ಕುತಪ್ಪಿಸಿದೆ.

ಯೆಡ್ಯೂರಪ್ಪನವರ ಭರವಸೆಗಳ ಭರಪೂರಕ್ಕೆ ಬೆರಗಾಗಿ ಅಪಾರ ನಿರೀಕ್ಷೆಗಳೊಂದಿಗೆ ಮತ ನೀಡಿದ ಅಮಾಯಕ ಮತದಾರಪ್ರಭು ಬೆಪ್ಪುತಕ್ಕಡಿಯಂತೆ ಮೈ ಪರಚಿಕೊಳ್ಳುತ್ತಿದ್ದಾನೆ.

ಧೂರ್ತ ರಾಜಕಾರಣಿಗಳು, ಪ್ರಾಮಾಣಿಕ ಅಧಿಕಾರಿಗಳಿಗೂ ಲಂಚ-ರುಷುವತ್ತುಗಳ ರುಚಿ ಹತ್ತಿಸಿ ಕಳಂಕಿತರನ್ನಾಗಿಸಿ, ತಪ್ಪಿತಸ್ತರು ಕಾನೂನಿನ ಕಣ್ಣು ತಪ್ಪಿಸಿಕೊಳ್ಳಲಾಗದೆ ಪರಿತಪಿಸುವವರಿಗೆ ರಕ್ಷಣೆಯ ಅಭಯವನ್ನು ನೀಡುತ್ತಾ ತಮ್ಮ ಅನೈತಿಕ ಅವ್ಯವಹಾರಗಳಿಗೆ ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ತಮ್ಮ ಅಕ್ರಮ ಗಳಿಕೆಯ ಭಾಗವನ್ನು ತಮ್ಮ ಜಾತಿಯ ಮಠ ಮಾನ್ಯಗಳಿಗೂ ಹಂಚಿ, ಮಠಾಧೀಶರನ್ನೂ ಭ್ರಷ್ಟರನ್ನಾಗಿಸಿ ತಮ್ಮ ಹಿತಾಸಕ್ತಿಗಳನ್ನು ಬೆಂಬಲಿಸಲು ಜಗದ್ಗುರು(?)ಗಳನ್ನು ಬೀದಿಗೆ ಎಳೆದು ತಂದಿದ್ದಾರೆ.

'ಮೂರೂ ಬಿಟ್ಟವ ಊರಿಗೆ ದೊಡ್ಡವ' ಎನ್ನುವ ಕುಲುಕ್ತಿಯಂತೆ ಭ್ರಷ್ಟರು ಕಳಂಕಿತರು, ಅತ್ಯಾಚಾರಿ ಶಾಸಕರು ರಾಜಾರೋಷವಾಗಿ ತಮ್ಮ ಹೇಯ ಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಅಧಿಕಾರವನ್ನು ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ಚಾಣಾಕ್ಷತನದಿಂದ ಸರ್ಕಾರ ಉರುಳದಂತೆ ಶತಾಯ ಗತಾಯ ಷಡ್ಯಂತ್ರ ರೂಪಿಸುತ್ತಿದ್ದಾರೆ.

ಈ ನಡುವೆ, ಪಟ್ಟಭದ್ರ ಹಿತಾಸಕ್ತ ಬಲಿಷ್ಟ ಮೇಲ್ವರ್ಗದವರ ಒಡೆದು ಆಳುವ ನೀತಿ, ದಲಿತರು ಮತ್ತು ಶೋಷಿತ ವರ್ಗಗಳ ನಡುವೆಯೇ ಮೇಲು-ಕೀಳು ಭಾವನೆಗಳನ್ನು ಹುಟ್ಟುಹಾಕಿ, ಒಳ ಮೀಸಲಾತಿಯ ಆಮಿಷದ ಬೀಜ ಬಿತ್ತಿ ಒಡಕು ಮೂಡಿಸಿ ಡಾ॥ ಅಂಬೇಡ್ಕರ್ ಅವರ ಶೋಷಿತರ ರಾಜಕೀಯ ಪ್ರಾಬಲ್ಯದ ಆಶಯವು ಮರೀಚಿಕೆಯಾಗಿಯೇ ಉಳಿಯುವಂತಾಗಿಸುವ ಹುನ್ನಾರ ಯಶಸ್ವಿಯಾಗುವಂತೆ ನೋಡಿಕೊಳ್ಳಲಾಗುತ್ತಿದೆ.

ಪ್ರಾಕೃತಿಕ ವಿಕೋಪ, ರಾಜಕೀಯ ಅರಾಜಕತೆ, ಗಗನಕ್ಕೇರುತ್ತಿರುವ ಬೆಲೆ ಏರಿಕೆ, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ, ಉಳ್ಳವರ ಶೋಷಣೆಗಳಿಂದಾಗಿ ದಲಿತ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳು ಸ್ವಾತಂತ್ರ್ಯ ದೊರೆತು ಆರು ದಶಕಗಳೇ ಕಳೆದರೂ ಅನಾಥವಾಗಿವೆ.

ಬಹುಸಂಖ್ಯಾತ ಶೋಷಿತವರ್ಗಗಳನ್ನು ಪ್ರತಿನಿಧಿಸುತ್ತಿರುವ 'ಲೆಕ್ಕಕ್ಕುಂಟು-ಆಟಕ್ಕಿಲ್ಲ'ದ ನರಸತ್ತ ಶಾಸಕರು ಗೆದ್ದ ಎತ್ತಿನ ಬಾಲ ಹಿಡಿಯುವ ಹೆಗ್ಗಳಿಕೆಯಲ್ಲಿಯೇ ಕೃತಾರ್ಥರಾಗುತ್ತಿರುವಂತಿದೆ. ಗುಂಪುಗಾರಿಕೆ, ಜಾತಿರಾಜಕಾರಣ, ಒತ್ತಡತಂತ್ರ, ಹಣಬಲ, ತೋಳ್ಬಲಗಳೇ ಪ್ರಮುಖ ರಾಜಕೀಯ ತಂತ್ರಗಳನ್ನಾಗಿ ಬಳಸಿಕೊಳ್ಳುತ್ತಿರುವ ಭ್ರಷ್ಟರಾಜಕಾರಣಿಗಳು ಸಚಿವ ಸ್ಥಾನಗಳನ್ನು ಗಿಟ್ಟಿಸಿಕೊಂಡು ರಾಜ್ಯದ ಸಂಪತ್ತುಗಳನ್ನು ಕೊಳ್ಳೆ ಹೊಡೆಯುತ್ತಿದ್ದಾರೆ.

ಒಬ್ಬಿಬ್ಬ ಪ್ರಮಾಣಿಕ ದಲಿತ ರಾಜಕಾರಣಿಗಳ ಸಾಮಾಜಿಕ ನ್ಯಾಯಪರವಾದ ಹೋರಾಟ ಅರಣ್ಯರೋಧನದಂತಾಗಿದೆ. ಇದಕ್ಕೆ ದಲಿತ ಶಾಸಕ ಕುಮಾರಸ್ವಾಮಿಯವರ ಏಕಾಂಗಿ ಹೋರಾಟ ಉತ್ತಮ ಉದಾಹರಣೆ ಎನಿಸುವುದಿಲ್ಲವೆ? ಮಕ್ಕಳ 'ಸಿಕ್ಕಿದವರಿಗೆ ಸೀರುಂಡೆ' ಆಟದಂತಿರುವ ಇಂದಿನ ರಾಜಕೀಯ ದೊಂಬರಾಟದಲ್ಲಿ ಸಮಸ್ತ ಶೋಷಿತ ವರ್ಗಗಳ ಸಾಮಾಜಿಕ ನ್ಯಾಯದ ಸಾಮಾನ್ಯ ಸಮಸ್ಯೆಗಳ ಹೋರಾಟಕ್ಕೆ ಪಕ್ಷಾತೀತವಾಗಿ ಬೆಂಬಲಿಸಬೇಕಾದುದು ದಲಿತ ನಾಯಕರೆಲ್ಲರ ಆದ್ಯ ಕರ್ತವ್ಯವಲ್ಲವೆ?

ಬಿ.ಎಂ. ಮಹಾದೇವ್‌ಮೂರ್ತಿ, ಮೈಸೂರು

ಪತ್ರಾಗಾರ

ಆಂತರಿಕ ಕಿತ್ತಾಟ ಅಭಿವೃದ್ಧಿಗೆ ಮಾರಕ

ಜನಮಾನಸದಲ್ಲೊಂದು ಉಕ್ತಿಯಿದೆ. "ಹೊಸ ಕಸಪೊರಕೆಯು ಮನೆಯ ಮೂಲೆ ಮಗ್ಗಲಿನ ಧೂಳು ಕಸಗಳನ್ನು ಬಹಳ ಶುದ್ಧಿಮಾಡುತ್ತದೆ" .ಎಂದು. ಅಂತೆಯೇ, ರಾಜ್ಯವನ್ನಾಳಲು ಹೊಸ ಸರ್ಕಾರವೊಂದು ಅಸ್ತಿತ್ವಕ್ಕೆ ಬಂದಿದೆ. ಅದು ಜಗದೀಶ್ ಶೆಟ್ಟರ್ ನೇತೃತ್ವದ ಬಿ.ಜೆ.ಪಿ. ಸರ್ಕಾರ. ಈ ಹೊಸ ಸರ್ಕಾರ ಕರ್ನಾಟಕ ಎಂಬ ಮನೆಯಲ್ಲಿ ಸಾಕಷ್ಟು ದುಃಖ-ದುಮ್ಮಾನಗಳನ್ನು, ಹುಳುಕು-ಕೊಳಕುಗಳನ್ನು, ಸಮಸ್ಯೆಗಳನ್ನು ಪರಿಹರಿಸುವ ಅನಿವಾರ್ಯತೆ ಇದೆ. ರಾಜ್ಯದಲ್ಲಿ ಬರ ತಾಂಡವ ನೃತ್ಯ ಪ್ರದರ್ಶಿಸಿದೆ. ಕೃಷಿ ಚಟುವಟಿಕೆ ಹಿನ್ನಡೆ ಕಂಡಿದೆ. ನದಿ-ಜಲಾಶಯಗಳು ಬರಿದಾಗಿ ಬಡಕಲಾಗಿವೆ.

ಭ್ರಷ್ಟಾಚಾರಕ್ಕೆ ಅಂಕುಶ ಹಾಕುವ ಲೋಕಾಯುಕ್ತ ಸಂಸ್ಥೆಗೆ ನಾವಿಕನಿಲ್ಲ. ಶಿಕ್ಷಣ ಹಕ್ಕು ಕಾಯ್ದೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಬೆಳಗಾವಿಗಾಗಿ ಪಕ್ಕದ ಮಹಾರಾಷ್ಟ್ರ ಸರ್ಕಾರ ತಗಾದೆ ತಗೆಯುತ್ತಿದೆ. ಅಪೌಷ್ಟಿಕತೆ ಎಂಬ ಭೂತ ಸೇಡಂನಂತಹ ತಾಲ್ಲೂಕುಗಳಲ್ಲಿ ಮಹಿಳೆ-ಮಕ್ಕಳನ್ನು ಆಪೋಶನ ತೆಗೆದುಕೊಳ್ಳಲು ಹೊಂಚು ಹಾಕಿ ಕುಳಿತಿದೆ. ಇವುಗಳನ್ನೆಲ್ಲ ಇನ್ನುಳಿದ ಹತ್ತು ತಿಂಗಳಲ್ಲಿ ಪರಿಹರಿಸಿಬಿಡಿ ಎಂದು ಹೇಳುವಷ್ಟು ಮೂರ್ಖರು ರಾಜ್ಯದ ಜನತೆಯಲ್ಲ. ಆದರೆ ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಮಾಣಿಕ ಪ್ರಯತ್ನವನ್ನಾದರೂ ಮಾಡಿ ಎಂಬುದೇ ಜನತೆಯ ಆಶಯ.

ಪಕ್ಷದ ಆಂತರಿಕ ಸಮಸ್ಯೆಗಳನ್ನು ಪಕ್ಷದ ಹಂತದಲ್ಲಿಯೇ ಪರಿಹರಿಸಿಕೊಳ್ಳಬೇಕು. ಪಕ್ಷದ ಆಂತರಿಕ ಕಿತ್ತಾಟಗಳು ಸರ್ಕಾರದ ಮೇಲೆ ನೇತ್ಯಾತ್ಮಕ ಪರಿಣಾಮ ಬೀರದಂತೆ ನಿಗಾವಹಿಸಿ ರಾಜ್ಯದ ಹಿತಕಾಯಬೇಕಾದ್ದು ಹೊಸ ಸರ್ಕಾರದ ಆದ್ಯ ಕರ್ತವ್ಯವಾಗಬೇಕು.

ಹರಿಶಂಕರ್. ಆರ್. ಬೆಂಗಳೂರು ವಿ.ವಿ.

ಪ್ರಕಟಣೆ: ಅನಿವಾರ್ಯ ಕಾರಣಗಳಿಂದ ಡಾ॥ ಬಿ.ಎಂ. ಪುಟ್ಟಯ್ಯ ಅವರ 'ಬತ್ತದ ಬಯಲು' ಅಂಕಣ ಪ್ರಕಟವಾಗುತ್ತಿಲ್ಲ. ಮುಂದಿನ ಸಂಚಿಕೆಯಿಂದ ಎಂದಿನಂತೆ ಪ್ರಕಟಗೊಳ್ಳಲಿದೆ-ಸಂ.

ಅರಗಿನ ಅರಮನೆ

ಉರ್ದು ಮೂಲ: ರುಕ್ಸಾನಾ ಅಹ್ಮದ್
ಕನ್ನಡಕ್ಕೆ: ಅನುಪಮಾ

ನಾನು ಮದುವೆಯಾಗುವ ಮೊದಲು
ನನ್ನ ಅಮ್ಮ ದಿನವ್ವೂ
ದುಃಸ್ವಪ್ನ ಕಾಣುತ್ತಿದ್ದಳು
ಅವಳ ಭಯಪೂರಿತ ಕಿರುಚಾಟಗಳು ನನ್ನ ನಡುಗಿಸುತ್ತಿದ್ದವು
ಅವಳನ್ನು ಎಚ್ಚರಿಸಿ, ಕೇಳುತ್ತಿದ್ದೆ
'ಏನಾಯಿತು?'
ಶೂನ್ಯನೋಟ ಬೀರುತ್ತಾ ದುರುಗುಟ್ಟುತ್ತಿದ್ದಳು
ಕನಸುಗಳು ಮಾತ್ರ ನೆನಪಾಗುತ್ತಿರಲಿಲ್ಲ

ಒಂದು ದಿನ
ಕೆಟ್ಟ ಕನಸೊಂದು ಅವಳನ್ನು ಎಚ್ಚರಿಸಿತು
ಆದರವಳು ಕಿರುಚಲಿಲ್ಲ
ಮೌನಭಯದಲ್ಲಿ ನನ್ನ ಅಪ್ಪಿ ಹಿಡಿದಳು
ನಾನು ಕೇಳಿದೆ,
'ಏನಾಯಿತು?'
ಕಣ್ತೆರೆದು ದೇವರಿಗೆ ವಂದಿಸುತ್ತ
'ನೀನು ಮುಳುಗುತ್ತಿರುವಂತೆ ಕನಸ ಕಂಡೆ'
ಎಂದಳು.
'ಮತ್ತು ನಿನ್ನನುಳಿಸಲು ನಾನು ಹೊಳೆಗೆ ಹಾರಿದೆ...'

ಆ ರಾತ್ರಿ ಎರಗಿದ ಸಿಡಿಲು
ನಮ್ಮ ಎಮ್ಮೆ ಹಾಗು ಭಾವೀಪತ್ನಿಯನ್ನು ಕೊಂದಿತು

ಒಂದು ರಾತ್ರಿ ಅಮ್ಮ ನಿದ್ರಿಸಿದ್ದಳು
ನಾನು ಎಚ್ಚೆತ್ತು ಕುಳಿತಿದ್ದೆ
ಅವಳ ಮುಷ್ಟಿ
ಕಟ್ಟಿಕೊಳ್ಳುತ್ತ ಬಿಚ್ಚಿಕೊಳ್ಳುತ್ತಿರುವುದನ್ನೇ ಗಮನಿಸುತ್ತಾ...
ಏನನ್ನೋ ಹಿಡಿಯಲು ಯತ್ನಿಸುತ್ತಿದ್ದಳು
ಆಗದೇ ಮತ್ತೆಮತ್ತೆ ಹಿಡಿಯ ಹೋಗುತ್ತಿದ್ದಳು...

ಅವಳ ಎಚ್ಚರಿಸಿದೆ
ಆದರೆ ತನ್ನ ಕನಸನ್ನು ನನಗೆ ಹೇಳಲೇ ಇಲ್ಲ

ಅಂದಿನಿಂದ
ನಾನು ಗಾಢನಿದ್ರೆ ಮಾಡಿಲ್ಲ
ಬೇರೊಂದು ಜಗಲಿಗೆ ಜಾಗ ಬದಲಿಸಿದ್ದೇನೆ

ಈಗ ನಾನೂ ನನ್ನ ಅಮ್ಮನೂ
ನಮ್ಮ ದುಃಸ್ವಪ್ನಗಳಿಗೆ ಕಿರುಚಾಡುತ್ತೇವೆ

ಮತ್ತು ಯಾರಾದರೂ ಕೇಳಿದರೆ
ಇಷ್ಟೇ ಹೇಳಿಬಿಡುತ್ತೇವೆ
ಕನಸುಗಳು ನಮಗೆ ನೆನಪಿರುವುದಿಲ್ಲವೆಂದು... ■



ಸಂಪಾದಕರೊಡನೆ ಸಂವಾದ

ಸಂವಿಧಾನವೇ ಭಾರತದ ಧರ್ಮವಾಗಲಿ

ಪಿ. ಸಿದ್ದರಾಜು

ಪ್ರೀತಿಯ ಸಂಪಾದಕರೇ,

ಶತಶತಮಾನಗಳಿಂದ ಸಮುದ್ರದ ಅಲೆಯಂತೆ ಒಂದರ ಮೇಲೊಂದು ಹುಟ್ಟುತ್ತಿರುವ ಅಲೆಗಳ ಒಡೆತಗಳಿಂದ ಮನುಷ್ಯನಿಗೆ ಇಂದಿಗೂ ಶಾಂತಿ ದೊರಕುತ್ತಿಲ್ಲ. ಅಧಿಕಾರದ ಆಸೆ, ಹಣದ ಆಸೆ, ಕೀರ್ತಿಯ ಆಸೆ ಹೀಗೆ ಹತ್ತಾರು ಆಸೆಗಳಿಗೆ ದಾಸನಾದ ಮನುಷ್ಯನು ಅವುಗಳ ಪ್ರಾಪ್ತಿಗಾಗಿ ಹಪಹಪಿಸುತ್ತಿದ್ದಾನೆ. ಅನ್ಯರ ಸೇವೆ, ಅನ್ಯರ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಯೋಚಿಸುವುದಿಲ್ಲ. ಯಾವ ವ್ಯಕ್ತಿ ಜನಸಮುದಾಯದ ಅಭಿವೃದ್ಧಿ ಕಡೆ ಗಮನ ಕೊಟ್ಟು ಎಲ್ಲರ ದುಃಖ ದುಮ್ಮಾನಗಳಿಗೆ ಸ್ಪಂದಿಸಿ ಪರಿಶ್ರಮಿಸುತ್ತಾನೋ ಆ ವ್ಯಕ್ತಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಅರ್ಹನಾಗುತ್ತಾನೆ. ಜನರ ಕಷ್ಟಗಳು ಮತ್ತು ಇಂಗಿತಗಳ ಬಗ್ಗೆ ಸ್ಪಂಧಿಸದೆ ಹೋದರೆ ಕಳಪೆ ಮನುಷ್ಯನಾಗಿ ಬದುಕಬೇಕಾಗುತ್ತವೆ. ಇಲ್ಲದಿದ್ದರೆ ಮಾನವೀಯ ಗುಣಮೌಲ್ಯಗಳು ಸಂಕಷ್ಟಕ್ಕೆ ಸಿಲುಕಿ ಸಮಾಜದಿಂದ ದೂರಕ್ಕೆ ತಳ್ಳಲ್ಪಡುತ್ತದೆ. ಆದರೆ ಇವೆಲ್ಲವೂ ಕಳೆದು ಹೋಗಿಲ್ಲ. 'ಪರಿಸ್ಥಿತಿಯನ್ನು ಕಾಪಾಡುವ ಉತ್ತಮವಾದ ಕಾಲ ಮುಗಿಯಿತು' ಎನ್ನುವ ನಿರಾಶಾದಾಯಕವಾದ ವಾದಗಳನ್ನು ಕೈಬಿಟ್ಟು ದಿಟ್ಟತನದಿಂದಲೇ ಕಾರ್ಯೋನ್ಮುಖರಾದರೆ ಜಯವನ್ನು ನಿಶ್ಚಿತವಾಗಿ ಕಾಣಬಹುದಾಗಿದೆ. ಅಸಮದಾನದ ಆಲೋಚನೆಗಳು ಮನುಷ್ಯನನ್ನು ಕಾಡುತ್ತಿರುವುದು ಸಹಜ. ಸಾಮಾಜಿಕ ವ್ಯವಸ್ಥೆಯಲ್ಲಿ ಈ ರೀತಿ ಅಸಮಾದಾನಗಳು ಅತಿಯಾಗಿ ಅದೆಷ್ಟೋ ಮಂದಿ ಈ ನಿಟ್ಟಿನಲ್ಲಿ ತಮ್ಮ ಬದುಕನ್ನು ನಿರಾಶೆಯಿಂದ ತಳ್ಳಿಕೊಂಡು ಹೋಗುತ್ತಿದ್ದಾರೆ. ಇದು ಪ್ರಾಚೀನತೆಯಿಂದಲೂ ಕಂಡು ಬರುತ್ತಿರುವ ಕಟು ಸತ್ಯವಾಗಿದೆ. ಇದು ಎಂದಿಗೂ ಮರೆಯಲಾಗದ ಅಸಹನೀಯವಾದ ಘಟಕ್ಕೆ ತಲುಪಿದೆ. ಈ ಸಂಕಷ್ಟವನ್ನು ನಿವಾರಿ ಸಲು ಯಾರಿಂದ ಸಾಧ್ಯ? ಪೊಳ್ಳು ನಿರ್ಧಾರಗಳು ತಂತ್ರಗಹಾರಿಕೆಯ ಬದುಕು ಇಂದಿನ ಸಾಮಾಜಿಕ ಪ್ರಕ್ರಿಯೆಗಳ ಸುಧಾರಣಾ ಕ್ರಮಗಳು ಪ್ರಯಾಸದ ವಿಷಯ ಗಳಾಗಿ ಮಾರ್ಪಟ್ಟಿವೆ. ಇದರಿಂದ ಬೆಳವಣಿಗೆಗೆ ಹಿನ್ನಡೆ ಉಂಟಾಗಿದೆ. ಅನರ್ಹರೆಲ್ಲಾ ಅರ್ಹತೆಯ ಸ್ಥಾನಮಾನಗ ಳನ್ನು ಅಲಂಕರಿಸಿದ್ದು ಅರ್ಹರಿಗೆ ಸ್ಥಾನಮಾನಗಳು ನಿರಾಕರಿಸಲ್ಪಟ್ಟಿವೆ. ಸಾಮಾಜಿಕ ಬದುಕಿನ ಮುನ್ನಡೆಗೆ ಯಾವುದೇ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲು ಹಿಂಜರಿಯುವ ಸ್ಥಿತಿ ಉಂಟಾಗಿದೆ. ಹೀಗಾಗಿ ಸುಧಾರಣೆ ಕ್ರಮಗಳು ಅತಂತ್ರ ಸ್ಥಿತಿಯನ್ನು ತಲುಪಿದ್ದು ನಿಷ್ಕ್ರಿಯಗೊಂಡಿವೆ.

ಇಂದು ಮಾನವನ ಬದುಕು ಆಸೆ, ಆಕಾಂಕ್ಷೆಗಳು ನುಚ್ಚುನೂರಾಗಿವೆ. ಹರಿದ ಬದುಕು ಮುರಿದ ಮನಸು, ಸೀಳಿ ಹೋಳಾದ ಸಾಮಾಜಿಕ ಅಸಮಾನತೆಗಳು ಇವೆಲ್ಲಾ ಬವಣೆಗಳು ಹಾಸುಹೊಕ್ಕಾಗಿವೆ. ಕೆಲವರು ಅಸಮಾನತೆಯ ಸಮರ್ಥನೆಗೆ ಧರ್ಮಾಂಧತೆಗೆ ಜೋತುಬಿದ್ದು ಸಂವಿಧಾನಕ್ಕೋಸ್ಕರ ಧರ್ಮವನ್ನು ತ್ಯಜಿಸಲಾರೆ ಎನ್ನುವುದು ಒಂದೆಡೆಯಾದರೆ, ಸಾಮಾಜಿಕ ಅಸಮಾನತೆಯ ಕಠೋರವಾದ ಬದುಕಿನ ವಕ್ರದೃಷ್ಟಿಗೆ ಬಲಿಯಾಗಿ, ಪ್ರಭಲರಿಗೆ ದುರ್ಭಲರಾಗಿ ಭಯಾನಕ ಅಮಾನವೀಯ ಮೌಲ್ಯಗಳ ಸಾಮಾಜಿಕ ಪಿಡುಗಿನ ಮೇಲು ಕೀಳು ಎನ್ನುವಂತಹ ಪ್ರಾಚೀನ ಭಾರತದ ಸವಕಲು ಸಂಸ್ಕೃತಿಯಿಂದ ಬಳಲಿ ಬೆಂಡಾದವರು, ಅಂಧಕಾರದ ಕಗ್ಗತ್ತಲಲ್ಲಿ ಇರುವವರು, ಅಂತರಾಳದ ನೋವಿನ ದುಗುಡದ ಜೀವಿಗಳು 'ಸಂವಿಧಾನವೇ ಭಾರತದ ಧರ್ಮವಾಗಲೀ' ಎನ್ನುವುದು ಸರಿಯಾದ ಕ್ರಮವಾಗಿದೆ. ಈ ಎರಡರ ಮಧ್ಯೆ ಬೇಕು ಬೇಡಗಳ ಜಂಜಾಟದಲ್ಲಿ ತಲೆಯನ್ನು ಕೆಡಿಸಿಕೊಳ್ಳದೆ ಬದುಕುತ್ತಿರುವ ಜೀವಿಗಳು ಮತ್ತೊಂದು ಕಡೆ. ಈ ಎಲ್ಲಾ ತೊಳಲಾಟಗಳನ್ನು ನೋಡುತ್ತಾ ಸಾಮಾಜಿಕ ಕಳಕಳಿಯ ಬಗ್ಗೆ ಸದಾ ಚಿಂತನಾಶೀಲರಾಗಿ ಏಕತೆಯ ಕನಸನ್ನು ಕಾಣುತ್ತಾ ತುಡಿತ ಮಿಡಿತಗಳ ಬಗ್ಗೆ ಉತ್ತರ ಕಾಣದೆ ಪರಿತಪಿಸುತ್ತಿರುವ. ಈ ಮಂದಿ ಬೆರಳೆಣಿಕೆಯಷ್ಟು ಮಾತ್ರ. ನ್ಯಾಯವೇ ಅನ್ಯಾಯವಾಗಿ ಅನ್ಯಾಯವೇ ನ್ಯಾಯವಾಗಿ ಸ್ಥಾನಪಲ್ಲಟಗೊಂಡು ಇವೆಲ್ಲಾ ದುರಂತಗಳನ್ನು ನೋಡಲಾಗದ ನ್ಯಾಯದೇವತೆ ಕಣ್ಮುಚ್ಚಿ ಕುಳಿತಿದ್ದಾಳೆ.

ಕೋಮುವಾದ ಮತ್ತು ಧರ್ಮಾಂಧರು ದೇಶದ ರಾಜಕಾರಣದಲ್ಲಿ ಜಾತಿಯ ವಿಷ ಬೀಜವನ್ನು ಬಿತ್ತಿ ಪಸಲನ್ನು ತೆಗೆಯುತ್ತಿರುವವರು. ಮನೋಭಾವನೆಗೆ ತಕ್ಕಂತೆ ಬಣ್ಣವನ್ನು ಬದಲಾಯಿಸುತ್ತಾ ರಾಷ್ಟ್ರದ ಏಕತೆಯ ಅಜೆಂಡಾವನ್ನು ಗಾಳಿಗೆ ತೂರಿ ಧೀರ್ಘಕಾಲೀನ ವ್ಯೂಹದೊಂದಿಗೆ ರಾಜಕಾರಣ ಮಾಡುತ್ತಿದ್ದಾರೆ. ಕೋಮುವಾದದ ರಾಜಕಾರಣಕ್ಕೆ ಬಲಿಯಾದ ತಳಸಮುದಾಯಗಳು ಶತಶತಮಾನಗಳಿಂದಲೂ ಅಭಿವೃದ್ಧಿ ಕಾಣದೆ ಪರಿತಪಿಸುತ್ತಾ ಬದುಕುಳಿದಿದೆ. ತಲೆ ಎತ್ತದೆ ತಲೆ ತಗ್ಗಿಸಿ ಬದುಕುವಂತಾಗಿದೆ. ಕುರ್ಚಿಗಳಿಗೆ ನಡೆದಿರುವ ಪೈಪೋಟಿಯ ಮಧ್ಯ ಸಿಲುಕಿ ನಜ್ಜುಗುಜ್ಜಾಗಿವೆ. ಭ್ರಾಂತಿ ಎಂಬ ಅಭಿವೃದ್ಧಿಯ ಆತ್ಮವಂಚನೆಗಳ ಘೋಷಣೆಯನ್ನು ಮತದಾರನ ಮನದಲ್ಲಿ ತೇಲಿಬಿಟ್ಟು ಚೇತರಿಸಿಕೊಳ್ಳಲಾಗದಂತಹ ಅಪಘಾತವನ್ನು ಮಾಡಿದ್ದಾರೆ.

ಚುನಾವಣಾ ಪೂರ್ವದಲ್ಲಿ ಕೆಲವು ಆಶ್ವಾಸನೆಗಳನ್ನು ನೀಡಿ ಅಧಿಕಾರವನ್ನು ಪಡೆದು ನಂತರದ ದಿನಗಳಲ್ಲಿ ಎಗ್ಗು ಸಿಗ್ಗಿಲ್ಲದೆ ಸ್ವಾರ್ಥ ಸಾಧನೆಗೆ ಬಲಿಯಾಗಿ ಮಿಂಚಿ ಮರೆಯಾಗುತ್ತಾರೆ. ಕೋಮುವಾದ ರಾಜಕಾರಣಕ್ಕೆ ಬಲಿಯಾದ ಸಮುದಾಯಗಳಿಗಾದ ನೋವು ಎಂದಿಗೂ ಮಾಸುವುದಿಲ್ಲ. ಎಲ್ಲಾ ವರ್ಗದ ದುರ್ಭಲರಿಗೆ ಅಸಹಾಯಕರಿಗೆ ಅವರ ಮಹದಾಸೆಯ ಹೊಂಗಿರಣಗಳನ್ನು ಹೊರಸೂಸಿ ಸಮಾಜದ ಹಲವು ಗೊಂದಲ ಗೋಜಲುಗಳಿಗೆ ಸಿಲುಕಿ ಶೂನ್ಯ ಬದುಕಿನ ಜನವರ್ಗಗಳನ್ನು ಗಂಭೀರವಾಗಿ ಪರಿಗಣಿಸಿ ವೈಚಾರಿಕ ನೆಲೆಗಟ್ಟಿನಲ್ಲಿ ಚಿಂತಿಸಿ ಮೇಲೆತ್ತಬೇಕು. ಸಮಾಜದಲ್ಲಿ ನಾವೂ ಎಲ್ಲರಂತೆ ಬಾಳಿ ಬದುಕಬೇಕೆಂಬ ಆಸೆಯಿಂದ ಹಂಬಲಿಸುತ್ತಿರುವ ಜಾತಿ ಮತಧರ್ಮಗಳ ಸುಳಿಯಲ್ಲಿ ಸಿಲುಕಿ ಬಂಧ ವಿಮುಕ್ತರಾಗದೆ ಪರಿತಪಿಸುತ್ತಿರುವ ಬದುಕುಳಿದಿರುವ ಆತ್ಮಗಳಿಗೆ ಜೀವತುಂಬಿದರೆ ಅವರೂ ಸಹ ಎಲ್ಲರಂತೆ ಬಾಳಿ ಬದುಕಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಮನುಷ್ಯನನ್ನು ಪ್ರಾಣಿಗಳಂತೆ ಕಾಣುವುದು ನೀಚ ಮತ್ತು ನಿಕೃಷ್ಟವಾದ ಪದ್ಧತಿ. ಸಾಮಾಜಿಕ ಸಮಾನತೆ ಇಲ್ಲದ ಮತ್ತು ಜಾತಿ ಪದ್ದತಿಯಿಂದ ಯಾವುದೇ ರಾಷ್ಟ್ರವು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ದೇಶದ ಸಂಪತ್ತನ್ನು ಉತ್ಪಾದಿಸುವವರು ದಲಿತರು ಕೂಲಿ ಕಾರ್ಮಿಕರು ಹಾಗೂ ದುಡಿಯುವ ರೈತರು ಹಸಿವಿನಿಂದ ಸಾಯಬೇಕಾಗಿಲ್ಲ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ದಲಿತ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಪ್ರಭುತ್ವವಾಗಬೇಕು. ಸಂವಿಧಾನದ ಪ್ರಥಮ ಪುಟದ ಪ್ರಥಮ ಪದ 'ಪ್ರಭುದ್ಧ ಪ್ರಜಾ ಸತ್ಯಾತ್ಮಕ ಭಾರತ' ಪ್ರಜಾಪ್ರಭುತ್ವದ ವಿಚಾರದಾರೆ ಪ್ರಭುಗಳ ಆಳ್ವಿಕೆ ಪ್ರಜೆಗಳಿಗೋಸ್ಕರವೇ ಇರಬೇಕು. ಪ್ರಜೆಗಳ ಶ್ರೇಯೋಭಿವೃದ್ಧಿಯೇ ದೇಶದ ಅಭಿವೃದ್ಧಿ ಎನ್ನುವ ಬೀಜಮಂತ್ರವು ಪ್ರತಿಯೊಬ್ಬರಲ್ಲೂ ಹೊರಹೊಮ್ಮಬೇಕು.

ಉಳ್ಳವರ ಬಗ್ಗೆ ಚಿಂತಿಸದೆ ಇಲ್ಲದವರ ಬಗ್ಗೆ ಚಿಂತಿಸುವುದು ಮಾನವೀಯತೆಯ ಲಕ್ಷಣ. ಪ್ರತಿಹಂತದಲ್ಲೂ ಬಡವರು ಬಡವರಾಗಿಯೇ ಶ್ರೀಮಂತರು ಶ್ರೀಮಂತರಾಗಿಯೇ ಇದ್ದಾರೆಯೇ ಹೊರತು ಸಮಾಜದ ಎಲ್ಲಾ ಜನಾಂಗದ ಹಿಂದುಳಿದ, ದಲಿತ, ಅಲ್ಪಸಂಖ್ಯಾತರು ಅವಕಾಶಗಳಿಂದ ವಂಚಿತರಾಗಿದ್ದು ಬದುಕು ಸಂಪೂರ್ಣವಾಗಿ ನೆಲಕಚ್ಚಿ ಕುಸಿದು ಬಿದ್ದಿದೆ. ಇದು ಪ್ರಸ್ತುತ ಸಮಾಜದ ದುಃಖ ಮತ್ತು ದುರಂತದ ಸಂಗತಿಯಾಗಿದೆ. ■

ಚಂದಾ ವಿವರ ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/-
ಪೋಷಕ ಚಂದಾ ರೂ.10,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಸಂಪಾದಕರೊಡನೆ ಸಂವಾದ

ನಾ ದಿವಾಕರ

ರಾಷ್ಟ್ರಪತಿಗಳು ಮಾಡಿದ ತಪ್ಪಾದರೂ ಏನು?

ಪ್ರಿಯ ಸಂಪಾದಕರೇ,

ಯಾವುದೇ ಪ್ರಬುದ್ಧ, ನಾಗರಿಕ, ಪ್ರಜ್ಞಾವಂತ ಹಾಗೂ ಪ್ರಜಾಸತ್ತಾತ್ಮಕ ಧೋರಣೆಯುಳ್ಳ ಸಮಾಜದಲ್ಲಿ ಅಪರಾಧಗಳು ಸಂಭವಿಸುವುದು ಒಂದು ನಿರ್ದಿಷ್ಟ ಸಾಮಾಜಿಕ-ಆರ್ಥಿಕ ಹಾಗೂ ಸಾಂಸ್ಕೃತಿಕ ಚೌಕಟ್ಟಿನಲ್ಲಿಯೇ ಹೊರತು ಅದರಿಂದಾಚೆಗಲ್ಲ. ಅಪರಾಧಗಳಿಲ್ಲದ ಸಮಾಜ ಇಂದಿಗೂ ಇರಲಾರದು ಅಂದಿಗೂ ಇದ್ದಿರಲಾರದು. ಏಕೆಂದರೆ ಮಾನವ ಸಮಾಜ ಬದುಕುವುದೇ ಸಂಘರ್ಷದಿಂದ, ಬದುಕುವ ವಾಂಛೆಯಿಂದ. ತತ್ವ, ಸಿದ್ಧಾಂತ ಮತ್ತು ನೀತಿಗಳು ಧಾರ್ಮಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಎಷ್ಟೇ ಬೆಳೆಸಿದರೂ ಮನುಕುಲದ ಏಳಿಗೆಯ ಹೆಜ್ಜೆ ಗುರುತುಗಳಲ್ಲಿ ಅಪರಾಧಗಳು ಕಪ್ಪು ಚುಕ್ಕೆಗಳಾಗಿ ಕಾಣುತ್ತಲೆ ಬಂದಿವೆ. ಅತ್ಯಂತ ಆದರ್ಶಪ್ರಾಯ ಎನ್ನಲಾಗುವ ರಾಮರಾಜ್ಯದಲ್ಲೂ ಅಪರಾಧಗಳಿದ್ದವು, ಧರ್ಮ ಸಂರಕ್ಷಕರ ಮಹಾಭಾರತದಲ್ಲೂ ಅಪರಾಧಿಗಳಿದ್ದರು. ಮಹಿಳೆಯರ ಮೇಲಿನ ದೌರ್ಜನ್ಯಗಳಾಗಲಿ, ಸಮಾಜಘಾತುಕ ಕೃತ್ಯಗಳಾಗಲೀ, ಬಡ, ಅಸಹಾಯಕ ಹಾಗೂ ಅಮಾಯಕ ಮೇಲಿನ ದೌರ್ಜನ್ಯವೇ ಆಗಲಿ, ಕಾಲಾತೀತವಾಗಿ ಬೆಳೆದುಬಂದ ವಿದ್ಯಮಾನಗಳು. ಹಾಗಾಗಿಯೇ ಅಪರಾಧ ಸಂಹಿತೆಗಳು ಕಾಲದಿಂದ ಕಾಲಕ್ಕೆ ಬದಲಾವಣೆ ಕಾಣುತ್ತಿವೆಯೇ ಹೊರತು, ಸಮಾಜಗಳು, ಸಮುದಾಯಗಳು ಅಪರಾಧಮುಕ್ತವಾಗಿಲ್ಲ. ಆಗುವುದೂ ಇಲ್ಲ.

ಅಪರಾಧಿಗಳಾಗಿ ಯಾರೂ ಜನಿಸುವುದಿಲ್ಲ, ನಮ್ಮ ಮಾನವ ಸಮಾಜ ತನ್ನ ಒಡಲಲ್ಲೇ ಅಪರಾಧಿಗಳನ್ನು ಸೃಷ್ಟಿಸುತ್ತದೆ. ಅಸಮಾನತೆಯ ಮೂಲಕ, ಶೋಷಣೆಯ ಮೂಲಕ, ದಬ್ಬಾಳಿಕೆಯ ಮೂಲಕ. ಅಪರಾಧ ಅಥವಾ ಅಪರಾಧಿಗಳನ್ನು ಗುರುತಿಸುವ ಹಕ್ಕನ್ನು ಪ್ರಭುತ್ವವೇ ವಹಿಸಿಕೊಂಡಾಗ, ಅಪರಾಧಗಳೂ ವಿಭಿನ್ನ ಆಯಾಮಗಳನ್ನು ಪಡೆದುಕೊಳ್ಳುವ ಸಾಧ್ಯತೆಗಳಿರುತ್ತವೆ. ಪ್ರಭುತ್ವಗಳ ಲಕ್ಷಣಗಳು ಬದಲಾದಂತೆಲ್ಲಾ ಅಪರಾಧಗಳ ಸ್ವರೂಪಗಳೂ, ಗ್ರಹೀತಗಳೂ ಬದಲಾಗುತ್ತಿರುತ್ತವೆ. ತುರ್ತುಪರಿಸ್ಥಿತಿಯ ಅಪರಾಧಿಗಳು ಇಂದು ದೇಶದ ಪ್ರಮುಖ ನಾಯಕರುಗಳಾಗಿ ಕಂಡುಬರುವುದು ಈ ನೆಲೆಯಲ್ಲೇ. ಪ್ರಭುತ್ವ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಅಪರಾಧ ಮತ್ತು ಅಪರಾಧಿಗಳನ್ನು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿ, ಅವುಗಳ ನಿಯಂತ್ರಣಕ್ಕಾಗಿ ತನ್ನದೇ ಆದ ಶಾಸನಗಳನ್ನು ರೂಪಿಸುತ್ತದೆ. ಇಲ್ಲಿ ಆತ್ಮರಕ್ಷಣೆ ಒಂದು ಉದ್ದೇಶವಾದರೆ ಸಮಾಜದ ಸೌಹಾರ್ದತೆಯನ್ನು ಕಾಪಾಡುವುದು ಮತ್ತೊಂದು ಉದ್ದೇಶವಾಗುತ್ತದೆ. ಹಾಗಾಗಿ ಪ್ರಭುತ್ವದ ಲಕ್ಷಣ ಏನೇ ಆಗಿದ್ದರೂ ಅಪರಾಧ ಸಂಹಿತೆಗಳು ಮತ್ತು ಅಪರಾಧ ನಿಯಂತ್ರಣ ಸಾಧನಗಳು ಪ್ರಾಧಾನ್ಯತೆ ಗಳಿಸುತ್ತವೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಭುತ್ವಗಳು ಕೆಲವು ಘೋರ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸುವಂತಹ ಕಾನೂನು ಕಟ್ಟಳೆಗಳನ್ನು ರೂಪಿಸುವುದುದ ಈ ನಿಟ್ಟಿನಲ್ಲಿ ಸಹಜವಾಗಿ ಕಾಣುತ್ತದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಇದು ಅವಶ್ಯವೂ ಹೌದು. ಪ್ರಾಚೀನ ಸಮಾಜಗಳಲ್ಲಿ ಅಪರಾಧಿಗಳನ್ನು ದೇವರ ಪ್ರತ್ಯೇಕ ಸೃಷ್ಟಿ ಎಂದೇ ಪರಿಗಣಿಸಲಾಗುತ್ತಿತ್ತು. ಹಾಗಾಗಿ ತಮ್ಮ ಜೀವನೋಪಾಯಕ್ಕಾಗಿ ಅಪರಾಧ ಎಸಗುವ ನಿರ್ಗತಿಕರೂ ಸಹ ಶಿಕ್ಷೆಗೊಳಗಾಗುತ್ತಿದ್ದರು. ರಾಜಪ್ರಭುತ್ವದ ಕಾಲಘಟ್ಟದಲ್ಲಿ ಏಕಾಧಿಪತ್ಯವೇ ಪ್ರಧಾನವಾಗಿದ್ದಾಗ, ಅಪರಾಧಿಗಳಿಗೆ ಶಿಕ್ಷೆ ನೀಡುವ ಅಧಿಕಾರ ಒಬ್ಬ ವ್ಯಕ್ತಿಯ ಕೈಯ್ಯಲ್ಲಿರುತ್ತಿತ್ತು. ರಾಜಾ ಪ್ರತ್ಯಕ್ಷ ದೇವತಾ ಎಂದೇ ನಂಬಿ ಬಾಳುತ್ತಿದ್ದ ಜನಸಾಮಾನ್ಯರಿಗೆ ರಾಜನ ನೀತಿ ಸಂಹಿತೆಗಳೇ ವೇದವಾಕ್ಯಗಳಾಗಿದ್ದವು. ಅಪರಾಧಗಳನ್ನು ನಿರ್ಧರಿಸುವ ಹಕ್ಕಿನೊಂದಿಗೇ ಅಪರಾಧಿಗೆ ತಕ್ಕ ಶಿಕ್ಷೆ ವಿಧಿಸುವ ಹಕ್ಕೂ ರಾಜನದ್ದಾಗಿರುತ್ತಿತ್ತು. ಎಷ್ಟೇ ದಯಾಳು, ಜನಾನುರಾಗಿ ರಾಜನೇ ಆದರೂ ಈ ಪ್ರಭುತ್ವದ ಹಕ್ಕನ್ನು ತನ್ನ ಬತ್ತಳಿಕೆಯಲ್ಲಿ ಇಟ್ಟುಕೊಂಡೇ ರಾಜ್ಯಭಾರ ಮಾಡುವುದು ಅಂದಿನ ಅನಿವಾರ್ಯತೆಯೂ ಆಗಿತ್ತು.

ಈ ಚಾರಿತ್ರಿಕ ಹಿನ್ನೆಲೆಯಲ್ಲೇ ಮರಣದಂಡನೆಯ ಶಿಕ್ಷೆಯನ್ನೂ ಪರಿಗಣಿಸಬೇಕಾಗುತ್ತದೆ. ತಮ್ಮ ರಾಜ್ಯ, ತಮ್ಮ ಆಳ್ವಿಕೆ ಮತ್ತು ತಮ್ಮ ಭೌಗೋಳಿಕ ಒಡೆತನದ ವ್ಯಾಪ್ತಿ ರಾಜರ ಅಧಿಕಾರ ವ್ಯಾಪ್ತಿಯನ್ನೂ ವಿಸ್ತರಿಸುತ್ತಿತ್ತು. ಹಾಗಾಗಿ ತಮ್ಮ ಆಳ್ವಿಕೆಯನ್ನು ಪ್ರತಿರೋಧಿಸುವ ವ್ಯಕ್ತಿ-ಸಂಘಟನೆಗಳು ಸದಾ ಶಿಕ್ಷೆಗೆ ಅರ್ಹರಾಗಿರುತ್ತಿದ್ದರು. ಪ್ರಜಾಪ್ರಭುತ್ವ ಇರಲಿ, ನ್ಯಾಯಾಂಗ-ಶಾಸಕಾಂಗದ ಪರಿಕಲ್ಪನೆಯೂ ಇಲ್ಲದ ಕಾಲಘಟ್ಟದಲ್ಲಿ ರಾಜನ ತೀರ್ಮಾನವೇ ಅಂತಿಮ. ಹಾಗಾಗಿ ತನ್ನ ಎದುರಾಳಿಗಳನ್ನು ಮಟ್ಟ ಹಾಕಲು ರಾಜಮಹಾರಾಜರು, ವಸಾಹತು ಕಾಲದ ಆಳ್ವಿಕರು, ಊಳಿಗಮಾನ್ಯ ದೊರೆಗಳು ಮರಣದಂಡನೆಯನ್ನು ಸ್ವೀಕೃತವೆಂದೇ ಭಾವಿಸಿದ್ದರು. ಜೀವ ನೀಡುವ ಸಾಮರ್ಥ್ಯವಿಲ್ಲದ ಹುಲುಮಾನವನಿಗೆ ಜೀವ ಹರಣ ಮಾಡುವ ಅಧಿಕಾರವೂ ಇರುವುದಿಲ್ಲ ಎಂದು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳಲು ಮಾನವ ಸಮಾಜಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬರಬೇಕಾಯಿತು. ದುರಾದೃಷ್ಟವಶಾತ್ ಪ್ರಜಾಪ್ರಭುತ್ವ ವ್ಯವಸ್ಥೆ ವಿಶ್ವದಾದ್ಯಂತ ಮಾನ್ಯತೆ ಪಡೆದು ಜನಸಾಮಾನ್ಯರ ಬದುಕಿಗೆ ಹತ್ತಿರವಾಗಿದ್ದರೂ ಮರಣದಂಡನೆ ಎಂಬ ಅಮಾನವೀಯ ಶಿಕ್ಷೆ ಮಾತ್ರ ಇನ್ನೂ ಶಾಸನಗಳಲ್ಲಿ ಉಳಿದುಕೊಂಡಿದೆ. ಅಷ್ಟೇ ಅಲ್ಲ ಪ್ರಜಾತಂತ್ರವನ್ನೇ ಉಸಿರಾಡುವ ಜನರಲ್ಲೂ ಮರಣದಂಡನೆಯ ಬಗ್ಗೆ ಒಲವು ಉಳಿದುಕೊಂಡಿದೆ.

ದಿಟ್ಟ ನಿರ್ಧಾರ ಸ್ತುತ್ಯಾರ್ಹ

ವಿಶ್ವದ ಯಾವುದೇ ರಾಷ್ಟ್ರಗಳಲ್ಲೂ ಕಾಣದಷ್ಟು ವೈವಿಧ್ಯಮಯ ಜನಪರ ಚಳವಳಿಗಳನ್ನು ಕಂಡಿರುವ, ಪ್ರಜಾಪ್ರಭುತ್ವವನ್ನು ಪುನರ್ ಸ್ಥಾಪಿಸಲು ದಿಟ್ಟ ಹೋರಾಟಗಳನ್ನು ಕಂಡಿರುವ, ಪ್ರಜಾಪ್ರಭುತ್ವವನ್ನೇ ಉಸಿರೆಂದು ತಿಳಿದು, ತಮ್ಮ ಶತಮಾನಗಳ ಕಾಲದ ಶೋಷಣೆಯನ್ನೂ ಸಹಿಸಿಕೊಂಡು, ಶಾಂತಿಯುತ ಆಂದೋಲನದಲ್ಲೇ ನಂಬಿಕೆ ಇರಿಸಿ ಪ್ರಜಾತಂತ್ರವನ್ನು ಎತ್ತಿಹಿಡಿದಿರುವ ದಲಿತ ಚಳವಳಿಗಳ ಆಗರವಾದ ಭಾರತದ ರಾಷ್ಟ್ರಪತಿಯೊಬ್ಬರು ಮರಣದಂಡನೆಯ ಶಿಕ್ಷೆ ಎದುರಿಸುತ್ತಿದ್ದ ಖೈದಿಗಳಿಗೆ ಕ್ಷಮಾದಾನ ಮಾಡಿರುವುದು ಎಲ್ಲೆಡೆ ಸ್ವಾಗತಿಸಬೇಕಾದ ವಿದ್ಯಮಾನವಾಗಬೇಕಿತ್ತು. ಆದರೆ ದೇಶದ ಮೊಟ್ಟ ಮೊದಲ ಮಹಿಳಾ ರಾಷ್ಟ್ರಪತಿ ತಮ್ಮ ಅಧಿಕಾರಾವಧಿಯ ಅಂತಿಮ ದಿನಗಳಲ್ಲಿ 35 ಖೈದಿಗಳಿಗೆ ಕ್ಷಮಾದಾನ ನೀಡಿರುವುದು ಮಾಧ್ಯಮಗಳ, ಬುದ್ಧಿಜೀವಿಗಳ, ಪ್ರಜ್ಞಾವಂತರ ಹಾಗೂ ವಿಶೇಷವೆಂದರೆ ಪ್ರಜಾತಂತ್ರವನ್ನೇ ಉಸಿರಾಡುವ ಹಲವು ವ್ಯಕ್ತಿ ಸಂಘಟನೆಗಳ ದೃಷ್ಟಿಯಲ್ಲೂ ಅಕ್ಷಮ್ಯವಾಗಿ ಕಾಣುತ್ತಿದೆ.

ಪ್ರತಿಭಾ ಸಿಂಗ್ ಪಾಟೀಲ್ ಅಪರಾಧಿಗಳ ಅಪರಾಧಗಳನ್ನು ಮನ್ನಿಸಿಲ್ಲ, ಅಥವಾ ಖೈದಿಗಳ ದುಷ್ಕೃತ್ಯಗಳನ್ನಾಗಲೀ, ಘೋರ ಅಪರಾಧಗಳನ್ನಾಗಲೀ, ಅಮಾನವೀಯ ಧೋರಣೆಯನ್ನಾಗಲೀ ಸಮರ್ಥಿಸಿಲ್ಲ. ಖೈದಿಗಳನ್ನು ಆರೋಪಮುಕ್ತರನ್ನಾಗಿಯೂ ಮಾಡಿಲ್ಲ. ಎರಡು ಮೂರು ದಶಕಗಳಿಂದ ಮರಣದಂಡನೆ ಶಿಕ್ಷೆಗೊಳಗಾಗಿ ತಮ್ಮ ಬಾಳಿನ ಅಂತಿಮ ಕ್ಷಣಗಳನ್ನು ಎದುರುನೋಡುತ್ತಿರುವ ಅಪರಾಧಿಗಳಿಗೆ ಇನ್ನಷ್ಟು ದಿನ ಉಸಿರಾಡಲು ಅವಕಾಶ ನೀಡಿದ್ದಾರೆ. ತಮ್ಮ ತಪ್ಪುಗಳನ್ನು ಅರಿತು ಸತ್ಪ್ರಜೆಗಳಾಗಲು ವೇದಿಕೆ ಒದಗಿಸಿದ್ದಾರೆ. ಸಾವಿನ

(11ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಮೇಲ್ಜಾತಿಯ ಧ್ರುವೀಕರಣದ ಅಪಾಯ

ಸನತ್‌ಕುಮಾರ ಬೆಳಗಲಿ

ಪ್ರಿಯ ಸಂಪಾದಕರೇ,

ಜಾಗತೀಕರಣದ ಝಳದಲ್ಲಿ ಸಾಮಾಜಿಕ ನ್ಯಾಯದ ಆಶಯಗಳು ಕಮರಿ ಹೋಗುತ್ತಿರುವಾಗಲೇ ಜಾತಿ ಧ್ರುವೀಕರಣದ ವ್ಯಾಧಿ ಕರ್ನಾಟಕವನ್ನು ಆವರಿಸತೊಡಗಿದೆ. ಸಮಾಜದ ದಮನಿತ ಜಾತಿಗಳು ತಮ್ಮ ಹಕ್ಕುಗಳಿಗಾಗಿ ಒಂದುಗೂಡತೊಡಗಿದರೆ ಆತಂಕಪಡಬೇಕಾಗಿಲ್ಲ. ಆದರೆ ಆಸ್ತಿ-ಅಂತಸ್ತುಗಳಲ್ಲಿ ಬಲಿಷ್ಠವಾಗಿರುವ ಜಾತಿಗಳು ಸಮಾವೇಶಗಳು, ಮಾದಿಗ ಮೀಸಲಾತಿ ಹೋರಾಟದ ಸಭೆಗಳು ನಡೆಯುತ್ತಿವೆ. ಶ್ರೇಣೀಕೃತ ಜಾತಿ ವ್ಯವಸ್ಥೆಯ ತಳಪಾಯದಲ್ಲಿರುವ ಈ ಜನಗಳು ಒಂದುಗೂಡಿ ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತುತ್ತಿಲ್ಲ. ಕುರುಬರ ಸಮಾವೇಶವನ್ನು ಎಲ್ಲ ಹಿಂದುಳಿದ ವರ್ಗಗಳ ಸಮಾವೇಶವನ್ನಾಗಿ ಮಾಡಬಹುದಿತ್ತು. ದಲಿತರು ಬಲಗೈ ಮತ್ತು ಎಡಗೈ ಪಂಗಡಗಳು ಪ್ರತ್ಯೇಕ ಸಭೆ–ಹೋರಾಟಗಳನ್ನು ನಡೆಸುವ ಬದಲು ಒಂದುಗೂಡಿ ತಮ್ಮನ್ನು ಬಾಧಿಸುತ್ತಿರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದಾಗಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ ಶೋಷಿತ ವರ್ಗಗಳು ಮತ್ತು ಜಾತಿಗಳಲ್ಲಿ ಛಿದ್ರೀಕರಣದ ಪ್ರಕ್ರಿಯೆ ತೀವ್ರವಾಗಿದೆ.

ಈ ಮೇಲುಜಾತಿಗಳ ಸಮಾವೇಶಗಳ ಹಿಂದೆ ರಾಜಕೀಯ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವ ಮಸಲತ್ತು ಎದ್ದು ಕಾಣುತ್ತಿದೆ. ಯಡಿಯೂರಪ್ಪ ಲಿಂಗಾಯಿತರ ಪ್ರಾತಿನಿಧಿಕ ಸಂಕೇತವಾಗಿದ್ದಾರೆ. ದೇವೇಗೌಡ ಮತ್ತು ಕುಮಾರಸ್ವಾಮಿ ಒಕ್ಕಲಿಗ ನಾಯಕರೆಂದು ಬಿಂಬಿಸಲ್ಪಡುತ್ತಿದ್ದಾರೆ. ಇವರೆಲ್ಲರ ಮೇಲೆ ಸವಾರಿ ಮಾಡುವ ವಿಪ್ರರು ತಮ್ಮದೇ ರಹಸ್ಯ ಅಜೆಂಡಾ ಇಟ್ಟುಕೊಂಡು ಆಟವಾಡುತ್ತಿದ್ದಾರೆ. ಈ ಎಲ್ಲ ಧ್ರುವೀಕರಣದ ಹಿಂದೆ ಮಠಾಧೀಶರ ನೇರ ಕೈವಾಡ ಎದ್ದು ಕಾಣುತ್ತದೆ. ಆದರೆ ಈ ಮೇಲ್ಜಾತಿಗಳಲ್ಲಿ ಇರುವ ಮೇಲ್ಜಾತಿಗಳಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ಯತ್ನಿಸುತ್ತಿವೆ.

ಎಪ್ಪತ್ತರ ದಶಕದಲ್ಲಿ ದೇವರಾಜ ಅರಸು ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಒಂದೇ ವೇದಿಕೆಗೆ ತಂದು ಪ್ರಬಲವಾದ ರಾಜಕೀಯ ಶಕ್ತಿಯೊಂದನ್ನು ರೂಪಿಸಿದರು. ಆಗ ಎಡ ಪ್ರಗತಿಪರ ಶಕ್ತಿಗಳನ್ನು ತಮ್ಮ ಜೊತೆಗೆ ಕೂಡಿಸಿಕೊಂಡಿದ್ದರು. ಈ ರಾಜಕೀಯ ಶಕ್ತಿಯ ಮೂಲಕ ಅಧಿಕಾರಕ್ಕೆ ಬಂದು ಭೂಸುಧಾರಣೆಯಂತಹ ಪ್ರಗತಿಪರ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಹಾವನೂರು ವರದಿ ಅನುಷ್ಠಾನಕ್ಕೆ ಬಂತು ಅಂತಲೇ ರಾಜಕೀಯ ಅಧಿಕಾರ ಕೈತಪ್ಪಿ ಹೋದದ್ದರಿಂದ ರೊಚ್ಚಿಗೆದ್ದ ಲಿಂಗಾಯಿತ ಮತ್ತು ಒಕ್ಕಲಿಗರಲ್ಲಿನ ಮೇಲ್ವರ್ಗಗಳ ಪಟ್ಟಭದ್ರ ಹಿತಾಸಕ್ತಿಗಳು ಅರಸು ಸರ್ಕಾರದ ವಿರುದ್ಧ ಭೂಮಿ ಆಕಾಶ ಒಂದು ಮಾಡಿ ಕೂಗಾಡಿದರು. ಕೈತಪ್ಪಿ ಹೋದ ಅಧಿಕಾರಕ್ಕಾಗಿ ಚಡಪಡಿಸಿದರು.

ಅರಸು ನಂತರ ಸಾಮಾಜಿಕ ನ್ಯಾಯದ ಅವನತಿ ಆರಂಭವಾಯಿತು. ತಾವು ತುಂಬ ಭರವಸೆಯಿಟ್ಟು ಬೆಳೆಸಿದ ದಲಿತ ಮತ್ತು ಹಿಂದುಳಿದ ನಾಯಕರು ಕೊನೆಯವರೆಗೂ ತಮ್ಮ ಜಾತಿಗೆ ಉಳಿಯಲಿಲ್ಲ ಎಂಬ ನೋವು ಅರಸರನ್ನು ಸಾಯುವವರೆಗೆ ಬಾಧಿಸಿತು. ಇಂದಿರಾ ಗಾಂಧಿಯವರ ಕೃಪೆಯಿಂದ ಮುಖ್ಯಮಂತ್ರಿ

ಒಂದುಗೂಡತೊಡಗಿದರೆ, ಅದು ಅಪಾಯದ ಮುನ್ಸೂಚನೆ. ರಾಜ್ಯದಲ್ಲಿ ಒಂದೆಡೆ ದುರ್ಬಲ ಜಾತಿಗಳು ಮತ್ತು ವರ್ಗ ಗಳು ಒಡೆದು ಛಿದ್ರವಾಗುತ್ತಿವೆ. ಶೂದ್ರ ಮತ್ತು ದಲಿತ ಸಂಘಟನೆಗಳ ನಡುವೆ ವಿಭಜನೆಯ ಅಡ್ಡಗೋಡೆ ಎದ್ದು ನಿಂತಿದೆ. ಆದರೆ ಬ್ರಾಹ್ಮಣ, ಲಿಂಗಾಯಿತ ಮತ್ತು ಒಕ್ಕಲಿಗರು ಒಳಪಂಗಡಗಳನ್ನು ಬದಿಗೊತ್ತಿ ಒಂದುಗೂಡುತ್ತಿದ್ದಾರೆ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಮೇಲ್ಜಾತಿಗಳ ಧ್ರುವೀಕರಣದ ಪ್ರಕ್ರಿಯೆ ಬಿರುಸಾಗಿ ಸಾಗಿದೆ. ಎಲ್ಲೆಡೆ ಈಗ ಜಾತಿ ಸಮಾವೇಶಗಳ ಅಬ್ಬರ ಕೇಳಿ ಬರುತ್ತಿದೆ.

ಕಳೆದ ಮೂರು ವಾರಗಳಿಂದ ರಾಜ್ಯದ ಎರಡು ಪ್ರಮುಖ ಜಾತಿಗಳ ಜಗದ್ಗುರುಗಳ ಗುರುವಂದನೆ ಕಾರ್ಯಕ್ರಮ ಒಂದರ ಹಿಂದೆ ಒಂದರಂತೆ ನಡೆಯುತ್ತಿವೆ. ಕಳೆದ ತಿಂಗಳು ತುಮಕೂರಿನಲ್ಲಿ ಸಿದ್ಧಗಂಗಾಸ್ವಾಮಿಗಳ ಗುರುವಂದನಾ ಕಾರ್ಯಕ್ರಮ ನಡೆದ ನಂತರ ಕೋಲಾರದಲ್ಲಿ ಒಕ್ಕಲಿಗರ ಗುರುತಿಲಕ ಬಾಲಗಂಗಾಧರನಾಥ ಸ್ವಾಮಿಗಳ ಗುರುವಂದನೆ ನಡೆಯಿತು. ಇದು ಸಾಲದೆಂಬಂತೆ ರಾಜ್ಯ ಒಕ್ಕಲಿಗರ ಸಂಘ ಜೂನ್ 3ರಂದು ಅದೇ ಆದಿ ಚುಂಚನಗಿರಿ ಸ್ವಾಮಿಗಳ ಗುರುವಂದನೆ ಕಾರ್ಯಕ್ರಮ ನಡೆಸಿತು. ಇನ್ನೊಂದೆಡೆ ಶಿವಮೊಗ್ಗದಲ್ಲಿ ಬ್ರಾಹ್ಮಣರು ಪೇಜಾವರ ಮತ್ತು ರಾಘವೇಶ್ವರ ಸ್ವಾಮಿಗಳನ್ನು ಮುಂದಿಟ್ಟುಕೊಂಡು ಸಮಾವೇಶ ನಡೆಸಿದರು. ಬಹುಶಃ ವಿಧಾನಸಭೆ ಚುನಾವಣೆಯವರೆಗೆ ಈ ಗುರುವಂದನೆ ಕಾರ್ಯಕ್ರಮಗಳು ನಿರಂತರವಾಗಿ ನಡೆಯುವ ಸಂಭವವಿದೆ.

ಹಿಂದುಳಿದ ಜಾತಿ–ಜನವರ್ಗಗಳೂ ಕೂಡ ಸುಮ್ಮನೆ ಕುಳಿತಿಲ್ಲ. ಇತ್ತೀಚೆಗೆ ದಾವಣಗೆರೆಯಲ್ಲಿ ಕುರುಬರ ಸಮ್ಮೇಳನ ನಡೆಯಿತು. ಅಲ್ಲಲ್ಲಿ ಛಲವಾದಿ ಬಡವರಿಗೆ ಈ ಜಾತಿ ಸಂಘಟನೆಯಿಂದ ಯಾವುದೇ ಪ್ರಯೋಜನವಿಲ್ಲ. ಬೆಳೆ ವಿಫಲವಾಗಿ ಮೇಲ್ಜಾತಿಯ ರೈತರು ಆತ್ಮಹತ್ಯೆ ಮಾಡಿಕೊಳ್ಳುವಾಗ ಅವರ ಜಾತಿಯ ಸಂಘಟನೆ ಮತ್ತು ಸ್ವಾಮಿಗಳು ನೆರವಿಗೆ ಬರಲಿಲ್ಲ. ಆದರೆ ಅಧಿಕಾರದ ಕುರ್ಚಿ ಹಿಡಿಯಲು ಬಡವರ ಕುತ್ತಿಗೆಗೆ ಜಾತಿಯನ್ನು ಬಿಗಿದು ತಮ್ಮ ಸ್ವಾರ್ಥ ಸಾಧಿಸಲು

ರಾಜ್ಯದಲ್ಲಿ ಒಂದೆಡೆ ದುರ್ಬಲ ಜಾತಿಗಳು ಮತ್ತು ವರ್ಗಗಳು ಒಡೆದು ಛಿದ್ರವಾಗುತ್ತಿವೆ. ಶೂದ್ರ ಮತ್ತು ದಲಿತ ಸಂಘಟನೆಗಳ ನಡುವೆ ವಿಭಜನೆಯ ಅಡ್ಡಗೋಡೆ ಎದ್ದುನಿಂತಿದೆ. ಆದರೆ ಬ್ರಾಹ್ಮಣ, ಲಿಂಗಾಯಿತ ಮತ್ತು ಒಕ್ಕಲಿಗರು ಒಳಪಂಗಡಗಳನ್ನು ಬದಿಗೊತ್ತಿ ಒಂದುಗೂಡುತ್ತಿದ್ದಾರೆ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಮೇಲ್ಜಾತಿಗಳ ಧ್ರುವೀಕರಣದ ಪ್ರಕ್ರಿಯೆ ಬಿರುಸಾಗಿ ಸಾಗಿದೆ. ಎಲ್ಲೆಡೆ ಈಗ ಜಾತಿ ಸಮಾವೇಶಗಳ ಅಬ್ಬರ ಕೇಳಿ ಬರುತ್ತಿದೆ.

ಯಾದ ಗುಂಡೂರಾಯರು ರಾಜ್ಯದ ಪ್ರಥಮ ಬ್ರಾಹ್ಮಣ ಮುಖ್ಯಮಂತ್ರಿ ಎನಿಸಿದರು. ಅರಸು ಸಂಪುಟದಲ್ಲಿ ಜೊತೆಗಿದ್ದ ದುರ್ಬಲ ವರ್ಗಗಳ ರಾಜಕಾರಣಿಗಳು ಗುಂಡೂರಾವ್ ಪಾಳಯಕ್ಕೆ ಜಿಗಿದು ಮಂತ್ರಿಗಳಾದರು.

ತೊಂಬತ್ತರ ದಶಕದಲ್ಲಿ ಹಿಂದುತ್ವದ ರಾಜಕಾರಣ ಕರ್ನಾಟಕಕ್ಕೆ ಕಾಲಿರಿಸಿತು. ದೇವರಾಜ ಅರಸು ಅವರು ಒಂದುಗೂಡಿಸಿದ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಜಾತಿಗಳು ಒಡೆದು ಛಿದ್ರವಾದವು. ಅದರಲ್ಲೂ ಮುಖ್ಯವಾಗಿ ಹಿಂದುಳಿದ ಜಾತಿಗಳು ಚೂರುಚೂರಾಗಿ ಕೋಮುವಾದಿ ರಾಜಕಾರಣದ ಬಲೆಗೆ ಬಿದ್ದವು. ಅರಸು ಅವರ ಭೂಸುಧಾರಣಾ ಶಾಸನದ ಪ್ರಯೋಜನ ಪಡೆದ ಕರಾವಳಿ ಮತ್ತು ಮಲೆನಾಡಿನ ಹಿಂದುಳಿದ ಜಾತಿಗಳ ಯುವಕರು ಕೇಸರಿ ಬಾವುಟ ಹಿಡಿದರು. ಇನ್ನೊಂದೆಡೆ ವೀರೇಂದ್ರ ಪಾಟೀಲರ ನಂತರ ನಾಯಕರ ಹುಡುಕಾಟದಲ್ಲಿದ್ದ ಉತ್ತರ ಕರ್ನಾಟಕದ ಲಿಂಗಾಯಿತರಿಗೆ ಯಡಿಯೂರಪ್ಪ ನಿಮ್ಮ ನಾಯಕ ಎಂದು ಬಿಂಬಿಸಿ ಬಿಜೆಪಿ ಮುಂದೆ ತಂದು ಮೊದಲ ಬಾರಿ ಕರ್ನಾಟಕದ ಅಧಿಕಾರ ಸೂತ್ರ ಹಿಡಿಯಿತು.

ಹಿಂದುತ್ವವಾದದಿಂದ ಆರಂಭವಾದ ದಲಿತ–ಹಿಂದುಳಿದ ವರ್ಗಗಳ ಛಿದ್ರೀಕರಣ ಪ್ರಕ್ರಿಯೆ ಪರವಾಗಿ ಅಧಿಕಾರಕ್ಕೆ ಬಂದ ಬಿಜೆಪಿ ಸಂಘಪರಿವಾರದ ಸೂತ್ರದ ಗೊಂಬೆಯಂತೆ ಕಾರ್ಯನಿರ್ವಹಿಸತೊಡಗಿತು. ಸಾಮಾಜಿಕ ನ್ಯಾಯದ ಆಶಯಗಳು ಸಮಾಧಿಯಾಗಿ ಭಗವದ್ಗೀತೆ ಅಭಿಯಾನ, ಗೋ ಹತ್ಯೆ ನಿಷೇಧ, ಮತಾಂತರ ನಿರ್ಬಂಧ, ಶಾಲಾ ಪಠ್ಯಪುಸ್ತಕಗಳ ಕೇಸರೀಕರಣದಂತಹ ತನ್ನ ಕಾರ್ಯಸೂಚಿಯನ್ನು

(11ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಜಾತಿ ಮತ್ತು ಅಸ್ಪೃಶ್ಯತೆ

ಉಮಾಶಂಕರ್ ಹೆಚ್.ಡಿ.

ಪ್ರಿಯ ಸಂಪಾದಕರೇ,

ಜಾತಿಯ ಬಗೆಗಿನ ಚರ್ಚೆ ಇಂದು ಸಾಮಾನ್ಯ ಎನಿಸುವಷ್ಟರ ಮಟ್ಟಿಗೆ ಚರ್ಚಿತಗೊಳ್ಳುತ್ತಿದೆ. ಇದಕ್ಕೆ ಪೂರಕವೆಂಬಂತೆ ಜಾತಿಯನ್ನು ಬುಡ ಸಮೇತ ಕಿತ್ತರೆ ಮಾತ್ರ ಈ ದೇಶದ ಅಭಿವೃದ್ಧಿ ಸಾಧ್ಯ ಎನ್ನುವ ಸಂದೇಶಗಳು ದಿನನಿತ್ಯ ಹರಿದಾಡುತ್ತಿವೆ. ಆದರೆ ಜಾತಿಯನ್ನು ಅಷ್ಟು ಸುಲಭವಾಗಿ ಕಿತ್ತೊಗೆಯಲು ಸಾಧ್ಯವೇ? ಅನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಜಾತಿಯ ವಿಷಯದಲ್ಲಿ ಇತ್ತೀಚೆಗೆ ಎರಡು ಚರ್ಚೆಗಳು ತೀವ್ರತೆಯನ್ನು ಪಡೆಯುತ್ತಿವೆ. ಒಂದು ಜಾತಿಯನ್ನು ಉಳಿಸಿಕೊಂಡು ಜಾತ್ಯಾತೀತ ಮನಸ್ಸುಗಳನ್ನು ಸೃಷ್ಟಿಸುವುದು. ಇನ್ನೊಂದು ಜಾತಿಯನ್ನು ಸಂಪೂರ್ಣವಾಗಿ ನಾಶಗೊಳಿಸುವುದು. ಈ ಎರಡೂ ವಾದಗಳ ಹಿಂದೆ ಯಾರ ಆಲೋಚನೆಗಳು ಕೆಲಸ ಮಾಡುತ್ತಿವೆ ಎಂಬುದನ್ನು ಮೊದಲು ಅವಲೋಕಿಸಬೇಕಿದೆ. ಜಾತಿಯನ್ನು ಉಳಿಸಿಕೊಂಡು ಜಾತ್ಯಾತೀತ ಮನಸ್ಸುಗಳನ್ನು ಸೃಷ್ಟಿಸುತ್ತೇವೆ ಎನ್ನುವುದು ಸುಲಭದ ಮಾತಲ್ಲ. ಏಕೆಂದರೆ ಈ ಆಲೋಚನೆಯೇ ಆಳುವ ವರ್ಗದ ಹಿತಾಸಕ್ತಿಯಿಂದ ಹುಟ್ಟಿಕೊಂಡಿರುವಂತಹುದು. ಇವರಿಗೆ ಜಾತಿ ಬೇಕು. ಇದರಿಂದ ಸಿಗುವ ಓಟಿನ ಲಾಭ ಬೇಕು. ಓಟಿನ ಮೂಲಕ ಅಧಿಕಾರ ಬೇಕು. ಆ ಅಧಿಕಾರ ನಿರಂತರವಾಗಿ ತಮ್ಮಲ್ಲೇ ಉಳಿಸಿಕೊಳ್ಳಬೇಕು. ಈ ಪ್ರಯತ್ನ ಇವರದು. ಆದರೆ ಜಾತಿವ್ಯವಸ್ಥೆ ಹಾಗೇ ಇರಬೇಕು ಎನ್ನುವವರಿಗಿಂತ ಇವರು ಉತ್ತಮ. ಮೇಲಿನ ಆಲೋಚನೆಯು ಅಧಿಕಾರದಾಹದಿಂದಲೇ ಹುಟ್ಟಿದ್ದು ಎಂದು ಎಲ್ಲಾ ಚಿಂತಕರ ಆಲೋಚನೆಯನ್ನು ಸೇರಿಸಲಾಗದಿದ್ದರೂ ಈ ಆಲೋಚನೆ ಆಳುವವರ್ಗಕ್ಕೇ ಹೆಚ್ಚು ಪುಷ್ಟಿ ನೀಡುತ್ತದೆ. ಇದಕ್ಕಿಂತ ಇನ್ನೂ ಅಪಾಯಕಾರಿ ಸಂಗತಿಯೆಂದರೆ ಜಾತಿಯನ್ನು ನಿರಂತರವಾಗಿ ಹಾಗೇ ಉಳಿಸಿಕೊಳ್ಳಲು ಇಂದು ಒಂದು ವರ್ಗ ನಿರಂತರವಾಗಿ ಶ್ರಮಿಸುತ್ತದೆ. ಏಕೆಂದರೆ ಜಾತಿಯ ಸಮಾನತೆ ಶೋಷಣೆಯನ್ನು ಧೂಳೀಪಟ ಮಾಡುತ್ತದೆ. ಶೋಷಣೆ ಮುಕ್ತಾದರೆ ಇವರ ಹೊಲಗಳಲ್ಲಿ, ಮನೆಗಳಲ್ಲಿ, ಕಟ್ಟಡಗಳಲ್ಲಿ, ಫ್ಯಾಕ್ಟರಿಗಳಲ್ಲಿ ಕೂಲಿ ಮತ್ತು ಜೀತದವರು ಕಡಿಮೆಯಾಗುತ್ತಾರೆ ಎನ್ನುವ ಭಯ ಇವರಿಗೆ. 'ಎಲ್ಲರೂ ಒಂದೇ ಆಗಿ ಬಿಟ್ಟರೆ ಕಸ ಎತ್ತುವವರು, ಹೇಲೆತ್ತುವವರು ಯಾರು' ಎನ್ನುವ ಕುತರ್ಕವನ್ನು ಮತ್ತು ಮಾನವ ವಿರೋಧಿ ನೀತಿಯನ್ನು ಪ್ರತಿಪಾದಿಸುತ್ತಿರುತ್ತಾರೆ. ಇವರಿಗೆ ಮತ್ತು ಇವರ ವಂಶಪಾರಂಪರ್ಯಕ್ಕೆ ಯಜಮಾನಿಕೆಯ ಮೇಲೆಯೇ ಸದಾ ಕಣ್ಣು. ಈ ಯಜಮಾನಿಕೆಗಾಗಿಯೇ ಇವರು ಜಾತಿವ್ಯವಸ್ಥೆಯ ಕರಾಳ ಕೈಗಳನ್ನು ಹಾಗೇ ಉಳಿಸಿಕೊಳ್ಳಲು ನಿತ್ಯವೂ ಶ್ರಮಿಸುತ್ತಾರೆ. ಇವರಿಬ್ಬರಿಗಿಂತ ಮೇಲೆನಿಸಿಕೊಂಡ ಮತ್ತೊಂದು ಇಂಟಲೆಕ್ಚುಯಲ್ ವರ್ಗವಿದೆ. ಇದು ಜಾತಿಯನ್ನು ಸಂಪೂರ್ಣವಾಗಿ ನಾಶ ಮಾಡಲು ತನ್ನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿರುತ್ತದೆ. ಇದಕ್ಕಾಗಿ ಇದು ಅಂತರ್ಜಾತಿ ವಿವಾಹವನ್ನು, ಸಹಪಂಕ್ತಿ ಭೋಜನವನ್ನು, ಪರಸ್ಪರರು ಪ್ರೀತಿಸಬೇಕು ಎಂಬ ಇನ್ನೂ ಅನೇಕ ಧ್ಯೇಯಗಳನ್ನು ಹೇಳುತ್ತಲೇ ಇರುತ್ತಾರೆ.

ಜಾತಿಯು ಸಮಸ್ಯೆಯಾಗಿ ನಿಂತಿರುವುದು ಅಸ್ಪೃಶ್ಯರಲ್ಲಿ. ಅವರು ದುಡಿಯುವ ಜಾಗಗಳಲ್ಲಿ ಇದು ಮನೆಮಾಡಿಕೊಂಡಿದೆ. ಇದನ್ನು ಇವತ್ತಿನ ಸಮಸ್ಯೆಯ ಬಹುಮುಖ್ಯ ನೆಲೆಯಲ್ಲಿ ನೋಡಲೇಬೇಕು. ಏಕೆಂದರೆ ಹಿಂದಿನ ಹಲವು ಸಮಸ್ಯೆಗಳು ಇಂದು ಬೇರೊಂದು ವೇಷ ತೊಟ್ಟು ಬೇರೆ ಬೇರೆ ಕವಲುಗಳನ್ನು ಸೃಷ್ಟಿಸಿಕೊಂಡು ಆಳದೊಳಗೆ ತನ್ನ ಬೇರುಗಳನ್ನು ಚಾಚಿಕೊಳ್ಳುತ್ತಿದೆ. ಇದರಲ್ಲಿ ಜಾತಿಯ ಸಮಸ್ಯೆಯೂ ಒಂದು. ಇದನ್ನು ವಿಶ್ಲೇಷಿಸಬೇಕಾದರೆ ಜಾತಿಯ ದೌರ್ಜನ್ಯಕ್ಕೆ ತುತ್ತಾಗಿರುವವರ ನೆಲೆಯಲ್ಲಿ ನಿಂತು ನೋಡಬೇಕು. ಏಕೆಂದರೆ ಇಂದು ಜಾತಿಯ ಸಮಸ್ಯೆ ಕುಡಿಯುವ ನೀರಿಗಾಗಿಯೋ, ದೇವಸ್ಥಾನದ ಪ್ರವೇಶಕ್ಕಾಗಿಯೋ, ಸಹಪಂಕ್ತಿ ಭೋಜನಕ್ಕಾಗಿಯೋ, ಮೇಲ್ವರ್ಗದ ಮನೆಗಳ ಪ್ರವೇಶಕ್ಕೋ, ಮುಟ್ಟಿಸಿಕೊಳ್ಳುವುದಕ್ಕೊ ಸೀಮಿತವಾಗಿಲ್ಲ. ಇದು ಆರ್ಥಿಕತೆಯೊಂದಿಗೆ ತನ್ನ ಕರಾಳ ರೂಪಗಳನ್ನು ಚಾಚಿಕೊಂಡಿದೆ.

ಶೋಷಣೆ ಕೊನೆಗಾಣುವುದು ಆರ್ಥಿಕ ಸ್ವಾವಲಂಬಿತನದಿಂದಲೋ ಅಥವಾ ಜಾತಿಯ ವಿನಾಶದಿಂದಲೋ ಎಂಬುದನ್ನು ಅವಲೋಕಿಸಬೇಕು. ಜಾತಿ ವಿನಾಶವಾಗುತ್ತದೆ ಎನ್ನುವ ಭರವಸೆ ಇಟುಕೊಳ್ಳುವುದಾದರೆ ವಿನಾಶವಾಗಲು ಇಷ್ಟು ಸಾವಿರ ವರ್ಷಗಳ ಅಗತ್ಯವಿತ್ತೆ ಎನ್ನುವ ಪ್ರಶ್ನೆಯೂ ಕಾಡುತ್ತದೆ. ಅಂತರ್ಜಾತಿ ವಿವಾಹದಿಂದ ಕೊಲೆ, ರಕ್ತಪಾತಗಳಾಗುತ್ತಿವೆಯೇ ಹೊರತು ಯಾವುದೇ ಬದಲಾವಣೆಗಳಾಗಿಲ್ಲ. ಬದಲಾವಣೆ ಗರಿಷ್ಠ ಮಟ್ಟದಲ್ಲಿ ಅಸ್ಪೃಶ್ಯರ ಮತ್ತು ಬ್ರಾಹ್ಮಣರ ನಡುವೆ ನಡೆದಿವೆ. ಅದೂ ಒಳ್ಳೆಯ ಉದ್ಯೋಗದಲ್ಲಿ ಅಸ್ಪೃಶ್ಯರು ಇದ್ದಾಗ ಮಾತ್ರವೇ ನಡೆದಿರುವ ಅಂತರ್ಜಾತಿ ವಿವಾಹಗಳೇ ಹೆಚ್ಚು.

ಮೊದಲೇ ಹೇಳಿದ ಹಾಗೆ ಜಾತಿಯ ಪ್ರಭುತ್ವ ಆರ್ಥಿಕತೆಯೊಂದಿಗೆ ತಳಕುಹಾಕಿಕೊಂಡಿದೆ. ಇದನ್ನು ಡಿ.ಎಸ್.ಎಸ್. ತನ್ನ ಹೋರಾಟದ ಆರಂಭದಲ್ಲಿ ಚೆನ್ನಾಗಿ ತಿಳಿದಿತ್ತೆಂದು ಕಾಣುತ್ತದೆ. ಅದಕ್ಕೇ ಅದು 'ಕೊಟ್ಟಿದ್ದು ಸಾಕು ಹೆಂಡ ಕೇಳಿ ದಲಿತರು ನಿಂತಿದ್ದಾರೆ ಭೂಮಿ ಕೇಳಿ' ಎಂಬ ಘೋಷಣೆಯನ್ನು ಕೂಗುತ್ತಿತ್ತು. ಇದು ಇವತ್ತಿಗೂ ಪ್ರಸ್ತುತ. ಭೂಮಿಯ ಸಮಾನ ಹಂಚಿಕೆಯಿಂದ ಎಲ್ಲಾ ಪ್ರದೇಶಗಳಲ್ಲೂ ಜಾತಿಯ ಶೋಷಣೆಗೊಳಗಾದವರು ಶೋಷಣಾ ಮುಕ್ತರಾಗುತ್ತಾರೆಂದು ಸಾರಾಸಗಟಾಗಿ ಹೇಳಲು ಬರುವುದಿಲ್ಲ. ಆದರೆ ಆರ್ಥಿಕ ಅಸಮಾನತೆ ಶೋಷಣೆಯನ್ನು ಮುಂದುವರೆಸಿಕೊಂಡು ಬರುತ್ತಿದೆ. ಇದು ತೊಲಗಬೇಕಾದರೆ ದುಡಿಯುವ ಕೈಗಳನ್ನು ಬಲಪಡಿಸಬೇಕಿದೆ. ಯಾರು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುತ್ತಾರೊ ಅವರು ಗುಲಾಮಗಿರಿತನಕ್ಕೆ ಒಳಗಾಗುವುದಿಲ್ಲ. ಇದು ಅಷ್ಟು ಸುಲಭದ ಮಾತಲ್ಲ. ಆದರೆ ಎಲ್ಲಾ ಜನಪರ ಹೋರಾಟಗಳು ಇದನ್ನು ಪ್ರಧಾನವಾಗಿ ಪರಿಗಣಿಸಿ ಹೋರಾಟದ ಮುಂಚೂಣಿಗೆ ತರಬೇಕಾಗಿದೆ.

ಆದರೆ ಇದನ್ನು ಮುಂಚೂಣಿಗೆ ಬರದಂತೆ ಆಳುವ ವರ್ಗ ಅತ್ಯಂತ ನಿಷ್ಠೆಯಿಂದ ಭ್ರಷ್ಟಾಚಾರ, ಭಯೋತ್ಪಾದನೆ, ನಕ್ಸಲೈಟ್, ಕೋಮುವಾದ, ಶಿಕ್ಷಣ ಪಠ್ಯಕ್ರಮ, ಕೇಸರೀಕರಣ ಮುಂತಾದವುಗಳನ್ನೇ ಪ್ರಧಾನವೆಂಬಂತೆ ಬಿಂಬಿಸುತ್ತಾ ಸಾಗುತ್ತಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಅಸ್ಪೃಶ್ಯರನ್ನು ಇನ್ನೂ ಹೆಚ್ಚಿನ ಸ್ವಾಭಿಮಾನಿಗಳನ್ನಾಗಿ ಮಾಡುವುದು ಅತ್ಯವಶ್ಯಕವಾಗಿದೆ. ಒಂದು ಸ್ವಾಭಿಮಾನ ಮತ್ತೊಂದು ಪರ್ಯಾಯ ಮಾರ್ಗಗಳು ಇವು ಮಾತ್ರ ಮುಟ್ಟಿಸಿಕೊಳ್ಳದವರನ್ನು ಕೊಂಚ ಶೋಷಣೆಯಿಂದ ಮುಕ್ತಗೊಳಿಸಬಲ್ಲವು. ಇವೆಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಅಸ್ಪೃಶ್ಯರ ಪರ ಆಲೋಚಿಸುವುದಾದರೆ ಸಂವಿಧಾನಾತ್ಮಕ ಹಕ್ಕುಗಳು ತಳವರ್ಗದವರ ಪರ ಏನೇನು ಇರುವವೋ ಅವುಗಳನ್ನು ಚಾಚೂ ತಪ್ಪದೆ ಜಾರಿಗೆ ತರಬೇಕು. ಇದು ಜನಪರ ಸರ್ಕಾರಗಳ ಧ್ಯೇಯವಾಗಬೇಕು. ■

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File** ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.-ಸಂ.

ಸಂಪಾದಕರೊಡನೆ ಸಂವಾದ

ಅಂತಾ ಆರ್ಥಿಕ ತಜ್ಞ ನಮ್ಮೊಳಗಿದ್ದಾನೆಯೇ?

ಡಾ॥ ರಾಜೇಗೌಡ ಹೊಸಹಳ್ಳಿ

ಪ್ರಿಯ ಸಂಪಾದಕರೇ,

ನನ್ನ ಊರು ಆಲೂರು 'ಟೌನ್' ಎಂದಾಕ್ಷಣ ಹೌದೆ? ಎಂದು ತಮಾಷೆ ಮಾಡುತ್ತಿದ್ದುದುಂಟು. ಅದಕ್ಕೆ ಕಾರಣವಿಲ್ಲದಿರಲಿಲ್ಲ; ಸುಮಾರು ಐವತ್ತು ಅರವತ್ತು ವರುಷ ಕಳೆದರೂ ಅದಕ್ಕೆ ನಗರದ ಕಳೆ ಕಾಣುತ್ತಿರಲಿಲ್ಲ. ತಾಲ್ಲೂಕು ಮಟ್ಟದ ಕೆಲವು ಕಛೇರಿಗಳು ಬಿಟ್ಟರೆ ಬಡಾವಣೆ ಎಂಬ ಮಾತೇ ಇರಲಿಲ್ಲವೆನ್ನಿ. ಇಂಥಾ ಅರೆಮಲೆನಾಡಿನ ಹೆಬ್ಬಾಗಿಲೆಂಬಂತಿರುವ ಇದು ಈ ನಾಲ್ಕಾರು ವರ್ಷಗಳಿಂದೀಚೆ ಇದ್ದಕ್ಕಿದ್ದಂತೆ ಬಿಗುಮಾನ ತಾಳಿಬಿಟ್ಟಿದೆ. ಐದು ಹತ್ತು ಸಾವಿರವಿದ್ದ ಸೈಟ್ ಬೆಲೆ, ಲಕ್ಷಕ್ಕೇರಿ; ಒಂದು ಲಕ್ಷ ದಾಟಲಾದ ಕೃಷಿ ಭೂಮಿ ಕೋಟಿಗೇರಿ; ನೇಗಿಲು ಹಿಡಿದ ರೈತ 'ಇದ್ಯಾವನಿಗೆ ಬೇಕು ಈ ನೆಲ ಕೆರೆಯೋ ಕೆಲಸ' ಎಂದು ಕಾಲುಮೇಲೆ ಕಾಲುಹಾಕಿ 'ನನ್ನದೂ ಎರಡೆಕರೆ ಇದೆ' ಎನ್ನತೊಡಗಿದ್ದಾನೆ.

ಅತ್ತಕಡೆ ಪ್ಯಾಟೆಯು ಉಳುವ ಹೊಲದ ಕಡೆ ಸರಿದು ಪಕ್ಕದ ಮರಸು ಗ್ರಾಮದ ಉಡುಸಲಮ್ಮನು, ಯಾರೋ ಒಬ್ಬ ಡೆವಲಪರ್ 'ಈ ದೇವಿ ನನ್ನ ಮನೆದೇವಿಯೆಂದು' ಹೇಳುತ್ತಾ ಬಂದವನಿಂದ ಮೈಸೂರರಸನಿಗೂ ಮಿಗಲಾಗಿ ಡೆವಲಪ್ಪಾಗಿ ಅರಮನೆಯಂತಾ ಹಜಾರ ಕಟ್ಟಿಸಿಕೊಂಡು ಅರಸಮ್ಮದೇವಿಯಾಗಿ; ಖಾಯಿಲೆ ಕಸಾಲು ಬಗೆಹರಿಸುತ್ತಾ ಕುರಿ, ಕೋಳಿ ತಿನ್ನುತ್ತಿದ್ದವಳು ಇತ್ತೀಚೆಗೆ ಪ್ಯೂರ್‌ವೆಜ್ ಆಗಿ ಇಂಟರ್‌ನೆಟ್‌ನಲ್ಲಿ ಅಮೆರಿಕಾ ನೋಡುತ್ತಾ; ಅಲ್ಲಿ ವಿದ್ಯೆ ಬುದ್ಧಿ ಹೆಚ್ಚಾಗಿ ಮಂಕು ಹಿಡಿದಿರುವವರಿಗೆಲ್ಲಾ ಇಲ್ಲಿಂದಲೇ ಹೋಮ ಹವನಾದಿಗಳನ್ನು ಮಾಯಾ ಕನ್ನಡಿಯ ನೆಟ್‌ನಲ್ಲಿ ಮಾರ್ಕೆಟ್ ಮಾಡಿಕೊಡುತ್ತಿದ್ದಾಳೆ. ಹೇಗಿದೆ ಗ್ರಾಮೋದ್ಧಾರ ಎನ್ನೋಣವೇ? ಇತ್ತಕಡೆ ನನ್ನೂರು ಹೊಸಹಳ್ಳಿಯ ಬೋರೆ ಮ್ಯಾಲೆ ತಾಲ್ಲೂಕು ಮಟ್ಟದ ನ್ಯಾಯಾಲಯ ಬಂದೇ ಬಿಟ್ಟಿತು! ಅದರೊಡನೆಯೇ ಅಂತಾ ಕಛೇರಿ ಇಂತಾ ಕಛೇರಿಗಳೆಲ್ಲಾ ನೆಲಬಿಟ್ಟು ಏಳತೊಡಗಿ, ಹೊಳೆ ಮರಳು ಗುಡ್ಡದ ಕಲ್ಲುಗಳೆಲ್ಲಾ ತರಾತುರಿಯಾಗಿ ಖರ್ಚಾಗುತ್ತಿವೆ.

ನನ್ನೂರು ಹೇಗಿತ್ತು? ಆಗ ಪೊಲೀಸ್ ಸ್ಟೇಷನ್ನಿಗೆ ಹೋಗೋದೆಂದರೆ ಅವಮಾನವಾಗಿತ್ತು. ಕೋರ್ಟ್ ಅಂದರೆ; ಉಂಟೇ ಉಂಟೇ! ಮನೆ ಉಳಿದೀತೆ! ಎಂಬಂತಿತ್ತು. ಹೊಲ ಗದ್ದೆಗಳೆಲ್ಲಾ ಆಷಾಢಮಾಸದಲ್ಲಿ ಹಕ್ಕಿಪಕ್ಷಿಗಳನ್ನೆಲ್ಲಾ ಕೂರಿಸಿಕೊಂಡು ಲಾಲಿ ಹೇಳುತ್ತಿದ್ದವು. ನನ್ನೂರಿನ ಜನ ಇಂಥಾ ಬೆಳೆಯೋ ಪೈರು ನೋಡಿ ಆನಂದಪಡುತ್ತಿದ್ದರು. ಈಗ, ಬೋರೆ ಮ್ಯಾಲೆ ಕೋರ್ಟ್ ಬಂತು! ಅರರೇ ಒಂದು ಅಂತಸ್ತು ಸಾಲದಿಲ್ಲಂತಪ್ಪೋ! ಪಕ್ಕದಲ್ಲೇ ಜಡ್ಜಿಗೆ ಮನೆ ಅಂತೆ! ಇತ್ಲಾ ಕಡೆ ಬಸ್ ಡಿಪೋ ಅಂತೆ! ಅತ್ಲಾಕಡೆ ಅದೆಂತದೋ ಆಫೀಸಂತಪ್ಪೋ! ನೂರಾರು ದನ, ಮೇಯ್ದು ನಿಂತು, ಮೇಲುಕಾಡುತ್ತಿದ್ದ ನನ್ನೂರ ಬೋರೆಯ ಹಸಿರು ಈಗೇನಾಗುತ್ತಿದೆ? ಇದು ಅಭಿವೃದ್ಧಿಯೇ? ಇದು ಬೇಡವೆ? ಗುಂಟೆಗೆ ಎರಡು ಲಕ್ಷವಂತಲ್ಲಪ್ಪೋ ಎನ್ನುವ ನನ್ನೂರ ಜನರ ಮಾತು ಪಥ್ಯವೋ ಅಪಥ್ಯವೋ ಕೇಳೋರಾರು! ಅದು ಆಗೇ ಆಗುತ್ತದೆ. ನಗರವೆಂಬ ಭಸ್ಮಾಸುರ ತಕಥೈ ಅಂತ ಕುಣಿಯುತ್ತ ಭಾರತದ ಗ್ರಾಮೀಣದ ಸರ್ವಸ್ವವನ್ನು ನುಂಗೋದಂತೂ ಗ್ಯಾರಂಟಿ. ನನ್ನೂರ ಕೃಷಿ ಜನವೂ ನಗರದವರ ಮನೆ ಕಸ ಮುಸುರೆ ಉಜ್ಜೋದು ಕೂಡ ಸತ್ಯ. ಈ ಸತ್ಯಗಳ ನಡುವೆ ಅಭಿವೃದ್ಧಿ ಪಥದ ಕಡೆ ಚಲಿಸುತ್ತದೆನ್ನುವ ಭಾರತದ ಕತೆ ಏನಾಗಬಹುದು? ಏನೂ ಆಗುವುದಿಲ್ಲ.

ಗ್ರಾಮಗಳಲ್ಲಿ ಗೇದುಣ್ಣುವ ಮನಸ್ಸು ಇಲ್ಲ. ಕುಟುಂಬ ಯೋಜನೆಯಡಿ ದೇಶ ಚಲಿಸಲೇ ಬೇಕಾಗಿರುವುದರಿಂದ ಕೃಷಿಗೆ ಬೇಕಾದ ಕೂಡು ಕುಟುಂಬಗಳಾಗಿ ಉಳಿಯುತ್ತಿಲ್ಲ, ವಿದ್ಯೆ ಬೇಕು ನಿಜ. ಅದು ಕೃಷಿ ವಲಯಕ್ಕೆ ತಳಹದಿಯಾಗುತ್ತಿಲ್ಲ. ಹಿಂದೆ ಪೇಟೇಲಿ ಒಂದು ನಿವೇಶನ ಮಾಡಲು ಹೊರಟರೆ ಹೊಲಗದ್ದೆ ಹಾಳು ಬಿಡುತ್ತಿಯೇನು! ಎಂದು ಗುರ್ ಎನ್ನುತ್ತಿದ್ದ ಹಿರಿಯರು; ಈಗ 'ಇರಲಿ ಬಿಡೋ ಮುಂದೆ ಮಕ್ಕಳಿಗಾದೀತು' ಎನ್ನಲು ಪ್ರಾರಂಭಿಸಿದ್ದಾರೆ. ಮನೆಗೊಂದು ಮನುಷ್ಯನಿಗೊಂದು ನಿವೇಶನ ಪೇಟೇಲಿರಲಿ ಎಂದಾದರೆ ಉಳಲು ಭೂಮಿ ಎಲ್ಲಿದ್ದೀತು!

ಅದು ಸರಿ. ಈ ಪರಿಗೆ ಹಣವೆಲ್ಲಿಂದ ಬರುತ್ತಿದೆ. ದೇಶದ ಬಜೆಟ್‌ನಲ್ಲಿ ಗ್ರಾಮ ಮೂಲಕ್ಕೆ ಮುಟ್ಟುವುದು ಕೇವಲ ಶೇ.20 ಅಂತೆ. ಉಳಿದದ್ದು ಎಲ್ಲಿ ಹೋಗಬೇಕು; ದೇಶದ ಚಿಕ್ಕ ಟೌನ್‌ಗಳೂ ಸಹಾ ಹೀಗೆ ನುಂಗುತ್ತಿವೆ. ಒಂದು ಗ್ರಾಮ ಪಂಚಾಯ್ತಿ ಮೆಂಬರಿಂದ ಹಿಡಿದು ಪುಡಿ ಕಂಟ್ರಾಕ್ಟರ್‌ನಿಂದ ಹಿಡಿದು ಎಲ್ಲಿಂದೆಲ್ಲಿಗೋ ಹಣದ ಥೈಲಿ ಹರಿದಾಡಿ ಭೂಮಿ ಮೇಲೆ ಘನೀಕರಣಗೊಂಡಾಗ ಭೂಮ್ತಾಯಿ ರೇಟು ಹೆಚ್ಚಾಗದೆ ಉಳಿದೀತೆ! ಇನ್ನು ಮೇಲ್ಮಟ್ಟದ ರಾಜ್ಯ ರಾಷ್ಟ್ರ ರಾಜಕಾರಣದ ಹಣದ ಥೈಲಿ ದೊಡ್ಡ ನಗರಗಳನ್ನು ಧಾಟಿ ಸ್ವಿಸ್ ದೇಶದಲ್ಲಿ ಕೂರೋದು ಗೊತ್ತಿರುವ ವಿಚಾರ ತಾನೆ! ಇತ್ತ ಕಾವೇರಿ, ಅತ್ತ ಹೇಮಾವತಿ ಮೇಲೆ ತುಂಗಾಭದ್ರ ಬರಿದಾಗತೊಡಗಿವೆ. ಕುಡಿಯುವ ನೀರು ವಿಷವಾಗುತ್ತಲಿದೆ. ವಿಷ ತುಂಬಿದ ನೀರು ಭೂಮಿ ಮೇಲಿನ ಮಕ್ಕಳನ್ನು ಸಾಕುವುದೆಂತು!

ಎಲ್ಲಿ ನೋಡಿದರೂ ಎಲ್ಲರಿಗೂ ಭೂಮಿ ಮೇಲೆ ಕಣ್ಣು. ಅದನ್ನು ಅಡ್ಡಡಗೀಳಿದರೆ ಎಷ್ಟು ಸೈಟು, ಉದ್ದಗೀಳಿದರೆ ಎಷ್ಟು ಸೈಟು, ಅದರ ಮೇಲೆ ಹಣ ಹಾಕಿದರೆ ಎಷ್ಟು ವರ್ಷಕ್ಕೆ ಎಷ್ಟಾದೀತು ಎಂಬ ಮಾತೇ ಹೆಚ್ಚು. ಇದೆಲ್ಲ ಸರಿ! ಹಣವೆಲ್ಲಿಂದ ಬರುತ್ತೆ! ಹಳ್ಳಿಯವರಿಗಾಗಲೀ ಪೇಟೆಯವರಿಗಾಗಲೀ ಹಣವೆಂದರೆ ಭಯವೇ ಇಲ್ಲ. ಖರ್ಚು ಎಂದರೆ ಲೆಕ್ಕವೇ ಇಲ್ಲ. ದಿನಾ ಅವರಿವರೊಡನೆ ಮಾತಾಡಲೇ ಇಂತಿಷ್ಟು ಎಂಬ 'ಕರೆನ್ಸಿ' ಬೇಕು. ಈ ಕರೆನ್ಸಿ ದೇಶ ವಿದೇಶ ದಾಟಿ 2G/3G Scamಗಳಾಗಿರುವುದುಂಟು. ನೆಲ ಬಗೆದರೆ ಗಣಿ ರೂಪದಲ್ಲಿ ಕರೆನ್ಸಿ ಚೆಲ್ಲಾಡುವುದುಂಟು. ಕೇಳೋ ಸರ್ಕಾರವೇ ಕರೆನ್ಸಿ ಹಿಂದೆ ಹೊರಟು, ಕರೆನ್ಸಿಯೊಳಗೆ ನ್ಯಾಯಾಧೀಶರನ್ನೂ ಮುಳುಗಿಸಿ, ಜೈಲೆಂದರೆ ಅದು ಶ್ರೀಕೃಷ್ಣ ಜನ್ಮಸ್ಥಳದಷ್ಟು ಪವಿತ್ರವಲ್ಲವೆ! ಎಂಬ ಧಿಮಾಕು ತೋರೋ ಈ ಕಾಲದಲ್ಲಿ ಗ್ರಾಮೀಣ ರೈತನೂ ರೇಸಿನ ಕುದುರೆಯಂತೆ ಗುರಿಮುಟ್ಟಲು ಓಡತೊಡಗಿದ್ದಾನೆ. ಆ ಕುದುರೆ ಜೂಜು ಯಾರ ಕೈಲಿದೆ ಎಂಬುದು ಯಾರಿಗೂ ಗೊತ್ತಿಲ್ಲದ ವಿಚಾರವೇನಲ್ಲ. ಅದನ್ನು ನಿಯಂತ್ರಿಸುವುದು ಹೇಗೆ? ಅಂತಾ ಆರ್ಥಿಕ ತಜ್ಞ ನಮ್ಮೊಳಗಿದ್ದಾನೆಯೇ?

ಗ್ರಾಮ ಸಮಾಜ ಏನಾಗುತ್ತಿದೆ. ಎತ್ತ ಸಾಗಬೇಕು, ಏನಾಗಬೇಕು ಎಂಬುದರ ಮೇಲೆಯೇ ದೇಶದ ಭವಿಷ್ಯ ನಿಲ್ಲುತ್ತದೆ. ಅತ್ತಕಡೆ ಚಿಂತನೆ ಈಗಿನ ವರ್ತಮಾನದಲ್ಲಂತೂ ಬಹು ಮುಖ್ಯ. ಬಿಹಾರ ರಾಜ್ಯ ಹೋಗೇ ಬಿಟ್ಟಿತು ಎಂದಾಗ ಮತ್ತೆ ಚಿಗುರುತ್ತಿದೆ. ಒರಿಸ್ಸಾ ಬರಡಾಗಿದ್ದು ಈಗ ಅಲ್ಲಿ ಗರಿಕೆ ಹುಟ್ಟಲಾರಂಭಿಸಿದೆ. ಕರ್ನಾಟಕ ಅಂಥಾ ದಿನಕ್ಕೆ ಕಾಯುತ್ತಲಿದೆ. ಇಲ್ಲಿನ ಜನ ಗಣಿಧೂಳಿನೊಡನೆ; ಜಾತಿ ಘಂಟಿನೊಡನೆ ಎತ್ತ ಹೋಗಬೇಕೆಂಬುದರ ಅರಿವಿಲ್ಲದೆ ಆಸರೆಗಾಗಿ ಎಲ್ಲೆಲ್ಲೋ ಓಡೋಡಿ ಉಬ್ಬಸಪಡುತ್ತಿದ್ದಾರೆ.

ಭವಿಷ್ಯವೇ ಈ ದೇಶಕ್ಕೆ ಇಲ್ಲವೇನೋ ಎಂದು ಆತಂಕಪಡುತ್ತಿದ್ದಾರೆ. ಉರಿದ ನಕ್ಷತ್ರ ಬೀಳಲೇಬೇಕು. ಉರಿದ ಬೆಂಕಿ ಆರಲೇಬೇಕು. ಆ ಬೂದಿ ಮೇಲೆ ಭಾಗೀರಥಿ ಹರಿಯಲೇ ಬೇಕು. ಇದು ಕಾಲ ನಿಯಮ. ಎಲ್ಲವನ್ನು ಸಹಿಸಿಕೊಳ್ಳಬೇಕಾದ್ದು ಸೃಷ್ಟಿ ನಿಯಮ. ಈ ಎಲ್ಲಾ ಹೌದು ಇಲ್ಲಗಳೊಡನೆಯೇ ಹೋಗಿರುವ ಮಳೆ ಬೆಳೆಗಳ ಕಾಲಗಣನೆಗಳೊಡನೆಯೇ ಬುದ್ಧ, ಬಸವ, ವಿವೇಕಾನಂದ, ಗಾಂಧಿ ಇಂಥವರು ಮತ್ತೊಂದು ರೂಪದಲ್ಲಿ ಉದಿಸಿ ಬಂದಾರು ಎಂಬುದೇ ಭರವಸೆಯೇ ಬದುಕು. ■

ವಿದ್ಯೆ ಬೇಕು ನಿಜ. ಅದು ಕೃಷಿ ವಲಯಕ್ಕೆ ತಳಹದಿಯಾಗುತ್ತಿಲ್ಲ. ಹಿಂದೆ ಪೇಟೇಲಿ ಒಂದು ನಿವೇಶನ ಮಾಡಲು ಹೊರಟರೆ ಹೊಲಗದ್ದೆ ಹಾಳು ಬಿಡುತ್ತಿಯೇನು! ಎಂದು ಗುರ್ ಎನ್ನುತ್ತಿದ್ದ ಹಿರಿಯರು; ಈಗ 'ಇರಲಿ ಬಿಡೋ ಮುಂದೆ ಮಕ್ಕಳಿಗಾದೀತು' ಎನ್ನಲು ಪ್ರಾರಂಭಿಸಿದ್ದಾರೆ. ಮನೆಗೊಂದು ಮನುಷ್ಯನಿಗೊಂದು ನಿವೇಶನ ಪೇಟೇಲಿರಲಿ ಎಂದಾದರೆ ಉಳಲು ಭೂಮಿ ಎಲ್ಲಿದ್ದೀತು! ಅದು ಸರಿ. ಈ ಪರಿಗೆ ಹಣವೆಲ್ಲಿಂದ ಬರುತ್ತಿದೆ.

ರಾಷ್ಟ್ರಪತಿಗಳು ಮಾಡಿದ ತಪ್ಪಾದರೂ ಏನು?

(7ನೇ ಪುಟದಿಂದ)

ಕುಣಿಕೆಗೆ ತಮ್ಮ ತಲೆಯನ್ನು ಒಡ್ಡುವ ಬದಲು, ಪಾಪಪ್ರಜ್ಞೆಯಿಂದ ತಂತಮ್ಮ ಆತ್ಮಸಾಕ್ಷಿಗೆ ತಲೆಯೊಡ್ಡುವ ಮೂಲಕ ತಮ್ಮ ತಪ್ಪನ್ನು ಅರಿತು ಬಾಳಲು ಅವಕಾಶ ನೀಡಿದ್ದಾರೆ. ಇದರಲ್ಲಿ ತಪ್ಪೇನಿದೆ? ಮರಣದಂಡನೆ ಸಲ್ಲದು ಎಂದಾಕ್ಷಣ ಶಿಕ್ಷೆಯೇ ಅಮಾನ್ಯ ಎಂದಾಗುವುದಿಲ್ಲ ಅಲ್ಲವೇ? ಎಂತಹುದೇ ಘೋರ ಅಪರಾಧವೆಸಗಿದ್ದರೂ, ಎಂತಹ ಕ್ರೂರ ಅಪರಾಧಿಯಾಗಿದ್ದರೂ ಮಾನವೀಯತೆಯ ಒಂದು ಅಂಶ ಎಲ್ಲೋ ಒಂದು ಕಡೆ ಹೃದಯಾಂತರಾಳದಲ್ಲಿ ಅಡಗಿರುತ್ತದೆ. ಅದನ್ನು ಬಡಿದೆಬ್ಬಿಸುವ ಹೊಣೆಗಾರಿಕೆ ಪ್ರಜ್ಞಾವಂತ ಸಮಾಜದ್ದೂ ಆಗಿರುತ್ತದೆ.

ಮರಣದಂಡನೆಗೊಳಗಾದ ಖೈದಿಗಳಿಗೆ ಕ್ಷಮಾದಾನ ನೀಡಿದ ಮಾತ್ರಕ್ಕೆ ದೇಶದಲ್ಲಿ ಅಪರಾಧಗಳು ಹೆಚ್ಚುವುದಿಲ್ಲ. ಅಥವಾ ಎಲ್ಲ ಖೈದಿಗಳನ್ನೂ ಸಾಮೂಹಿಕವಾಗಿ, ಸಾರ್ವಜನಿಕವಾಗಿ ಕೊಂದರೂ ಅಪರಾಧಗಳು ತಗ್ಗುವುದಿಲ್ಲ. ಯಾವುದೇ ಕಾನೂನು ಶಾಸ್ತ್ರವಾಗಲಿ ಶಿಕ್ಷೆ ನೀಡಬೇಕಿರುವುದು ಅಪರಾಧಕ್ಕೇ ಹೊರತು ಅಪರಾಧಿಗಲ್ಲ. ಮರಣದಂಡನೆಯನ್ನು ಒಂದು ನಿರ್ಬಂಧಕ ಶಾಸನ ಎಂದು ಪರಿಗಣಿಸುವುದು ಆಳುವ ವರ್ಗಗಳ ಧೋರಣೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಸಾಹತು ಆಳ್ವಿಕರು ಅನುಸರಿಸುತ್ತಿದ್ದ ಇದೇ ಧೋರಣೆಯನ್ನು ಸ್ವತಂತ್ರ ಭಾರತದ ಪ್ರಭುತ್ವವೂ ಅನುಸರಿಸುತ್ತಿದೆ. ಆದರೆ ಮರಣದಂಡನೆಯನ್ನು ರದ್ದುಪಡಿಸಿರುವ 180ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಅಪರಾಧಗಳ ಸಂಖ್ಯೆಯೇನೂ ಏರುತ್ತಿಲ್ಲ. ಕಣ್ಣಿಗೆ ಕಣ್ಣು ಎಂಬ ಶಿಕ್ಷೆಯ ವಿಧಾನವನ್ನು ಅನುಸರಿಸಿ ಸಾರ್ವಜನಿಕರ ಸಮ್ಮುಖದಲ್ಲೇ ಅಪರಾಧಿಗಳನ್ನು ಕೊಲ್ಲುವ ಹಲವು ರಾಷ್ಟ್ರಗಳಲ್ಲಿ ಅಪರಾಧಿಗಳ ಸಂಖ್ಯೆ ಕಡಿಮೆಯಾಗಿಯೂ ಇಲ್ಲ.

ಪ್ರತಿಭಾ ಪಾಟೀಲ್ ಅವರ ಈ ದಿಟ್ಟ ನಿರ್ಧಾರ ಎಷ್ಟೇ ಆಕ್ಷೇಪಾರ್ಹವಾಗಿದ್ದರೂ, ಓರ್ವ ಮಹಿಳಾ ರಾಷ್ಟ್ರ ಪತಿಯಾಗಿ ಅವರು ಕೈಗೊಂಡ ನಿರ್ಣಯ ಸ್ತುತ್ಯಾರ್ಹವಷ್ಟೇ ಅಲ್ಲ ಚರಿತ್ರಾರ್ಹವೂ ಹೌದು. ಅವರ ಸಾಧನೆ, ಸಾಫಲ್ಯ ವೈಫಲ್ಯಗಳೇನೇ ಇರಲಿ ಪ್ರಜಾಪ್ರಭುತ್ವದ ನಿಜವಾದ ಧೋರಣೆಯನ್ನು ಬಿಂಬಿಸುವ ಒಂದು ದಿಟ್ಟ ನಿರ್ಧಾರವನ್ನು ಪ್ರತಿಭಾ ಜೀ ಕೈಗೊಂಡಿದ್ದಾರೆ. ■

ಮೇಲ್ಜಾತಿಯ ಧ್ರುವೀಕರಣದ ಅಪಾಯ

(8ನೇ ಪುಟದಿಂದ)

ಆರ್‌ಎಸ್‌ಎಸ್ ಸರ್ಕಾರದ ಮೂಲಕ ಜಾರಿಗೆ ತರತೊಡಗಿತು. ಕಬಳಿಕೆಯಲ್ಲಿ ಮಾತ್ರ ಅಪಾರ ಆಸಕ್ತಿಯನ್ನು ಹೊಂದಿದ್ದ ಯಡಿಯೂರಪ್ಪ ಅವರಿಗೆ ಇದ್ಯಾವುದೂ ಅಪಾಯಕಾರಿ ಅನ್ನಿಸಲಿಲ್ಲ. ಆರ್‌ಎಸ್‌ಎಸ್ ಶಾಖೆಯಲ್ಲಿ ಬೆಳೆದ ಯಡಿಯೂರಪ್ಪನವರು ಈ ಅಜೆಂಡಾ ಜಾರಿಗೆ ಅಡ್ಡಿಯಾಗಲಿಲ್ಲ. ಬರೇ ನುಂಗುವುದರಲ್ಲಿ ತೊಡಗಿ ನುಂಗಿದ್ದನ್ನು ದಕ್ಕಿಸಿಕೊಳ್ಳಲಾಗದೇ ಈಗ ಸಿಬಿಐ ಬಲೆಗೆ ಬಿದ್ದಿದ್ದಾರೆ.

ಯಡಿಯೂರಪ್ಪ ಅವರ ಜಾಗದಲ್ಲಿ ಮುಖ್ಯಮಂತ್ರಿಯಾಗಿದ್ದ ಸದಾನಂದಗೌಡರು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು ಒಕ್ಕಲಿಗ ಎಂಬ ಜಾತಿಯ ಅಸ್ತ್ರ ಪ್ರಯೋಗಿಸಿದ್ದು, ಈ ಗೌಡರನ್ನು ಮುಂದಿಟ್ಟುಕೊಂಡು ತಮ್ಮ ಲೂಟಿಯನ್ನು ಮುಂದುವರೆಸಲು ಹೊರಟ ಪಟ್ಟಭದ್ರ ಹಿತಾಸಕ್ತಿಗಳೂ ಕೂಡ ಜಾತಿಯ ರಕ್ಷಾಕವಚದ ಮೊರೆಹೋದದ್ದು, ಅದಕ್ಕಾಗಿ ಗುರುವಂದನೆ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಸಮಾವೇಶ ನಡೆಸಿದ್ದು, ಪಕ್ಷಭೇದವಿಲ್ಲದೇ ಒಕ್ಕಲಿಗರೆಲ್ಲ ಒಂದು ಎಂದು ತೋರಿಸಲು ದೇವೇಗೌಡ, ಎಸ್.ಎಂ.ಕೃಷ್ಣ, ಕುಮಾರಸ್ವಾಮಿ, ಸದಾನಂದಗೌಡ, ಅಶೋಕ್, ಅಂಬರೀಶ, ಡಿಕೆಶಿ ಇವರೆಲ್ಲ ಫೋಟೋ ಹಾಕಿ ಪ್ರಚಾರ ಮಾಡಿದ್ದು ಇವರ ಬೌದ್ಧಿಕ ದಿವಾಳಿತನದ ಸಂಕೇತ.

ಈ ಜಾತಿ ರಾಜಕಾರಣ ಎಷ್ಟು ಕೀಳುಮಟ್ಟಕ್ಕೆ ಹೋಗಿದೆಯೆಂದರೆ, ಯಡಿಯೂರಪ್ಪನವರ ಪರವಾಗಿ ಸಮಾವೇಶಗಳನ್ನು ಮಾಡುವ ಲಿಂಗಾಯಿತರು ಹನ್ನೆರಡನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದ ಬಸವಣ್ಣನವರನ್ನು ತಮ್ಮ ಸಂಕೇತವೆಂದು ಬಳಸಿಕೊಂಡು ಅವರ ಭಾವಚಿತ್ರ ಹಾಕಿಕೊಳ್ಳುತ್ತಾರೆ. ಇನ್ನೊಂದೆಡೆ ಒಕ್ಕಲಿಗರು ಜಾತಿ ವಿನಾಶಕ್ಕೆ ಕರೆ ನೀಡಿ ರಾಷ್ಟ್ರಕವಿ ಕುವೆಂಪು ಅವರು ತಮ್ಮವರೆಂದು ಅವರ ಫೋಟೋ ಹಾಕಿಕೊಳ್ಳುತ್ತಾರೆ. "ಆ ಮತ-ಈ ಮತದ ಹಳೆಯ ಮತದ ಸಹವಾಸ ಸಾಕಿನ್ನು, ಸೇರಿರೈ ಮನುಜಮತಕ್ಕೆ" ಎಂದು ಸಾರಿದ ಕುವೆಂಪು ವಿಶ್ವಮಾನವ ತತ್ವ ಪ್ರತಿಪಾದಿಸಿದ್ದರು. ಅಂಥವರನ್ನು ಜಾತಿ ರಾಜಕಾರಣದ ಕೊಚ್ಚೆಯಲ್ಲಿ ಹಾಕಲು ಇವರಿಗೆ ನಾಚಿಕೆ ಅನ್ನಿಸುತ್ತಿಲ್ಲ. ಪೂರ್ಣಚಂದ್ರ ತೇಜಸ್ವಿ ಬದುಕಿದ್ದರೆ, ಈ ಆಷಾಢಭೂತಿಗಳಿಗೆ ಪಾಠ ಕಲಿಸುತ್ತಿದ್ದರು.

ಮೇಲ್ಜಾತಿಗಳ ಈ ಧ್ರುವೀಕರಣ, ಹಿಂದುತ್ವವಾದಿಗಳ ಫ್ಯಾಸಿಸ್ಟ್ ಹುನ್ನಾರ, ಜರತಾರಿ ಜಗದ್ಗುರುಗಳ ಕಿತಾಪತಿಯಿಂದಾಗಿ ದಲಿತ ಅಲ್ಪಸಂಖ್ಯಾತ ಹಿಂದುಳಿದ ಜನವರ್ಗಗಳು ಮಾತ್ರವಲ್ಲ ಮೇಲ್ಜಾತಿಯಲ್ಲಿನ ಬಡವರು ಕೂಡ ತಬ್ಬಲಿಯಾಗಿ ನಿಂತಿದ್ದಾರೆ. ದಮನಿತ ವರ್ಗಗಳು ಛಿದ್ರಗೊಂಡಿವೆ. ಹಿಂದುಳಿದ ವರ್ಗಗಳನ್ನು ಒಡೆದು ಅಲ್ಪಸಂಖ್ಯಾತರ ಮೇಲೆ ಛೂ ಬಿಡುವ ಹುನ್ನಾರ ನಡೆದಿದೆ. ದುರ್ಬಲ ಜಾತಿಗಳಲ್ಲೂ ಕೂಡ ಜಗದ್ಗುರುಗಳು ಹುಟ್ಟಿಕೊಂಡಿದ್ದಾರೆ. ಅಲ್ಲಿ ಪಾದಪೂಜೆ ಆರಂಭವಾಗಿದೆ. ಇದಕ್ಕೆಲ್ಲ ಸಂಘಪರಿವಾರದ ಪುರೋಹಿತಶಾಹಿ ನಾಯಕತ್ವ ಮಾತ್ರವಲ್ಲ ಅದರ ಪಾದಪೂಜೆಯಲ್ಲಿ ತೊಡಗಿದ ಯಡಿಯೂರಪ್ಪ ಈಶ್ವರಪ್ಪ, ಸದಾನಂದಗೌಡ, ಶ್ರೀರಾಮುಲು, ಉಮಾಭಾರತಿ, ಬಂಗಾರು ಲಕ್ಷ್ಮಣ, ಕಲ್ಯಾಣಸಿಂಗ್‌ರಂತಹ ಶೂದ್ರ ನಾಯಕರು ಕೂಡ ಕಾರಣ.

ಇಂತಹ ಸನ್ನಿವೇಶದಲ್ಲಿ ದಲಿತ ಸಂಘರ್ಷ ಸಮಿತಿಯಂತಹ ಜಾತಿ ವಿನಾಶ ಗುರಿ ಹೊಂದಿರುವ ಪ್ರಗತಿಪರ ಸಂಘಟನೆಗಳು ಸಮಾಜವಾದಿಗಳು, ಮಾರ್ಕ್ಸವಾದಿಗಳು ಒಂದುಗೂಡಿ ದಿಕ್ಕು ತಪ್ಪಿದ ಶೋಷಿತ ಜನವರ್ಗಗಳನ್ನು ಒಂದೇ ವೇದಿಕೆಗೆ ತರಬೇಕಾಗಿದೆ. ಡಿಎಸ್‌ಎಸ್‌ನಲ್ಲಿ ಎಷ್ಟೇ ಗುಂಪುಗಳಿದ್ದರೂ ಇವೆಲ್ಲ ಜಾತಿ ವಿನಾಶದ ಪರವಾಗಿರುವ ಆಶಯ ಹೊಂದಿವೆ. ಅಂತಲೇ ಈ ಚಾರಿತ್ರಿಕ ಹೊಣೆಗಾರಿಕೆ ನಿಭಾಯಿಸಲು ಈ ಎಲ್ಲ ಪ್ರಗತಿಪರ ಸಂಘಟನೆಗಳು ಒಂದುಗೂಡಿ ಮೇಲ್ಜಾತಿಗಳ ಮೇಲ್ವರ್ಗಗಳ ಜಾತಿ ಧ್ರುವೀಕರಣದ ಕೋಟೆಯನ್ನು ಭೇದಿಸಿ ಸಮಾನತೆಯ ಬೆಳಕಿನ ದೀವಟಿಗೆಯನ್ನು ಎತ್ತಿ ಹಿಡಿದು ಮುನ್ನಡೆಯಬೇಕಿದೆ. ■



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-560 091
ದೂರವಾಣಿ : 080-23480278, 9448048306

ಕುವೆಂಪು ಸಾಹಿತ್ಯದಲ್ಲಿ ಅಪಾರ ಬೆಳಕುಂಟು. ಅವರ ಫೋಟೋ ಹಾಕಿಕೊಂಡಿರುವ ಒಕ್ಕಲಿಗರ ಸಂಘ ಅವರ ತತ್ವಗಳನ್ನು ಒಪ್ಪಿಕೊಂಡು ಪ್ರಚಾರ ಮಾಡುವಂತೆ ಒತ್ತಾಯ ಹಾಕಬೇಕು. ಅವರು ಜೀವನದಲ್ಲಿ ಪರಿಪಾಲಿಸಬೇಕಾದ ಜಾತ್ಯತೀತತೆ, ಅಂತರ್‌ಜಾತಿ ವಿವಾಹ, ಜಾತಿ ವಿನಾಶ, ಮೂಢನಂಬಿಕೆಯ ನಿರ್ಮೂಲನೆ, ಅಸಮಾನತೆಯ ತೆರವು, ಯಜ್ಞಯಾಗಗಳ ಉಚ್ಚಾಟನೆ ವೈಜ್ಞಾನಿಕ ಮನೋಭಾವ, ವೈಚಾರಿಕ ಬುದ್ಧಿ, ಪ್ರಗತಿಪರ ಜೀವನ ವಿಧಾನ, ನಿರಂಕುಶಮತಿ, ಮಂತ್ರಮಾಂಗಲ್ಯ, ಪುರೋಹಿತಶಾಹಿಯ ಮೂಲೋತ್ಪಾಟನೆ – ಮುಂತಾದ ಕುವೆಂಪು ಆದರ್ಶಗಳನ್ನು ಅಳವಡಿಸಿಕೊಂಡರೆ ಮಾತ್ರ ಒಕ್ಕಲಿಗರಿಗೆ ಮತ್ತು ಅವರ ಸಂಘಕ್ಕೆ ನೈತಿಕ ಹಕ್ಕು ಮತ್ತು ಶಕ್ತಿ ಬರಲು ಸಾಧ್ಯ. ಇಲ್ಲವಾದರೆ ಈಗಿನಂತೆ ಬೌದ್ಧಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರು ರಿಕ್ತರಾಗಿರಬೇಕಾಗುತ್ತದೆ.

ಒಕ್ಕಲಿಗರು ಬೌದ್ಧರೇ?

ಪ್ರೊ|| ಕೆ.ಎಸ್ ಭಗವಾನ್

ಒಕ್ಕಲಿಗರ ಬೃಹತ್ ಸಮ್ಮಾವೇಶ 'ಗುರುವಂದನೆ'ಯ ರೂಪದಲ್ಲಿ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ (03-06-2012) ಜರುಗಿತು. ಇದನ್ನು ಆಯೋಜಿಸಿದ್ದು 'ಒಕ್ಕಲಿಗರ ಸಂಘ' ಬೆಂಗಳೂರು. ಅದು ಜನಾಂಗಿಕ ಒಗ್ಗಟ್ಟನ್ನು ತೋರಿಸಿದರೂ ಸಾಮಾಜಿಕ ಶೈಕ್ಷಣಿಕ ಸಾಂಸ್ಕೃತಿಕ ಅಭಿವೃದ್ಧಿಯ ಮುನ್ನೋಟವನ್ನು ನೀಡಲಿಲ್ಲ. ಮುಂಗಾಣ್ಕೆ ಇಲ್ಲದ ಜನಾಂಗ ಮಂದಗಾಮಿ ಆಗುವುದು ಸಹಜ. ಹಳ್ಳಿಗಾಡಿನ ಒಕ್ಕಲಿಗರು ಬೇಸಾಯಗಾರರು; ಬಹುತೇಕ ಬಡವರು; ಕೆಲವರು ಕಡುಬಡವರು. ರೈತರು ಬೆಳೆಯುವ ಉತ್ಪನ್ನಗಳಿಗೆ ಅವರ ಖರ್ಚು ಮತ್ತು ಶ್ರಮಗಳಿಗೆ ತಕ್ಕಂತೆ ವೈಜ್ಞಾನಿಕ ಬೆಲೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ದರಿಸದೆ ಇರುವುದರಿಂದ ಅವರು ಸದಾ ಬಡವರಾಗಿಯೇ ಇದ್ದಾರೆ. ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳ ಧಾರಣೆಗಳನ್ನು ನಿಗದಿಪಡಿಸುವವರು ಕೈಗಾರಿಕೋದ್ಯಮಿಗಳು. ಹಳ್ಳಿಯಿಂದ ಬರುವ ಪದಾರ್ಥಗಳೆಲ್ಲ ಅಗ್ಗ; ಪಟ್ಟಣದಿಂದ ಹಳ್ಳಿಗೆ ಹೋಗುವ ಸರಕುಗಳೆಲ್ಲ ತಗ್ಗು. ಗ್ರಾಮಗಳನ್ನು ನಗರಗಳು ಹೆಬ್ಬಾವಿನಂತೆ ನುಂಗುತ್ತಿವೆ. ಆದುದರಿಂದ ಅವರ ಆರ್ಥಿಕ ಸಬಲತೆಯ ಬಗ್ಗೆ ಸಮಾವೇಶ ಚಿಂತಿಸದೇ ಹೋದದ್ದು ದೊಡ್ಡ ಕೊರತೆ. ಜನರ ಗರೀಬತನವನ್ನು ಅಳಿಸದೆ ಅವರ ಮುಗ್ಧತೆಯನ್ನು ಬಳಸಿಕೊಳ್ಳುವುದು ಅನುಚಿತವಾಗುತ್ತದೆ. ಬಡವರನ್ನು ಪ್ರೌಢರನ್ನಾಗಿ ಮಾಡದೆ ಮೂಢರನ್ನಾಗಿ ಇಡುವುದು ನಡತೆಯಲ್ಲ. ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಪದ್ಮಭೂಷಣ ಡಾ। ಬಾಲಗಂಗಾಧರನಾಥ ಸ್ವಾಮೀಜಿ ಅವರು ಈ ಜನಾಂಗದವರ ಐಕ್ಯತೆಯನ್ನು ಸಾಧಿಸುವಲ್ಲಿ ಬಹುಪಾಲು ಸಫಲರಾಗಿದ್ದಾರೆ. ನಾನಾ ಬಣಗಳು, ಒಳಪಂಗಡಗಳು, ವಿವಿಧ ರಾಜಕೀಯ ಪಕ್ಷದವರು, ಎಲ್ಲರನ್ನೂ ಒಂದೆಡೆ ಸೇರಿಸಿದ್ದು ನಿಜಕ್ಕೂ ವಿಸ್ಮಯಕರ ಸಾಧನೆಯೆ! ಇದರಿಂದ ರಾಜ್ಯದಲ್ಲಿನ ಎರಡನೆಯ ಮಹಾಸಂಖ್ಯಾ ಬಲದ ಕೋಮಿನ ಏಕತೆಯ ಸಂಕೇತವಾಗಿದ್ದಾರೆ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು. ಇವರ ಕಾಲದಲ್ಲಿ ಆಗಿರುವಷ್ಟು ಶೈಕ್ಷಣಿಕ ಸಾಧನೆಗಳು, ವಿದ್ಯಾಸಂಸ್ಥೆಗಳ ಸ್ಥಾಪನೆ, ಹಿಂದೆಂದೂ ಆಗಿರಲಿಲ್ಲ. ಶ್ರೀಕ್ಷೇತ್ರದಲ್ಲಿ ಅವರು ನಿರ್ಮಿಸಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನ ಐತಿಹಾಸಿಕ ಸುಪ್ರಸಿದ್ಧ ದೇವಾಲಯಗಳ ಸಾಲಿಗೆ ಸೇರುತ್ತದೆ. ಅದನ್ನು ನೋಡಿದರೆ ಬೇಲೂರು, ಹಳೇಬೀಡು, ತಲಕಾಡು ಇತ್ಯಾದಿ ಸ್ಥಳಗಳ ನಿರ್ಮಾಣಗಳು ನೆನಪಾದರೆ ಅದು ಯಥೋಚಿತವಲ್ಲದೆ ಸೋಜಿಗ ಎನ್ನಿಸುವುದಿಲ್ಲ. ಹೊಯ್ಸಳರು, ಗಂಗರು, ಮುಂತಾದ ರಾಜಮಹಾರಾಜರುಗಳ ಶ್ರೇಣಿಯಲ್ಲಿ ಬಾಲಗಂಗಾಧರನಾಥರು ವಿರಾಜಿಸುತ್ತಾರೆ.

ಆ ಬೃಹತ್ ಸಮ್ಮೇಳನವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ. ವಿ. ಸದಾನಂದಗೌಡರು ಉದ್ಘಾಟಿಸಿದರು. ಮಾನ್ಯ ಗೌಡರು ಮುಖ್ಯಮಂತ್ರಿ ಪದವಿಗ್ರಹಣ ಮಾಡಿದ ನಂತರ ಶ್ರೀಗಳನ್ನು ಕಾಣಲು ಹೋಗಿ ಆಶೀರ್ವಾದ ಪಡೆದಾಗ, "ಸದಾನಂದ ಅವರೇ, ನೀವು ಆರುವರೆ ಕೋಟಿ ಪ್ರಜೆಗಳ ಏಳಿಗೆಯನ್ನು ಮಾಡಬೇಕು. ಅವರು ಕೊಂಡಾಡುವಂತೆ ನೀವು ಆಡಳಿತ ನಡೆಸಿ" ಎಂದು ಹೇಳಿದ್ದನ್ನು ನೆನಪಿಸಿಕೊಂಡರು. ಆ ಮಾತುಗಳು ಸ್ವಾಮೀಜಿ ಅವರ ಉದಾತ್ತ ಹೃದಯ ಮತ್ತು ವಿಶಾಲ ಮನೋಭಾವನೆಗಳನ್ನು ಸೂಚಿಸುತ್ತವೆ ಎನ್ನಬಹುದು. ಭಾರತದ ವಿದೇಶಾಂಗ ಸಚಿವರಾದ ಸಂಯಮ ಮೂರ್ತಿ ಎಸ್. ಎಂ. ಕೃಷ್ಣರವರು, ದವಸಧಾನ್ಯಗಳನ್ನು ಬೆಳೆಯುವ "ಒಕ್ಕಲಿಗರು ಯಾವಾಗಲೂ ನೀಡಿದವರು, ಪಡೆದವರಲ್ಲ" ಎಂದರು. ನಿಜ. ಆದರೆ ರೈತರ ಕೆಲಸಕ್ಕೆ ಬೇಕಾದ ನೇಗಿಲು ನೊಗ ಕುಂಟೆ ಹಲುಬೆ ಮಾಡುವವರು, ಹಾರೆ, ಗುದ್ದಲಿ, ಪಿಕಾಸಿ, ಕುಡುಗೋಲು, ಕೊಡಲಿ, ಎರೆಗತ್ತಿ, ಕಡಕತ್ತಿ ಮುಂತಾದ ಹತಾರಗಳನ್ನೆಲ್ಲ ತೋಳಿಸಿ ಕೊಡುವವರು ಕಮ್ಮಾರರು; ಅವರಿಗೆ ಗಾಡಿಗಳನ್ನು ಹೂಡಿ ಕೊಡುವವರು ಬಡಗಿಗಳು; ಅವರು ಒಪ್ಪ ಓರಣವಾಗಿ ಷೋಕಿಯಾಗಿ ಕಾಣುವಂತೆ ಕೇಶ ಶೃಂಗಾರ ಮಾಡುವವರು ನಾಯಿಂದರು; ಅವರು ಬಯಸುವ ಸೈಕಲ್ ಸ್ಕೂಟರ್ ಮೋಟಾರ್ ಬೈಕ್; ಅವರು ಪ್ರಯಾಣಿಸುವ ಬಸ್ ರೈಲು ಇತ್ಯಾದಿಗಳನ್ನು ಅವರೇ ತಯಾರಿಸುವುದಿಲ್ಲ; ಅಷ್ಟೇ ಅಲ್ಲ; ಅವರು ಉಡುವ ಬಟ್ಟೆಬರೆಗಳು ಮತ್ತು ತೊಡುವ ಸೀರೆ ಕುಪ್ಪಸಗಳಿಗಾಗಿ ಬೇರೆಯವರನ್ನು ಅವಲಂಬಿಸಬೇಕು; ಕುಲಾಲರು ಮಡಿಕೆ ಕುಡಿಕೆ ಮಾಡಿ ಕೊಡದೆ ಇದ್ದರೆ ಅಥವಾ ಕಂಚುಗಾರರು ಪಾತ್ರೆ ಮಾಡದೆ ಹೋದರೆ ಅವರು ಅಡಿಗೆ ಮಾಡಿಕೊಂಡು ಉಣ್ಣಲು ಆಗಲಾರದು. ಪ್ರತಿಯೊಂದು ಜನಾಂಗವೂ ಇನ್ನೊಂದು ಜನಾಂಗದವರ ಕಸುಬಿನ ನೆರವು ಅಥವಾ ಸೇವೆ ಅಥವಾ ಕೊಡುಗೆಯ ಮೇಲೆ ಅವಲಂಬಿತವಾಗಿದೆ. ಪರಸ್ಪರ ಅಂತರವಲಂಬನೆ ಸಾಮಾಜಿಕ ನಿಯಮ ಮತ್ತು ಕರ್ತವ್ಯ. ಒಂದು ವೃತ್ತಿಯವರು ಇನ್ನೊಂದು ಕಸುಬಿನವರು ಉತ್ಪಾದಿಸಿದ ಅಗತ್ಯ ವಸ್ತುಗಳನ್ನು ಪಡೆಯದೆ ಬದುಕು ಸಾಗಿಸುವುದು ಸಾಧ್ಯವಿಲ್ಲ. ಹಳ್ಳಿಯಲ್ಲಿ ದಲಿತರು ಓಲಗ ಕೊಂಬು ಊದದೆ ಹೋದರೆ 'ದೇವರು ಬರು'ವುದಿಲ್ಲ, ತೇರು ಹರಿಯುವುದಿಲ್ಲ. ತೀರ ಕ್ವಚಿತ್ತಾಗಿ ಜಾತಿ ಜಗಳಗಳಾದರೂ, ವರ್ಗ ಕಲಹಗಳು ಭಾರತದಲ್ಲಿ ಆಗದಿರುವುದಕ್ಕೆ ಪರಸ್ಪರ ಪೂರಕ

ಮತ್ತು ತಾರಕ, ಹಾಗೂ ಕಲವೇಳೆ ಮಾರಕ. ಆಶ್ರಯವೇ ಪ್ರಮುಖ ಕಾರಣ ಎನಿಸುತ್ತದೆ. ಇದು ಬರಿ ಆರ್ಥಿಕ ವ್ಯವಹಾರವಾಗಿರದೆ, ಮದುವೆ ಹಬ್ಬಹರಿದಿನಗಳಲ್ಲಿ ಭಾಗವಹಿಸಿ ಊಟೋಪಚಾರ ನಡೆಯುವುದರಿಂದ ಆತ್ಮೀಯ ಮಾನವ ಸಂಬಂಧವಾಗಿದೆ. ಹೀಗೆಂದರೆ ಇದು ಜಾತಿವ್ಯವಸ್ಥೆಯ ಬೆಂಬಲ ಎಂದು ಖಂಡಿತ ತಿಳಿಯಬಾರದು. ಹೆಣ್ಣು ಕೊಡುವುದೂ ತರುವುದೂ ನಡೆದರೆ ಕಾಲಾಂತರದಲ್ಲಿ ಜಾತಿಪದ್ಧತಿ ನಿರ್ನಾಮವಾಗುವುದರಲ್ಲಿ ಅನುಮಾನವಿಲ್ಲ.

ಶ್ರೀ ಆದಿಚುಂಚನಗಿರಿ ಮಠ ಬಿಟ್ಟರೆ ಒಕ್ಕಲಿಗರಿಗೆ ಬೇರಾವ ಧಾರ್ಮಿಕ ಸಂಸ್ಥೆ ಇಲ್ಲ. ಶ್ರೀ ಚಂದ್ರಶೇಖರನಾಥ ಸ್ವಾಮೀಜಿಗಳ ವಿಶ್ವ ಒಕ್ಕಲಿಗರ ಮಠ ಕೆಂಗೇರಿಯಲ್ಲಿ ಇದ್ದರೂ ಅದು ಚುಂಚನಗಿರಿಗೆ ಸೇರಿದಂತೆಯೇ ಇದೆ, ಇತ್ತೀಚಿಗೆ. ಒಕ್ಕಲಿಗರಿಗೆ ತಮ್ಮದೇ ಆದ ಸಿದ್ಧಾಂತ, ಮಠ ಅಥವಾ ಆಧ್ಯಾತ್ಮಿಕ ಆದಿಪುರುಷ ಇಲ್ಲ. ಯಾದವರಿಗೆ ಶ್ರೀಕೃಷ್ಣ, ಜೈನರಿಗೆ ಮಹಾವೀರ, ಬೌದ್ಧರಿಗೆ ಬುದ್ಧದೇವ, ಪಾರಸೀಕರಿಗೆ ಜರತುಷ್ಟ್ರ, ಯಹೂದಿಗಳಿಗೆ ಮೋಸೆಸ್, ಕ್ರೈಸ್ತರಿಗೆ ಯೇಸು, ಮುಸ್ಲಿಮರಿಗೆ ಮಹಮ್ಮದ್ ಪೈಗಂಬರ್, ಲಿಂಗಾಯಿತರು ಅಥವಾ ವೀರಶೈವರಿಗೆ ಬಸವಣ್ಣ, ಸಿಕ್ಕರಿಗೆ ಗುರು ನಾನಕ್, ಹಾಲುಮತದವರಿಗೆ ಕನಕದಾಸರು, ದಲಿತರಿಗೆ ಭಾರತರತ್ನ ಅಂಬೇಡ್ಕರ್ ಇನ್ನೊಂದು ಸಮುದಾಯಕ್ಕೆ ರವಿದಾಸರು ಇಲ್ಲವೆ ಬಾಬುಜಗಜೀವನರಾಮ್, ಬ್ರಾಹ್ಮಣರಲ್ಲಿ ಸ್ಮಾರ್ತರಿಗೆ ಶಂಕರಾಚಾರ್ಯ, ಶ್ರೀವೈಷ್ಣವರು ಅಥವಾ ಐಯ್ಯಂಗಾರರಿಗೆ ರಾಮಾನುಜಾಚಾರ್ಯ, ದ್ವೈತಿಗಳಿಗೆ ಮಧ್ವಾಚಾರ್ಯ, ಬೇಡ ನಾಯಕರಿಗೆ ಮಹರ್ಷಿ ವಾಲ್ಮೀಕಿ, ಗಂಗಾಮತಸ್ಥರಿಗೆ



ವ್ಯಾಸ ಋಷಿ, ಉಪ್ಪಾರರಿಗೆ ಭಗೀರಥ ಚಕ್ರವರ್ತಿ ಇದ್ದಾರೆ. ಹೀಗೆ ಒಂದೊಂದು ಸಮುದಾಯಕ್ಕೆ ಅವರವರು ನಂಬಿರುವಂತೆ ಒಬ್ಬೊಬ್ಬ ಮಹಾಪುರುಷ, ಅತಿಮಾನವ, ಅವತಾರಿ, ಮತಸ್ಥಾಪಕ ಇದ್ದಾನೆ.

ಈ ದೃಷ್ಟಿಯಿಂದ ನೋಡಿದಾಗ ಒಕ್ಕಲಿಗರಿಗೆ ಅವರದೇ ಆದ ಆಧ್ಯಾತ್ಮ ನಾಯಕ, ಧರ್ಮಗುರು, ಅಧಿನಾಯಕ ಅಥವಾ ಆದಿಪುರುಷ ಇಲ್ಲ. ಇದರಿಂದ ಅವರಿಗೆ ಅನುಕೂಲವೂ ಇದೆ; ಅನಾನುಕೂಲವೂ ಇದೆ. ಅನುಕೂಲ ಎಂದರೆ ಅವರು ಸಂಕುಚಿತ ಮನಸ್ಸಿನವರಾಗದೆ ಅಥವಾ ಅಷ್ಟೊಂದು ಜಾತ್ಯಾಂಧರಾಗದಂತೆ ಮಾಡಿದೆ. ಅಲ್ಲದೆ ಅವರನ್ನು ಇದು ಅನೈಕ್ಯತೆವುಳ್ಳ ಅಸಂಘಟಿತ ಜನಾಂಗವನ್ನಾಗಿ ರೂಪಿಸಿರುವುದು ಗಮನೀಯ ಸಂಗತಿ. ಅವರು ಆಗೊಮ್ಮೆ ಈಗೊಮ್ಮೆ ಸಂಘಟಿತರಾಗಬಹುದು ಇಲ್ಲವೆ ಸಂಘಟಿತರೆಂಬಂತೆ ತೋರಿಸಬಹುದು, ಮೊನ್ನೆ (03-06-2012) ಆದಂತೆ. ಒಂದು ಪಕ್ಷ ಅವರು ಸಮುದಾಯದ ಪರ ಒಟ್ಟಿಗೆ ನಿಂತರೆ ಅದು ಅವರ ಭಾವುಕತೆಯಿಂದಲೇ ಹೊರತು ಸೈದ್ಧಾಂತಿಕ ಮನವರಿಕೆಯಿಂದಾಗಲಿ ಇಲ್ಲವೆ ಬೌದ್ಧಿಕ ನಿಲುವಿನಿಂದಾಗಲಿ ಅಲ್ಲ. ಸಂಕುಚಿತ ಸಿದ್ಧಾಂತದಿಂದ ಆಗುವಷ್ಟು ಅನಾಹುತ ಭಾವುಕತೆಯಿಂದ ಆಗಲಾರದು. ಒಕ್ಕಲಿಗರಿಗೆ ಮೂಲಪುರುಷ ಇಲ್ಲದಿರುವುದರಿಂದ ಅವರಲ್ಲಿ ಜಾತ್ಯಾಂಧತೆ, ಮತಾಂಧತೆ ಇಲ್ಲವಾಗಿದೆ. ಆದರೆ ಈಚೆಗೆ ಸ್ವಲ್ಪ ಮತಾಂಧತೆ ಕಂಡುಬರಬಹುದು. ಪರಂತು ಅದು ಇತರ ಮಠಗಳಂತೆ ಮೂಲಭೂತವಾದಿ ಧೋರಣೆಯನ್ನು ಇನ್ನೂ ಅಷ್ಟಾಗಿ ತಾಳಿಲ್ಲ. ಮತಾಂಧತೆ ಮರಣಾನಂದವೇ ಸರಿ.

ಒಕ್ಕಲಿಗರ ಸಂಘದ ಕರಪತ್ರ ಹಾಗೂ ಆಹ್ವಾನ ಪತ್ರಿಕೆ ಮುಖ ಪುಟದಲ್ಲಿ ರಾಷ್ಟ್ರಕವಿ ಕುವೆಂಪು ಭಾವಚಿತ್ರ ಮುದ್ರಿಸಿದ್ದಾರೆ. ಕುವೆಂಪು ನಮ್ಮವರೆಂದುಕೊಂಡರೆ ಪ್ರಯೋಜನವಿಲ್ಲ. ಕುವೆಂಪು ಜಾತಿಮತಗಳನ್ನು ಮೀರಿದ್ದರು. ಅಂಧಾಭಿಮಾನ ಅಪಾಯಕಾರಿಯಾದುದು. ಕುರುಡು ಎಮ್ಮೆಗೆ ಹುರುಡು ಕಮ್ಮಿ. ಆದ್ದರಿಂದ ಭಾವಚಿತ್ರ ಹಾಕಿರುವುದಕ್ಕೆ ಬೆರಳೆಣಿಕೆ ಜನರು ('ಪ್ರಜಾವಾಣಿ' 05-06-2012ರಂದು ಇಬ್ಬರು ಮತ್ತು 09-06-2012ರಂದು ನಾಲ್ವರು) ತೀಕ್ಷ್ಣವಾಗಿ ವಿರೋಧಿಸಿದ್ದಾರೆ. ಅವರ ಆತಂಕ ಮತ್ತು ಆಕ್ಷೇಪ ತೀರ ಕೊಂಚಮಟ್ಟಿಗೆ ಸರಿ ಎನಿಸಬಹುದು. ಆದರೆ ವಿಶಾಲ ದೃಷ್ಟಿಯಿಂದ ನೋಡಿದಾಗ ಅದು ನಿಲ್ಲಲಾರದು. ಕುವೆಂಪು ಸಾಹಿತ್ಯವನ್ನು ಒಕ್ಕಲಿಗರಲ್ಲಿ ಶೇಕಡ ಎರಡು ಮಂದಿಯೂ ಓದಿಲ್ಲ ಎನ್ನಿಸುತ್ತದೆ. ಏಕೆಂದರೆ ಪದವೀಧರರೇ ಸರಿಯಾಗಿ ಕುವೆಂಪು ಅವರನ್ನು ಓದಿ ಅರ್ಥೈಸಿಕೊಂಡಿಲ್ಲ. ರಾಜಕಾರಣಿಗಳಂತೂ ಅವರನ್ನು ಓದಿಯೇ ಇಲ್ಲ ಎನ್ನಬೇಕು. ನನಗೆ ತಿಳಿದಂತೆ ಕೆಂಗಲ್ ಹನುಮಂತಯ್ಯ, ವೈ. ಕೆ. ರಾಮಯ್ಯ ಓದಿದ್ದರು. ಹಾಲಿ ಸಂಸದರಾದ ಡಿ. ಬಿ. ಚಂದ್ರೇಗೌಡರು ಕುವೆಂಪು ಸಾಹಿತ್ಯವನ್ನು ಓದಿದ್ದಾರೆ. ಅಂಥದ್ದರಲ್ಲಿ ಯಾವ ಯಾವ ಉದ್ದೇಶಕ್ಕೋ ಬೃಹತ್ ಸಮ್ಮೇಳನವನ್ನು ಏರ್ಪಡಿಸುವ ಸಂಘದ ಎಷ್ಟು ಮಂದಿ ಓದಿದ್ದಾರೆ? ಎಂದು ವಿಚಾರಿಸಬೇಕು. ಈ ಮೊದಲೇ ಹೇಳಿದಂತೆ, ಒಕ್ಕಲಿಗರಿಗೆ 'ಧರ್ಮಗುರು' ಇಲ್ಲದಿರುವುದರಿಂದ ತಮಗೊಬ್ಬ ಬೇಕು ಎಂದು ಅವರಿಗೆ ಅನ್ನಿಸಿರಬಹುದೇನೋ! ಅದನ್ನು ಅವರು ತಾತ್ವಿಕವಾಗಿ ತೆಗೆದುಕೊಂಡಿದ್ದಾರೋ? ಇಲ್ಲವೋ? ಎಂದು ಪರಿಶೀಲಿಸುವುದು ಎಲ್ಲರ ಕರ್ತವ್ಯ. ಅವರು ಕುವೆಂಪು ಫೋಟೋ ಹಾಕಿಕೊಂಡು ಅವರ ತತ್ವಗಳನ್ನು ಅನುಷ್ಠಾನ ಮಾಡದಿದ್ದರೆ ಆಗ ಅವರನ್ನು ಟೀಕಿಸುವುದು ನ್ಯಾಯವಾದೀತು. ಕುವೆಂಪು ಫೋಟೋ ಹಾಕಿಕೊಳ್ಳಲು ನಿಮಗೆ ನೈತಿಕತೆ ಇಲ್ಲ, ಹಕ್ಕಿಲ್ಲ ಎಂದು ಅವರ ಮೇಲೆ ಖಂಡನೆಯ ಕೆಂಡದ ಮಳೆ ಸುರಿಸಬಹುದು. ಇದು ಜನತೆಯನ್ನು ಶಿಸ್ತಿಗೆ ಒಳಪಡಿಸಿ ಬೆಳೆಸುವ ವಿಧಾನ. ಮೊದಲೇ ನಿಂದಿಸುವುದು, ಬೆಳಕು ಕಾಣಬಯಸುವವರಿಗೆ ಅದು ಸಿಗದಂತೆ ಮಾಡಿದಂತಾಗುತ್ತದೆ. ಕೊಳಕಿನಲ್ಲಿ ಇರುವವರಿಗೆ ಬೆಳಕು ತಿಳಿಯುವುದಿಲ್ಲ.

ಕುವೆಂಪು ಭಾವಚಿತ್ರ ಹಾಕಿಕೊಂಡದ್ದಕ್ಕಾಗಿ ಒಕ್ಕಲಿಗರ ಸಂಘವನ್ನು ದೂಷಿಸುವುದು, ನನ್ನ ದೃಷ್ಟಿಯಲ್ಲಿ ತರವಲ್ಲ. ಏಕೆಂದರೆ ಒಂದು ವರ್ಗದ ಕೆಲವು ಲೇಖಕರು ವಿಮರ್ಶೆಯ ಹೆಸರಿನಲ್ಲಿ ಕುವೆಂಪು ಸಾಹಿತ್ಯವನ್ನು ಉದ್ದಕ್ಕೂ ಟೀಕಿಸುತ್ತಾ ಬಂದರು. ಪುರೋಹಿತಶಾಹಿ ವಿರುದ್ಧದ ಕುವೆಂಪು ವಿಚಾರಗಳು ಹರಡಿದರೆ ಹಿಂದುಳಿದ ವರ್ಗದವರು ದಲಿತರು ಒಟ್ಟಾರೆ ಎಲ್ಲ ಅಬ್ರಾಹ್ಮಣ ವರ್ಗದವರು ಕುವೆಂಪು ಕಡೆ ವಾಲಬಹುದೆಂದು ಅದನ್ನು ತಡೆಗಟ್ಟುವುದು ಅವರ ಹಿಕಮತ್ತಾಗಿತ್ತು. ಈ ಕಾರಣಕ್ಕಾಗಿಯೇ ನವ್ಯ ಸಾಹಿತ್ಯ ಎಂಬ ಹುಸಿ ಚಳವಳಿಯನ್ನು ಪ್ರಾರಂಭಿಸಿದರು. ನವ್ಯವು ಬ್ರಾಹ್ಮಣವಾದ ಮತ್ತು ಪುರೋಹಿತಶಾಹಿಯ ಪುನರುತ್ಥಾನವಾಗಿದೆ. ಕುವೆಂಪು ಎಂಥ ದೊಡ್ಡ ಕ್ರಾಂತಿಕಾರಿ ಸಾಹಿತಿ ಎಂಬುದನ್ನು ನನ್ನ ಬರಹಗಳಲ್ಲಿ (ಬದಲಾವಣೆ 1982; ಕುವೆಂಪು ಯುಗ 1990) ವಿಶ್ಲೇಷಿಸಿದ ನಂತರ ಅವರು ಮೌನಿಗಳಾದರು. ಕವಿಯನ್ನು ಕುವೆಂಪು 'ಅಗ್ನಿಮುಖಿ ಪ್ರಳಯ ಶಿಖಿ' (ಸಮಗ್ರ ಕಾವ್ಯ, ಸಂ.1, ಪುಟ 141) ಎಂದು ವರ್ಣಿಸಿ ತಾನು ಏನೆಂದು ಪರೋಕ್ಷವಾಗಿ ನಿರ್ದೇಶಿಸಿದ್ದಾರೆ. ಅವರ ಪ್ರತಿಭೆ ಅಗ್ನಿಯಾಗಿ ಎಲ್ಲ ಮತಮೌಢ್ಯಗಳನ್ನು ಭಸ್ಮಮಾಡಿದೆ; ಜಾತಿ ವ್ಯವಸ್ಥೆಯ ಅಸಮಾನತೆಗಳನ್ನು ಅಮಾನುಷ ಭೇದಭಾವನೆಗಳನ್ನು ವಿನಾಶಗೊಳಿಸಿದೆ. ಆದ್ದರಿಂದ ಕತ್ತಲೆಯಲ್ಲಿರುವ ಜನರಿಗೆ ಬೆಳಕಿನ ಆವಶ್ಯಕತೆ ಇದೆ. ಕುವೆಂಪು ಸಾಹಿತ್ಯದಲ್ಲಿ ಅಪಾರ ಬೆಳಕುಂಟು. ಅವರ ಫೋಟೋ ಹಾಕಿಕೊಂಡಿರುವ ಒಕ್ಕಲಿಗರ ಸಂಘ ಅವರ ತತ್ವಗಳನ್ನು ಒಪ್ಪಿಕೊಂಡು ಪ್ರಚಾರ ಮಾಡುವಂತೆ ಒತ್ತಾಯ ಹಾಕಬೇಕು. ಅವರು ಜೀವನದಲ್ಲಿ ಪರಿಪಾಲಿಸಬೇಕಾದ ಜಾತ್ಯತೀತತೆ, ಅಂತರ್‌ಜಾತಿ ವಿವಾಹ, ಜಾತಿ ವಿನಾಶ, ಮೂಢನಂಬಿಕೆಯ ನಿರ್ಮೂಲನೆ, ಅಸಮಾನತೆಯ ತೆರವು, ಯಜ್ಞಯಾಗಗಳ ಉಚ್ಚಾಟನೆ ವೈಜ್ಞಾನಿಕ ಮನೋಭಾವ, ವೈಚಾರಿಕ ಬುದ್ಧಿ, ಪ್ರಗತಿಪರ ಜೀವನ ವಿಧಾನ, ನಿರಂಕುಶಮತಿ, ಮಂತ್ರಮಾಂಗಲ್ಯ, ಪುರೋಹಿತಶಾಹಿಯ ಮೂಲೋತ್ಪಾಟನೆ – ಮುಂತಾದ ಕುವೆಂಪು ಆದರ್ಶಗಳನ್ನು ಅಳವಡಿಸಿಕೊಂಡರೆ ಮಾತ್ರ ಒಕ್ಕಲಿಗರಿಗೆ ಮತ್ತು ಅವರ ಸಂಘಕ್ಕೆ ನೈತಿಕ ಹಕ್ಕು ಮತ್ತು ಶಕ್ತಿ ಬರಲು ಸಾಧ್ಯ. ಇಲ್ಲವಾದರೆ ಈಗಿನಂತೆ ಬೌದ್ಧಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರು ರಿಕ್ತರಾಗಿರಬೇಕಾಗುತ್ತದೆ. ಕೇವಲ ಪ್ರಾಪಂಚಿಕ ಮತ್ತು ರಾಜಕೀಯ ಹಿತಾಸಕ್ತಿಗಳ ರಕ್ಷಣೆಗೆ ಹಾಗೂ ಸಾಮಾಜಿಕ ಲಾಭಕೋರತನಗಳಿಗಾಗಿ ಆಗೊಮ್ಮೆ ಈಗೊಮ್ಮೆ ಸಮಾವೇಶ ಏರ್ಪಡಿಸುವುದು ಆಂತರಿಕವಾಗಿ ಹೆಚ್ಚು ಪ್ರಯೋಜನಕಾರಿಯಾಗಲಾರದು. ಏಕೆಂದರೆ ಬಹಿರಂಗದಲ್ಲಿ ಬಲಿಷ್ಠರಂತೆ ಕಂಡುಬಂದರೂ ಆಂತರಂಗಿಕವಾಗಿ ದುರ್ಬಲವಾಗುತ್ತಾರೆ, ಸಂಸ್ಕೃತಿ ಜ್ಞಾನ-ವಿಜ್ಞಾನಗಳ ಬೆಳವಣಿಗೆ ಇಲ್ಲದೆ. ಮನುಷ್ಯನ ವ್ಯಕ್ತಿತ್ವಕ್ಕೆ ದೊಡ್ಡತನ ಬರುವುದು ಸಂಸ್ಕೃತಿಯ ಸತ್ವದಿಂದಲೇ ಹೊರತು ರಾಜಕೀಯ ಅಧಿಕಾರದಿಂದಲ್ಲ. ಅಪರಾಧ ಮಾಡಿದ ವ್ಯಕ್ತಿಗೆ ಅಳುಕು ಇರುತ್ತದೆ. ತಪ್ಪು ಮಾಡದವನಿಗೆ ಎಂಥ

ಒಕ್ಕಲಿಗರಿಗೆ ಅವರದೇ ಆದ ಆಧ್ಯಾತ್ಮ ನಾಯಕ, ಧರ್ಮಗುರು, ಅಧಿನಾಯಕ ಅಥವಾ ಆದಿಪುರುಷ ಇಲ್ಲ. ಇದರಿಂದ ಅವರಿಗೆ ಅನುಕೂಲವೂ ಇದೆ; ಅನಾನುಕೂಲವೂ ಇದೆ. ಅನುಕೂಲ ಎಂದರೆ ಅವರು ಸಂಕುಚಿತ ಮನಸ್ಸಿನವರಾಗದೆ ಅಥವಾ ಅಷ್ಟೊಂದು ಜಾತ್ಯಾಂಧರಾಗದಂತೆ ಮಾಡಿದೆ. ಅಲ್ಲದೆ ಅವರನ್ನು ಇದು ಅನೈಕ್ಯತೆವುಳ್ಳ ಅಸಂಘಟಿತ ಜನಾಂಗವನ್ನಾಗಿ ರೂಪಿಸಿರುವುದು ಗಮನೀಯ ಸಂಗತಿ. ಒಂದು ಪಕ್ಷ ಅವರು ಸಮುದಾಯದ ಪರ ಒಟ್ಟಿಗೆ ನಿಂತರೆ ಅದು ಅವರ ಭಾವುಕತೆಯಿಂದಲೇ ಹೊರತು ಸೈದ್ಧಾಂತಿಕ ಮನವರಿಕೆಯಿಂದಾಗಲಿ ಇಲ್ಲವೆ ಬೌದ್ಧಿಕ ನಿಲುವಿನಿಂದಾಗಲಿ ಅಲ್ಲ.

ಸಮಯದಲ್ಲೂ ಭೀತಿ ಇರುವುದಿಲ್ಲ. ಇದು ಅಸಂಸ್ಕೃತಿ ಮತ್ತು ಸಂಸ್ಕೃತಿಗೆ ಇರುವ ವ್ಯತ್ಯಾಸ.

ಈ ಸಮಾವೇಶದ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರು ಇರುವುದನ್ನು ನೋಡಿ ಕೆಲವರು ನನಗೆ ಫೋನು ಮಾಡಿದರು. "ಜಾತಿ ವ್ಯವಸ್ಥೆ ವಿರುದ್ಧ ಇರುವ ಮತ್ತು ಬರೆಯುವ ನೀನು ಹೇಗೆ ಅಲ್ಲಿಗೆ ಹೋಗುತ್ತೀ?" ಎಂದು ಅವರ ಪ್ರಶ್ನೆ. ಇನ್ನು ಕೆಲಮಿತ್ರರು, "ನೀನು ಹೋಗುವುದು ಸೂಕ್ತ. ನೀನು ಹೇಳಬೇಕಾದುದನ್ನು ಹೇಳು. ಏಕೆಂದರೆ ಬಹುಪಾಲು ಮಂದಿಗೆ ವಿಚಾರನೇ ಗೊತ್ತಿಲ್ಲ" ಎಂದು ಸೂಚನೆ ಇತ್ತರು. ಅದಕ್ಕೆ ನಾನು, "ನನಗೆ ಇನ್ನೂ ಆಹ್ವಾನ ಪತ್ರಿಕೆ ಬಂದಿಲ್ಲ. ಅದರಲ್ಲಿ ನನ್ನ ಹೆಸರು ಹಾಕಿರುವುದು ನನಗೆ ತಿಳಿಯದು. ಈ ಬಗ್ಗೆ ಒಕ್ಕಲಿಗರ ಸಂಘ ನನಗೆ ಏನೂ ತಿಳಿಸಿಲ್ಲ" ಎಂದೆ. ವಿಚಾರವಂತ ಪ್ರೊ. ಎಂ. ಕೆ. ಹರಿಚರಣ ತಿಲಕ ಮತ್ತು ಕವಿ ಎಲ್. ಎನ್. ಮುಕುಂದರಾಜ್, "ನೀವು ಸಮಾರಂಭಕ್ಕೆ ಹೋಗುವುದು ಒಳ್ಳೆಯದು. ನಿಮ್ಮ ವಿಚಾರವನ್ನು ಅಲ್ಲಿ ಮಂಡಿಸಿ" ಎಂದು ಸಲಹೆ ನೀಡಿದರು. ಅದಾಗದುದಕ್ಕೆ ಈ ಲೇಖನ.

'ಒಕ್ಕಲಿಗರ ಬೃಹತ್ ಸಮಾವೇಶ'ದ ಕರಪತ್ರ ಈ ಮಾತುಗಳಿಂದ ಪ್ರಾರಂಭವಾಗುತ್ತದೆ:

"ಪ್ರಪಂಚದ ಎಲ್ಲ ನಾಗರಿಕತೆ ಪ್ರಾರಂಭವಾದದ್ದೇ ಒಕ್ಕಲುತನದಿಂದ... ಒಕ್ಕಲಿಗರು ಪ್ರಪಂಚದ ಮೊದಲ ಜನಾಂಗವಾಗಿ ರೂಪುಗೊಂಡರು. ಪ್ರಪಂಚದ ಎಲ್ಲ ದೇಶಗಳಲ್ಲಿ ಒಕ್ಕಲಿಗರು ಪ್ರಧಾನವಾಗಿ ಹಾಗೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿದ್ದಾರೆ. ನಮ್ಮ ದೇಶದಲ್ಲಿ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಇವರನ್ನು 'ಒಕ್ಕಲಿಗರು', 'ಗೌಡರು' ಎಂದು ಕರೆದರೆ, ತಮಿಳುನಾಡಿನಲ್ಲಿ ಇವರನ್ನು 'ವೆಲ್ಲಾಳರು', 'ಗೌಂಡರ್'ಗಳೆಂದೂ, ಕೇರಳದಲ್ಲಿ 'ನಾಯರ್', 'ಪಿಳ್ಳೈ'ಗಳೆಂದೂ, ಆಂಧ್ರದಲ್ಲಿ 'ರೆಡ್ಡಿ', 'ಕಾಪು'ಗಳೆಂದೂ ಕರೆಯುತ್ತಾರೆ. ಉತ್ತರಭಾರತದಲ್ಲಿ ಅದರಲ್ಲೂ ಹರಿಯಾಣ, ಉತ್ತರಪ್ರದೇಶದಲ್ಲಿ 'ಜಾಟ್'ಗಳೆಂದೂ, ಬಿಹಾರ, ಉತ್ತರಪ್ರದೇಶಗಳಲ್ಲಿ 'ಠಾಕೂರ್'ಗಳೆಂದೂ, ಬಂಗಾಳ ಮತ್ತು ಒಡಿಸ್ಸಾದಲ್ಲಿ 'ಸೇನ್'ರೆಂದೂ, ರಾಜಸ್ಥಾನ್, ಮಧ್ಯಪ್ರದೇಶದಲ್ಲಿ 'ರಜಪೂತ್'ರೆಂದೂ, ಗುಜರಾತ್, ಮಹಾರಾಷ್ಟ್ರಗಳಲ್ಲಿ 'ಪಟೇಲ್'ರೆಂದೂ, ಮಹಾರಾಷ್ಟ್ರ, ಗೋವಾಗಳಲ್ಲಿ 'ಮರಾಠ', 'ಕುರ್ಮಿ'ಗಳೆಂದೂ ಕರೆಯುತ್ತಾರೆ. ಒಟ್ಟಾರೆ ನಮ್ಮ ಇಡೀ ದೇಶದಲ್ಲಿ 'ಒಕ್ಕಲಿಗರು' ಸುಮಾರು 200 ಉಪಪಂಗಡಗಳಾಗಿ ವಿಭಜನೆ ಹೊಂದಿ ಆಯಾ ಪ್ರದೇಶದ ಪರಿಸರಕ್ಕೆ ಅನುಗುಣವಾಗಿ ಸಂಸ್ಕೃತಿ-ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಕ್ಕಲಿಗರು ಸುಮಾರು ಶೇ. 20 ರಷ್ಟಿದ್ದಾರೆ. ಅವರು ಇಡೀ ರಾಜ್ಯದ ಜನಸಂಖ್ಯೆಯಲ್ಲಿ ಎರಡನೆಯ ಸ್ಥಾನವನ್ನು ಅಲಂಕರಿಸಿದ್ದಾರೆ."

ಭಾರತೀಯ ಸಂಸ್ಕೃತಿ ಮೂಲತಃ ಬೇಸಾಯ ಸಂಸ್ಕೃತಿ. ಹಾಗೆಯೇ ಪ್ರಪಂಚದ ಎಲ್ಲ ನಾಗರಿಕತೆಗಳು ಸಹ ಆಗಿರುವುದರಿಂದ ರಾಷ್ಟ್ರದ ಸರ್ವ ಕೃಷಿಕರ ಜೊತೆ ಒಕ್ಕಲಿಗರ ಸಂಘ ಗುರುತಿಸಿಕೊಂಡಿರುವುದು ಸಂತೋಷದ ಸಂಗತಿ. ಆದರೆ ಅಷ್ಟೇ ಆದರೆ ಸಾಲದು. ಇದು ಹೆಮ್ಮೆಪಡುವ ವಿಷಯ ಆಗಬೇಕಾದರೆ ಅವರು ಮೇಲೆ ಹೆಸರಿಸಿದ ಎಲ್ಲಾ ರಾಜ್ಯಗಳ ಬೇಸಾಯಗಾರರ ಜೊತೆ ಮದುವೆ ಸಂಬಂಧ ರೂಢಿಸಿಕೊಳ್ಳುವುದು ಅಗತ್ಯವಾಗಿದೆ; ಇದು ಅತ್ಯಂತ ವಿಹಿತವಾದುದು. ನೆಂಟೀ ನಿಜವಾದ ಅಂಟು. ಮಾನವತನವನ್ನು ಸ್ಥಾಪಿಸುವ ಮತ್ತು ವೃದ್ಧಿಸುವ ಪ್ರಥಮ ಮತ್ತು ಪರಮೋಚ್ಚ ಸಾಧನ ನೆಂಟಸ್ತನ. ಅಂತರ್ಜಾತಿ ಮತ್ತು ಮತಗಳ ವಿವಾಹ ಸಂಬಂಧಗಳಿಂದ ದೇಶದ ಐಕ್ಯತೆ ಮತ್ತು ಅಖಂಡತೆಗೆ ಭದ್ರ ಬುನಾದಿ ಏರ್ಪಡುತ್ತದೆ. ಈ ಭಾವಬಂಧನದಿಂದ ರಾಷ್ಟ್ರ ಬಲಿಷ್ಠವೂ ಸಮೃದ್ಧವೂ ಆಗುವುದು. ನಮ್ಮ ರಾಷ್ಟ್ರದ ಯಾವುದೇ ರಾಜ್ಯದ ಯಾವುದೇ ಕೃಷಿಕ ಪಂಗಡಕ್ಕೆ ಮೂಲ ಧಾರ್ಮಿಕ ವ್ಯಕ್ತಿ, ಗುರು, ಸಿದ್ಧಾಂತ, ಮತ ಇಲ್ಲದೇ ಇರುವುದರಿಂದ ಇವರೆಲ್ಲರೂ ಒಬ್ಬ ಸಮಾನ ಗುರುವನ್ನು ಸರ್ವ ಸಮ್ಮತವಾಗಿ ಸ್ವೀಕರಿಸಬೇಕಾದ ಅನಿವಾರ್ಯತೆಯನ್ನು ಕಂಡುಕೊಳ್ಳಬೇಕು. ಆದರ್ಶಗಳಿಲ್ಲದ ಜನಾಂಗ ಅಭಿವೃದ್ಧಿ ಆಗುವುದಿಲ್ಲ. ಆದರ್ಶಗಳು ಆತ್ಮಪೋಷಕ ಅನ್ನಾಂಗಗಳು.

ಈ ವಿಷಯವಾಗಿ ನನ್ನ ಅಧ್ಯಯನದ ಮಿತಿಯಲ್ಲಿ ನನಗೆ ಕಂಡು ಬರುವ ಒಬ್ಬನೇ ಒಬ್ಬ ಮಹಾಪುರುಷ ಬುದ್ಧ ಎನ್ನಿಸಿದೆ. ಏಕೆಂದರೆ ಬುದ್ಧ ಒಬ್ಬ ರೈತನ ಮಗ! ಎಂದರೆ ಬಹಳ ಮಂದಿ ನಕ್ಕಾರು, ಸೋಜಿಗಪಟ್ಟಾರು! ಆದರೆ ಇದು ನಿಜ. ಆತನ ತಂದೆ ಶುದ್ಧೋದನ ರೈತ, ದೊಡ್ಡ ಜಮೀನುದಾರ. ತನಗಿದ್ದ ಭೂಮಿಯನ್ನು ಉಳುಮೆ ಮಾಡಲು ಅವನು ಒಂದು ಸಾವಿರ ಆರುಗಳನ್ನು ಕಟ್ಟುತ್ತಿದ್ದ. ಶಾಕ್ಯರು [ಪರಂಪರೆಯ ಪ್ರಕಾರ ಮಹಾರಾಜ 'ಒಕ್ಕಾಲ'ನ ಪುತ್ರರನ್ನು ಇವರ ಮಲತಾಯಿ ಪಿತೂರಿಮಾಡಿ ದೇಶದಿಂದ ಹೊರಗೆ ಹಾಕಿಸಿದಳು. ಈ ರಾಜಕುಮಾರರು ರಾಜ್ಯಭ್ರಷ್ಟರಾಗಿ ಅಲೆದಾಡುತ್ತಾ ಹಿಮಾಲಯದ ತಪ್ಪಲಿಗೆ ಬಂದರು. ಇಲ್ಲಿ ಅವರು ಮಹರ್ಷಿ ಕಪಿಲನನ್ನು ಕಾಣುವಂತಾಯಿತು. ಈ ಋಷಿಯ ಸೂಚನೆಯ ಮೇರೆಗೆ ಅವರು ಕಪಿಲವಸ್ತು (ಕಪಿಲನ ಊರು) ನಗರವನ್ನು ಸ್ಥಾಪಿಸಿದರು. ಇವರ ಸಾಹಸವನ್ನು ನೋಡಿ ಕಪಿಲ ಮಹರ್ಷಿ ಹೀಗೆ ಉದ್ಗರಿಸಿದ: 'ಶಕ್ಯಾವತ ಭೋ ರಾಜಕುಮಾರಾ-ರಾಜಕುಮಾರರೇ, ನೀವು ನಿಜವಾಗಿಯೂ ಸಮರ್ಥರು'. (ಶಕ್ಯಾ-ಶಕ್ತಿವಂತರು, ಈ.ಜೆ. ಥಾಮಸ್: ಲೈಫ್ ಆಫ್ ಬುದ್ಧ ಪುಟ-6 ಮತ್ತು ನಾರದ: ಡಾ ಬುದ್ಧಅಂಡ್ ಹಿಸ್ ಟೀಚಿಂಗ್ಸ್ ಪುಟ-2) 'ಒಕ್ಕಾಲ' ಹೆಸರಿನಿಂದ ಒಕ್ಕಲಿಗ ಹೆಸರು ಬಂದಿರಬಹುದೇ?] ದೊಡ್ಡ ಹಬ್ಬ ಮಾಡುತ್ತಿದ್ದರು. ವಲ್ಯಾನ ಅದರ ಹೆಸರು 'ವಪ್ರಮಂಗಳ' (ವಪ್ರ – ಮಣ್ಣಿನ ಗುಡ್ಡೆ; ಹೊಲ, ಗದ್ದೆ, ಮೊದಲಾದ ಕೃಷಿಭೂಮಿ. ಮಂಗಲ – ಅಭಿವೃದ್ಧಿ ಕಾರ್ಯ). 'ವಪ್ರಮಂಗಳ' ಎಂದರೆ 'ಭೂಮಿ ಪೂಜೆ' ಎನ್ನಬಹುದು. ಇದು ಅಲ್ಲಿನ ರೈತರು ಬೀಜ ಬಿತ್ತುವ ದಿವಸ ಮಾಡುತ್ತಿದ್ದ ಉತ್ಸವ. ಈ ದಿವಸ ಪ್ರತಿಯೊಬ್ಬ ಶಾಕ್ಯ ಗಂಡಸೂ ನೇಗಿಲ ಮೇಣಿ ಹಿಡಿದು ಹೊಲ ಉಳಬೇಕೆಂದು ಅವರಲ್ಲಿ ಕಡ್ಡಾಯದ ಕಟ್ಟುಪಾಡಿತ್ತು. ಶ್ರೀಮಂತ ಅಥವಾ ರಾಜನ ಮಗನಾಗಿದ್ದ ಸಿದ್ಧಾರ್ಥನೂ ಇದಕ್ಕೆ ಹೊರತಾಗಿರಲಿಲ್ಲ. ಅವನು ಈ ನಿಯಮವನ್ನು ಯಾವಾಗಲೂ ಪಾಲಿಸಿದ. ವಿದ್ಯಾವಂತನಾದ ಸಿದ್ಧಾರ್ಥ ದೈಹಿಕ ಶ್ರಮವನ್ನು ಎಂದೂ ನಿರಾಕರಿಸಲಿಲ್ಲ (ಡಾ. ಬಾಬಾಸಾಹೇಬ ಅಂಬೇಡ್ಕರ್ : 'ದ ಬುದ್ಧ ಅಂಡ್ ಹಿಸ್ ಧಮ್ಮ' ಪು. 10; 1992). ಸಿದ್ಧಾರ್ಥ ಸ್ವತಃ ಉಳುಮೆ ಮಾಡಿದ್ದರ ಫಲವಾಗಿ ಮುಂದೆ ಅವನು ಬುದ್ಧನಾಗಿ ನೀಡಿದ ಉಪದೇಶಗಳಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಹೋಲಿಕೆಗಳು ಅಥವಾ ರೂಪಕಗಳು ಬಂದಿರುವುದನ್ನು ಕಾಣಬಹುದು. ರೈತರದು ಹಂಚುಣ್ಣುವ ಸಂಸ್ಕೃತಿ. ಆದುದರಿಂದ ಬುದ್ಧ ತನ್ನ ಅಪೂರ್ವ ಜ್ಞಾನವನ್ನು ಎಲ್ಲರಿಗೂ ನೀಡಿದ. ಜ್ಞಾನದಾನ ಅತ್ಯಂತ ಶ್ರೇಷ್ಠ ದಾನ.

ಸಿದ್ಧಾರ್ಥ ರೈತನಾಗಿ ಗೇಯುತ್ತಿದ್ದ ಎಂದು ಓದಿ, ರಾಜ ಮಹಾರಾಜರು ಮತ್ತು ರಾಜಕುಮಾರರು ನೇಗಿಲ ಮೇಣಿ ಹಿಡಿದು ಉಳುತ್ತಿದ್ದರೆ? ಎಂದು ಸಂದೇಹ ಪಡುವುದು ಸಹಜ. ಕೈಗಾರಿಕೆಗಳಿಲ್ಲದಿದ್ದ ಪ್ರಾಚೀನ ಕಾಲದಲ್ಲಿ ಆರಂಭವೇ ಆದಾಯದ

ಉದ್ಯಮವಾಗಿತ್ತು. ಹಾಗೆಯೇ ಗೋಸಂಪತ್ತು ಸಹ. ಜನಕ ಮಹಾರಾಜ ಸ್ವತಃ ಹೊಲ ಉಳುತ್ತಿದ್ದನೆಂದು ಆದಿಕವಿ ವಾಲ್ಮೀಕಿ ವರ್ಣಿಸಿದ್ದಾನೆ. ಈ ಉಲ್ಲೇಖ ಬುದ್ಧನ ಬಗೆಗೆ ಸಮಾನಾಂಶವುಳ್ಳ ಪ್ರಾಚೀನ ಪುರಾವೆಯಾಗಿದೆ:

ಅಥ ಮೇ ಕೃಷತಃ ಕ್ಷೇತ್ರಂ ಲಾಂಗಲಾತ್ ಉತ್ಥಿತಾ ಮಮ.
ಕ್ಷೇತ್ರಂ ಶೋಧಯತಾ ಲಬ್ಧಾ ನಾಮ್ನಾ ಸೀತೇತಿ ವಿಶ್ರುತಾ
ಭೂತಲಾತ್ ಉತ್ಥಿತಾ ಸಾ ತು ವ್ಯವರ್ಧತ ಮಮಾತ್ಮಜಾ.
ಶ್ರೀಮದ್ ವಾಲ್ಮೀಕಿ ರಾಮಾಯಣ, ಬಾಲಕಾಂಡ, ಸರ್ಗ 66, ಶ್ಲೋಕ 13–14

"ನಾನು ಭೂಮಿಯನ್ನು ಉಳುತ್ತಿದ್ದೆನು. ಉಕ್ಕೆ ಸೀಳಿನಲ್ಲಿ ಒಂದು ಹೆಣ್ಣು ಮಗು ಸಿಕ್ಕಿತು. ಅದಕ್ಕೆ ಸೀತೆ (ಉಕ್ಕೆತೆರೆ) ಎಂದು ಹೆಸರಿಟ್ಟೆ. ಭೂಮಿಯಲ್ಲಿ ಲಭಿಸಿದ ಈ ಕುಮಾರಿ ನನ್ನ ಮಗಳಾಗಿ ಬೆಳೆದಳು" ಎಂದು ಜನಕ ಮಹಾರಾಜನು ಬ್ರಹ್ಮರ್ಷಿ ವಿಶ್ವಾಮಿತ್ರನಿಗೆ ಹೇಳುತ್ತಾನೆ. ಈ ಜನಕ ಮಹಾರಾಜ ವೈದಿಕ ಕರ್ಮಕಾಂಡದ ವಿರುದ್ಧ ನಡೆದ ಉಪನಿಷತ್ ಚಳವಳಿಯ ನೇತಾರನಾಗಿದ್ದನು. ಹಾಗಾಗಿ ಕುವೆಂಪು ಕೃತ ಕರ್ನಾಟಕ ನಾಡಗೀತೆಯಲ್ಲಿ "ಜನಕನ ಹೋಲುವ ದೊರೆಗಳ ಧಾಮ" ಎಂದು ಜನಕನ ನಾಮಸ್ಮರಣೆ ಬಂದಿದೆ.

> ಒಕ್ಕಲಿಗರು ವಿವೇಕಶಾಲಿಗಳಾಗಿ ತಮ್ಮ ಮೂಲ ಪುರುಷ ಬುದ್ಧನನ್ನು ಸ್ವೀಕರಿಸಿದರೆ ಅವರು ಅಖಿಲ ಭಾರತ ಜನಾಂಗವಾಗುತ್ತಾರೆ. ಅಷ್ಟೇ ಅಲ್ಲದೆ ಅವರು ಅಂತಾರಾಷ್ಟ್ರೀಯ ಜನಾಂಗವಾಗುತ್ತಾರೆ. ಅವರು ನಿಜಕ್ಕೂ ವಿಶ್ವಮಾನವರಾಗಲು ಹಾದಿ ಸುಗಮವಾಗುತ್ತದೆ. ಈ ಕುರಿತು ಒಕ್ಕಲಿಗ ಸಂಘ ತಾತ್ವಿಕ ಚಿಂತನೆ ಹಾಗೂ ಚರ್ಚೆಗಳನ್ನು ವ್ಯಾಪಕವಾಗಿ ನಡೆಸುವುದು ಯೋಗ್ಯ ಮತ್ತು ಅಗತ್ಯ.

ಆಗ ಕಪಿಲವಸ್ತುವಿನ ಪ್ರಾಂತ್ಯದಲ್ಲಿ ರಾಜ ಪದವಿ ಪಾಳಿ ಆಧಾರದ ಮೇಲೆ ನಡೆಯುತ್ತಿತ್ತು. ಆ ಪದ್ಧತಿಗೆ ಅನುಸಾರವಾಗಿ ಶುದ್ಧೋದನ ರಾಜನಾಗಿದ್ದನು. ಸಿದ್ಧಾರ್ಥ ಹುಟ್ಟಿದ್ದು ಅಂಥ ದಿನಗಳಲ್ಲಿ. ಬುದ್ಧನ ಸಂಸಾರ ತ್ಯಾಗ ಮತ್ತು ರಾಜ್ಯ ಪರಿತ್ಯಾಗಗಳನ್ನು ದೊಡ್ಡದು ಮಾಡಲು ಚರಿತ್ರಕಾರರು ಅವನನ್ನು ಚಕ್ರವರ್ತಿಯ ಪುತ್ರನೆಂದು ಚಿತ್ರಿಸಿದ್ದಾರೆ ಎನ್ನಿಸಬಹುದು. ಆದರೆ ಯಾವ ದೃಷ್ಟಿಯಿಂದ ನೋಡಿದರೂ ಬುದ್ಧನದು ಮಹಾತ್ಯಾಗ ಎನ್ನುವುದರಲ್ಲಿ ಅನುಮಾನವಿಲ್ಲ.

ಶ್ರೀಮಂತರು ಬಡವರು, ರಾಜರು ಪ್ರಜೆಗಳು, ಅಧಮರು ಉತ್ತಮರು, ಅಕ್ಷರಸ್ಥರು ಅನಕ್ಷರಿಗಳು, ವೇಶ್ಯೆಯರು ಸುಶೀಲೆಯರು, ಪಾಪಿಗಳು ಪುಣ್ಯಾತ್ಮರು – ಎಂಬ ತಾರತಮ್ಯ ಮಾಡದೆ ಎಲ್ಲರಿಗೂ ತನ್ನ ಅಸದೃಶ ಜ್ಞಾನಭಂಡಾರವನ್ನು ನೀಡಿದ ಬುದ್ಧ ಅಪ್ರತಿಮ ಮಹಾತ್ಮ. ಬುದ್ಧ ತಾನು ದೇವರ ಅವತಾರ ಎಂದು ಹೇಳಿಕೊಳ್ಳಲಿಲ್ಲ. ಆದರೆ ಬುದ್ಧನ ಪ್ರಭಾವ ತಪ್ಪಿಸಲು ಅಥವಾ ಅವನನ್ನು ಮುಗಿಸಲು ಸಾಧ್ಯವಾಗದೇ ಹೋದಾಗ ಅಥವಾ ಅವನನ್ನು ಒಳಗೆ ಸೆಳೆದುಕೊಳ್ಳಲು ಅವನು ವಿಷ್ಣುವಿನ ಒಂಬತ್ತನೆಯ ಅವತಾರ ಎಂದು ಹೇಳಿ ಆರಾಧಿಸತೊಡಗಿದರು. ಏಸುಕ್ರಿಸ್ತ ತಾನು ದೇವಪುತ್ರ ಎಂದು ತನ್ನ ಅನುಯಾಯಿಗಳನ್ನು ನಂಬಿಸಿದ್ದಾನೆ. ಮಹಮ್ಮದ್ ಪೈಗಂಬರ್ ತಾನು ಅಲ್ಲಾನ ಪ್ರವಾದಿ ಎಂದು ಹೇಳಿರುವನು. ಶ್ರೀಕೃಷ್ಣ ತಾನು ದೇವರ ಅವತಾರ ಎಂದೇ ಪ್ರಬಲವಾಗಿ ದೃಢಪಡಿಸಿ ಪ್ರತಿಪಾದಿಸಿದ್ದಾನೆ. ಹೀಗೆ ಪ್ರತಿಯೊಂದು ಮತದ ವಕ್ತಾರ, ಆಚಾರ್ಯ ಅಥವಾ ಸ್ಥಾಪಕ ತಾನು ದೇವರ ಅಂಶ ಎಂದು ನಂಬಿಸಲು ಯಾವುದೇ ಸಂಕೋಚಪಟ್ಟಿಲ್ಲ. ದೇವರ ವಿಷಯದಲ್ಲಿ ಹೆದರಿಸದೆ ಇದ್ದರೆ ಜನ ನಂಬುವುದಿಲ್ಲ ಎಂದು ಏನೇನೋ ಹೇಳುವರು. ಇದಕ್ಕೆ ಅತ್ಯುತ್ತಮ ಉದಾಹರಣೆ 'ಭಗವದ್‌ಗೀತೆ'ಯ 11ನೇ ಅಧ್ಯಾಯದಲ್ಲಿ ಬರುವ 'ವಿಶ್ವರೂಪ ದರ್ಶನ'. ಗುಮ್ಮ ಬರುತ್ತದೆ ಎಂದು ಹೇಳಿ ಮಕ್ಕಳನ್ನು ಹೆದರಿಸುವಂತೆ (ವಿಶ್ವರೂಪ ಎಂದರೂ ಗೀತಾಚಾರ್ಯ ಜ್ಞಾನವೆಲ್ಲಾ ಭಾರತದ ಭೂಗೋಳಕ್ಕೆ ಮಾತ್ರ ಸೀಮಿತವಾಗಿದೆ. ಇದು ವಿಶ್ವರೂಪ ದರ್ಶನ ಅಲ್ಲ, ಬರೀ ಭಾರತ ದರ್ಶನ ಅಷ್ಟೇ, ಅದೂ ಅಪೂರ್ಣವಾಗಿ!) ವಿಶ್ವರೂಪ ತೋರಿಸಿ ಅರ್ಜುನನಿಗೆ ಶ್ರೀಕೃಷ್ಣ ಭಯಪಡಿಸುತ್ತಾನೆ (ಗೀತೆ 11. 45. ; 49–50). ನಂಬುವವರು ಇರುವವರೆಗೆ ನಂಬಿಸುವವರು ಇದ್ದೇ ಇರುತ್ತಾರೆ. ಆದರೆ ಈ ಯಾವುದನ್ನೂ ಹೇಳದವನು ಬುದ್ಧ ಮಾತ್ರ. "ನಿಮ್ಮ ಹಾಗೆ ನಾನೂ ಒಬ್ಬ ಮನುಷ್ಯ. ನಾನು ಈ ದಾರಿಯಲ್ಲಿ ಹೋಗಿ ಈ ಸತ್ಯಗಳನ್ನು ಕಂಡುಕೊಂಡಿದ್ದೇನೆ. ಈ ಮಾರ್ಗದಲ್ಲಿ ನೀವೂ ಹೋಗಿ ನೋಡಿ. ನನ್ನ ತತ್ವಗಳು ನಿಜ ಎಂದು ಕಂಡುಬಂದರೆ ಒಪ್ಪಿಕೊಳ್ಳಿ, ಇಲ್ಲದಿದ್ದರೆ ತಿರಸ್ಕರಿಸಿ". ಇದು ವಿನಯದ ತುತ್ತ ತುದಿ. ಹೀಗೆ ತನ್ನ ಅನುಯಾಯಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವವನು ಬುದ್ಧ ಒಬ್ಬನೇ, ಇನ್ನಾರೂ ಇಲ್ಲ. ಇಂಥ ಅಪರೂಪದ ಸ್ವಾತಂತ್ರ್ಯ ಕೊಟ್ಟ ಬುದ್ಧ ಜನರನ್ನು ದೇವರ ಹೆಸರಿನಲ್ಲಿ ಸಂಕೋಲೆಯಲ್ಲಿಡಲು ಹಾಗೂ ಪುರೋಹಿತರ ಪ್ರಾಬಲ್ಯಕೆ ಒಪ್ಪಿಸಲು ಹೋಗದ್ದು ಮಾನವರ ಮೇಲೆ ಅವನಿಗೆ ಇದ್ದ ಅಪಾರ ಪ್ರೇಮ ಮತ್ತು ಜೀವಕಾರುಣ್ಯವನ್ನು ತೋರಿಸುತ್ತದೆ. ಏಕೆಂದರೆ ಎಲ್ಲ ದಬ್ಬಾಳಿಕೆಗಿಂತ ಧಾರ್ಮಿಕ ದಬ್ಬಾಳಿಕೆ ಘೋರವಾದುದು. ಸೇನೆ ಅಥವಾ ರಾಜಕೀಯ ನಿರಂಕುಶ ಆಡಳಿತ ಪ್ರಜೆಗಳ ದೈಹಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದರೆ ಪುರೋಹಿತ ದಬ್ಬಾಳಿಕೆ ಜನರ ಅಂತಶ್ಚೇತವನ್ನು ಹಾಗೂ ಬೆಳವಣಿಗೆಯನ್ನು ಧ್ವಂಸಮಾಡುತ್ತದೆ. ಈ ಕಾರಣಕ್ಕಾಗಿಯೇ ಪುರೋಹಿತ ವರ್ಗದವರು ಅವನನ್ನು ದೂರೀಕರಿಸಿದ್ದಾರೆ.

ಬುದ್ಧನಿಗೆ ಮೊದಲು ಮತ್ತು ಅನಂತರ ಅನೇಕ ಜನ ಧರ್ಮ ಪ್ರವರ್ತಕರು ಹಾಗೂ ಪ್ರಸಾರಕರು ಬಂದು ಹೋಗಿರುವುದನ್ನು ಲೋಕ ಬಲ್ಲದು. ಇವರೆಲ್ಲಾ ದೇವರು ಸ್ವರ್ಗ ನರಕ ಮುಕ್ತಿ ಎಂದೆಲ್ಲ ಸುಳ್ಳು ಹೇಳಿ ಜನರನ್ನು ದಾರಿ ತಪ್ಪಿಸಿದ್ದಾರೆ. ಅವರಿಗೆ ಮಂಕುಬೂದಿ ಎರಚಿರುವರು. ಇಡೀ ಇತಿಹಾಸದಲ್ಲಿ ಜೀವನ ಮತ್ತು ಜಗತ್ತಿನ ಬಗ್ಗೆ ಸತ್ಯ ಹೇಳಿರುವವನು ಬುದ್ಧ ಮಾತ್ರ. ಇರುವುದು ಇದೊಂದೇ ಲೋಕ, ಇಲ್ಲಿ ನಾವೆಲ್ಲರೂ ಸೌಹಾರ್ದತೆಯಿಂದ ಸುಖವಾಗಿ ಶಾಂತಿಯಿಂದ ಬದುಕಬೇಕು ಎಂದನು. ಕಾಣದ ದೇವರು ನಾಕ ನರಕ ಕುರಿತು ಅವನು ಮೌನಿಯಾದ. ಕಾರಣ ವಾದ ವಿವಾದಗಳಿಗೆ ವಿರಾಮವಿಲ್ಲ. ವಿಜ್ಞಾನಕ್ಕೆ ಇವಿನ್ನೂ ಕಾಣಿಸಿಲ್ಲ. ದೇವರು ಸ್ವರ್ಗ ಪಾತಾಳ ಮುಂತಾದವುಗಳ ಇರುವಿಕೆಯಿಂದ ಅಥವಾ ಇಲ್ಲದಿರುವಿಕೆಯಿಂದ ಮಾನವನ ಬಾಳು ಸಂತೋಷಕರವಾಗಲಿ ಇಲ್ಲವೇ ದುಃಖಮಯವಾಗಲೀ ಆಗುವುದಿಲ್ಲ. ಶೋಷಣೆ ರಹಿತ ಒಳ್ಳೆಯ ಜೀವನ ನಡೆಸುವುದರಿಂದ ಮಾತ್ರ ಮನುಷ್ಯ ನೆಮ್ಮದಿಯಿಂದ ಇರಲು ಸಾಧ್ಯ. ನನ್ನ ಉಪದೇಶವನ್ನು ವಿಮರ್ಶಿಸಿ, ಅದು ಸತ್ಯವಲ್ಲದಿದ್ದರೆ ತಿರಸ್ಕರಿಸಿ ಎಂದಿರುವುದಂತೂ ಬುದ್ಧನನ್ನು ಅಸಾಧಾರಣ ವಿಶ್ವಗುರುವನ್ನಾಗಿ ಮಾಡಿದೆ. ಆತನ ಬೋಧನೆ ವಿಶ್ವಧರ್ಮವಾಗಿರುವುದು. ಸ್ವಂತ ಚಿಂತನೆ ಮತ್ತು ಅನುಭಾವಕ್ಕೆ ಬುದ್ಧ ಪ್ರಾಮುಖ್ಯತೆ ನೀಡಿದ್ದಾನೆ. ಈ ಕಾರಣಕ್ಕಾಗಿಯೇ ಬುದ್ಧಿ, ಜ್ಞಾನ, ಅನುಕಂಪ, ಪರಿಶುದ್ಧಿ, ಪಾವಿತ್ರ್ಯದಲ್ಲಿ ಬುದ್ಧನಿಗೆ ಸರಿಸಾಟಿ ಆಗುವ ಇನ್ನೊಬ್ಬ ಧರ್ಮಗುರು ಸಿಗಲಾರನು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ಆತನನ್ನು ಸರ್ವ ರೀತಿಯಲ್ಲೂ ಮೀರಿಸುವ ಇನ್ನೊಬ್ಬ ಉದಯಿಸಿಲ್ಲದಿರುವುದೇ ಆಗಿದೆ. ಬುದ್ಧ ಅತ್ಯಂತ ಸ್ವೋಪಜ್ಞ ಚಿಂತಕ.

ವಿಶ್ವದ ಇತಿಹಾಸದಲ್ಲೇ ಅತ್ಯಂತ ಮಹಿಮಾವಂತರಾದ ಬುದ್ಧ ಮತ್ತು ಸಾಮ್ರಾಟ್ ಅಶೋಕ – ಈ ಇಬ್ಬರನ್ನು ಭಾರತದ ಇತಿಹಾಸದಿಂದಲೇ ಸುಮಾರು ಒಂದು ಸಾವಿರ ವರ್ಷಗಳ ಕಾಲ ಹಿಂದೂವಾದಿ ವಿದ್ವಾಂಸರು ತೆಗೆದುಹಾಕಿದ್ದರು. ಅಂಥ ಬುದ್ಧನನ್ನು ಕುರಿತು ಮೊದಲಿಗೆ ಮಾತನಾಡಿದವರು ತೇಜಃಪುಂಜರಾದ ಸ್ವಾಮಿ ವಿವೇಕಾನಂದರು ಅಮೆರಿಕಾದ ಚಿಕಾಗೊದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ 26–09–1893 ರಂದು. "ನೀವು ತಿಳಿದಂತೆ ನಾನು ಬೌದ್ಧನಲ್ಲ, ಆದರೆ ನಾನೊಬ್ಬ ಬೌದ್ಧ" ('ದ ಕಂಪ್ಲೀಟ್ ವರ್ಕ್ಸ್', ಸಂ. 1, ಪು. 21; 1970) ಎಂದು ಹೇಳಿದ್ದಾರೆ ಹೆಮ್ಮೆಯಿಂದ. ಹಿಂದೆ ಭಾರತದ ಜನಸಂಖ್ಯೆಯಲ್ಲಿ ಮೂರನೇ ಎರಡು ಭಾಗ ಬೌದ್ಧರಾಗಿದ್ದರು ಎಂದು ವಿವೇಕಾನಂದರು ಹೇಳುತ್ತಾರೆ ('ಸಂ. 3, ಪು. 166, 511; 1964). ಇದಕ್ಕೆ ಪೂರಕ ಆಧಾರ ಮತ್ತು ಸಮರ್ಥನೆಯಾಗಿ ಪ್ರತಿ ಹಳ್ಳಿಯಲ್ಲಿ ಅರಳಿ ಮರ ಇರುವುದನ್ನು ಕಾಣಬಹುದು. ನಮ್ಮ ಹುಣಸೂರು ತಾಲ್ಲೂಕಿನ ಹಳ್ಳಿಗಳಲ್ಲಿ 'ಹುಟ್ಟಿದ ನಿರ್ವಾಣ' ಎಂಬ ನುಡಿಗಟ್ಟು ಬಳಕೆಯಲ್ಲಿದೆ. ನಮ್ಮ ಊರಿನ ಪಕ್ಕದ ಗ್ರಾಮ ಚಿಟಿಕ್ಯಾತನ ಹಳ್ಳಿಯಲ್ಲಿ ಒಬ್ಬ ರೈತನಿಗೆ ನಿರ್ವಾಣಿಗೌಡ ಎಂಬ ಹೆಸರಿತ್ತು. 'ನಿರ್ವಾಣ' ಎಂಬ ಬುದ್ಧನ ಅತ್ಯಂತ ಮುಖ್ಯ ಪದ ಹಳ್ಳಿಗಳಲ್ಲಿ ಪ್ರಚಲಿತವಾಗಿರಬೇಕಾದರೆ ಬುದ್ಧ ಧಮ್ಮ ಇಲ್ಲೆಲ್ಲ ಹಬ್ಬಿರಬೇಕೆಂದು ಅನ್ನಿಸುತ್ತದೆ. "ಭಾರತದ ಜನಸಾಮಾನ್ಯರಲ್ಲೆಲ್ಲ ಬುದ್ಧ ಧಮ್ಮ ಹರಡಿತ್ತು" ಎಂದು ಸ್ವಾಮಿ ವಿವೇಕಾನಂದರು (ಸಂ. 7, ಪು. 39; 1964) ಹೇಳುತ್ತಾರೆ. ಕಾಲಾಂತರದಲ್ಲಿ ಬೆಂಬಲವಿಲ್ಲದೆ ನಾನಾ ಆಘಾತಗಳಿಂದ (ನನ್ನ ಕೃತಿ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' 15ನೇ ಮುದ್ರಣ, 2011 ನೋಡಿದರೆ) ಬುದ್ಧ ಧಮ್ಮ ಮರೆಯಾಗಿರಲಿಕ್ಕೆ ಕಾರಣ ತಿಳಿಯುವುದು. ಬುದ್ಧ ತಪಸ್ಸಿಗೆ ಅರಳಿ ಮರದ ಅಡಿಯಲ್ಲಿ ಕುಳಿತಾಗ ಜ್ಞಾನೋದಯ ಪಡೆದುದರಿಂದ ಅದು ಬೋಧಿ ವೃಕ್ಷ ಎಂದು ಪ್ರಖ್ಯಾತವಾಯಿತು. ಇದರಿಂದ ಪ್ರೇರಿತರಾದ ಸಂಸ್ಕೃತ ಸಾಹಿತಿಗಳು ಅದನ್ನು ಅಶ್ವತ್ಥ ವೃಕ್ಷ ಎಂದರು. ಬುದ್ಧ ಆದಮೇಲೆ ಬಂದ ಭಗವದ್‌ಗೀತೆಯಲ್ಲಿ ಕೃಷ್ಣ "ಅಶ್ವತ್ಥಃ ಸರ್ವ ವೃಕ್ಷಾಣಾಂ–ಎಲ್ಲಾ ಮರಗಳಲ್ಲಿ ನಾನು ಅರಳಿಮರ" (11.26.) ಎಂದು ಅದರ ಪಾರಮ್ಯವನ್ನು ಘೋಷಿಸಿದ್ದಾನೆ. (ಕ್ರಿ. ಶ. 1 ಶತ) ಇದನ್ನು "ಊರ್ಧ್ವ ಮೂಲಂ ಅಧಃ

ಶಾಖಂ ಅಶ್ವತ್ಥಂ ಅವ್ಯಯಂ – ಮೇಲೆ ಬುಡ ಕೆಳಗೆ ಶಾಖೆಗಳುಳ್ಳ ಅಶ್ವತ್ಥವೃಕ್ಷ "ಅಮರ" (15. 1.) ಎಂದು ಗೀತೆ ಕೊಂಡಾಡುತ್ತದೆ. ಶಿಶು ಶ್ರೀಕೃಷ್ಣ ಅರಳಿ ಎಲೆಯ ಮೇಲೆ ಮಲಗಿರುವುದನ್ನು ವರ್ಣಶಿಲ್ಪಿಗಳು ಚಿತ್ರಿಸಿದ್ದಾರೆ.

ಆದ್ದರಿಂದ ಒಕ್ಕಲಿಗರು ವಿವೇಕಶಾಲಿಗಳಾಗಿ ತಮ್ಮ ಮೂಲ ಪುರುಷ ಬುದ್ಧನನ್ನು ಸ್ವೀಕರಿಸಿದರೆ ಅವರು ಅಖಿಲ ಭಾರತ ಜನಾಂಗವಾಗುತ್ತಾರೆ. ಅಷ್ಟೇ ಅಲ್ಲದೆ ಅವರು ಅಂತಾರಾಷ್ಟ್ರೀಯ ಜನಾಂಗವಾಗುತ್ತಾರೆ. ಅವರು ನಿಜಕ್ಕೂ ವಿಶ್ವಮಾನವರಾಗಲು ಹಾದಿ ಸುಗಮವಾಗುತ್ತದೆ. ಈ ಕುರಿತು ಒಕ್ಕಲಿಗ ಸಂಘ ತಾತ್ವಿಕ ಚಿಂತನೆ ಹಾಗೂ ಚರ್ಚೆಗಳನ್ನು ವ್ಯಾಪಕವಾಗಿ ನಡೆಸುವುದು ಯೋಗ್ಯ ಮತ್ತು ಅಗತ್ಯ.

ಇದೆಲ್ಲವನ್ನು ಓದುವುದರಿಂದ ಅಥವಾ ಕೇಳುವುದರಿಂದ ಕೃಷಿಕರು ಗಾಬರಿಗೆ ಒಳಗಾಗುವುದು ಸಹಜ. ಕಾರಣ: ಸಾವಿರಾರು ವರ್ಷಗಳಿಂದ ತಮ್ಮದಲ್ಲದ ಧರ್ಮವನ್ನು ತಮ್ಮದೆಂದು ಅವರು ನಂಬಿಕೊಂಡು ಬಂದಿದ್ದಾರೆ. ತಮ್ಮ ದನ ಎಮ್ಮೆ ಆಡು ಕುರಿ ಕೋಳಿ ನಾಯಿ, ಹೊಲ ಗದ್ದೆ, ತೋಟ, ಗಿಡ ಮರ ಅಡಿಕೆ ತೆಂಗು ವೀಳ್ಯದ ಹಂಬು, ಕೆರೆ ಕಟ್ಟೆ ಹೊಳೆ ಬೆಟ್ಟ ಗುಡ್ಡಗಳ ಜೊತೆ ಅವರ ಬಾಂಧವ್ಯ ಬೆಳೆದುಕೊಂಡಿರುತ್ತದೆ. ಇವೆಲ್ಲವನ್ನೂ ತಮ್ಮಂತೆ, ತಮ್ಮ ಜೀವದ ಭಾಗ ಎಂಬಂತೆ, ತಮ್ಮ ಜೀವದ ಜೀವವಾಗಿ ಅವರು ಕಾಣುವರು. ಇವುಗಳ ಜೊತೆ ಅವರ ಭಾವತಂತು ಬಲವಾಗಿ ಬಿಗಿದುಕೊಂಡಿರುತ್ತದೆ. ಒಕ್ಕಲಿಗರು ಗಾಢವಾಗಿ ಪ್ರೀತಿಸುವ ಜನರು. ಮಹಾ ಸ್ವಾಭಿಮಾನಿಗಳು. ಹಠ ಮತ್ತು ದ್ವೇಷದಲ್ಲಿ ಅವರದು ಕೌರವ ಸ್ವಭಾವ. ಒಕ್ಕಲಿಗರ ಸಿದ್ಧಾಂತ ಸ್ವಭಾವವಾದ, ಸಹಜವಾದ ಅಥವಾ ಪ್ರಕೃತಿವಾದ ಎನ್ನಬಹುದು. ಒಕ್ಕಲಿಗರಿಗೆ ಹುಟ್ಟಿನಿಂದ ಸಾಯುವವರೆಗೆ ಯಾವುದೇ ಮತೀಯ ಸಂಸ್ಕಾರಗಳು ಮತ್ತು ಸಂಪ್ರದಾಯಗಳು ಇಲ್ಲ. ಇವರು ಇಂಥ ಜಾತಿ ಮತದವರೆಂದು ಗುರುತಿಸುವಂತ ಲಾಂಛನಗಳಾಗಲೀ, ಗುರುತುಗಳಾಗಲಿ ಅವರಲ್ಲಿ ಕಾಣದು. ಒಕ್ಕಲಿಗರದು ಪ್ರಕೃತಿ ಸಹಜ ಬದುಕು, ಪ್ರಕೃತಿ ಜೊತೆ ಒಡನಾಟ. ಹಾಗೆಯೇ ಬುದ್ಧನದು ಪ್ರಕೃತಿವಾದ. ಅವರು ತಮ್ಮನ್ನು ತುಳಿಯುವ ಧರ್ಮ ಮತ್ತು ದೇವರುಗಳನ್ನು ಗೊತ್ತಿಲ್ಲದೆ ಅನುಸರಿಸಿಕೊಂಡು ಬದುಕುತ್ತಿದ್ದಾರೆ. ಚಾತುರ್ವರ್ಣದ ಕಟ್ಟಳೆಗಳೆಲ್ಲ ವಿಕೃತವಾದವುಗಳು. ಇವೆಲ್ಲದರಿಂದ ಪಾರಾಗಲು ಇರುವ ಅತ್ಯಂತ ಒಳ್ಳೆಯ ಮಾರ್ಗ ರೈತನ ಮಗನಾಗಿ ನೇಗಿಲು ಹಿಡಿದು ಉತ್ತಿದ್ದ ಬುದ್ಧನನ್ನು ಒಪ್ಪಿಕೊಳ್ಳುವುದರಲ್ಲಿ ಇದೆ.

ಕುವೆಂಪು ಅವರ ಆದ್ಯಾತ್ಮ ಎಲ್ಲವನ್ನೂ ಎಲ್ಲರನ್ನೂ ಒಳಗೊಂಡ ಆದ್ಯಾತ್ಮ. ಅದರಲ್ಲಿ ಪ್ರತ್ಯೇಕತೆ ಇಲ್ಲ. ವಾಸ್ತವವಾಗಿ ಅದು ಪ್ರತ್ಯೇಕತೆಯ ವಿರೋಧಿ. ಪ್ರತ್ಯೇಕತೆ ಇರುವಂತೆ ಭ್ರಮೆಯಲ್ಲಿ ಕಂಡರೆ, ಅದು ವೈದ್ಯ ಕಾಣುವ ಕಾಯಿಲೆಯಂತೆ, ವಾಸಿಯಾಗದ ರೋಗಿಷ್ಠ ಭಾಗವನ್ನು ಶಸ್ತ್ರಚಿಕಿತ್ಸೆಯಿಂದ ಕತ್ತರಿಸಿ ತೆಗೆದುಹಾಕುವ ಹಾಗೆ ಎಂದು ತಿಳಿಯಬೇಕು. ಇದು ಆರೋಗ್ಯವನ್ನು ಪುನರ್ ಸ್ಥಾಪಿಸುವ ಪ್ರಕ್ರಿಯೆ. ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿ ಬರುವ ಶಂಬೂಕ ವಧೆ ಪ್ರಸಂಗವನ್ನು 'ಶೂದ್ರತಪಸ್ವಿ' ನಾಟಕದಲ್ಲಿ ಕಸಿ ಮಾಡಿರುವ ಕ್ರಮದಲ್ಲಿ ಅದನ್ನು ಕಾಣಬಹುದು. ಮೂಲದಲ್ಲಿ ಶಂಬೂಕನನ್ನು ಕೊಲ್ಲಿಸಲಾಗಿದೆ. ಕುವೆಂಪು ಇಲ್ಲಿ ಯಾರನ್ನೂ ಅಳಿಸದೆ ಎಲ್ಲರನ್ನೂ ಉಳಿಸಿದ್ದಾರೆ. ಅವರು ಹೊಸಕಿಹಾಕಿರುವುದು ಅವಿವೇಕತನವನ್ನು, ಅಮಾನುಷತೆಯನ್ನು. ಸ್ಥಾಪಿಸಿರುವುದು – ಮನುಷ್ಯರೆಲ್ಲ ಸಮಾನರು, ಭೇದಭಾವ ಸಲ್ಲದು: "ಆರಾದರೇನ್ ಆರಾಧ್ಯರ್ ತಪೋಧನರ್" ಎಂಬ ದರ್ಶನವನ್ನು ತಿಳಿವಳಿಕೆಯ ಮೂಲಕ ಬೆಳೆಸುವುದಾಗಿದೆ. ಅವರ 'ವಿಶ್ವಮಾನವ' ತತ್ವಕ್ಕೆ ಅವರ ಸಾಹಿತ್ಯದಲ್ಲಿ ಎಲ್ಲೂ ಊನ ಬಂದಿಲ್ಲ.

ಇನ್ನು ಬುದ್ಧನಿಗೂ ಕುವೆಂಪುವಿಗೂ ಏನು ಸಂಬಂಧ? ಎಂದು ಕೇಳಬಹುದು. ಇದು ಕುವೆಂಪು ಸಾಹಿತ್ಯವನ್ನು ಓದಿದವರು ಹಾಕುವ ಪ್ರಶ್ನೆಯಾಗುವುದಿಲ್ಲ. ಅವರ ಮಹಾಕಾದಂಬರಿ 'ಕಾನೂರು ಹೆಗ್ಗಡತಿ' ನಾಯಕ ಹೂವಯ್ಯ ಭೇದಭಾವನೆ ಮಾಡುವ ಆರ್ಯಧರ್ಮ, ಹಿಂದೂಮತ ಅಥವಾ ಬ್ರಾಹ್ಮಣ ಧರ್ಮವನ್ನು ತ್ಯಜಿಸಿ ಅನುಭಾವಿಕ ಸಮಾನತೆಯ ಬುದ್ಧನನ್ನು ಸ್ವೀಕರಿಸುತ್ತಾನೆ. ಕೊನೆಯಲ್ಲಿ ಕ್ರಾಂತಿಗಾನ ನಡೆಯುತ್ತದೆ. ('ಕಾನೂರು ಹೆಗ್ಗಡತಿ' 1936. ಬಾಬಾಸಾಹೇಬ ಅಂಬೇಡ್ಕರ್ 1956 ರಲ್ಲಿ ಬುದ್ಧಧಮ್ಮವನ್ನು ಅಪ್ಪಿಕೊಂಡರು). ಸಿದ್ಧಾರ್ಥನ ಮಹಾತ್ಯಾಗವನ್ನು 'ಮಹಾರಾತ್ರಿ' ನಾಟಕದಲ್ಲಿ ಸ್ಫೂರ್ತಿಯುತವಾಗಿ ಚಿತ್ರಿಸಿದ್ದಾರೆ ಕುವೆಂಪು. 'ಬುದ್ಧದೇವ' ಎಂಬ ಸುನೀತದಲ್ಲಿ ಎಲ್ಲವನ್ನೂ ದಾಟಿ ಹೋಗುವ ಸನ್ಮತಿ ಶಕ್ತಿಯ ಜಗನ್ಮೂರ್ತಿಯಾಗಿ ಬುದ್ಧನನ್ನು ಅವರು ದರ್ಶಿಸಿದ್ದಾರೆ:

... ಮತದ ಮತಿಹೀನತೆಯು
ಸಾಕೆಮಗೆ; ಬೇಕು ಸನ್ಮತಿಯ
ನಾಗರಿಕತೆಯು:
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ.

ಕುವೆಂಪು: ಸಮಗ್ರ ಕಾವ್ಯ, ಸಂ.1, ಪು.513.

ಸನ್ಮತಿ – ಇದು ಕುವೆಂಪು ಸಾಹಿತ್ಯದ ಸಾರ ಸಂದೇಶ ಎನ್ನಬಹುದು. ಸನ್ಮತಿಯೇ ಜಗದ್ಗುರು. ಆದರೆ ಜಗದ್ಗುರು ಎಂದುಕೊಂಡವರು ಅಥವಾ ಅನ್ನಿಸಿಕೊಂಡವರು ಸನ್ಮತಿಯನ್ನು ಗಳಿಸಿದ್ದಾರೆಯೇ? ಎಂದು ಜನತೆ ಕೇಳಿಕೊಳ್ಳಬೇಕು. ಸನ್ಮತಿಯು ಸದ್ಭಾವನೆ, ಸದಾಚಾರ, ನಿಸ್ವಾರ್ಥತೆ, ಜಾತಿ ಮತ ಮೀರಿದ ಲೋಕಹಿತದಲ್ಲಿ ಇರುವಂಥದ್ದು.

ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ಪ್ರಾರಂಭದಲ್ಲಿ "ಬುಧರೊಲಿದ ಸಮದರ್ಶನವನೊಪ್ಪಿ" ಎಂಬ ನುಡಿಯಿಂದ ಕುವೆಂಪು ತಮ್ಮ ಸಾಹಿತ್ಯ ರಚನೆಯ ಉದ್ದೇಶವನ್ನು ಪ್ರಕಾಶಪಡಿಸಿರುವರು. 'ಬುಧ' ಎಂದರೆ ಜ್ಞಾನಿ. ಪ್ರಪಂಚದಲ್ಲಿ ಮೊಟ್ಟಮೊದಲು ಸಮಾನತಾಧರ್ಮವನ್ನು ಹರಡಿದವನು ಬುದ್ಧ. ಬೋಧಿಜ್ಞಾನದ ಪ್ರಭಾವ ಕುವೆಂಪು ಸಾಹಿತ್ಯದ ಮೇಲೆ ವ್ಯಾಪಕವಾಗಿ ಗಾಢವಾಗಿದೆ.

ಬುದ್ಧನನ್ನು ಕುವೆಂಪು ಆಧ್ಯಾತ್ಮಿಕ ಶಕ್ತಿಯನ್ನಾಗಿ ದರ್ಶಿಸಿದ್ದಾರೆ. ಇದರ ಜೊತೆಗೆ ಬುದ್ಧನನ್ನು ಮಾನವಶಾಸ್ತ್ರೀಯವಾಗಿ, ಸಮಾಜಶಾಸ್ತ್ರೀಯವಾಗಿ, ಅರ್ಥಶಾಸ್ತ್ರೀಯವಾಗಿ ತಾತ್ವಿಕವಾಗಿ ಶಾಶ್ವತ ಪ್ರಭಾವಕಾರಿ ಸತ್‌ಶಕ್ತಿಯಾಗಿ ಕಾಣುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಸಿದ್ಧಾರ್ಥ ಸಿಂಹಾಸನ ಕಿರೀಟ ತ್ಯಾಗಮಾಡಿ ಜ್ಞಾನಾರ್ಥಿಯಾಗಿ ಹೊರನಡೆದ. ಅವನು ಜ್ಞಾನೋದಯ ಹೊಂದಿ ಪ್ರಪಂಚದ ನಿಜವಾದ ಜ್ಞಾನಚಕ್ರರ್ತಿಯಾಗಿದ್ದಾನೆ. ಇದನ್ನು ಅರಿಯದ ಜಗದ್ಗುರುಗಳು ಕಿರೀಟ ಧಾರಣೆ ಮಾಡುವುದರಿಂದ ಅಥವಾ ಮಾಡಿಸಿಕೊಳ್ಳುವುದರಿಂದ ತಾವು ಜಗದ್ಗುರುಗಳೆಂದು ಬೀಗುತ್ತಿದ್ದಾರೆ. ಕಿರೀಟ ಅರಿವಿನ ಕೊರತೆಯನ್ನು ಮರೆಸುವ ಮತ್ತು ಅಹಂಕಾರವನ್ನು ಮೆರೆಸುವ ಮೆರಗು; ಅದರಿಂದ ಅವರ ಭಕ್ತರಿಗೆ ಬೆರಗು; ಅಂಧಕಾರವನ್ನೇ ಆಧ್ಯಾತ್ಮ, ಅಜ್ಞಾನವನ್ನೇ ಜ್ಞಾನ ಎಂದು ಭಾವಿಸಿದ್ದಾರಲ್ಲಾ ಎಂದು ವಿಚಾರವಾದಕ್ಕೆ ಕೊರಗು. ಕಿರೀಟ ತೊಟ್ಟ ಇವರ್‍ಯಾರೂ ಖಂಡಿತ ಜಗದ್ಗುರುಗಳಲ್ಲ. ಇವರು ಹೆಚ್ಚು ಅಂದರೆ ತಮ್ಮ ತಮ್ಮ ಜಾತಿಯ ಜಗದ್ಗುರುಗಳು, ಮಹಾಸ್ವಾಮಿಗಳು! ಆದರೆ ವಿಶ್ವವಿಜಯಿಯಾದ ಸ್ವಾಮಿ ವಿವೇಕಾನಂದರು ಕೇವಲ ಸ್ವಾಮಿ, ಮಹಾಸ್ವಾಮಿ ಅಲ್ಲ. ಜಗದ್ಗುರು ಎಂದು ಕರೆಸಿಕೊಂಡವರು ತಮ್ಮ ಜಾತಿಯಾಚೆಗೆ ಪ್ರಭಾವ ಬೀರಲು ಆಗಿಲ್ಲ. ಏಕೆಂದರೆ ಇವರಲ್ಲಿ ಜ್ಞಾನರವಿ ಉದಯಿಸಿಲ್ಲ. ಬುದ್ಧ ಮತ್ತು ವಿವೇಕಾನಂದರಿಗೆ ಉದಯಿಸಿದಂತೆ.

ಬುದ್ಧ ಧಮ್ಮ ಸಂಪೂರ್ಣ ಪ್ರಜಾಪ್ರಭುತ್ವ, ಪರಿಪೂರ್ಣ ಮಾನವತಾವಾದ, ವಿಚಾರ ಮತ್ತು ವಿಜ್ಞಾನಗಳಿಗೆ ಸದಾ ಮುಕ್ತವಾಗಿದೆ. ಮಧ್ಯವರ್ತಿಗಳಿಗೆ ಇಲ್ಲಿ ಜಾಗವಿಲ್ಲ. ಪ್ರತಿ ವ್ಯಕ್ತಿ ಸ್ವತಃ ಅನುಷ್ಠಾನ ಮಾಡಿ ಸಾಕ್ಷಾತ್ಕಾರ–ನಿಬ್ಬಾಣ–ವನ್ನು ಪಡೆದುಕೊಳ್ಳುವ ಪಥ ಇದು. ಇಲ್ಲಿ ರಹಸ್ಯವಿಲ್ಲ.

"ಬುದ್ಧ ನನ್ನ ಇಷ್ಟದೇವತೆ" (ಸಂ. 6, ಪು.227; 1968); "ಪ್ರಪಂಚದಲ್ಲಿ ಬಂದ ಅತ್ಯಂತ ಮಹತ್ವದ ವ್ಯಕ್ತಿ ಬುದ್ಧ ಎಂದು ಮಾನವ ಇತಿಹಾಸ ತೋರಿಸುತ್ತದೆ" (ಸಂ. 1, ಪು. 117 ; 1970); "ಬುದ್ಧ ಪೂರ್ವಕ್ಕೆ ಸಂದೇಶ ಕೊಟ್ಟಂತೆ, ನಾನು ಪಶ್ಚಿಮಕ್ಕೆ ಸಂದೇಶ ಕೊಡಲು ಬಂದಿದ್ದೇನೆ" (ಸಂ. 5, ಪು 314 ; 1964) – ಈ ಮಾತುಗಳಲ್ಲಿ ವಿವೇಕಾನಂದರ ಉಜ್ವಲ ಬುದ್ಧಪ್ರೇಮ ಗೊತ್ತಾಗುತ್ತದೆ. ವಿವೇಕಾನಂದರು ಬುದ್ಧನನ್ನು ಪ್ರೀತಿಸಿ ಆರಾಧಿಸಿ ಪ್ರಚಾರ ಮಾಡಿರುವಷ್ಟು ಬೇರೆ ಯಾರನ್ನೂ ಮಾಡಿಲ್ಲ. ಇಂಥ ವಿವೇಕಾನಂದರಿಂದ ಸ್ಫೂರ್ತರಾದವರು ಕುವೆಂಪು. ಬುದ್ಧನನ್ನು ಒಪ್ಪಿಕೊಳ್ಳುವುದರಿಂದ ವಿವೇಕಾನಂದ, ಇವರ ಗುರು ಶ್ರೀ ರಾಮಕೃಷ್ಣ ಪರಮಹಂಸರು, ವಿವೇಕಾನಂದರಿಂದ ಪ್ರಭಾವಿತರಾದ ಶ್ರೀ ಅರವಿಂದರು – ಮುಂತಾದ ಮಹಾನ್ ದಾರ್ಶನಿಕರಿಂದ ಜನರ ಅಂತಃಶಕ್ತಿ ಹೆಚ್ಚಿ, ಅವರ ಭಾವ ಮತ್ತು ಬೌದ್ಧಿಕ ಬದುಕು ತುಂಬಾ ಸಂವೃದ್ಧವಾಗುತ್ತದೆ. ಆರ್ಥಿಕ ಶ್ರೀಮಂತಿಕೆಗಿಂತ ಬೌದ್ಧಿಕ ಹೃದಯ ಶ್ರೀಮಂತಿಕೆ ಶ್ರೇಷ್ಠ ಮತ್ತು ಶಾಶ್ವತವಾದುದು.

ಇದನ್ನು ಸಂಘ ಮತ್ತು ಮುಖಂಡರು ಚಿಂತಿಸಿ ಕೂಡಲೇ ಕಾರ್ಯಪ್ರವೃತ್ತರಾಗುತ್ತಾರೆಂದು ಆಶಿಸುತ್ತೇನೆ. ಆರೋಗ್ಯಕರವಾಗಿ ಬೆಳೆಯಲು ವಿಚಾರ ವಿಮರ್ಶೆ ಅನಿವಾರ್ಯ ಮತ್ತು ಅಮೂಲ್ಯ. ■

ಅಂಬೇಡ್ಕರ್ ಮತ್ತು ಸಮಾಜವಾದ

ಬಾಪೂ ಹೆದ್ದೂರಶೆಟ್ಟಿ

ಅಂಬೇಡ್ಕರ್ ಹಾಗೂ ಸಮಾಜವಾದಿಗಳಿಬ್ಬರೂ ಸ್ವಾತಂತ್ರ್ಯದ ಉದಾರವಾದಿ ಪರಿಕಲ್ಪನೆಯ ಬಗ್ಗೆ ವಿಮರ್ಶಾತ್ಮಕ ನಿಲುವು ಹೊಂದಿದ್ದರು. ಅಂಬೇಡ್ಕರ್ ಅವರು ಸ್ವಾತಂತ್ರ್ಯದ ಅರ್ಥವ್ಯಾಪ್ತಿಯನ್ನು ಬರಿ ಬದುಕಿನ, ಸಂರಕ್ಷಣೆಯ ಹಾಗೂ ಆಸ್ತಿಯ ಸ್ವಾತಂತ್ರ್ಯಗಳಿಗೆ ಸೀಮಿತಗೊಳಿಸುವುದನ್ನು ವಿರೋಧಿಸುತ್ತಿದ್ದರು. ಈ ಸ್ವಾತಂತ್ರ್ಯ ಒಬ್ಬ ವ್ಯಕ್ತಿ ತನ್ನ ವೃತ್ತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಒಳಗೊಂಡಿರುತ್ತದೆಯೇ ಎನ್ನುವುದು ಅವರ ಪ್ರಶ್ನೆಯಾಗಿತ್ತು.

ಅಂಬೇಡ್ಕರ್ ಮತ್ತು ಸಮಾಜವಾದದ ಬಗ್ಗೆ ಬರೆಯುವುದು ಎಂದರೆ ಸ್ಪಷ್ಟವಾದುದದನ್ನು ವಿವರಿಸಲು ಪ್ರಯತ್ನಿಸಿದ ಹಾಗೆ. ಆದರೂ ಕೂಡ ಈ ಬಗ್ಗೆ ಬರೆಯಬೇಕೆನ್ನುವ ತುಡಿತ ಅತ್ಯಂತ ಅದಮ್ಯವಾಗಿರುತ್ತದೆ. ಡಾ. ಜೆ.ಎಸ್.ಲೋಖಂಡೆಯವರು ಬರೆದ ಅಂಬೇಡ್ಕರ ಅವರ ಜೀವನಚರಿತ್ರೆಯ ಹೆಸರು 'ಭೀಮರಾಮ್ ರಾಮಜಿ ಅಂಬೇಡ್ಕರ್ – ಸಾಮಾಜಿಕ ಜನತಂತ್ರದಲ್ಲೊಂದು ಅಧ್ಯಯನ' ಎಂದಿರುವುದು ಆಕಸ್ಮಿಕವೇನಲ್ಲ. ಅಂಬೇಡ್ಕರ್ ಹಾಗೂ ಸಮಾಜವಾದಿಗಳ ಸಂಬಂಧಗಳನ್ನು ಮೂರು ಸ್ತರಗಳಲ್ಲಿ ವಿಶ್ಲೇಷಿಸಬಹುದು: ಒಂದು, ಸಮಾಜವಾದಿ ಸಿದ್ಧಾಂತದ ಸ್ತರ, ಎರಡು, ಭಾರತದ ಜಾತಿ ಪದ್ಧತಿಯ ಮೂಲಕ ಅಭಿವ್ಯಕ್ತವಾಗಿರುವ ಸಾಮಾಜಿಕ ಅಸಮಾನತೆಯ ಸ್ತರ ಹಾಗೂ ಮೂರು, ಅವರಿಬ್ಬರ ನಡುವಣ ರಾಜಕೀಯ ಸಂಬಂಧಗಳ ಸ್ತರ.

ಸಾಮಂತವಾದಿ ಸಮಾಜದ ವಿಮರ್ಶೆಯಿಂದ ತನ್ನ ಚಿಂತನೆಯನ್ನು ಪ್ರಾರಂಭ ಮಾಡಿ ಫ್ರೆಂಚ ಕ್ರಾಂತಿಕಾರಿ ಬ್ಯಾಬೂ ಸಮಾಜವಾದದ ಮೂಲತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳನ್ನು ತಲುಪಿದ. ಬಂಡವಾಳವಾದಿ ಸಮಾಜದ ವಿಮರ್ಶೆಯಿಂದ ತಮ್ಮ ಚಿಂತನೆಯನ್ನು ಪ್ರಾರಂಭ ಮಾಡಿದ ರಾಬರ್ಟ ಓವೆನ್, ಲೂಯಿ ಬ್ಲಾಂಕ್ ಮೊದಲಾದವರೂ ಕೂಡ ಸಮಾಜವಾದವನ್ನು ತಲುಪಿದರು. ಅಂಬೇಡ್ಕರ್ ಭಾರತದಲ್ಲಿ ಜಾತಿ ಪದ್ಧತಿಯ ಮೂಲಕ ಅಭಿವ್ಯಕ್ತವಾಗಿದ್ದ ಸಮಾಜಿಕ ಅಸಮಾನತೆಯ ನೋವನ್ನುಂಡವರಾಗಿದ್ದರು. ಇಂತಹ ಹೇಯ ಜಾತಿ ವ್ಯವಸ್ಥೆಯ ವಿಮರ್ಶೆಯ ಮೂಲಕ ತಮ್ಮ ಚಿಂತನೆಯನ್ನು ಪ್ರಾರಂಭ ಮಾಡಿದ ಅಂಬೇಡ್ಕರ್ ಕೂಡ ಸಮಾಜವಾದವನ್ನೇ ತಲುಪಿದರು.

ಬಂಡವಾಳವಾದ ಮತ್ತು ಕಮ್ಯುನಿಸಂಗಳ ಬಗೆಗಿನ ಅಂಬೇಡ್ಕರ ಅವರ ವಿಮರ್ಶೆ

ಅಂಬೇಡ್ಕರ್ ಅವರು ಬಂಡವಾಳವಾದವನ್ನು ಸಮರ್ಥಿಸುವ ಪ್ರಶ್ನೆಯೇ ಇರಲಿಲ್ಲ. ಕಮ್ಯುನಿಸ್ಟ ಸಿದ್ಧಾಂತವನ್ನೂ ಅವರು ಸಾರಾಸಗಟಾಗಿ ತಿರಸ್ಕರಿಸಿದರು. 1937ರಲ್ಲಿಯೇ ಅವರು ತಾನು ಖಂಡಿತವಾಗಿಯೂ ರಾಜಕೀಯ ಉದ್ದೇಶಗಳಿಗಾಗಿ ಕಾರ್ಮಿಕರನ್ನು ಬಳಸಿಕೊಳ್ಳುವ ಕಮ್ಯುನಿಸ್ಟರ ವಿರೋಧಿಯಾಗಿರುವುದಾಗಿ ಹೇಳಿದ್ದರು. ತಮ್ಮ ಈ ಅಭಿಪ್ರಾಯವನ್ನು ಅವರು ತಮ್ಮ ಬದುಕಿನ ಕೊನೆಯವರೆಗೂ ಉಳಿಸಿಕೊಂಡಿದ್ದರು. 1951ರ ಜನವರಿ 7ರಂದು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾಗೆ ನೀಡಿದ ಒಂದು ಸಂದರ್ಶನದಲ್ಲಿ ಅವರು 'ತಮ್ಮ ಪಕ್ಷ ಯಾವುದೇ ಸಂದರ್ಭದಲ್ಲಿ ಕಮ್ಯುನಿಸ್ಟ ಪಕ್ಷದ ಕಡೆಗೆ ವಾಲುವುದಿಲ್ಲ ಏಕೆಂದರೆ "ನಾನು ಕಮ್ಯುನಿಸಮ್‌ವನ್ನು ನಂಬುವುದಿಲ್ಲ ಎನ್ನುವ ಸರಳವಾದ ಕಾರಣಕ್ಕಾಗಿ" ಎಂದಿದ್ದರು.

ಅವರ ಈ ನಿಲುವಿಗೆ ಸೈದ್ಧಾಂತಿಕ ಕಾರಣದ ಜೊತೆಗೆ ವ್ಯಾವಹಾರಿಕ ಕಾರಣಗಳೂ ಇದ್ದವು. ಮುಂಬಯಿಯಲ್ಲಿ ತಾವು ಸ್ಪರ್ಧಿಸಿದ ಚುನಾವಣೆಯಲ್ಲಿ ಕಮ್ಯುನಿಸ್ಟರ ಅಪ್ರಾಮಾಣಿಕ ವಿಧಾನಗಳ ಅನುಭವ ಅವರಿಗಿತ್ತು. ಚುನಾವಣೆಯಲ್ಲಿ ಕಮ್ಯುನಿಸ್ಟರು ಇಬ್ಬರು ಸದಸ್ಯರು ಚುನಾಯಿತರಾಗಬಹುದಾದ ಚುನಾವಣಾ ಕ್ಷೇತ್ರಗಳಲ್ಲಿ ಒಬ್ಬ ಮತದಾರ ತನಗಿರುವ ಎರಡೂ ಮತಗಳನ್ನು ಒಬ್ಬ ಅಭ್ಯರ್ಥಿಗೇ ನೀಡಬಹುದೆಂದು ಸುಳ್ಳು ಪ್ರಚಾರ ಮಾಡಿದ್ದರು. ಇದರಿಂದಾಗಿ ಸಾವಿರಾರು ಮತಗಳು ನಿಷ್ಪ್ರಯೋಜಕವಾಗಿ ಅಂಬೇಡ್ಕರ್ ಹಾಗೂ ಸಮಾಜವಾದಿ ಅಶೋಕ ಮೆಹತಾ ಇಬ್ಬರೂ ಸೋತಿದ್ದರು.

ಕಮ್ಯುನಿಸ್ಟ್ ಸಿದ್ಧಾಂತವನ್ನು ತಿರಸ್ಕರಿಸುವಲ್ಲಿ ಅಂಬೇಡ್ಕರ್ ಅವರಿಗೆ ಇನ್ನೂ ಒಂದು ಕಾರಣವಿತ್ತು. "ಮಾರ್ಕ್ಸ್ ಹಾಗೂ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಬುದ್ಧನಲ್ಲಿ ಪರಿಪೂರ್ಣ ಉತ್ತರವಿದೆ ಎಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ' ಎಂದಿದ್ದರು ಅಂಬೇಡ್ಕರ್.

ಅಂಬೇಡ್ಕರ್ ಅವರ ಸಮಾಜವಾದದ ಪರಿಕಲ್ಪನೆ

ಸಮಾಜವಾದ ಎಂದರೇನು? ಭಾರತದ ಸಮಾಜವಾದಿ ಆಂದೋಲನದ ಪಿತಾಮಹರೆನಿಸಿಕೊಂಡ ಆಚಾರ್ಯ ನರೇಂದ್ರದೇವ ಹೇಳುತ್ತಾರೆ: "ಶೋಷಣೆ–ರಹಿತ ಸಮಾಜವನ್ನು ಕಟ್ಟುವ ಮೂಲಕ ಹಾಗೂ ಪ್ರಸ್ತುತ ಗುಲಾಮಗಿರಿ, ಅಸಮಾನತೆ ಹಾಗೂ ಅಸಹನೀಯತೆಗಳನ್ನು ತೊಡೆದು ಹಾಕುವ ಮೂಲಕ ಸಮಾಜವಾದ ನಿಜವಾದ

ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳನ್ನು ಪೋಷಿಸುವ ಉದ್ದೇಶವನ್ನು ಹೊಂದಿರುತ್ತದೆ". ನಾಗರಿಕ ಅಸಹಕಾರದಿಂದ, ಮಾರ್ಕ್ಸವಾದ ಹಾಗೂ ಜನತಾಂತ್ರಿಕ ಸಮಾಜವಾದಗಳ ಮೂಲಕ ಸರ್ವೋದಯದ ವರೆಗೆ ತಾವು ಕ್ರಮಿಸಿದ ಸೈದ್ಧಾಂತಿಕ ಪಯಣದ ಬಗ್ಗೆ ಬರೆಯುತ್ತ ಜಯಪ್ರಕಾಶ ನಾರಾಯಣರು ಹೇಳುತ್ತಾರೆ: "ನನ್ನ ಬದುಕಿನ ಪಯಣದ ದಾರಿಯನ್ನು ತೋರಿಸುತ್ತ ಜನತಾಂತ್ರಿಕ ಸಮಾಜವಾದದವರೆಗೆ ನನ್ನನ್ನು ಕರೆತಂದಿದ್ದ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳ ಅವೇ ಹಳೆಯ ತೋರುದೀಪಗಳು ನನ್ನ ಬದುಕಿನ ಪಯಣದ ಈ ತಿರುವಿನಲ್ಲಿಯೂ ನನ್ನನ್ನು ಮುಂದೆ ಕರೆದುಕೊಂಡು ಹೋದವು".

ಈ ಬಗ್ಗೆ ಅಂಬೇಡ್ಕರ್ ಅವರು ಏನು ಹೇಳುತ್ತಾರೆ? 'Annihilation of Caste' ಎಂಬ ತಮ್ಮ ಪ್ರಬಂಧದಲ್ಲಿ ಅವರು "ಜಾತಿಪದ್ಧತಿ ಬೇಡ ಎನ್ನುವುದಾದರೆ ನಿಮ್ಮ ಪ್ರಕಾರ ಆದರ್ಶ ಸಮಾಜ ಯಾವುದು ಎಂದು ಕೇಳಿದರೆ, ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳನ್ನು ಆಧರಿಸಿದ ಸಮಾಜವೇ ನನ್ನ ಪ್ರಕಾರ ಆದರ್ಶ ಸಮಾಜ ಎಂದು ಹೇಳುತ್ತೇನೆ" ಎನ್ನುತ್ತಾರೆ. ಸಮಾಜವಾದದ ಈ ಮೂಲ ತತ್ವಗಳೇ ಅಂಬೇಡ್ಕರ್ ಅವರ ಬದುಕಿನುದ್ದಕ್ಕೂ ಅವರ ಒತ್ತಾಸೆಗಳಾಗಿ ಉಳಿದುಕೊಂಡವು.

ಅಂಬೇಡ್ಕರ್ ಹಾಗೂ ಸಮಾಜವಾದಿಗಳಿಬ್ಬರೂ ಸ್ವಾತಂತ್ರ್ಯದ ಉದಾರವಾದಿ ಪರಿಕಲ್ಪನೆಯ ಬಗ್ಗೆ ವಿಮರ್ಶಾತ್ಮಕ ನಿಲುವು ಹೊಂದಿದ್ದರು. ಅಂಬೇಡ್ಕರ್ ಅವರು ಸ್ವಾತಂತ್ರ್ಯದ ಅರ್ಥವ್ಯಾಪ್ತಿಯನ್ನು ಬರಿ ಬದುಕಿನ, ಸಂರಕ್ಷಣೆಯ ಹಾಗೂ ಆಸ್ತಿಯ ಸ್ವಾತಂತ್ರ್ಯಗಳಿಗೆ ಸೀಮಿತಗೊಳಿಸುವುದನ್ನು ವಿರೋಧಿಸುತ್ತಿದ್ದರು.

ಸಮಾನತೆಯೂ ಅಂಬೇಡ್ಕರ್ ಅವರಿಗೆ ಪ್ರಿಯವಾದ ಆದರ್ಶವಾಗಿತ್ತು. ಸಮಾನತೆಯ ಬಗ್ಗೆ ಅಂಬೇಡ್ಕರ್ ಅವರು "ಸಮಾನತೆ ಎನ್ನುವುದು ಫೆಂಚ್ ಕ್ರಾಂತಿಯ ಘೋಷಣೆಯ ಒಂದು ಅತ್ಯಂತ ವಿವಾದಾತ್ಮಕ ಭಾಗವಾಗಿತ್ತು. ಸಮಾನತೆ ಎನ್ನುವುದು ಒಂದು ಕಲ್ಪನೆಯಾಗಿರಬಹುದು. ಆದರೂ ಕೂಡ ಇದನ್ನು ಒಂದು ಮೂಲಭೂತ ತತ್ವ ಎಂದು ಒಪ್ಪಲೇ ಬೇಕು. ಮನುಷ್ಯರು (ಹಲವಾರು) ವಿಷಯಗಳಲ್ಲಿ ನಿಸ್ಸಂದೇಹವಾಗಿ ವಿಭಿನ್ನವಾಗಿರುತ್ತಾರೆ. ಆದರೆ ಪ್ರಶ್ನೆ ಏನೆಂದರೆ, ಅವರು ವಿಭಿನ್ನವಾಗಿರುವುದರಿಂದ ಅವರನ್ನು ನಾವು ಅಸಮಾನರಾಗಿ ಕಾಣಬೇಕೇ ಎನ್ನುವುದು. ಈ ಪ್ರಶ್ನೆಯನ್ನು ಸಮಾನತೆಯ ವಿರೋಧಿಗಳು ಉತ್ತರಿಸಲೇ ಬೇಕು" ಎನ್ನುತ್ತಾರೆ.

ಅಂಬೇಡ್ಕರ್ ಇಂಗ್ಲೆಂಡಿನಲ್ಲಿ ಇದ್ದಾಗ ಲೇಬರ್ ಪಕ್ಷದ ಹಾಗೂ ಫೇಬಿಯನ್ ಸಮಾಜವಾದಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಜವಾಹರಲಾಲ ನೆಹರೂ ಅವರು ಸಂವಿಧಾನ ಸಭೆಯ ಅಂಗೀಕಾರಕ್ಕಾಗಿ ಸಿದ್ಧಪಡಿಸಿದ 'ಉದ್ದೇಶಗಳ ಹೇಳಿಕೆ'ಯನ್ನು, ಅದು ಪ್ರಮುಖ ಸಮಾಜವಾದಿ ಕಾರ್ಯಕ್ರಮಗಳನ್ನು ಒಳಗೊಂಡಿರಲಿಲ್ಲ ಎಂಬ ಕಾರಣಕ್ಕಾಗಿ ಅವರು ಟೀಕಿಸಿದ್ದರು ಎಂದು ಐ.ಎ.ವಿದ್ಯಾಸಾಗರ ಅವರು ಹೇಳುತ್ತಾರೆ. 1951ರ ನವೆಂಬರಿನ 25ರಂದು ಮುಂಬಯಿಯ ಶಿವಾಜಿ ಪಾರ್ಕಿನಲ್ಲಿ ನಡೆದ ಬೃಹತ್ ಸಭೆಯಲ್ಲಿ ಅಂಬೇಡ್ಕರ್ ಅವರು, ಭಾರತದ ಒಳಿತಿಗಾಗಿ ಕಾಂಗ್ರೆಸ್ಸಿನಿಂದ ರಾಜೀನಾಮೆ ನೀಡಿ ಸಮಾಜವಾದಿಗಳೊಡನೆ ಹಾಗೂ ತಮ್ಮಂತಹವರೊಡನೆ ಕೈಜೋಡಿಸಬೇಕೆಂದು ನೆಹರೂ ಅವರನ್ನು ಆಹ್ವಾನಿಸಿದ್ದರು.

1936ರಲ್ಲಿ ಬರೆದ 'Annihilation of Caste'ದಿಂದ ಪ್ರಾರಂಭಿಸಿ, ಸ್ವತಂತ್ರ ಕಾರ್ಮಿಕ ಪಕ್ಷದ ಮೂಲಕ ಮುಂದುವರಿಯುತ್ತ, ಭಾರತದ ಸಂವಿಧಾನವನ್ನು ರಚಿಸುವ ವರೆಗೆ ಹಾಗೂ ಕೊನೆಗೆ ರಿಪಬ್ಲಿಕನ್ ಪಕ್ಷದ ಸ್ಥಾಪನೆಯ ವರೆಗೆ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಯ ಈ ಸಮಾಜವಾದಿ ಆದರ್ಶಗಳೇ ಅಂಬೇಡ್ಕರ್ ಅವರಿಗೂ ದಾರಿದೀಪಗಳಾಗಿದ್ದವು. ಅಂಬೇಡ್ಕರ್ ಅವರು ಬ್ರಾಹ್ಮಣ್ಯವನ್ನೂ ಸಮಾಜವಾದಿ ಆದರ್ಶಗಳ ನೆಲೆಯಲ್ಲಿಯೇ ನಿರ್ವಚಿಸಿದರು. 1938ರ ಫೆಬ್ರುವರಿ 12 ಹಾಗೂ 13ರಂದು ನಡೆದ ರೈಲ್ವೇ ಕಾರ್ಮಿಕರ ಒಂದು ಸಮ್ಮೇಳನದಲ್ಲಿ ಅವರು "ಬ್ರಾಹ್ಮಣ್ಯ ಎಂದರೆ ನಾನು ಒಂದು ಸಮುದಾಯದ ರೂಪದಲ್ಲಿ ಬ್ರಾಹ್ಮಣರಿಗಿರುವ ಅಧಿಕಾರಗಳು, ಸೌಲಭ್ಯಗಳು ಹಾಗೂ ವಿಶೇಷಾಸಕ್ತಿಗಳು ಎಂದು ಅರ್ಥೈಸುವುದಿಲ್ಲ. ನನ್ನ ಪ್ರಕಾರ ಬ್ರಾಹ್ಮಣ್ಯ ಎಂದರೆ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಯ ಸತ್ವದ ನಿರಾಕರಣೆ" ಎಂದಿದ್ದರು.

ಆದರೆ ಸಮಾಜವಾದಿಗಳು ಸಮಾಜವಾದದ ಈ ತತ್ವಗಳನ್ನು ಫ್ರೆಂಚ್ ಕ್ರಾಂತಿಯಿಂದ ಪಡೆದಿದ್ದರೆ, ಮಹಾತ್ಮಾ ಗಾಂಧಿ ಈ ತತ್ವಗಳನ್ನು ಹಿಂದೂ ಧರ್ಮದಲ್ಲಿ, ಈಶೋಪನಿಷತ್ತಿನಲ್ಲಿ, ಭಗವದ್ಗೀತೆಯಲ್ಲಿ ಕಂಡುಕೊಂಡಿದ್ದರು. ಆದರೆ "ನನ್ನ ಸಾಮಾಜಿಕ ತತ್ವಚಿಂತನೆ ಈ ಮೂರು ಶಬ್ದಗಳಲ್ಲಿ ಸಮಾಹಿತವಾಗಿದೆ ಎಂದು ಖಂಡಿತವಾಗಿಯೂ ಹೇಳಬಹುದು. ಆದರೆ ನಾನು ಈ ತತ್ವಗಳನ್ನು ಫ್ರೆಂಚ್ ಕ್ರಾಂತಿಯಿಂದ ಪಡೆದುಕೊಂಡಿದ್ದೇನೆಂದು ಯಾರೂ ಭಾವಿಸಬಾರದು. ನಾನು ಹಾಗೆ ಪಡೆದಿಲ್ಲ. ನಾನು ಇವುಗಳನ್ನು ನನ್ನ ಒಡೆಯ, ಬುದ್ಧನಿಂದ ಪಡೆದ್ದೇನೆ" ಎಂದಿದ್ದರು ಅಂಬೇಡ್ಕರ್.

1949ರ ನವೆಂಬರ್ 25ರಂದು ಸಂವಿಧಾನದ ಕರಡನ್ನು ಸಂವಿಧಾನಸಭೆಯ ಅಂಗೀಕಾರಕ್ಕಾಗಿ ಮಂಡಿಸುತ್ತ ಅಂಬೇಡ್ಕರ್ ಸಮಾಜವಾದದ ತಮ್ಮ ಸಿದ್ಧಾಂತವನ್ನು ವಿವರಿಸಿದ್ದರು. "ನಾವು ಬರಿ ರಾಜಕೀಯ ಜನತಂತ್ರದಿಂದ ತೃಪ್ತರಾಗಬಾರದು. ಅದನ್ನು ಸಾಮಾಜಿಕ ಜನತಂತ್ರವನ್ನಾಗಿಯೂ ಮಾಡಬೇಕು. ಸಾಮಾಜಿಕ ಜನತಂತ್ರದ ಬುನಾದಿ ಇಲ್ಲದೇ ಬರಿ ರಾಜಕೀಯ ಜನತಂತ್ರ ಬಹಳ ದಿನ ಉಳಿಯಲಾರದು. ಸಾಮಾಜಿಕ ಜನತಂತ್ರ ಎಂದರೆ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಗಳನ್ನು ಬದುಕಿನ ತತ್ವಗಳೆಂದು ಒಪ್ಪಿಕೊಳ್ಳುವ ಬದುಕಿನ ವಿಧಾನ. ಈ ತತ್ವಗಳನ್ನು ಪರಸ್ಪರ ನಿರಪೇಕ್ಷ ತತ್ವಗಳೆಂದು ಪರಿಗಣಿಸಲಾಗದು. ಇವುಗಳಲ್ಲಿ ಒಂದನ್ನು ಮತ್ತೊಂದರಿಂದ ಬೇರ್ಪಡಿಸುವುದೆಂದರೆ ಜನತಂತ್ರದ ಉದ್ದೇಶವನ್ನೇ ಹುಸಿಗೊಳಿಸಿದ ಹಾಗೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ, ಸಮಾನತೆಯನ್ನು ಸ್ವಾತಂತ್ರ್ಯದಿಂದ ಬೇರ್ಪಡಿಸಲಾಗದು. ಹಾಗೆಯೇ ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಸಹೋದರಭಾವದಿಂದ ಬೇರ್ಪಡಿಸಲಾಗದು. ಸಮಾನತೆ ಇಲ್ಲದೇ ಸ್ವಾತಂತ್ರ್ಯ ಬಹುಜನರ ಮೇಲೆ ಹಲವರ ಆಧಿಪತ್ಯವನ್ನು ಸ್ಥಾಪಿಸುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆ ವೈಯಕ್ತಿಕ ಕಾರ್ಯಾಸಕ್ತಿಯನ್ನು ಹೊಸಕಿ ಹಾಕುತ್ತದೆ. ಸಹೋದರಭಾವವಿಲ್ಲದೇ ಸ್ವಾತಂತ್ರ್ಯ ಹಾಗೂ ಸಮಾನತೆಗಳು ಸ್ವಾಭಾವಿಕ ಕ್ರಿಯೆಗಳಾಗಲಾರವು. ಅವುಗಳನ್ನು ಕಾರ್ಯಗತಗೊಳಿಸಲು ಪೊಲೀಸರ ಆವಶ್ಯಕತೆ ಉಂಟಾದೀತು. ಭಾರತದ ಸಮಾಜದಲ್ಲಿ ಇವುಗಳಲ್ಲಿ ಎರಡರ ಸಂಪೂರ್ಣ ಕೊರತೆ ಇದೆ. ಇವುಗಳಲ್ಲಿ ಒಂದು ಸಮಾನತೆ. ಭಾರತದಲ್ಲಿ ಶ್ರೇಣೀಕೃತ ಅಸಮಾನತೆಯ ತತ್ವವನ್ನು ಆಧರಿಸಿದ ಸಮಾಜವಿದೆ, ಇದರಲ್ಲಿ ಹಲವರಿಗೆ ಉನ್ನತ ಸ್ಥಾನವಿದ್ದರೆ ಇನ್ನೂ ಹಲವರಿಗೆ ಅವನತಿಯ ಸ್ಥಾನವಿದೆ. ಆರ್ಥಿಕ ಸ್ತರದಲ್ಲಿ ಹಲವರಲ್ಲಿ ಹೇರಳವಾದ ಸಂಪತ್ತಿದ್ದರೆ ಇನ್ನೂ ಹಲವರು ಅತ್ಯಂತ ನಿರ್ಗತಿಕ ಬದುಕನ್ನು ಬದುಕುತ್ತಿದ್ದಾರೆ. 1950ರ ಜನವರಿ 26ರಂದು ನಾವು ವಿರೋಧಾಭಾಸಗಳಿಂದ ಕೂಡಿದ ಬದುಕನ್ನು ಪ್ರವೇಶಿಸಲಿದ್ದೇವೆ.

"ರಾಜಕೀಯ ಜೀವನದಲ್ಲಿ ನಾವು ಸಮಾನತೆಯನ್ನು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆಯನ್ನು ಹೊಂದಲಿದ್ದೇವೆ. ಇಂತಹ ವಿರೋಧಾಭಾಸದ ಬದುಕನ್ನು ನಾವು ಇನ್ನೂ ಎಷ್ಟು ದಿನ ಬದುಕಬೇಕು? ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಬದುಕಿನಲ್ಲಿ ಇನ್ನೂ ಎಷ್ಟು ದಿನ ನಾವು ಸಮಾನತೆಯನ್ನು ನಿರಾಕರಿಸುತ್ತಿರಬೇಕು? ಇದನ್ನು ನಾವು ಬಹಳ ದಿನ ನಿರಾಕರಿಸುತ್ತ ಹೋದರೆ ರಾಜಕೀಯ ಜನತಂತ್ರ ಅಪಾಯಕ್ಕೆ ಒಳಗಾಗುತ್ತದೆ. ಸಾಧ್ಯವಾದಷ್ಟು ಬೇಗನೇ ನಾವು ಈ ವಿರೋಧಾಭಾಸವನ್ನು ಕೊನೆಗೊಳಿಸದೇ ಹೋದರೆ ಅಸಮಾನತೆಯಿಂದ ಬಳಲುತ್ತಿರುವವರು ಈ ಸಂವಿಧಾನ ಸಭೆ ಕಷ್ಟಪಟ್ಟು ರಚಿಸಿರುವ ರಾಜಕೀಯ ಜನತಂತ್ರದ ಸಂರಚನೆಯನ್ನೇ ನಷ್ಟಪಡಿಸಿಯಾರು" ಎಂದಿದ್ದರು.

> ಸಾಮಾಜಿಕ-ಆರ್ಥಿಕ ಕಾರಣಗಳೇ ಜಾತಿಪದ್ಧತಿಯ ಮೂಲದಲ್ಲಿರುವುದಾಗಿ ಪರಿಗಣಿಸಿದ ಸಮಾಜವಾದಿಗಳು ಜಾತಿ ಪದ್ಧತಿಯನ್ನು ಕೊನೆಗೊಳಿಸಲು ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳನ್ನು ಪ್ರತಿಪಾದಿಸಿದರು. ಆದರೆ ಧರ್ಮವೇ ಜಾತಿ ಪದ್ಧತಿಯ ಮೂಲದಲ್ಲಿರುವುದಾಗಿ ನಂಬಿದ ಅಂಬೇಡ್ಕರ್ ಹಿಂದೂ ಧರ್ಮವನ್ನು ಪರಿಷ್ಕರಿಸಬೇಕೆಂದು ಹೇಳಿದರು.

ಜಾತಿಪದ್ಧತಿಯ ಬಗ್ಗೆ ಸಮಾಜವಾದಿಗಳ ವಿಚಾರಗಳು

ಪಶ್ಚಿಮದ ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದರೂ ಭಾರತದ ಸಮಾಜವಾದಿಗಳು, ಭಾರತದಲ್ಲಿ ಆರ್ಥಿಕ ಅಸಮಾನತೆಗಳಲ್ಲದೇ ಸಾಮಾಜಿಕ ಅಸಮಾನತೆಗಳಿದ್ದುದನ್ನೂ, ಅದಕ್ಕೆ ಹಲವಾರು ಆಯಾಮಗಳಿದ್ದುದನ್ನೂ ಹಾಗೂ ಅವುಗಳಲ್ಲಿ ಮೇಲ್ಜಾತಿ ಹಾಗೂ ಕೆಳಜಾತಿಗಳೆಂಬ ತಾರತಮ್ಯ ಇರುವ ಜಾತಿಗಳ 'ವ್ಯವಸ್ಥೆ' ಅತ್ಯಂತ ಪ್ರಮುಖವಾದುದಾಗಿತ್ತು ಎನ್ನುವುದನ್ನೂ ಗುರುತಿಸಿದ್ದರು. 1947ರಲ್ಲಿ ಅಂಗೀಕರಿಸಲಾದ ಸಮಾಜವಾದಿ ಪಕ್ಷದ ನೀತಿ ನಿರೂಪಣೆ 'ಜಾತಿ' ಎಂಬ ಶೀರ್ಷಿಕೆಯಡಿಯಲ್ಲಿ "ಭಾರತದಲ್ಲಿ, ಆರ್ಥಿಕ ಅಸಮಾನತೆಗಳಲ್ಲದೇ ವಿಶೇಷವಾಗಿ ಒಂದು ಕೋಮಿನಲ್ಲಿ, ಹಿಂದೂಗಳಲ್ಲಿ, ಸಾಮಾಜಿಕ ಅಸಮಾನತೆಗಳೂ ಇವೆ. ಜಾತಿ ವ್ಯವಸ್ಥೆ ಸಮಾಜ-ವಿರೋಧಿಯೂ, ಅಜನತಾಂತ್ರಿಕವೂ ಹಾಗೂ ನಿರಂಕುಶಪರವೂ ಆಗಿರುತ್ತದೆ.

ಯಾಕೆಂದರೆ ಅದು ಜನರನ್ನು ಉಚ್ಚ ಹಾಗೂ ನೀಚ, ಸ್ಪೃಶ್ಯ ಹಾಗೂ ಅಸ್ಪೃಶ್ಯ, ಎಂದೆಲ್ಲಾ ವಿಭಜಿಸುತ್ತದೆ, ಮಾನವನ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಬಾಧಕವಾಗುತ್ತದೆ. ಸಮಾಜವಾದಿ ಭಾರತದಲ್ಲಿ ಈ ವ್ಯವಸ್ಥೆ ಇರಲಾಗದು" ಎಂದು ಹೇಳಿತ್ತು.

ಸಮಾಜವಾದಿಗಳು ತಯಾರಿಸಿದ ಪರ್ಯಾಯ ಸಂವಿಧಾನದಲ್ಲಿ "ಹರಿಜನರಿಗೆ ಶೈಕ್ಷಣಿಕ ಪ್ರಗತಿ ಸಾಧಿಸಲು ವಿಶೇಷ ಅವಕಾಶಗಳನ್ನು ನೀಡಲಾಗಿದೆ. ಅವರಿಗಾಗಿ ವಿಶೇಷ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆಯಲ್ಲದೇ ಸರಕಾರ ಹಾಗೂ ಹಲವಾರು ಖಾಸಗಿ ಸಂಘಟನೆಗಳು ಅವರಿಗೆ ಉದಾರವಾಗಿ ಶುಲ್ಕ ವಿನಾಯತಿಗಳನ್ನೂ ವಿದ್ಯಾರ್ಥಿವೇತನಗಳನ್ನೂ ನೀಡುತ್ತಿವೆ. ಇವೆಲ್ಲವೂ ಅವರ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅವರಿಗಾಗಿ ಪ್ರಾರಂಭಿಸಲಾಗಿರುವ ಪ್ರತ್ಯೇಕ ಶಾಲೆಗಳು ಸಾಮಾಜಿಕ ವಿಲೀನೀಕರಣಕ್ಕೆ ಬಾಧಕಗಳಾಗಿವೆ. ಹರಿಜನರಿಗೆ ಸಾಮಾನ್ಯ ಸಾರ್ವಜನಿಕ ಶಾಲೆಗಳಲ್ಲಿಯೇ ಶಿಕ್ಷಣವನ್ನು ನೀಡಬೇಕು. ಆದರೆ ಅವರಿಗೆ ವಿಶೇಷ ಶುಲ್ಕವಿನಾಯತಿಗಳನ್ನೂ ವಿದ್ಯಾರ್ಥಿವೇತನಗಳನ್ನೂ ಕೊಡಬೇಕು. ಅಸ್ಪೃಶ್ಯತೆಯನ್ನು ಅದರ ಎಲ್ಲಾ ಸ್ವರೂಪಗಳಲ್ಲಿ ನಿಷೇಧಿಸಿದ ಮೇಲೆ ಪ್ರತ್ಯೇಕ ಶಾಲೆಗಳ ಆವಶ್ಯಕತೆ ಇರುವುದಿಲ್ಲ" ಎಂದು ಹೇಳಿತ್ತು.

"ಎಲ್ಲಾ ರೀತಿಯ ಸಮಾನತೆಯ ಬಗೆಗಿನ ಸಂವೈಧಾನಿಕ ಭರವಸೆಗಳು, ಮೂಲ ಬುಡಕಟ್ಟು ಜನಾಂಗಗಳಿಗೆ ಹಾಗೂ ಇನ್ನಿತರ ಹಿಂದುಳಿದ ವರ್ಗಗಳಿಗೆ ಅವರ ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗಾಗಿ ವಿಶೇಷ ಸೌಲಭ್ಯಗಳನ್ನು ಕೊಡುವ ಜವಾಬ್ದಾರಿಯಿಂದ ಸರಕಾರವನ್ನು ಮುಕ್ತಗೊಳಿಸುವುದಿಲ್ಲ. ಇಂತಹ ಸೌಲಭ್ಯಗಳಿಲ್ಲದೇ ಅವರು ನಿಜವಾದ ಸಮಾನತೆಯನ್ನು ಸಾಧಿಸಲಾರರು ಹಾಗೂ ಸಂವಿಧಾನ ಅವರಿಗೆ ನೀಡುವ ಬರಿ



ವೈಧಾನಿಕ ಸಮಾನತೆ ನಕಾರಾತ್ಮಕ ಉದ್ದೇಶವನ್ನಷ್ಟೇ ಸಾಧಿಸಬಲ್ಲದು" ಎಂದೂ ಅದು ವಿವರಿಸಿತು.

1952ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾಜವಾದಿಗಳು ಬಿಡುಗಡೆ ಮಾಡಿದ We Build for Socialism ಎಂಬ ತಮ್ಮ ಚುನಾವಣಾ ಘೋಷಣಾ ಪತ್ರದಲ್ಲಿ "ಭಾರತದ ಸಮಾಜವನ್ನು ಜಾತಿಗಳು ವಿಚ್ಛಿದ್ರಗೊಳಿಸಿವೆ. ಹಲವು ಜನರ ಗುಂಪುಗಳು ಆನುವಂಶಿಕ ವಿಶೇಷಾಧಿಕಾರಗಳನ್ನು ಅನುಭೋಗಿಸುತ್ತಿವೆ ಹಾಗೂ ಹಲವು ಗುಂಪುಗಳು ಆನುವಂಶಿಕವಾಗಿ ವಿಶೇಷಾಧಿಕಾರಗಳಿಂದ ವಂಚಿತವಾಗಿವೆ ಹಾಗೂ ತುಳಿಯಲ್ಪಟ್ಟಿವೆ. ಈ ಪರಂಪರಾಗತ ಗೋಡೆಗಳನ್ನು ಕೆಡವಿ ಹಾಕುವುದೇ ಸ್ವಾತಂತ್ರ್ಯದ ಅರ್ಥವಾಗಬೇಕು. ಸ್ವಾತಂತ್ರ್ಯದ ಅರ್ಥ ಪ್ರತಿಭೆಯ ಮುಕ್ತ ಚಲನೆಯಾಗಬೇಕು. ಸಮಾಜವಾದಿ ಪಕ್ಷ ಈ ಕೆಳಗಿನ ಕಾರ್ಯಕ್ರಮಗಳನ್ನು ಮುಂದಿಡುತ್ತದೆ: ... ಹತ್ತು ವರ್ಷಗಳ ವರೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೈಕ್ಷಣಿಕ ಅವಕಾಶಗಳನ್ನು ನೀಡುವ ರೂ. 100 ಕೋಟಿಯ ಒಂದು ವಿಸ್ತೃತ ಶೈಕ್ಷಣಿಕ ಕಾರ್ಯಕ್ರಮ ಮುಂದುವರಿದ ಹಾಗೂ ಹಿಂದುಳಿದ ಜಾತಿಗಳ ನಡುವಣ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಂದರವನ್ನು ತುಂಬುತ್ತದೆ. ಅದು ಹಿಂದುಳಿದವರು ಆನುವಂಶಿಕ ವೃತ್ತಿಗಳಿಗೇ ಅಂಟಿಕೊಂಡಿರುವಂತೆ ಮಾಡುವ ಅನಿವಾರ್ಯತೆಯನ್ನೂ ನಿವಾರಿಸುತ್ತದೆ" ಎಂದು ಹೇಳಿತ್ತು.

ಮಹಾತ್ಮಾ ಗಾಂಧೀಜಿಯವರು ತಮ್ಮ 'ಹರಿಜನ' ಪತ್ರಿಕೆಯನ್ನು ಪ್ರಾರಂಭಿಸಿದಾಗ ಅಂಬೇಡ್ಕರ್ ಅವರು ಅದಕ್ಕೊಂದು ಸಂದೇಶವನ್ನು ಕಳುಹಿಸಬೇಕೆಂದು ಕೋರಿದ್ದರು. ಸಂದೇಶವನ್ನು ಕಳುಹಿಸಲು ನಿರಾಕರಿಸಿದ ಅಂಬೇಡ್ಕರ್ "ಅಸ್ಪೃಶ್ಯರು ಜಾತಿವ್ಯವಸ್ಥೆಯ ಒಂದು ಉಪ-ಉತ್ಪಾದನೆಯಾಗಿದ್ದಾರೆ. ಜಾತಿವ್ಯವಸ್ಥೆಯ ನಿರ್ಮೂಲನದ ಹೊರತು ಬೇರಾವುದೂ ಅವರನ್ನು ಮುಕ್ತಗೊಳಿಸಲಾರದು. ಬರಲಿರುವ ಹೋರಾಟದಲ್ಲಿ ಹಿಂದೂಗಳ ಅಸ್ತಿತ್ವ ಉಳಿಯಬೇಕಾದರೆ ಹಿಂದೂ ಧರ್ಮದಿಂದ ಈ ಹೇಸಿಕೆ ಹುಟ್ಟಿಸುವ ಹಾಗೂ ದುರಾಚಾರಿ ಸಿದ್ಧಾಂತವನ್ನು ಕಿತ್ತುಹಾಕದೇ ಬೇರೆ ದಾರಿಯೇ ಇಲ್ಲ" ಎಂದು ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಗಾಂಧಿ "ಅಸ್ಪೃಶ್ಯತೆ ಜಾತಿಪದ್ಧತಿಯ ಒಂದು ಉತ್ಪಾದನೆಯಲ್ಲ, ಆದರೆ ಉಚ್ಚ ಹಾಗೂ ನೀಚ ಎಂಬ ಈ ಭೇದ-ಭಾವ ಹಿಂದೂ ಧರ್ಮದಲ್ಲಿ ನುಸುಳಿಕೊಂಡಿದೆ ಹಾಗೂ ಅದಕ್ಕೆ ತುಕ್ಕು ಹಿಡಿಸುತ್ತಿದೆ. ಅಸ್ಪೃಶ್ಯತೆಯ ಮೇಲಿನ ದಾಳಿ ಈ ಉಚ್ಚ ಹಾಗೂ ನೀಚ ಎಂಬ ಭೇದ-ಭಾವದ ಮೇಲಿನ ದಾಳಿಯಾಗಿದೆ" ಎಂದಿದ್ದರು. ಈ ನಿಲುವು ಸಮಾಜವಾದಿಗಳ ನಿಲುವಿಗೆ ಹತ್ತಿರವಾಗಿತ್ತು.

ಅಂಬೇಡ್ಕರ್ ಮತ್ತು ಸಮಾಜವಾದಿಗಳು

ಭಾರತದಲ್ಲಿ ಸಮಾಜವಾದಿಗಳು ಸ್ವತಂತ್ರ ಭಾರತದಲ್ಲಿ ಸಮಾಜವಾದಿ ಸಮಾಜವನ್ನು ಕಟ್ಟಬೇಕೆಂದು ಹೇಳುತ್ತಲೂ ಬ್ರಿಟಿಷರ ವಿರುದ್ಧ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದರು, ಬಂಧನಕ್ಕೆ ಒಳಗಾದರು ಹಾಗೂ ಜೈಲುವಾಸವನ್ನೂ ಅನುಭವಿಸಿದರು. ಆದರೆ ತಮ್ಮ ದಲಿತ ಸಮುದಾಯದೊಂದಿಗೆ ಹಿಂದೂ ಸಮಾಜದಲ್ಲಿ ಪ್ರತ್ಯೇಕತೆಯನ್ನು ಅನುಭವಿಸಿದ ಅಂಬೇಡ್ಕರ್ ಅವರಿಗೆ ಬರಿ ರಾಜಕೀಯ ಸ್ವಾತಂತ್ರ್ಯ ಅರ್ಥಶೂನ್ಯವಾಗಿತ್ತು. ಆದುದರಿಂದ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದರೂ ಸ್ವಾತಂತ್ರ್ಯ ಹೋರಾಟದಿಂದ ದೂರವಿದ್ದರು. ಅವರ ನಿಲುವು "ಅಸ್ಪೃಶ್ಯ ಸಮುದಾಯದಲ್ಲಿ ಹುಟ್ಟಿರುವುದರಿಂದ ಅದರ ಹಿತಾಸಕ್ತಿಗಳಿಗಾಗಿ ದುಡಿಯುವುದು ನನ್ನ ಮೊದಲ ಕರ್ತವ್ಯ ಎಂದು ನಾನು ಬಗೆಯುತ್ತೇನೆ ಹಾಗೂ ಇಡೀ ಭಾರತದ ಬಗೆಗಿನ ನನ್ನ ಕರ್ತವ್ಯಕ್ಕೆ ಎರಡನೆಯ ಆದ್ಯತೆ" ಎನ್ನುವುದಾಗಿತ್ತು. ಸಾಮಾಜಿಕ ಸಮಾನತೆಯ ಬಗೆಗಿನ ತಮ್ಮ ಬದ್ಧತೆಯಿಂದಾಗಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ಜೊತೆಗಿರುವ ಎದೆಗಾರಿಕೆ ತೋರಿದರು, ಅದೇ ಸಾಮಾಜಿಕ ಸಮಾನತೆಯ ಬದ್ಧತೆಯಿಂದಾಗಿ ಮಹಾತ್ಮಾ ಗಾಂಧಿ ಅಂಬೇಡ್ಕರ್ ಅವರನ್ನು ಸಂವಿಧಾನ ಸಭೆಗೆ ಸದಸ್ಯರನ್ನಾಗಿ ಮಾಡುವಲ್ಲಿಯೂ, ನಂತರ ಸ್ವತಂತ್ರ ಭಾರತದ ಪ್ರಥಮ ಕಾನೂನು ಸಚಿವರನ್ನಾಗಿ ಮಾಡುವಲ್ಲಿಯೂ ತಮ್ಮ ಎದೆಗಾರಿಕೆ ತೋರಿದರು.

ಹೀಗೆ ಸ್ವಾತಂತ್ರ್ಯ ಹೋರಾಟ ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಅವರ ನಡುವೆ ಭಿನ್ನಾಭಿಪ್ರಾಯದ ಅಂಶವಾಗಿದ್ದರೆ ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆ ಹಾಗೂ ವಿಶೇಷವಾಗಿ ಜಾತಿವ್ಯವಸ್ಥೆಯ ನಿರ್ಮೂಲನ ಅವರಲ್ಲಿ ಒಟ್ಟಾಭಿಪ್ರಾಯದ ಬಿಂದುವಾಗಿತ್ತು. ಜಾತಿಪದ್ಧತಿಯನ್ನು ಕೊನೆಗೊಳಿಸುವ ಬಗೆಗಿನ ಅವರ ದೃಷ್ಟಿಕೋನ ಹಾಗೂ ವಿಧಾನಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯವಿದ್ದರೂ ಅವರಿಬ್ಬರ ಗುರಿ ಒಂದೇ ಆಗಿತ್ತು – ಹುಟ್ಟಿನ ಆಧಾರದ ಮೇಲೆ ಮಾಡಲಾಗುವ ತಾರತಮ್ಯವನ್ನು ಕೊನೆಗಾಣಿಸುವುದು. ಆದುದರಿಂದಲೇ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅವರಿಬ್ಬರೂ ಪರಸ್ಪರ ದೂರವಿದ್ದರೂ, ಸ್ವಾತಂತ್ರ್ಯ ಬಂದ ನಂತರ ಅವರಿಬ್ಬರೂ ಪರಸ್ಪರ ರಾಜಕೀಯವಾಗಿ ಸಹಕರಿಸಿದರು, ಚುನಾವಣೆಗಳಲ್ಲಿಯೂ ಒಟ್ಟಾಗಿ ಸ್ಪರ್ಧಿಸಿದರು. ಆದರೂ ಅವರ ನಡುವೆ ಹಲವು ಮೂಲಭೂತ ಭಿನ್ನಾಭಿಪ್ರಾಯಗಳಿದ್ದವು.

ಅಂಬೇಡ್ಕರ್ ಹಾಗೂ ಸಮಾಜವಾದಿಗಳ ನಡುವೆ ತೀವ್ರ ಭಿನ್ನಾಭಿಪ್ರಾಯಕ್ಕೆ ಎಡೆಮಾಡಿದ ಒಂದು ಅಂಶವೆಂದರೆ ಸ್ವತಂತ್ರ ಭಾರತದಲ್ಲಿ ಗ್ರಾಮ ಪಂಚಾಯತಿಗಳ ಸ್ವರೂಪ ಹಾಗೂ ಪಾತ್ರ. ಸಮಾಜವಾದಿಗಳು ಗ್ರಾಮ ಪಂಚಾಯತಿಗಳನ್ನು ವಿಕೇಂದ್ರೀಕೃತ ಜನತಂತ್ರದ ಘಟಕಗಳೆಂದು ಪರಿಭಾವಿಸಿದರು. ಅವು ಹೊಸ ಭಾರತವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಹಾಗೂ ಆಡಳಿತ ಹಾಗೂ ಅಭಿವೃದ್ಧಿಗಳನ್ನು ಜನತೆಯ ಮನೆಗಳ ಬಾಗಿಲಿಗೆ ತೆಗೆದುಕೊಂಡು ಹೋಗುವಲ್ಲಿ ಮಹತ್ವದ ಪಾತ್ರ ವಹಿಸುವುದಾಗಿ

ಸ್ವಾತಂತ್ರ್ಯ ಹೋರಾಟ ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಅವರ ನಡುವೆ ಭಿನ್ನಾಭಿಪ್ರಾಯದ ಅಂಶವಾಗಿದ್ದರೆ ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆ ಹಾಗೂ ವಿಶೇಷವಾಗಿ ಜಾತಿವ್ಯವಸ್ಥೆಯ ನಿರ್ಮೂಲನ ಅವರಲ್ಲಿ ಒಟ್ಟಾಭಿಪ್ರಾಯದ ಬಿಂದುವಾಗಿತ್ತು. ಜಾತಿಪದ್ಧತಿಯನ್ನು ಕೊನೆಗೊಳಿಸುವ ಬಗೆಗಿನ ಅವರ ದೃಷ್ಟಿಕೋನ ಹಾಗೂ ವಿಧಾನಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯವಿದ್ದರೂ ಅವರಿಬ್ಬರ ಗುರಿ ಒಂದೇ ಆಗಿತ್ತು – ಹುಟ್ಟಿನ ಆಧಾರದ ಮೇಲೆ ಮಾಡಲಾಗುವ ತಾರತಮ್ಯವನ್ನು ಕೊನೆಗಾಣಿಸುವುದು.

ಪರಿಕಲ್ಪಿಸಿದರು. ಇದಕ್ಕೆ ಎದುರಾಗಿ ಕರಡು ಸಂವಿಧಾನವನ್ನು ಸಂವಿಧಾನ ಸಭೆಯ ಅಂಗೀಕಾರಕ್ಕಾಗಿ ಪ್ರಸ್ತುತ ಪಡಿಸುವ ಸಂದರ್ಭದಲ್ಲಿ ಅಂಬೇಡ್ಕರ್ ಹೀಗೆ ಹೇಳಿದ್ದರು: "ಈ ಗ್ರಾಮ ಗಣರಾಜ್ಯಗಳು ಭಾರತದ ಅವನತಿಗೆ ಹೊಣೆಯಾಗಿವೆ.. ..ಗ್ರಾಮ ಎಂದರೇನು, ಅದೊಂದು ಸ್ಥಳಾಭಿಮಾನದ ಬತ್ತುವ ಕುಳಿ, ಅಜ್ಞಾನದ ಸಂಕುಚಿತ ಮನೋಭಾವದ ಹಾಗೂ ಕೋಮುವಾದಿ ಭಾವನೆಗಳ ಗುಹೆ. ನಮ್ಮ ಸಂವಿಧಾನದ ಕರಡು ಗ್ರಾಮದ ಬದಲಾಗಿ ವ್ಯಕ್ತಿಯನ್ನು ಘಟಕವನ್ನಾಗಿ ಪರಿಗಣಿಸಿರುವುದರ ಬಗ್ಗೆ ನನಗೆ ಸಂತೋಷವಿದೆ." ಮೇಲ್ಜಾತಿಗಳು ಗ್ರಾಮ ಪಂಚಾಯತಿಗಳ ಮೇಲೆ ನಿಯಂತ್ರಣ ಪಡೆದು ಅಸ್ಪೃಶ್ಯರ ಮೇಲಿನ ಅನ್ಯಾಯ ಅತ್ಯಾಚಾರಗಳನ್ನು ಮುಂದುವರಿಸುತ್ತವೆ ಎಂದು ಬಹುಶಃ ಅಂಬೇಡ್ಕರ್ ಆತಂಕಪಟ್ಟುಕೊಂಡಿದ್ದರು.

ಸಮಾಜವಾದಿ ಆದರ್ಶಗಳನ್ನು ಸಾಕಾರಗೊಳಿಸುವಲ್ಲಿ ಬಳಸಬಹುದಾದ ವಿಧಾನಗಳ ಬಗ್ಗೆಯೂ ಸಮಾಜವಾದಿಗಳಿಗೆ ಹಾಗೂ ಅಂಬೇಡ್ಕರ್ ಅವರಿಗೆ ಭಿನ್ನಾಭಿಪ್ರಾಯಗಳಿದ್ದವು. 1949ರ ಜೂನ್ 26ರ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆಯುತ್ತ ಆಚಾರ್ಯ ನರೇಂದ್ರದೇವ ಅವರು "ರಾಜಕೀಯ ಸಿದ್ಧಾಂತಕ್ಕೆ ಮಹಾತ್ಮಾ ಗಾಂಧೀಜಿಯವರು ಒಂದು ಮಹತ್ವದ ಕೊಡುಗೆ ನೀಡಿದ್ದಾರೆ. ಜನತಾಂತ್ರಿಕ ವ್ಯವಸ್ಥೆಯಲ್ಲಿಯೂ ಒಬ್ಬ ವ್ಯಕ್ತಿಯ ವೈಯಕ್ತಿಕ ಸತ್ಯಾಗ್ರಹದ ಅಧಿಕಾರವನ್ನು ಒಪ್ಪಿಕೊಳ್ಳಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ. ಶಾಂತಿಯುತ ಸತ್ಯಾಗ್ರಹ ಇಂದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ" ಎಂದಿದ್ದರು.

ಆದರೆ ಅಂಬೇಡ್ಕರ್ ಸಂವಿಧಾನ ಸಭೆಯಲ್ಲಿ ಮಾತನಾಡುತ್ತ "ಜನತಂತ್ರವನ್ನು ಬರಿ ಮೇಲ್ನೋಟಕ್ಕೆ ಮಾತ್ರವಲ್ಲ, ನಿಜವಾಗಿಯೂ ಅದನ್ನು ಉಳಿಸಿಕೊಳ್ಳಬೇಕು ಎನ್ನುವುದಾದರೆ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಗುರಿಗಳನ್ನು ತಲುಪಲು ಸಂವೈಧಾನಿಕ ವಿಧಾನಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು, ರಕ್ತಕ್ರಾಂತಿಯ ವಿಧಾನವನ್ನು, ನಾಗರಿಕ ಅವಿಧೇಯತೆ ಹಾಗೂ ಅಸಹಕಾರ ಹಾಗೂ ಸತ್ಯಾಗ್ರಹಗಳನ್ನೂ ಬಿಟ್ಟುಕೊಡಬೇಕು. ಆರ್ಥಿಕ ಹಾಗೂ ಸಾಮಾಜಿಕ ಗುರಿಗಳನ್ನು ತಲುಪಲು ನಮಗೆ ಸಂವೈಧಾನಿಕ ವಿಧಾನಗಳು ಲಭ್ಯವಿಲ್ಲದೇ ಇರುವಾಗ ಅಸಂವೈಧಾನಿಕ ವಿಧಾನಗಳನ್ನು ಅನುಸರಿಸುವಲ್ಲಿ ನಮಗೆ ಸಾಕಷ್ಟು ಸಮರ್ಥನೆ ಇರುತ್ತಿತ್ತು. ಆದರೆ ಸಂವೈಧಾನಿಕ ವಿಧಾನಗಳು ಲಭ್ಯವಿರುವಾಗ ಈ ಅಸಂವೈಧಾನಿಕ ವಿಧಾನಗಳಿಗೆ ಸಮರ್ಥನೆ ಇರಲಾಗದು" ಎಂದಿದ್ದರು.

ಇಂತಹ ಭಿನ್ನಾಭಿಪ್ರಾಯಗಳಿದ್ದರೂ ಸಾಮಾಜಿಕ ಸಮಾನತೆಯನ್ನು ಗುರಿಯಾಗಿ ಪರಿಭಾವಿಸಿದ್ದ ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಅವರು ರಾಜಕೀಯವಾಗಿ ಪರಸ್ಪರ ಸಹಕರಿಸಲು ಪ್ರಯತ್ನಿಸಿದರು. 1934ರಲ್ಲಿ ಸಮಾಜವಾದಿಗಳು ತಮ್ಮ ರಾಜಕೀಯ ಪಕ್ಷವನ್ನು ಹುಟ್ಟುಹಾಕಿ ಅದನ್ನು 'ಕಾಂಗ್ರೆಸ್ ಸಮಾಜವಾದಿ ಪಕ್ಷ' ಎಂದು ಕರೆದರೆ, ಅಂಬೇಡ್ಕರ್ ತಮ್ಮ ಮೊದಲ ರಾಜಕೀಯ ಪಕ್ಷವನ್ನು 1936ರಲ್ಲಿ ಪ್ರಾರಂಭಿಸಿ ಅದನ್ನು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' ಎಂದು ಕರೆದರು. ಹಾಗೆ ಕರೆಯುವಲ್ಲಿ ಬಹುಶಃ ಅಂಬೇಡ್ಕರ್ ಅವರ ಮೇಲೆ ಇಂಗ್ಲೆಂಡಿನ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯ ಪ್ರಭಾವವಿದ್ದಿರಬಹುದು. ಆದರೆ 1935ರ ಭಾರತ ಸರಕಾರದ ಕಾನೂನಿನಡಿ ಚುನಾವಣೆಗಳಲ್ಲಿ ಭಾಗವಹಿಸಬಾರದೆಂದು ಸಮಾಜವಾದಿಗಳು ನಿರ್ಧರಿಸಿದರೆ ಅಂಬೇಡ್ಕರ್ ಅವರ ಪಕ್ಷ ಚುನಾವಣೆಗಳಲ್ಲಿ ಭಾಗವಹಿಸಿ ಕೇಂದ್ರ ವಿಧಾನ ಸಭೆಯಲ್ಲಿ 15 ಸ್ಥಾನಗಳನ್ನು ಗಳಿಸಿತು. ನಂತರ ಅಂಬೇಡ್ಕರ್ ಅವರು ಕೂಡ ಗವರ್ನರ್ ಜನರಲ್ ಅವರ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದರು.

ಸಂವಿಧಾನ ಸಭೆ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಆಯ್ಕೆಯಾಗದೇ ಸೀಮಿತ ಮತದಾನದ ಆಧಾರದ ಮೇಲೆ ಆಯ್ಕೆಯಾಗಿದ್ದುದರಿಂದ ಸಮಾಜವಾದಿಗಳು ಅದರ ಸದಸ್ಯರಾಗಲು ನಿರಾಕರಿಸಿದರು. ನಂತರ ಅವರು ಸಂವಿಧಾನ ಸಭೆಯನ್ನು ಸೇರಲು ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ಆದರೆ ಅಂಬೇಡ್ಕರ್ ಕೇಂದ್ರ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಇದನ್ನೇ ನಂತರ ಸಂವಿಧಾನ ಸಭೆಯಾಗಿ ಪರಿವರ್ತಿಸಲಾಯಿತು. ಅಂಬೇಡ್ಕರ್ ಸಂವಿಧಾನದ ಕರಡು ಸಿದ್ಧತಾ ಸಮಿತಿಯ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿದರು. ಸಂವಿಧಾನದ ಪ್ರಸ್ತಾವನೆಯಲ್ಲಿಯೇ ತಮಗೆ ಪ್ರಿಯವಾದ 'ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವ'ಗಳ ಆದರ್ಶಗಳನ್ನು ಸೇರಿಸುವಲ್ಲಿ ಯಶಸ್ವಿಯಾದರು.

ಭಾರತದ ಲೋಕಸಭೆಗೆ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ, ಮಹಾರಾಷ್ಟ್ರದ Peasants and Workers Party ಹಾಗೂ ಅಂಬೇಡ್ಕರ್ ಅವರ Scheduled Castes Federationಗಳ ಜೊತೆಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿತ್ತು. ಜಯಪ್ರಕಾಶ ನಾರಾಯಣ ಹಾಗೂ ಅಶೋಕ ಮೆಹತಾ ಅಂಬೇಡ್ಕರ್ ಅವರನ್ನು ಭೇಟಿಯಾಗಿದ್ದರು. ಎರಡೂ ಪಕ್ಷಗಳು ಚುನಾವಣೆಗಳಿಗಿಂತ ಮುಂಚೆ ಜಂಟಿ ಸಭೆಗಳನ್ನು ನಡೆಸಲು ನಿರ್ಧರಿಸಿದ್ದವು.

ಸಾಮಾಜಿಕ-ಆರ್ಥಿಕ ಕಾರಣಗಳೇ ಜಾತಿಪದ್ಧತಿಯ ಮೂಲದಲ್ಲಿರುವುದಾಗಿ ಪರಿಗಣಿಸಿದ ಸಮಾಜವಾದಿಗಳು ಜಾತಿ ಪದ್ಧತಿಯನ್ನು ಕೊನೆಗೊಳಿಸಲು ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳನ್ನು ಪ್ರತಿಪಾದಿಸಿದರು. ಆದರೆ ಧರ್ಮವೇ ಜಾತಿ ಪದ್ಧತಿಯ ಮೂಲದಲ್ಲಿರುವುದಾಗಿ ನಂಬಿದ ಅಂಬೇಡ್ಕರ್ ಹಿಂದೂ ಧರ್ಮವನ್ನು ಪರಿಷ್ಕರಿಸಬೇಕೆಂದು ಹೇಳಿದರು.

1951ರ ಅಕ್ಟೋಬರ್ 18ರಂದು ಅಂಬೇಡ್ಕರ್ ಅವರು ಮುಂಬಯಿಗೆ ಬಂದಾಗ SCF ಹಾಗೂ ಸಮಾಜವಾದಿ ಪಕ್ಷಗಳೆರಡೂ ಸೇರಿ ಅಂಬೇಡ್ಕರ್ ಅವರನ್ನು ಸ್ವಾಗತಿಸಿದವು. ಎರಡೂ ಪಕ್ಷಗಳು ಸೇರಿ ಆಯೋಜಿಸಿದ್ದ ಸಾರ್ವಜನಿಕ ಸಭೆಗಳಲ್ಲಿ ಅಂಬೇಡ್ಕರ್ ಭಾಷಣ ಮಾಡಿದರು.

ಆದರೆ Peasants and Workers Partyಯನ್ನು ಒಂದು ಮಾರ್ಕ್ಸವಾದಿ ಪಕ್ಷವೆಂದು ಪರಿಗಣಿಸಲಾಗುತ್ತಿದ್ದುದರಿಂದ ಅದರೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳಲು ಅಂಬೇಡ್ಕರ್ ನಿರಾಕರಿಸಿದರು. ಆದುದರಿಂದ ಚುನಾವಣೆಗಳಿಗಿಂತ ಮೊದಲು SCF ಹಾಗೂ ಸಮಾಜವಾದಿ ಪಕ್ಷಗಳ ನಡುವೆ ಚುನಾವಣಾ ಮೈತ್ರಿ ಸಾಧ್ಯವಾಗಲಿಲ್ಲ. ಆದರೂ ಕೂಡ ಉತ್ತರ ಮುಂಬಯಿಯ ದ್ವಿಸದಸ್ಯ ಮತಕ್ಷೇತ್ರದಿಂದ SCF ಪರವಾಗಿ ಅಂಬೇಡ್ಕರ್ ಹಾಗೂ ಸಮಾಜವಾದಿ ಪಕ್ಷದ ಪರವಾಗಿ ಅಶೋಕ ಮೆಹತಾ ಜೊತೆಯಾಗಿ ಸ್ಪರ್ಧಿಸಿದರು. ಕಮ್ಯುನಿಸ್ಟ್ ಪಕ್ಷದ ವತಿಯಿಂದ ಶ್ರೀಪಾದ ಅಮೃತ ಡಾಂಗೆಯವರು ಸ್ಪರ್ಧಿಸಿದರು. ಚುನಾವಣಾ ಪ್ರಚಾರದ ಸಮಯದಲ್ಲಿ ಕಮ್ಯುನಿಸ್ಟರು ಉದ್ದೇಶಪೂರ್ವಕವಾಗಿ ಒಬ್ಬ ಮತದಾರನಿಗೆ ಇಬ್ಬರು ಸ್ಪರ್ಧಿಗಳಿಗೆ ಮತ ಕೊಡುವ ಅಧಿಕಾರವಿದ್ದರೂ, ಈ ಎರಡೂ ಮತಗಳನ್ನು ಒಬ್ಬ ಸ್ಪರ್ಧಿಗೇ ಕೊಡಬಹುದು ಎಂದು ಪ್ರಚಾರ ಮಾಡಿದರು. ಪರಿಣಾಮವಾಗಿ ಅಂಬೇಡ್ಕರ್ ಹಾಗೂ ಅಶೋಕ ಮೆಹತಾ ಅವರು ಪಡೆದ ಮತಗಳಲ್ಲಿ ಸಾವಿರಾರು ಮತಗಳು ವ್ಯರ್ಥವಾದವು. ಇದರಿಂದಾಗಿ ಅಂಬೇಡ್ಕರ್ ಹಾಗೂ ಅಶೋಕ ಮೆಹತಾ ಇಬ್ಬರೂ ಚುನಾವಣೆಯಲ್ಲಿ ಸೋತರು. ಕಮ್ಯುನಿಸ್ಟರ ಮುಖಂಡ ಡಾಂಗೆಯವರೂ ಚುನಾವಣೆಯಲ್ಲಿ ಸೋತರು. ನಂತರ ಅಂಬೇಡ್ಕರ್ ಹಾಗೂ ಅಶೋಕ ಮೆಹತಾ ಇಬ್ಬರೂ ಸೇರಿ ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ಚುನಾವಣಾ ಪರಿಣಾಮವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದರು. ಸ್ವತಃ ಅಂಬೇಡ್ಕರ್ ಅವರೇ ವಾದಿಸಿದರೂ ನ್ಯಾಯಾಲಯದಲ್ಲಿಯೂ ಇಬ್ಬರೂ ಸೋಲನ್ನೊಪ್ಪಿಕೊಳ್ಳಬೇಕಾಯಿತು.

ನಂತರ ಸಮಾಜವಾದಿ ಪಕ್ಷ, SCF ಹಾಗೂ ಬಿಹಾರದ ಝಾರಖಂಡ ಪಕ್ಷಗಳ ಜೊತೆಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡಿತು. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರು "ಸಮಾಜವಾದಿ ಪಕ್ಷ ಹಾಗೂ SCFಗಳು ಜನತಾಂತ್ರಿಕ ಸಮಾಜವಾದಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹಾಗೂ ಸಮಾನತೆಗಾಗಿ ಈ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿವೆ" ಎಂದು ಹೇಳಿದರು. ಆದರೆ ಸಮಾಜವಾದಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಬೆಂಬಲ ಇಲ್ಲ ಎಂದು ಭಾವಿಸಿದ ಅಂಬೇಡ್ಕರ್ ಅವರು ಒಬ್ಬ ಸ್ವತಂತ್ರ ಅಭ್ಯರ್ಥಿಯ ಜೊತೆ ಸೇರಿ ಸ್ಪರ್ಧಿಸ ಬಯಸಿದ್ದರು. ಆದರೆ ನಂತರ ಸಮಾಜವಾದಿ ಪಕ್ಷದ ಅಶೋಕ ಮೆಹತಾ ಜೊತೆಗೆ ಸ್ಪರ್ಧಿಸಲು ಇಚ್ಛಿಸಿದರು. ಮಧ್ಯಪ್ರದೇಶದ ಭಂಡಾರಾ ದ್ವಿಸದಸ್ಯ ಮತಕ್ಷೇತ್ರದಿಂದ ನಡೆದ ಒಂದು ಮರುಚುನಾವಣೆಯಲ್ಲಿ ಮತ್ತೆ ಇಬ್ಬರೂ ಸ್ಪರ್ಧಿಸಿದರು. ಆದರೆ ಅಶೋಕ ಮೆಹತಾ ಅವರು 1,49,636 ಮತಗಳನ್ನು ಪಡೆದು ಗೆದ್ದು ಪ್ರಥಮ ಲೋಕಸಭೆಯನ್ನು ಸೇರಿದರೆ ಅಂಬೇಡ್ಕರ್ ಅವರು 1,32,483 ಮತಗಳನ್ನು ಪಡೆದರೂ ದುರದೃಷ್ಟದಿಂದ ಸೋತರು.

ಕನಸಿನ ಕೊನೆ

ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಇಬ್ಬರೂ 'ವರ್ಗ-ರಹಿತ' ಹಾಗೂ 'ಜಾತಿ-ರಹಿತ' ಸಮಾಜವನ್ನು ಕಟ್ಟಬಯಸಿದರು. "ಜಾತಿ-ರಹಿತ ಹಾಗೂ ವರ್ಗ-ರಹಿತ ಸಮಾಜವನ್ನು ಕಟ್ಟದ ಹೊರತು ದೇಶದಲ್ಲಿ ಯಾವ ಪ್ರಗತಿಯೂ ಆಗದು" ಎಂದಿದ್ದರು ಅಂಬೇಡ್ಕರ್. ವರ್ಗಗಳನ್ನು ಕೊನೆಗೊಳಿಸುವ ವಿಧಾನ ಸ್ಪಷ್ಟವಾಗಿತ್ತು. ಆದರೆ ಜಾತಿ ಪದ್ಧತಿಯನ್ನು ಹೇಗೆ ಕೊನೆಗೊಳಿಸುವುದು? ಈ ಬಗ್ಗೆ ಸಮಾಜವಾದಿಗಳದ್ದು ಸಾಮಾಜಿಕ-ಆರ್ಥಿಕ ವಿಧಾನವಾಗಿತ್ತು, ರಾಜಕೀಯ ಹಾಗೂ ಜನತಾಂತ್ರಿಕ

(50ನೇ ಪುಟಕ್ಕೆ)

ನಾಗರಿಕತೆಗಳು: ಸಂಘರ್ಷವೋ ಸಂವಾದವೋ

ಮೂಲ: ಡಾ. ಅಸ್ಗರ್‌ಅಲಿ ಎಂಜಿನಿಯರ್
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಎರಡನೆಯ ಮಹಾಯುದ್ಧದ ನಂತರ ಎಲ್ಲ ಯುದ್ಧಗಳು ಒಂದೋ ಏಷ್ಯಾದಲ್ಲಿ ಇಲ್ಲಾ ಆಫ್ರಿಕಾದಲ್ಲಿ ನಡೆದಿವೆ. ಯುರೋಪ್ ತೃತೀಯ ಜಗತ್ತಿನ ಈ ದೇಶಗಳಿಗೆ ಹೆಚ್ಚು ಹೆಚ್ಚು ಶಸ್ತ್ರಾಸ್ತ್ರಗಳನ್ನು ಮಾರುವುದರಿಂದ ಅಪಾರ ಲಾಭ ಗಿಟ್ಟಿಸಿಕೊಂಡಿವೆ. ಅಮೆರಿಕಾದಲ್ಲಿ ಸೇನಾ ಉದ್ಯಮ ಸಂಕೀರ್ಣದ ಮೇಲೆ ಅದರ ಅರ್ಥವ್ಯವಸ್ಥೆ ನಿಂತಿದೆ ಎನ್ನುವುದು ಜನಜನಿತವಾಗಿದೆ. 9/11ರ ನಂತರ ಸಹ ಅಮೆರಿಕಾ ಮೊದಲು ಯುದ್ಧ ಸಾರಿದ್ದು ಆಫ್ಘಾನಿಸ್ತಾನದ ಮೇಲೆ, ನಂತರ ಇರಾಕ್ ಮೇಲೆ. ಇವೆರಡೂ ಯುದ್ಧಗಳಿಗೆ ಅದು ಹುಸಿ ಕಾರಣಗಳನ್ನೇ ನೀಡಿತು.

ಪ್ರೊ. ಹಂಟಿಂಗ್ಟನ್ ನಾಗರಿಕತೆಗಳ ಸಂಘರ್ಷ ಕುರಿತು ಪುಸ್ತಕ ಬರೆದ ಮೇಲೆ ಪಾಶ್ಚಿಮಾತ್ಯ ಪತ್ರಿಕೆಗಳಲ್ಲಿ ಅದರ ಅವಲೋಕನ ಮಹಾಪೂರವಾಗಿ ಅಬ್ಬರಿಸಿತು. ಅವರನ್ನು ಸೋವಿಯೆಟ್ ರಷ್ಯಾದ ಪತನದ ನಂತರ, ಶೀತಲ ಸಮರೋತ್ತರ ಕಾಲಘಟ್ಟದ ಮಹಾನ್ ಚಿಂತಕ ಎಂದು ಪರಿಗಣಿಸಲಾಯಿತು. ವಾಸ್ತವದಲ್ಲಿ ಪುಸ್ತಕದ ಕೂಲಂಕಷ ಅವಲೋಕನವು, ಪ್ರೊ. ಹಂಟಿಂಗ್ಟನ್‌ರ ಅನುಸಂಧಾನ ತುಂಬ ಕಾಟಾಚಾರದ್ದಾಗಿದ್ದು ಹಾರ್ವರ್ಡ್ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕನ ವಿದ್ವತ್ತಿನ ಮಟ್ಟದ್ದಾಗಿಲ್ಲವೆನ್ನುವುದನ್ನು ತೋರಿಸಿಕೊಡುತ್ತದೆ. ಪ್ರೊ. ಹಂಟಿಂಗ್ಟನ್‌ರ ಕೃತಿ ಅಪಾರ ಪ್ರಶಂಸೆಗೆ ಪಾತ್ರವಾಯಿತು. ಆದರೂ ಅತಿ ಶೀಘ್ರವೇ ಅದು ಹೇಳ ಹೆಸರಿಲ್ಲದಂತಾಯಿತು. ಅವರು ಅನಾಮಧೇಯರಾಗಿ ತೀರಿ ಹೋದರು. ಅವರ ಸಾವು ಪತ್ರಿಕೆಗಳ ಗಮನಕ್ಕೆ ಬಾರದೇ ಹೋಯಿತು.

ಶೀತಲ ಸಮರೋತ್ತರದ ಕಾಲಘಟ್ಟದ ರಕ್ಷಕನೆಂದು ಬಣ್ಣಿಸಲ್ಪಟ್ಟ ಒಬ್ಬ ಪ್ರಾಧ್ಯಾಪಕ ಇಷ್ಟು ಬೇಗ ಇತಿಹಾಸದ ಕಸದ ಬುಟ್ಟಿಗೆ ಏಕೆ ಎಸೆಯಲ್ಪಟ್ಟರು? ಅದೇಕೆಂದರೆ ಅವರನ್ನು ಅವರ ಪುಸ್ತಕದ ಗುಣಮಟ್ಟದ ಮೇಲೆ ಪ್ರಶಂಸಿಸಲಾಗಿರಲಿಲ್ಲ. ಅದಕ್ಕೆ ಬದಲಾಗಿ ಅವರ ನಿಲುವುಗಳು ರಾಜಕೀಯ ದೃಷ್ಟಿಯಿಂದ ಅಮೆರಿಕಾ ಮತ್ತಿತರ ಪಾಶ್ಚಾತ್ಯ ಸರ್ಕಾರಗಳಿಗೆ ಅತ್ಯವಶ್ಯವೆನಿಸಿದ್ದವು ಎನ್ನುವ ಕಾರಣಕ್ಕಾಗಿ ಅವರನ್ನು ಹಾಡಿ ಹರಸಲಾಗಿತ್ತು. ಕೆಲವರಂತೂ ಪುಸ್ತಕವನ್ನು ವೈಟ್ ಹೌಸ್‌ನ ಆದೇಶದ ಮೇರೆಗೆ ಬರೆಯಲಾಗಿತ್ತು ಎಂದು ವಾದಿಸುತ್ತಾರೆ. ಅದು ನಿಜವಿರಬಹುದು ಇಲ್ಲಾ ನಿಜವಿರಲಿಕ್ಕಿಲ್ಲ. ಆದರೆ ಅದಕ್ಕೆ ತೀರ ಅಲ್ಪಾಯುಷ್ಯವಿತ್ತು. ಅದರ ರಾಜಕೀಯ ಉದ್ದೇಶ ಈಡೇರಿದ ಮೇಲೆ ಅದನ್ನು ಕಸದ ಬುಟ್ಟಿಗೆ ಎಸೆಯಲಾಯಿತು.

ಅದರ ರಾಜಕೀಯ ಅಗತ್ಯವೇನಿತ್ತು? ಅದರ ಅವಲೋಕನದ ಇಂತಹ ಮಹಾಪೂರ ಬಂದದ್ದೇಕೆ? ಅದಕ್ಕೆ ಉಘೋ ಉಘೋ ಎಂದದ್ದೇಕೆ? ಅದಾದ ನಂತರ ಇಷ್ಟು ಶೀಘ್ರವಾಗಿ ಅದನ್ನು ಮೂಲೆಗುಂಪು ಮಾಡಿದ್ದೇಕೆ? ನೈತಿಕವಾಗಿ ಬಲಶಾಲಿಯಾಗಿರದೆ ಶಸ್ತ್ರಾಸ್ತ್ರಗಳನ್ನೇ ಬಲವೆಂದು ಜಪಿಸುವ ದೇಶಗಳು ಎಂದೂ ಸುರಕ್ಷಿತವಾಗಿರಲಾರವು. ತಮ್ಮ ಜನತೆಯ ಮನೋಬಲವನ್ನು ಕಾಪಾಡುವುದಕ್ಕಾಗಿ ಯಾವತ್ತೂ ಸಮರದಲ್ಲಿ ತೊಡಗಿಕೊಂಡಿರಲು ಅವುಗಳಿಗೆ ಒಬ್ಬ ವೈರಿಯ ಅವಶ್ಯಕತೆ ಇರುತ್ತದೆ. ಒಂದು ಕಾಲಕ್ಕೆ ಸ್ವಾತಂತ್ರ್ಯ, ಸಮಾನತೆ, ಮನುಷ್ಯ ಘನತೆ ಹಾಗೂ ಮಾನವ ಹಕ್ಕುಗಳಂತಹ ನೈತಿಕ ಮೌಲ್ಯಗಳನ್ನಾಧರಿಸಿದ್ದ ಅಮೆರಿಕಾ ಪಾಶ್ಚಾತ್ಯ ಜಗತ್ತಿನ ಏಕೈಕ ಶಕ್ತಿಯಾಗಿ ಹೊರಹೊಮ್ಮಿ 'ಸ್ವಾತಂತ್ರ್ಯ' ಹಾಗೂ 'ಸ್ವತಂತ್ರ ಜಗತ್ತಿ'ನ ರಕ್ಷಕ ಎಂದು ತನ್ನನ್ನು ಬಿಂಬಿಸಿಕೊಂಡಿತು. ಅದೇ ಅಮೆರಿಕಾ ಎರಡನೆಯ ಮಹಾ ಯುದ್ಧದ ನಂತರ ತನ್ನ ನಿಲುವನ್ನು ಸಂಪೂರ್ಣವಾಗಿ ಬದಲಿಸಿಕೊಂಡಿತ್ತು ಎನ್ನುವುದು ಒಂದು ವಾಸ್ತವ.

ಅಮೆರಿಕಾ ಹಾಗೆ ಮಾಡಿದ್ದು ಅಣು ಬಾಂಬ್‌ಗಳನ್ನು ನಿರ್ಮಿಸಿ ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿಯ ಸುಮಾರು ಎರಡು ಲಕ್ಷ ಜನರನ್ನು ಕೊಲ್ಲುವುದರ ಮೂಲಕವೇ ವಿನಾ ತನ್ನ ನೈತಿಕ ಮೌಲ್ಯಗಳಿಂದಾಗಿ ಅಲ್ಲ, ಅಣು ಬಾಂಬುಗಳನ್ನು ಹಾಕಿದ್ದು ಅದರ ಅಗತ್ಯವಿತ್ತೆಂದೇನಲ್ಲ. ಅಮೆರಿಕಾಕ್ಕೆ ವಸಾಹತೋತ್ತರ ಜಗತ್ತಿನಲ್ಲಿ ತನ್ನ ಶಕ್ತಿ ಪ್ರದರ್ಶನ ಮಾಡುವುದು ಹಾಗೂ 'ಸ್ವತಂತ್ರ ಜಗತ್ತಿ'ನ ಮಹಾನ್ ಶಕ್ತಿಯಾಗಿ ಹೊರಹೊಮ್ಮುವುದು ಬೇಕಿತ್ತು. ಅದಕ್ಕಾಗಿ ಅಮೆರಿಕಾಕ್ಕೆ ಒಬ್ಬ ವೈರಿಯ ಅಗತ್ಯವಿತ್ತು. ಅದಕ್ಕೆ ಸೋವಿಯೆಟ್ ಒಕ್ಕೂಟದ ರೂಪದಲ್ಲಿ ವೈರಿ ಸಿಕ್ಕಂತಾಗಿತ್ತು. ಕಮ್ಯೂನಿಜಂ 'ಸ್ವತಂತ್ರ ಜಗತ್ತಿನ ಕಡು ವೈರಿ'ಯಾಗಿ ಬಿಟ್ಟಿತು.

ಆದರೆ ಸೋವಿಯೆಟ್ ಒಕ್ಕೂಟದ ಪತನದ ನಂತರ ಆ ವೈರಿ ಇಲ್ಲವಾದ ಮೇಲೆ ಅದಕ್ಕೆ ಇನ್ನೊಬ್ಬ ವೈರಿಯ ಅವಶ್ಯಕತೆ ಇತ್ತು. ಪ್ರೊ. ಹಂಟಿಂಗ್ಟನ್ ಅಮೆರಿಕಾಕ್ಕೆ ಇಸ್ಲಾಂ ಹಾಗೂ ಇಸ್ಲಾಮೀ ಜಗತ್ತಿನ ರೂಪದಲ್ಲಿ ಆ ವೈರಿಯನ್ನು ಹುಡುಕಿ ಕೊಟ್ಟರು. ಹಲವಾರು ಕಾರಣಗಳಿಂದಾಗಿ ಕಮ್ಯೂನಿಜಮ್ಮಿನ ಬದಲಾಗಿ ಇಸ್ಲಾಮನ್ನು ವೈರಿಯಾಗಿ ರೂಪಿಸುವುದು ಹೆಚ್ಚು ಸುಲಭವಾಗಿತ್ತು. ಆ ಕಾರಣಗಳ ಪೈಕಿ ಒಂದು



ಪಾಶ್ಚಾತ್ಯ ಜನಕ್ಕೆ ಕಮ್ಯೂನಿಜಂ ಬಗೆಗೆ ಇದ್ದಷ್ಟೇ ಪೂರ್ವಗ್ರಹಗಳು ಇಸ್ಲಾಂ ಬಗೆಗೂ ಇದ್ದವ್ವಾಗಿತ್ತು. ಬಹುತೇಕ ಪೂರ್ವಗ್ರಹಗಳು ಮಾಧ್ಯಮದಿಂದ, ವಿಶೇಷವಾಗಿ ಎಲೆಕ್ಟ್ರಾನಿಕ್ ಮಾಧ್ಯಮದಿಂದ ಸೃಷ್ಟಿಸಲ್ಪಟ್ಟಿದ್ದವು. ಆ ಮಾಧ್ಯಮವೇ ಪಟ್ಟ ಭದ್ರ ಹಿತಾಸಕ್ತಿಗಳಿಂದ ನಿಯಂತ್ರಿಸಲ್ಪಟ್ಟಿತ್ತು. ಇಂತಹ ವೈರಿಯ ಅವಶ್ಯಕತೆ ಕೂಡ ಇವೇ ಪಟ್ಟಭದ್ರ ಹಿತಾಸಕ್ತಿಗಳಿಗಿತ್ತು.

ಇಂತಹ ವೈರವನ್ನು ಬೆಳೆಸಿದ ಇನ್ನೊಂದು ಮಹತ್ವದ ಸಂಗತಿಯೆಂದರೆ ಶೀತಲ ಸಮರೋತ್ತರ ಕಾಲಘಟ್ಟದಲ್ಲಿ ಅಮೆರಿಕಾದಲ್ಲಿ ಜಿಯಾನಿಸ್ಟ್ ಪ್ರಭಾವ. ಈ ಸಂಬಂಧ ಈ ಜಿಯಾನಿಸ್ಟ್ ಪ್ರಭಾವ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿತು, ಈಗಲೂ ಅದು ಮುಂದುವರಿದಿದೆ. ಮಾಧ್ಯಮವು ಹೆಚ್ಚಾಗಿ ಈ ಶಕ್ತಿಶಾಲಿ ಪ್ರಭಾವದಿಂದ ನಿಯಂತ್ರಿಸಲ್ಪಡುತ್ತಿದೆ. 'ನಾಗರಿಕತೆಗಳ ಸಂಘರ್ಷ' ಬರೆಯುವುದರ ಮೂಲಕ ಪ್ರೊ. ಹಂಟಿಂಗ್ಟನ್ ದಾರಿ ತೋರಿಸಿದ್ದರು. ಅದು ಪ್ರಕಟಗೊಂಡ ಮೇಲೆ ಇಷ್ಟು ಬೇಗ ಏಕೆ ಅಪ್ರಸ್ತುತವಾಯಿತು? ಅದು ತನ್ನ ಅಗತ್ಯವನ್ನು ಪೂರೈಸಿತ್ತು. 9/11ರ ಘಟನೆಗಳು ಅದಕ್ಕೆ ಸಾಕ್ಷ್ಯ–ಅಷ್ಟಕ್ಕೂ ಯಾವುದೇ ಸಾಕ್ಷ್ಯದ ಅವಶ್ಯಕತೆ ಇದ್ದರೆ–ಒದಗಿಸಿತ್ತು.

9/11ರ ವಿದ್ಯಮಾನ ಅನಿವಾರ್ಯವಾಗಿತ್ತೆ? ಅದು ಹಂಟಿಂಗ್ಟನ್‌ರ ನಾಗರಿಕತೆಗಳ ಸಿದ್ಧಾಂತದ ಮೇರೆಗೆ ಆಗಿತ್ತೆ? ಆ ಕ್ಷಣದ ಕಾವಿನಲ್ಲಿ ಯಾರೂ ಈ ಪ್ರಶ್ನೆಗಳನ್ನು ಕೇಳಲಿಲ್ಲ. ಬಹುತೇಕ ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞರು ಮೌನಕ್ಕೆ ಶರಣಾಗಿದ್ದರು. 9/11ರ ವಿದ್ಯಮಾನದ ಕಾರಣಗಳಿಗೂ ಇಸ್ಲಾಂ ಮತ್ತು ಇಸ್ಲಾಮೀ ನಾಗರಿಕತೆಗೂ ಸಂಬಂಧವೇ ಇದ್ದಿರಲಿಲ್ಲ. ಅದು ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಸಂಘರ್ಷವಾಗಿತ್ತು. ಅದು ಪಾಶ್ಚಾತ್ಯ ನಾಗರಿಕತೆಯಿಂದ ಸಂಭವಿಸಿದ್ದಲ್ಲ. ಪಶ್ಚಿಮದ ಬಗೆಗಿನ ಮುಸ್ಲಿಮರ ದ್ವೇಷದಿಂದಲೂ ಅಲ್ಲ.

ತಿಳಿವಳಿಕೆಯ ಕೊರತೆಯಿಂದಾಗಿ ಇಲ್ಲಾ ಪಟ್ಟಭದ್ರ ಹಿತಾಸಕ್ತಿಗಳಿಂದಾಗಿ (ಹೆಚ್ಚಾಗಿ ಎರಡನೆಯ ಕಾರಣಕ್ಕಾಗಿ) ಅಧ್ಯಕ್ಷ ಬುಶ್ ಅವರು 9/11ರ ಘಟನೆಗಳನ್ನು ನಾಗರಿಕತೆಗಳ ಸಂಘರ್ಷವೆಂದು ಬಿಂಬಿಸಿದರು. ಅವರು (ಮುಸ್ಲಿಮರು) ನಮ್ಮನ್ನು ಹಾಗೂ ನಮ್ಮ ಸ್ವಾತಂತ್ರ್ಯವನ್ನು ದ್ವೇಷಿಸುವುದೇಕೆ ಎಂದು ಕೇಳುವ ಮಟ್ಟಿಗೆ ಹೋದರು. ಅವರು ಇಸ್ಲಾಂ ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ವಿರೋಧಿಗಳೆನ್ನುವ ಸುಳಿವು ಸಹ ನೀಡಿದರು. ಆದರೆ ವಾಸ್ತವವೇನೆಂದರೆ ಮಧ್ಯ ಪ್ರಾಚ್ಯದ ಇತ್ತೀಚಿನ ವಿದ್ಯಮಾನಗಳು ನಿಚ್ಚಳವಾಗಿ ತೋರಿಸಿಕೊಟ್ಟಿರುವಂತೆ ಇಸ್ಲಾಮೀ ಜಗತ್ತಿನ (ಅದಕ್ಕೂ ಮೊದಲು ಲ್ಯಾಟಿನ್ ಅಮೆರಿಕಾದ) ಸರ್ವಾಧಿಕಾರಿಗಳನ್ನು ತಮ್ಮ ಸ್ವಂತ ಹಿತಾಸಕ್ತಿಗಳಿಗಾಗಿ ಬೆಂಬಲಿಸುತ್ತ ಬಂದಿದ್ದು ಅಮೆರಿಕಾವೇ. ಅರಬ್ ಜನತೆಯ ಬಂಡಾಯಗಳು ,ಅರೇಬಿಯಾದ ತೈಲವನ್ನು ನಿಯಂತ್ರಿಸಲು ಅಮೆರಿಕಾದ ಮೂಲಕ ಅಧಿಕಾರದ ಗದ್ದುಗೆಯೇರಿದ್ದ ಸರ್ವಾಧಿಕಾರಿಗಳನ್ನು ಪದಚ್ಯುತಗೊಳಿಸಿದವು.

ಇದೆಲ್ಲ ನಡೆದದ್ದು ಇಸ್ಲಾಮಿನಿಂದಾಗಿಯೇ ಎಂದು ಪಾಶ್ಚಾತ್ಯ ಮಾಧ್ಯಮ ಪ್ರಚಾರಕ್ಕೆ ತೊಡಗಿತು. ವ್ಯಂಗ್ಯವೇನೆಂದರೆ ಅರಬ್ ಜಗತ್ತಿನ ಅವರ ಆಪ್ತಮಿತ್ರ ಸೌದಿ ಅರೇಬಿಯಾ ನಿರಂಕುಶ ಪ್ರಭುತ್ವವಾದಿ ಹಾಗೂ ಅತ್ಯಂತ ಸಂಪ್ರದಾಯವಾದಿಯಾಗಿದ್ದು ಸಾಂಪ್ರದಾಯಿಕ ಇಸ್ಲಾಮನ್ನು ಅನುಸರಿಸುತ್ತಿದೆ. ಅಮೆರಿಕಾ ಈ ಕಟು ಸತ್ಯಗಳಿಗೆ ಜಾಣ ಕುರುಡಾಗಿದೆ. ಇನ್ನೊಂದು ವ್ಯಂಗ್ಯವೆಂದರೆ ಅದು ಒಂದೆಡೆ ಇಸ್ಲಾಮನ್ನು ಹಾಗೂ ಅದರ ಬೋಧನೆಗಳನ್ನು ಟೀಕಿಸಿದರೆ ಇನ್ನೊಂದೆಡೆ ಅದರ ರಾಜಕೀಯ ಹಿತಾಸಕ್ತಿಗಳು ಈ ಇಸ್ಲಾಮೀ ದೇಶಗಳ ಆಡಳಿತಗಾರರನ್ನು ಹೊಗಳಲು ಹಾಗೂ ಅವರ ಬೆಂಗಾವಲಿಗೆ ನಿಲ್ಲುವಂತೆ ಮಾಡಲು ಅವರನ್ನು ಆಗ್ರಹಿಸುತ್ತವೆ. ಈ ದೇಶಗಳ ಆಳರಸರನ್ನು ಬೆಂಬಲಿಸುವಂತೆಯೇ ಇಸ್ಲಾಮಿನ ಖಂಡನೆ ಸಹ ರಾಜಕೀಯವಾಗಿ ಅನಿವಾರ್ಯವಾಗುತ್ತದೆ. ಇದೆಲ್ಲ ಇಂತಹ ಕಡು ವಿರೋಧಾಭಾಸಗಳ ನಡುವೆಯೂ ಎಗ್ಗಿಲ್ಲದೆ ಮುಂದುವರಿದುಕೊಂಡು ಬಂದಿದೆ.

ವಾಸ್ತವವೇನೆಂದರೆ ಇಸ್ಲಾಂ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಅಭಾವಕ್ಕೆ ಹೊಣೆಯಾಗುವುದಿಲ್ಲ. ಅದಕ್ಕೆ ಮುಸ್ಲಿಂ ಆಳರಸರ ಮತ್ತು ಅಮೆರಿಕಾದ ವಿದೇಶಿ ನೀತಿಯ ಅನಿವಾರ್ಯತೆಯೇ ಕಾರಣ. ಯಾವುದೇ ಧರ್ಮ ಅಥವಾ ಪ್ರಜಾಸತ್ತಾತ್ಮಕ ವ್ಯವಸ್ಥೆಯಷ್ಟೇ ಇಸ್ಲಾಂ ಸಹ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕೆ ಪ್ರೇರಕವಾಗಿದೆ. ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ವಿರುದ್ಧ ಫತ್ವಾ ಹೊರಡಿಸುವ ಅತಿ ಸಾಂಪ್ರದಾಯವಾದಿ ಉಲಮಾ(ಇಸ್ಲಾಮೀ ದೈವಶಾಸ್ತ್ರದ ವಿದ್ವಾಂಸರು)ಗಳು, ಆಳರಸರ ರಾಜಕೀಯ ಅವಶ್ಯಕತೆ ನಿರ್ಮಿಸಿದ ಸಾಂಪ್ರದಾಯಿಕ ರಾಜಕೀಯ ಪರಿಸರದ ಫಲವೇ ಆಗಿದ್ದಾರೆ. ಕುರ್‌ಆನ್‌ನ ಆಶಯವನ್ನು ಅವಲೋಕಿಸಿದರೆ ಇಸ್ಲಾಂ ಮನುಷ್ಯ ಘನತೆ ಹಾಗೂ ಸಮಾನತೆಯನ್ನು ಎತ್ತಿ ಹಿಡಿಯುತ್ತದೆ, ಮನುಷ್ಯರ ನಡುವಣ ಭೇದಭಾವದ ಯಾವುದೇ ರೂಪವನ್ನು ವಿರೋಧಿಸುತ್ತದೆ.

ಕುರ್‌ಆನ್ ಧರ್ಮ, ಜನಾಂಗ ಹಾಗೂ ಸಂಸ್ಕೃತಿಗಳ ಬಹುತ್ವವನ್ನು ಅಲ್ಲಾಹನ ಕುರುಹುಗಳೆಂದು ಎತ್ತಿ ಹಿಡಿಯುತ್ತದೆ. ಎಲ್ಲ ದರ್ಮಗಳು ಹಾಗೂ ಪ್ರವಾದಿಗಳನ್ನು ಅಲ್ಲಾಹನೇ ಕಳುಹಿಸಿರುವುದರಿಂದ ಮುಸ್ಲಿಮರು ಎಲ್ಲ ಧರ್ಮಗಳನ್ನು ಹಾಗೂ ಪ್ರವಾದಿಗಳನ್ನು ಗೌರವಿಸುವುದನ್ನು ಕಡ್ಡಾಯಗೊಳಿಸುತ್ತದೆ. ಇಂತಹ ಧರ್ಮ ಹೇಗೆ

ಅಮೇರಿಕ ದಾಹಕ್ಕೆ ಬಲಿಯಾದ ಸದ್ದಾಂ ಹುಸೇನ್

ಪ್ರಜಾಪ್ರಭುತ್ವ ವಿರೋಧಿ ಹಾಗೂ ಸ್ವಾತಂತ್ರ್ಯವಿರೋಧಿಯಾಗಬಲ್ಲದು? ಈ ಪ್ರಚಾರಕರೇ ಇದನ್ನು ಸ್ಪಷ್ಟಪಡಿಬೇಕಾಗುತ್ತದೆ. ಹೀಗೆ ಪಾಶ್ಚಾತ್ಯ ಹಾಗೂ ಇಸ್ಲಾಮೀ ನಾಗರಿಕತೆಗಳ ಸಂಘರ್ಷ ಬಲಾಢ್ಯ ಪಟ್ಟಭದ್ರ ಹಿತಾಸಕ್ತಿಗಳು ಸೃಷ್ಟಿಸಿದ ರಾಜಕೀಯ ಮಿಥ್ ಆಗಿದೆ ಎನ್ನುವುದನ್ನು ಗಮನಿಸಬಹುದು.

ದುರದೃಷ್ಟವೆಂದರೆ ಮಾಧ್ಯಮ ಅತ್ಯಂತ ಋಣಾತ್ಮಕ ಪಾತ್ರ ನಿರ್ವಹಿಸುತ್ತದೆ. ಕಾರಣ ಅದು ಮೂಲತಃ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಕಲಹ ಹುಟ್ಟು ಹಾಕುವುದರ ಮೂಲಕ ಲಾಭ ಗಿಟ್ಟಿಸುವ ಬಂಡವಾಳಶಾಹಿಗಳು ಹಾಗೂ ರಾಜಕೀಯ ಹಿತಾಸಕ್ತಿಗಳ ಕೈಗೊಂಬೆಯಾಗಿರುವುದು. ಎರಡನೆಯ ಮಹಾಯುದ್ಧದವರೆಗೆ ಎಲ್ಲ ಯುದ್ಧಗಳೂ ಪಾಶ್ಚಾತ್ಯ ದೇಶಗಳ ನಡುವೆಯೇ ನಡೆದಿದ್ದವು. ಆದರೆ ಎರಡನೆಯ ಮಹಾಯುದ್ಧದ ನಂತರದ ಕಾಲಾವಧಿಯಲ್ಲಿ ಅವು ಬಲು ಜಾಣತನದಿಂದ ಸಮರ ರಂಗವನ್ನು ಆಫ್ರೊ-ಏಷ್ಯಾದ ದೇಶಗಳಿಗೆ ಸ್ಥಳಾಂತರಿಸಿದವು. ಈ ದೇಶದ ಆಳರಸರು ಇಷ್ಟಪಟ್ಟು ಇಲ್ಲಾ ಇಷ್ಟವಿಲ್ಲದೆ ಪಾಶ್ಚಾತ್ಯ ದೇಶಗಳ ಆಳರಸರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ.

ಎರಡನೆಯ ಮಹಾಯುದ್ಧದ ನಂತರ ಎಲ್ಲ ಯುದ್ಧಗಳು ಒಂದೋ ಏಷ್ಯಾದಲ್ಲಿ ಇಲ್ಲಾ ಆಫ್ರಿಕಾದಲ್ಲಿ ನಡೆದಿವೆ. ಯುರೋಪ್ ತೃತೀಯ ಜಗತ್ತಿನ ಈ ದೇಶಗಳಿಗೆ ಹೆಚ್ಚು ಹೆಚ್ಚು ಶಸ್ತ್ರಾಸ್ತ್ರಗಳನ್ನು ಮಾರುವುದರಿಂದ ಅಪಾರ ಲಾಭ ಗಿಟ್ಟಿಸಿಕೊಂಡಿವೆ. ಅಮೆರಿಕಾದಲ್ಲಿ ಸೇನಾ ಉದ್ಯಮ ಸಂಕೀರ್ಣದ ಮೇಲೆ ಅದರ ಅರ್ಥವ್ಯವಸ್ಥೆ ನಿಂತಿದೆ ಎನ್ನುವುದು ಜನಜನಿತವಾಗಿದೆ. 9/11ರ ನಂತರ ಸಹ ಅಮೆರಿಕಾ ಮೊದಲು ಯುದ್ಧ ಸಾರಿದ್ದು ಆಫ್ಘಾನಿಸ್ತಾನದ ಮೇಲೆ, ನಂತರ ಇರಾಕ್ ಮೇಲೆ. ಇವೆರಡೂ ಯುದ್ಧಗಳಿಗೆ ಅದು ಹುಸಿ ಕಾರಣಗಳನ್ನೇ ನೀಡಿತು.

ನ್ಯೂಯಾರ್ಕ್‌ನ ಟ್ರೇಡ್ ಟವರ್ಸ್‌ಗಳನ್ನು ಸ್ಫೋಟಿಸುವುದರಲ್ಲಿ ಒಸಾಮಾ ಬಿನ್ ಲಾಡೆನ್‌ನ ಕೈವಾಡವಿದ್ದುದನ್ನು ಅಮೆರಿಕಾ ಸಾಕ್ಷ್ಯ ಒದಗಿಸಿದರೆ ಮಾತ್ರ ಅವನನ್ನು ಅಮೆರಿಕಾದ ವಶಕ್ಕೆ ಒಪ್ಪಿಸುವುದಕ್ಕೆ ಆಫ್ಘಾನಿಸ್ತಾನಿ ತಾಲಿಬಾನ್‌ನ ಮುಲ್ಲಾ ಮುಂದಾಗಿದ್ದ. ಅದಕ್ಕೆ ಬದಲಾಗಿ ಅಮೆರಿಕಾ ಆಫ್ಘಾನಿಸ್ತಾನ್ ಮೇಲೆ ಯುದ್ಧ ಘೋಷಿಸಿತು. ಒಸಾಮಾನನ್ನು ಹುಡುಕದೆ ಮುಲ್ಲಾ ಉಮರ್‌ನ ಸರ್ಕಾರವನ್ನು ಉರುಳಿಸಿತು. ಅವನನ್ನು ಹುಡುಕಿ ಅವನ ಘೋರ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸುವುದರ ಬದಲಾಗಿ

ಅವನನ್ನು ಅನಂತರ ಪಾಕಿಸ್ತಾನದಲ್ಲಿ ಕೊಲ್ಲಲಾಯಿತು. ಒಸಾಮಾನ ವಿಚಾರಣೆಗೆ ಹಿಂದೇಟು ಹಾಕಿದ್ದೇಕೆ ಎನ್ನುವುದು ಒಂದು ಮಹತ್ವದ ಪ್ರಶ್ನೆ.

ಇರಾಕ್‌ನಲ್ಲಿ 'ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು' ಇದ್ದವು, ಅಮೆರಿಕಾದ ಭದ್ರತೆಗೆ ತೀವ್ರ ಅಪಾಯವಿತ್ತು ಹಾಗೂ ಈ ಕಾರಣಕ್ಕಾಗಿ ಇರಾಕ್ ಮೇಲೆ ಆಕ್ರಮಣ ಮಾಡಿ ಆ ಶಸ್ತ್ರಾಸ್ತ್ರಗಳನ್ನು ನಾಶಪಡಿಸುವುದು ಅನಿವಾರ್ಯವಾಗಿತ್ತು ಎಂದು ಅಧ್ಯಕ್ಷ ಬುಶ್ ಹೇಳಿಕೆ ನೀಡಿದ್ದರು. ಸಾವಿರಾರು ಅಮಾಯಕ ಜನರನ್ನು ಕೊಂದಮೇಲೆ ಅವರಿಗೆ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ಒತ್ತಟ್ಟಿಗಿರಲಿ ಒಂದು ಸೂಜಿಯೂ ಸಿಕ್ಕಲಿಲ್ಲ. ಅವರು ಯಶಸ್ವಿಯಾಗಿದ್ದು ಸದ್ದಾಂ ಸರ್ಕಾರವನ್ನು ಉರುಳಿಸಿ ಕೊನೆಗೆ ಅವನನ್ನು ಗಲ್ಲಿಗೇರಿಸುವಲ್ಲಿ ಮಾತ್ರ. ಅದೇ ಅವರ ನೈಜ ಉದ್ದೇಶವಾಗಿತ್ತು. ಕಾರಣ ಸದ್ದಾಂ ಅಮೆರಿಕಾದ ಬಲವನ್ನು ಉಪೇಕ್ಷಿಸಿದ, ಅದಕ್ಕೆ ತಲೆ ಬಾಗಲು ನಿರಾಕರಿಸಿದ್ದ. ಅಷ್ಟೇ ಅಲ್ಲ ಸೌದಿ ಹಾಗೂ ಕುವೈಟ್ ನಂತರ ಇರಾಕ್‌ನಲ್ಲಿ ಅತಿ ಹೆಚ್ಚು ತೈಲ ನಿಕ್ಷೇಪಗಳಿದ್ದವು. ಸೋವಿಯೆಟ್ ಒಕ್ಕೂಟದ ನಂತರ ಜಗತ್ತಿನ ಅತ್ಯಂತ ಬಲಾಢ್ಯ ಶಕ್ತಿಯೆನಿಸಿಕೊಂಡ ಅಮೆರಿಕಾಕ್ಕೆ ಅದು ಸೆಡ್ಡು ಹೊಡೆಯುವುದೆಂದರೇನು?

ವ್ಯಂಗ್ಯವೆಂದರೆ ಅಮೆರಿಕಾ ವಿಧ್ವಂಸಕಾರಿ ಯುದ್ಧಗಳನ್ನು ಸಾರುತ್ತ ಬಂದಿದ್ದರೂ, ಅದರ ಆದೇಶದ ಮೇರೆಗೆ ಅಮೆರಿಕಾದ ಮಾಧ್ಯಮವು ಇಸ್ಲಾಮನ್ನು ಜಿಹಾದಿ ಧರ್ಮವೆಂದೂ 'ಕಾಫಿರ್'(ಧರ್ಮನಿಂದಕ)ರ ವಿರುದ್ಧ ಜಿಹಾದ್ ಸಾರುತ್ತಿದೆ ಎಂದೂ ಬಣ್ಣಿಸಿತು. ಯಾವುದೇ ಒಂದು ಇಸ್ಲಾಮೀ ಸರ್ಕಾರವು ನ್ಯೂಯಾರ್ಕ್‌ದ ವರ್ಲ್ಡ್ ಟ್ರೇಡ್ ಟವರ್ಸ್ ಮೇಲೆ ದಾಳಿ ಮಾಡಿದ್ದ ಒಸಾಮಾನನ್ನು ಬೆಂಬಲಿಸಲಿಲ್ಲ ಎನ್ನುವುದು ಗಮನಾರ್ಹವಾದದ್ದು. ಇರಾನ್ ಮೊದಲು ಮಾಡಿ ಎಲ್ಲ ಇಸ್ಲಾಮೀ ದೇಶಗಳು ಅದನ್ನು ಖಂಡಿಸಿದ್ದವು.

ಅಮೇರಿಕಾದ ಶಸ್ತ್ರಾಸ್ತ್ರ ಸಂಗ್ರಹಕೇಂದ್ರ ಪೆಂಟಗಾನ್

ಸದ್ದಾಂ ಸಹ ಒಸಾಮಾನನ್ನಾಗಲೀ ಅವನ ಅಲ್-ಖೈಯ್ದಾವನ್ನಾಗಲೀ ಬೆಂಬಲಿಸಿರಲಿಲ್ಲ. ಕಾರಣ ಸದ್ದಾಂ ಬಾತ್ ಪಕ್ಷದವನಾಗಿದ್ದು ಅವನು ಎಲ್ಲ ಸಮಾಜವಾದಿಗಳನ್ನು ದ್ವೇಷಿಸುತ್ತಿದ್ದ ಹಾಗೂ ಅವರನ್ನು ಇಸ್ಲಾಮಿನ ವೈರಿಗಳೆಂದು ಪರಿಗಣಿಸಿದ್ದ. ಅಷ್ಟೇ ಅಲ್ಲ ಸದ್ದಾಂ ಎಂದೂ, ಅಮೆರಿಕಾ ಮೂಲಭೂತವಾದಿ ಪದವನ್ನು ಅರ್ಥೈಸಿಕೊಂಡಂತೆ ಮೂಲಭೂತವಾದಿಯಾಗಿರಲಿಲ್ಲ. ಇದೆಲ್ಲ ಅಮೆರಿಕಾಕ್ಕೆ ಗೊತ್ತಿದ್ದರೂ ಅದು ಇರಾಕ್ ಮೇಲೆ ದಾಳಿ ಮಾಡಿತು. ಅದೇಕೆಂದರೆ ಅದರ ಉದ್ದೇಶಗಳೇ ಬೇರೆ ಆಗಿದ್ದವು. ಅದು ಇರಾಕ್ ಮೇಲೆ ಸಂಪೂರ್ಣ ನಿಯಂತ್ರಣ ಹೊಂದ ಬಯಸಿತ್ತು. ವಾಸ್ತವದಲ್ಲಿ ಇರಾಕ್ ಮೇಲೆ ಅಮೆರಿಕಾದ ದಾಳಿಯ ನಂತರವೇ ಇರಾಕ್‌ನಲ್ಲಿ ಅಲ್-ಖೈಯ್ದಾ ಬಲಶಾಲಿಯಾದದ್ದು. ಯುದ್ಧದ ನಂತರ ಎಷ್ಟೋ ಕಾಲದ ನಂತರವೂ ಹೆಚ್ಚು ಕಡಿಮೆ ಪ್ರತಿ ದಿನವೂ ಅಲ್-ಖೈಯ್ದಾದಿಂದ ಬಾಂಬ್ ಸ್ಫೋಟಗಳಾಗುತ್ತಿದ್ದು ಸಾವಿರಾರು ಜನ ಅಸು ನೀಗುತ್ತಿದ್ದಾರೆ.

ಇಷ್ಟೆಲ್ಲ ಆದ ನಂತರವೂ ಯುದ್ಧಕ್ಕಾಗಿ ಹಪಾಹಪಿಸುವ ಅಮೆರಿಕಾ ಇದೀಗ ಇರಾನ್ ವಿರುದ್ಧ ಯುದ್ಧಕ್ಕೆ ಸನ್ನದ್ಧವಾಗುತ್ತಿದೆ. ಅಣ್ವಸ್ತ್ರಗಳನ್ನು ತಯಾರಿಸುವುದು ತನ್ನ ಉದ್ದೇಶವಲ್ಲ, ತನ್ನ ಅಣ್ವಸ್ತ್ರ ಕಾರ್ಯಕ್ರಮವಿರುವುದು ನಾಗರಿಕ ಉದ್ದೇಶಗಳಾಗಿ ಎಂದು ಇರಾನ್ ಪದೇ ಪದೇ ಹೇಳುತ್ತಿದ್ದರೂ ಅಮೆರಿಕಾ ಅದನ್ನು ನಂಬಲು ಸಿದ್ಧವಿಲ್ಲ. ಇರಾನಿಗೆ ಅಣ್ವಸ್ತ್ರಗಳನ್ನು ತಯಾರಿಸುವ ಸಾಮರ್ಥ್ಯವಿದೆ ಎನ್ನುವುದಕ್ಕೆ ಸಂಬಂಧಿಸಿದಂತೆ ತನಗೆ ಯಾವುದೇ ವಿಶ್ವಾಸಾರ್ಹ ಪುರಾವೆ ಲಭ್ಯವಾಗಿಲ್ಲವೆಂದು ಅಂತರರಾಷ್ಟ್ರೀಯ ಅಣುಶಕ್ತಿ ಆಯೋಗ ಹೇಳಿದಾಗ್ಯೂ ಅಮೆರಿಕಾ ಇರಾನ್ ವಿರುದ್ಧ ಯುದ್ಧ ಮಾಡಬಯಸುತ್ತಿದೆ.

ತನ್ನ ದೃಢ ನಂಬಿಕೆಗಿಂತ ಹೆಚ್ಚಾಗಿ ಇಸ್ರೇಲ್‌ನ ಒತ್ತಡದಲ್ಲಿ ಇರಾನ್ ಬಳಿ ಶಸ್ತ್ರಾಸ್ತ್ರಕ್ಕೆ ಬಳಸುವ ಮಟ್ಟದ ಯುರೇನಿಯಂ ಇದೆ ಎಂಬ ಹೇಳಿಕೆ ನೀಡಲಾಗುತ್ತದೆ. ಇದು ಇರಾನ್ ವಿರುದ್ಧ ಇಸ್ರೇಲ್‌ನ ಪರೋಕ್ಷ ಯುದ್ಧವಾಗಲಿದೆ. ಮಧ್ಯ ಪ್ರಾಚ್ಯದ ನೀತಿಯ ವಿಷಯ ಬಂದಾಗ ಅಮೆರಿಕ ಇಸ್ರೇಲ್‌ನ ಹಿತಾಸಕ್ತಿಗಳನ್ನು ಅಲಕ್ಷಿಸಲು ಸಿದ್ಧವಾಗುವುದಿಲ್ಲ. ಈ ಯುದ್ಧಗಳಿಂದಾಗಿ ಅಮೆರಿಕಾದ ಅರ್ಥವ್ಯವಸ್ಥೆ ಗಂಭೀರ ಸಮಸ್ಯೆಗಳನ್ನೆದುರಿಸುತ್ತದೆ. ಆದಾಗ್ಯೂ ಅದು ತನ್ನ ಆಕ್ರಮಣಕಾರಿ ನೀತಿಯನ್ನು ಕೈಬಿಡಲು ಸಿದ್ಧವಿಲ್ಲ.

ಪಶ್ಚಿಮ, ವಿಶೇಷವಾಗಿ ಅಮೆರಿಕಾ ಸೋವಿಯೆಟ್ ಒಕ್ಕೂಟದ ಪತನದ ನಂತರದ ಒಬ್ಬ ವೈರಿಯ ಹುಡುಕಾಟದಲ್ಲಿ ಇತ್ತು. ಅದು ಇಸ್ಲಾಮೀ ಪ್ರದೇಶದಲ್ಲಿ ಅಂತಹವನೊಬ್ಬನನ್ನು ಕಂಡುಕೊಂಡಿತು. ಹಂಟಿಂಗ್ಟನ್ ಬಹು ನಿರೀಕ್ಷಿತ ಸ್ಪಷ್ಟನೆಯನ್ನು ನೀಡಿದರು. ವಾಸ್ತವದಲ್ಲಿ ನಾಗರಿಕತೆಗಳು ತಮ್ಮ ಜಾಯಮಾನಕ್ಕನುಗುಣವಾಗಿ ಘರ್ಷಣೆಗಿಳಿಯಲಾರವು, ಆದರೆ ಸಹಜವಾಗಿ ವಿಭಿನ್ನವಾಗಿರಬಲ್ಲವು. ಆದಾಗ್ಯೂ ಭಿನ್ನಾಭಿಪ್ರಾಯಗಳು ಎಂದರೆ ವೈರ ಇಲ್ಲಾ ಘರ್ಷಣೆಯಾಗಬೇಕಿಲ್ಲ. ನಾಗರಿಕತೆ ಕೆಲವು ಮೌಲ್ಯಗಳ ಹಾಗೂ ಸಂಸ್ಕಾರದ ಆಧಾರದಲ್ಲಿ ಅಸ್ತಿತ್ವಕ್ಕೆ ಬರುತ್ತದೆ. ನಾಗರಿಕತೆ ನಮ್ಮನ್ನು ನಾಗರಿಕಗೊಳಿಸುತ್ತದೆ ಹಾಗೂ ನಡಾವಳಿಯ ನಿಯಮಗಳನ್ನು ವಿಧಿಸುತ್ತದೆ. ಈ ನಡಾವಳಿಯ ನಿಯಮಗಳು ಸಹಬಾಳ್ವೆ, ಸಹಿಷ್ಣುತೆ ಹಾಗೂ ಪರಸ್ಪರರಿಗೆ ಗೌರವಗಳಿಗೆ ದಾರಿ ಮಾಡಿಕೊಡುತ್ತವೆ.

ಹಾಗಿದ್ದರೆ ನಾಗರಿಕತೆಗಳು ಘರ್ಷಣೆಗಿಳಿಯವುದು ಸಾಧ್ಯವೆ? ಘರ್ಷಣೆಗಿಳಿದರೆ ಅವು ನಾಗರಿಕತೆಗಳೆನಿಸಿಕೊಳ್ಳುವ ಅರ್ಹತೆ ಉಳಿಸಿಕೊಳ್ಳಲಾರವು. ಪಾಶ್ಚಾತ್ಯ ದೇಶಗಳು ಪ್ರಜಾಪ್ರಭುತ್ವವನ್ನು, ಅಷ್ಟೇ ಏಕೆ ಇತ್ತೀಚೆಗೆ ಬಹುಸಂಸ್ಕೃತಿಯನ್ನು ಒಪ್ಪಿಕೊಂಡಿವೆ. ಬಹುಸಂಸ್ಕೃತಿಯಿಂದಾಗಿ ಇತರ ಸಂಸ್ಕೃತಿಗಳು ಹಾಗೂ ನಾಗರಿಕತೆಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ. ಎರಡನೆಯ ಮಹಾಯುದ್ಧದ ನಂತರ ಹಿಂದಿನ ವಸಾಹತುಗಳಿಂದ ಅನೇಕ ಜನ ತಮ್ಮನ್ನು ಹಿಂದೊಮ್ಮೆ ವಸಾಹತುಗಳನ್ನಾಗಿಸಿದ್ದ ದೇಶಗಳಿಗೆ ವಲಸೆ ಹೋದರು. ಹೀಗಾಗಿ ಪಶ್ಚಿಮವು ಇಂದು ಹಿಂದಿನ ವಸಾಹತುಗಳ ಲಕ್ಷಾಂತರ ಜನರನ್ನು ಹೊಂದಿದೆ. ಆ ಕಾರಣಕ್ಕಾಗಿ ಅದು ಬಹುಸಂಸ್ಕೃತಿಯನ್ನು ಒಪ್ಪಿಕೊಂಡಿದೆ. ಹಿಂದಿನ ವಸಾಹತುಗಳ ಈ ಜನಕ್ಕೆ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಗಳಿದ್ದವು. ಈ ರೀತಿ ಅವರು ಬಹುಸಂಸ್ಕೃತಿಯನ್ನು ರಾಜ್ಯ ನೀತಿಯನ್ನಾಗಿ ಒಪ್ಪಿಕೊಂಡ ಮೇಲೆ ನಾಗರಿಕತೆಗಳ ಸಂಘರ್ಷದ ಪ್ರಶ್ನೆ ಎಲ್ಲಿ ಬರುತ್ತದೆ?

ಇದನ್ನು ಚೆನ್ನಾಗಿ ಅರಿತುಕೊಂಡೂ ಪಾಶ್ಚಾತ್ಯ ಶಕ್ತಿಗಳು ನಾಗರಿಕತೆಗಳ ಸಂಘರ್ಷದ ಸಿದ್ಧಾಂತವನ್ನು ಬಲು ಉತ್ಸಾಹದಿಂದ ಸಮರ್ಥಿಸಿದವು. ಹೀಗೆ ಸಿದ್ಧಾಂತ ಮತ್ತು ವ್ಯವಹಾರದಲ್ಲಿ ವ್ಯಾಪಕ ವಿರೋಧಾಭಾಸವಿದೆ. ಆದರೆ ವಾಸ್ತವವೇನೆಂದರೆ ನಾಗರಿಕತೆಗಳ ಸಂಘರ್ಷದ ಈ ಸಿದ್ಧಾಂತವನ್ನು ಅದರ ತಾರ್ಕಿಕತೆಗಿಂತ ಹೆಚ್ಚಾಗಿ ಬೇರೆ ಕಾರಣಗಳಿಗಾಗಿ ಒಪ್ಪಿಕೊಳ್ಳಲಾಯಿತು. ಅದರ ಸಮ್ಮತಿ ಅಮೆರಿಕಾದ ಯುದ್ಧ ನೀತಿಯನ್ನು ಹಾಗೂ ತನ್ನ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ನ್ಯಾಯಸಮ್ಮತಗೊಳಿಸಿತು. ಕಮ್ಯೂನಿಜಮ್ಮಿನ ಪತನದ ನಂತರ ಯಾವ ವೈರಿಯ ವಿರುದ್ಧವೂ ನ್ಯಾಟೊ ಶಕ್ತಿಗಳು ಒಗ್ಗೂಡಬೇಕಿರಲಿಲ್ಲ, ಸ್ವದೇಶದಲ್ಲಿ ಸರ್ಕಾರದ ನೀತಿಗಳಿಗೆ ಬೆಂಬಲ ಸೂಚಿಸಲು ಜನ ಒಗ್ಗೂಡಬೇಕಿರಲಿಲ್ಲ. ಯುದ್ಧಗಳು ಹಲವಾರು ಕಾರಣಗಳಿಗಾಗಿ ಅವಶ್ಯವಾಗಿದ್ದವು, ವಿಶೇಷವಾಗಿ ಮಧ್ಯ ಪ್ರಾಚ್ಯದ ತೈಲವನ್ನು ನಿಯಂತ್ರಿಸುವ ಹಾಗೂ ಸೇನಾ ಉದ್ಯಮ ಸಂಕೀರ್ಣದ ಚಲನಶೀಲತೆಗೆ ಕುಮ್ಮಕ್ಕು ನೀಡುವ ಕಾರಣಗಳಿಗಾಗಿ.

ಅಷ್ಟೇ ಅಲ್ಲ ಅಮೆರಿಕಾಕ್ಕೆ ಸಹ ತನ್ನ ಬಲಾಢ್ಯ ಶಕ್ತಿಯ ಬಿಂಬವನ್ನು ಉಳಿಸಿಕೊಳ್ಳಲು ಹಾಗೂ ಇತರ ದೇಶಗಳ ಮೇಲೆ ತನ್ನ ನೀತಿಗಳನ್ನು ಹೇರಲು ಅಲ್ಲೊಂದು ಇಲ್ಲೊಂದು ಯುದ್ಧದ ಅವಶ್ಯಕತೆ ಇತ್ತು. ಅದು ಇತರ ದೇಶಗಳನ್ನು

ಸುಲಿದು ತನ್ನ ಉಪಭೋಗದ ಮೇಲ್‌ಮಟ್ಟಗಳನ್ನು ಉಳಿಸಿಕೊಳ್ಳಲು ಇದು ಅನಿವಾರ್ಯವಾಯಿತು. ಸಹಜವಾಗಿ ಜಪಾನ್ ಹೊರತುಪಡಿಸಿ ಪಶ್ಚಿಮೇತರ ದೇಶಗಳ ಉಪಭೋಗದ ಮಟ್ಟಗಳಿಗೆ ಹೋಲಿಸಿದರೆ ಉಪಭೋಗದ ತುಂಬ ಮೇಲ್‌ಮಟ್ಟಗಳುಳ್ಳ ಅಮೆರಿಕಾ ಪಶ್ಚಿಮ ವಲಯದ ದೇಶಗಳ ನಾಯಕನೆನಿಸಿಕೊಂಡಿದೆ. ಪಶ್ಚಿಮ ವಲಯಕ್ಕೆ ಇಂತಹ ಉನ್ನತ ಜೀವನಮಟ್ಟವನ್ನು ಮುಂದುವರಿಸಲು ಅದು ತನ್ನ ಕೈಗಾರಿಕೆಗಳಿಗೆ ಕಚ್ಚಾ ಸರಕನ್ನು ಪಡೆಯುವದಕ್ಕಾಗಿ ಅಮೆರಿಕಾದ ಬಲಾಢ್ಯ ಶಕ್ತಿಯ ಸ್ಥಾನಮಾನ ಅನಿವಾರ್ಯವಾಗಿತ್ತು. ಆದ್ದರಿಂದ ಅದಕ್ಕೆ ಅಮೆರಿಕಾದಂತಹ ಬಲಾಢ್ಯ ಶಕ್ತಿ ಬೇಕಾಗುತ್ತದೆ.

ಅಮೆರಿಕಾದ ನೇತೃತ್ವದಲ್ಲಿ ಈ ಪಶ್ಚಿಮ ವಲಯಕ್ಕೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ತಯಾರಿಸುವ ತಂತ್ರಜ್ಞಾನ ಹೊಂದಿದೆ. ಈ ಶಸ್ತ್ರಾಸ್ತ್ರಗಳು ಎರಡು ಕಾರಣಗಳಿಗಾಗಿ ಅವಶ್ಯವಿದ್ದವು: ಒಂದು ಏಷ್ಯಾ ಹಾಗೂ ಆಫ್ರಿಕಾದ ದೇಶಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಹಾಗೂ ಎರಡು, ತಮ್ಮ ಆಳ್ವಿಕೆಯನ್ನು ಮುಂದುವರಿಸುವುದಕ್ಕಾಗಿ ಅವುಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರಿ ಅವುಗಳನ್ನು ಪರಸ್ಪರ ಕಚ್ಚಾಡುವಂತೆ ಮಾಡಲು. ಅಷ್ಟೇ ಅಲ್ಲ ಅವು ಶಸ್ತ್ರಾಸ್ತ್ರಗಳನ್ನು ಮಾರಿ ತಮ್ಮ ಅರ್ಥವ್ಯವಸ್ಥೆಗಳನ್ನು ಸದೃಢಗೊಳಿಸಿಕೊಳ್ಳುತ್ತವೆ ಹಾಗೂ ಅಪಾರ ಲಾಭ ಗಿಟ್ಟಿಸುತ್ತವೆ.

ನಾಗರಿಕತೆಗಳ ನಡುವೆ ಸಂವಾದ:

ಆಧುನಿಕ ಜಗತ್ತಿಗೆ ಅತ್ಯವಶ್ಯವಾಗಿರುವ ನಾಗರಿಕತೆಗಳ ನಡುವೆ ಸಂವಾದ ಹುಟ್ಟು ಹಾಕುವುದಾದರೂ ಹೇಗೆ? ಇಂದು ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವುದು ಅತ್ಯವಶ್ಯವಾಗಿದೆ. ವಿಜ್ಞಾನ, ತಂತ್ರಜ್ಞಾನ ಹಾಗೂ ಜಾಗತೀಕರಣದಿಂದಾಗಿ ನಮ್ಮ ಜಗತ್ತು ಜಾಗತಿಕ ಗ್ರಾಮ ಎನಿಸಿಕೊಳ್ಳುತ್ತಿರುವ ಒಂದು ಗ್ರಾಮವಾಗತೊಡಗಿದೆ. ಅದಕ್ಕೆ ಸಾಕ್ಷ್ಯದ ಅವಶ್ಯಕತೆ ಇದ್ದರೆ ನ್ಯೂಯಾರ್ಕ್ ಗೋಪುರಗಳ ಮೇಲಿನ ಹಲ್ಲೆ ಇದನ್ನು ಸಾಬೀತುಪಡಿಸುತ್ತದೆ. ಭಯೋತ್ಪಾದಕ ದಾಳಿಗಳು ಇಪ್ಪತ್ತೊಂದನೆಯ ಶತಮಾನದಲ್ಲಿ ತುಂಬ ಹೆಚ್ಚಾಗುತ್ತಿವೆ.

ಆಧುನಿಕ ತಂತ್ರಜ್ಞಾನ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಆ ಭಯೋತ್ಪಾದಕರಿಗೆ ಲಭ್ಯವಾಗಿರದಿದ್ದರೆ ನ್ಯೂಯಾರ್ಕ್ ಗೋಪುರಗಳ ಮೇಲೆ ಧಾಳಿ ಸಾಧ್ಯವಾಗುತ್ತಿರಲಿಲ್ಲ. ಅವರು ಒಂದಿಲ್ಲೊಂದು ದೇಶದಿಂದ ಸುಲಭವಾಗಿ ಅಣ್ವಸ್ತ್ರಗಳನ್ನು ಪಡೆಯಲೂಬಹುದೆನ್ನುವ ಆತಂಕವಿದೆ. ಹಾಗೇನಾದರೂ ಆಗಿಬಿಟ್ಟರೆ ಜಗತ್ತು ಅಣ್ವಸ್ತ್ರ ಯುದ್ಧವನ್ನೆದುರಿಸಬೇಕಾಗುತ್ತದೆ. ಅದು ಜಗತ್ತಿಗೆ ಅಂತಿಮ ವಿಪತ್ತಾಗಬಲ್ಲದು. ಅಮೆರಿಕಾ ಬಳಿಯೇ ಈ ಭೂಮಂಡಲವನ್ನು ಅನೇಕ ಸಲ ನಾಶಪಡಿಸಬಲ್ಲ ಅಸಂಖ್ಯಾತ ಅಣ್ವಸ್ತ್ರಗಳಿವೆ.

ಅತಿ ಉಪಭೋಗದಿಂದಾಗಿ ನಮ್ಮ ಪರಿಸರವೇ ಅಪಾಯದ ಅಂಚಿನಲ್ಲಿದೆ. ಪ್ರತಿಯೊಂದು ಯುದ್ಧ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳು (ಹೆಚ್ಚಿನ ಸಂದರ್ಭಗಳಲ್ಲಿ ಅಣು ಕ್ಷಿಪಣಿಗಳು) ನಮ್ಮ ಪರಿಸರವನ್ನು ಸರಿಪಡಿಸಲಾಗದಷ್ಟು ನಾಶ ಮಾಡುತ್ತವೆ. ಪ್ರತಿಯೊಂದು ಯುದ್ಧ, ಮನುಷ್ಯ ಜೀವಗಳ ಲೆಕ್ಕದಲ್ಲಿ ಆಗುವ ಹಾನಿಯನ್ನು ಹೊರತುಪಡಿಸಿದಂತೆ ನಮ್ಮ ಪರಿಸರವನ್ನು ನಾಶ ಮಾಡುತ್ತದೆ. ಇರಾಕ್‌ನಲ್ಲಿ ದಿಗ್ಬಂಧನದ ಅವಧಿಯ ಹಾಗೂ ನಂತರದ ಯುದ್ಧ ಹತ್ತು ಲಕ್ಷಕ್ಕೂ ಹೆಚ್ಚು ಮನುಷ್ಯರನ್ನು ಬಲಿ ತೆಗೆದುಕೊಂಡಿತು. ಅದು ಸಂಪೂರ್ಣವಾಗಿ ಹುಸಿ ವಾದವನ್ನಾಧರಿಸಿದ್ದರಿಂದ ಏನನ್ನೂ ಸಾಧಿಸಲಿಲ್ಲ

ಶಾಂತಿಯೊಂದೇ ಪರ್ಯಾಯವಾಗಿದೆ. ಇಂತಹ ವಿನಾಶಕಾರಿ ಶಸ್ತ್ರಾಸ್ತ್ರಗಳು ಸುಲಭವಾಗಿ ಲಭ್ಯವಾಗಿರುವಾಗ ಇಂತಹ ಶಸ್ತ್ರಾಸ್ತ್ರಗಳನ್ನು ಹೊಂದಿದವರೂ ಸುರಕ್ಷಿತವಾಗಿರಲಾರರು. ಇಂದು ಅಮೆರಿಕಾ ಇನ್ಯಾವುದೇ ದೇಶದಷ್ಟೇ ಅಸುರಕ್ಷಿತವಾಗಿದೆ. ಮೇಲೆ ಸೂಚಿಸಿರುವಂತೆ ನಿಜವಾದ ಸುರಕ್ಷತೆ ನೈತಿಕ ಮೌಲ್ಯಗಳಿಂದ ಸಾಧ್ಯವೇ ಹೊರತು ಶಸ್ತ್ರಾಸ್ತ್ರಗಳಿಂದಲ್ಲ. ಭಯೋತ್ಪಾದನೆ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡರೂ ಅದು ಎಂದಿಗೂ ಸುರಕ್ಷಿತವಾಗಿರಲಾರದು. ಅದು ಎಲ್ಲರಿಗೂ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆಯಂತಹ ತನ್ನದೇ ಸಾಂವಿಧಾನಿಕ ಮೌಲ್ಯಗಳನ್ನು ಗೌರವಿಸಿದರೆ ಹಾಗೂ ಕೆಲವು ನಿರ್ದಿಷ್ಟ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸುವ ಮೂಲಕ ತನ್ನ ಉಪಭೋಗವನ್ನು ಕಡಿತಗೊಳಿಸಿದರೆ ಮಾತ್ರ ಅದು ಸುರಕ್ಷಿತವಾಗಿರಬಲ್ಲದು.

ಕೃತಿಗಿಂತ ಮಾತು ಸುಲಭ. ದುರದೃಷ್ಟವಶಾತ್ ರಷ್ಯಾದೊಂದಿಗೆ ಪೈಪೋಟಿಗಿಳಿದು ಅದು ಕಮ್ಯೂನಿಜಮ್ಮಿಗಿಂತ ಬಂಡವಾಳಶಾಹಿ ಶ್ರೇಷ್ಠವಾದುದು ಎನ್ನುವುದನ್ನು ಸಾಬೀತು ಮಾಡಲು ತನ್ನ ಉಪಭೋಗದ ಸ್ತರವನ್ನು ಹೆಚ್ಚಿಸುತ್ತಲೇ ಹೋಯಿತು ಹಾಗೂ ಸೋವಿಯೆಟ್ ಒಕ್ಕೂಟವನ್ನು ಪರಾಜಿತಗೊಳಿಸಲು ತನ್ನ ಶಸ್ತ್ರಾಸ್ತ್ರ ಸಂಗ್ರಹದ ಮೇಲ್ಮೆಯನ್ನು ಸಹ ಹೆಚ್ಚಿಸಿಕೊಳ್ಳುತ್ತ ಹೋಯಿತು. ಈಗ ಸೋವಿಯೆಟ್ ಒಕ್ಕೂಟದ ಅವಸಾನದ ನಂತರ ಮುಸ್ಲಿಂ ದೇಶಗಳ ವಿರುದ್ಧ ಯುದ್ಧ ಸಾರುತ್ತ ತನ್ನ ಹಳೆಯ ನೀತಿಯನ್ನೇ ಮುಂದುವರಿಸಲೆತ್ನಿಸುತ್ತಿದೆ.

ಅದು ತನ್ನ ನೀತಿಗಳ ಪುನರಾವಲೋಕನ ಮಾಡಿಕೊಳ್ಳಲೇಬೇಕು. ತನ್ನ ನೈತಿಕ ಸ್ತರಗಳನ್ನು ಸುಧಾರಿಸಿಕೊಂಡು ತನಗೆ ಪ್ರಾಮಾಣಿಕವಾಗಿ ಶಾಂತಿ, ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳು ಮಹತ್ವದ್ದಾಗಿವೆ ಎನ್ನುವುದರ ಬಗ್ಗೆ ಜಗತ್ತಿಗೆ ಭರವಸೆ ನೀಡಬೇಕು. ಅದಕ್ಕಾಗಿ ಅಮೆರಿಕಾ ಸೇನಾ ಉದ್ಯಮ ಸಂಕೀರ್ಣ ಹಾಗೂ ಇಸ್ರೇಲಿನ ಜಿಯಾನಿಸ್ಟ್‌ರ ಒತ್ತಡಗಳಿಗೆ ಪ್ರತಿರೋಧ ಒಡ್ಡಬೇಕು. ಇಸ್ರೇಲ್ ತನ್ನ ನೆರೆ ರಾಷ್ಟ್ರಗಳೊಂದಿಗೆ ಸರಿಯಾಗಿ ನಡೆದುಕೊಂಡು ಶಾಂತಿಯುತವಾಗಿ ಸಹಬಾಳ್ವೆ ಮಾಡುವುದು ಹಾಗೂ ಪ್ಯಾಲೆಸ್ಟೈನ್‌ನ್ನು ವಸಹತುವನ್ನಾಗಿ ಮಾಡುವುದನ್ನು ತಡೆಯುವುದಕ್ಕಾಗಿ ಅದರ ಮೇಲೆ ನಿಗಾ ವಹಿಸಬೇಕು. ಪ್ಯಾಲೆಸ್ಟೈನ್ ಸಮಸ್ಯೆಯ ಪರಿಹಾರ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ತುಂಬ ಸಹಕಾರಿಯಾಗಬಲ್ಲದು. ಇದು ಇಂದಿನ ಅತ್ಯಂತ ಜ್ವಲಂತ ಸಮಸ್ಯೆಯಾಗಿದೆ.

ಇವು ತುಂಬ ಸಂಕೀರ್ಣವಾದ ಸಮಸ್ಯೆಗಳು. ಅವುಗಳನ್ನು ಪರಿಹರಿಸಲು ಬಲವಾದ ರಾಜಕೀಯ ಎದೆಗಾರಿಕೆ ಬೇಕಾಗುತ್ತದೆ. ನಮಗೆ ಶಾಂತಿಯುತ ಜಗತ್ತು ಬೇಕಿದ್ದರೆ ಬೇರೆ ಪರ್ಯಾಯವಿಲ್ಲ. ಒಮ್ಮೆ ಪಟ್ಟಭದ್ರ ಹಿತಾಸಕ್ತಿಗಳನ್ನು, ಸಂಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಮಟ್ಟಹಾಕಿದರೆ ಅಂತರ್‌ನಾಗರಿಕತೆಯ ಸಂವಾದ ಹೆಚ್ಚು ಅರ್ಥಪೂರ್ಣವಾಗಬಲ್ಲದು.

ಈ ಸಂಕೀರ್ಣ ಪ್ರಕ್ರಿಯೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕು. ಅದರ ಪರಿವರ್ತನೆ ಹಾಗೂ ವಿಕಾಸದ ಹಂತಗಳನ್ನು ಸೂಕ್ತವಾಗಿ ಗ್ರಹಿಸಿಕೊಳ್ಳಬೇಕು. ಅಂದಾಗ ಮಾತ್ರ ನಡಾವಳಿಯ ವಿಭಿನ್ನ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗಬಲ್ಲದು. ಸಾಮಾನ್ಯವಾಗಿ ಮಾಧ್ಯಮದ ವರ್ತನೆಗೆ ಪಾಂಡಿತ್ಯದ ಗಾಳಿಯೇ

(50ನೇ ಪುಟಕ್ಕೆ)

ವ್ಯಂಗ್ಯವೆಂದರೆ ಅಮೆರಿಕಾ ವಿಧ್ವಂಸಕಾರಿ ಯುದ್ಧಗಳನ್ನು ಸಾರುತ್ತ ಬಂದಿದ್ದರೂ, ಅದರ ಆದೇಶದ ಮೇರೆಗೆ ಅಮೆರಿಕಾದ ಮಾಧ್ಯಮವು ಇಸ್ಲಾಮನ್ನು ಜಿಹಾದಿ ಧರ್ಮವೆಂದೂ 'ಕಾಫಿರ್'(ಧರ್ಮನಿಂದಕ)ರ ವಿರುದ್ಧ ಜಿಹಾದ್ ಸಾರುತ್ತಿದೆ ಎಂದೂ ಬಣ್ಣಿಸಿತು. ಯಾವುದೇ ಒಂದು ಇಸ್ಲಾಮೀ ಸರ್ಕಾರವು ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಟವರ್ಸ್ ಮೇಲೆ ದಾಳಿ ಮಾಡಿದ್ದ ಒಸಾಮಾನನ್ನು ಬೆಂಬಲಿಸಲಿಲ್ಲ ಎನ್ನುವುದು ಗಮನಾರ್ಹವಾದದ್ದು. ಇರಾನ್ ಮೊದಲು ಮಾಡಿ ಎಲ್ಲ ಇಸ್ಲಾಮೀ ದೇಶಗಳು ಅದನ್ನು ಖಂಡಿಸಿದ್ದವು.

ಗೋಸಂಗಿಗಳ ಆರ್ಥಿಕ ಮೂಲಾಂಶವಾದ ಗೋವುಗಳನ್ನು ತಮ್ಮ ಕೈವಶಮಾಡಿಕೊಂಡ ಆಕ್ರಮಣಶೀಲ ಆರ್ಯರು ಗೋಸಂಗಿಗಳ ಮೇಲೆ ನಿರಂತರ ದಾಳಿ ಮಾಡಿ, ಅವರನ್ನು ಸೋಲಿಸಿ ಬರಿಗೈಲಿ ದಕ್ಷಿಣ ಭಾರತದ ಕಡೆಗೆ ಓಡಿಸಿದರು. ದಕ್ಷಿಣಾಂತ್ಯಕ್ಕೆ ಬಂದು ನೆಲೆಸಿದ ಗೋಸಂಗಿಗಳು ಗೋಹೀನರಾಗಿ ಕೇವಲ 'ಗೋಸಂಗ'ಗಳನ್ನು ಮಾತ್ರ ಕಟ್ಟಿಕೊಂಡು, ಮೇಲ್ವರ್ಗದವರ ಸತ್ತ ಗೋವುಗಳನ್ನು ಸಿಗಿದು ಚರ್ಮವನ್ನು ಪಡೆದು, ಮಾಂಸ ತಿನ್ನುವುದನ್ನು ರೂಢಿಸಿಕೊಂಡರು. ನಾಗರಿಕತೆಯ ಬೆಳವಣಿಗೆಯೊಂದಿಗೆ ಗ್ರಾಮ ನಿರ್ಮಾಣ, ನಗರೀಕರಣ ಪ್ರಕ್ರಿಯೆಗಳೊಂದಿಗೆ ಹೊಂದಾಣಿಕೆಯಾಗಿ ಸಾಮಾಜಿಕವಾಗಿ ವಿಕಾಸಗೊಂಡ ಗೋಸಂಗಿಗಳು ಕಾಲಾನಂತರದಲ್ಲಿ ಮಾದಿಗರಾಗಿ ಗುರುತಿಸಿಕೊಂಡರೆ, ಈ ಪ್ರಕ್ರಿಯೆಯಲ್ಲಿ ಹೊಂದಿಕೊಳ್ಳಲಾಗದವರು ಬುಡಕಟ್ಟು ಹಂತದಲ್ಲಿಯೇ ಕಾಡುವಾಸಿಗಳಾಗಿ ತಮ್ಮ ಸಾಮಾಜಿಕ ಸಾಂಸ್ಕೃತಿಕ ಮೂಲ ನೆಲೆಯಲ್ಲಿಯೇ ಗೋಸಂಗಿಗಳಾಗಿ ಉಳಿದುಕೊಂಡರು.

ಗೋಸಂಗಿ ಜಂಬೂ ಗುಡಿಗರ್ಭದಲ್ಲಿ ಉರಿಯುವ ರಾಗದೀಪ

ವಡ್ಡಗೆರೆ ನಾಗರಾಜಯ್ಯ

'ಗೋಸಂಗಿ' ಎಂಬುದು ಇಂದಿನ ಆಧುನಿಕ ಸಮಾಜದಲ್ಲಿ ಸ್ಥಿರ ಸಮುದಾಯವಾಗಿ ನೆಲೆಸಿರುವ ಆದಿಜಾಂಬವ ಅಥವಾ ಮಾದಿಗ ಜನಾಂಗದ ಮೂಲ ಪಳೆಯುಳಿಕೆಯಾಗಿ ಅಲೆಮಾರಿ ಬುಡಕಟ್ಟು ಹಂತದಲ್ಲಿಯೇ ಉಳಿದುಕೊಂಡಿರುವ ಒಂದು ಆದಿ ಜನಾಂಗ. ಆರ್ಯರ ಆಕ್ರಮಣಕ್ಕೆ ಸಿಲುಕಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಅಲೆಮಾರಿಗಳಾಗಿ ತಮ್ಮ 'ಗೋಸಂಗ'ಗಳೊಡನೆ ಬಂದು ಆಂಧ್ರ ಮತ್ತು ಕರ್ನಾಟಕದ ಕಾಡು ಕಣಿವೆಗಳಲ್ಲಿ ನೆಲೆಸಿ 'ಗೋಸಂಗಿ'ಗಳೆಂದು ಗುರುತಿಸಿಕೊಂಡರು. ಕೇರಳ ಮತ್ತು ತಮಿಳುನಾಡಿನಲ್ಲಿ ಅತ್ಯಂತ ವಿರಳವಾಗಿ ನೆಲೆಸಿರುವ ಗೋಸಂಗಿಗಳು ಆಂಧ್ರದ ಕರೀಂ ನಗರ, ನಿಜಾಮಾಬಾದ್ ಮತ್ತು ವಾರಂಗಲ್ ಜಿಲ್ಲೆಗಳಲ್ಲಿ ಸಾಂಧ್ರವಾಗಿ (ಸು.9000) ಹಾಗೂ ಕರ್ನಾಟಕದ ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಗದಗ, ಗುಲಬರ್ಗಾ, ಹಾಸನ, ಹಾವೇರಿ, ಕಾರವಾರ, ಕೊಪ್ಪಳ, ರಾಯಚೂರು, ಶಿವಮೊಗ್ಗ, ತುಮಕೂರು, ಉಡುಪಿ ಹೀಗೆ ಹದಿನೈದು ಜಿಲ್ಲೆಗಳಲ್ಲಿ (ಸು.2000) ನೆಲೆಸಿರುವುದು ಕಂಡುಬರುತ್ತದೆ. ಈ ಆದಿಜನಾಂಗವೇ ನಾಗರಿಕ ವಿಕಾಸಪೂರ್ವದ ಮಾದಿಗರ ಮೂಲ ನೆಲೆ.

'ಗೋಸಂಗ'ಗಳನ್ನು ಕಟ್ಟಿಕೊಂಡಿದ್ದ ಗೋವಳಿಗ-ಚರ್ಮಕಾರ ಕುಶಲ ಕರ್ಮಿಗಳಾದ ಗೋಸಂಗಿಗಳು ಉತ್ತರ ಭಾರತದಲ್ಲಿದ್ದಷ್ಟೂ ಕಾಲ, ಗೋವುಗಳ ಸಾಕಣೆಯೊಂದಿಗೆ ಚರ್ಮದ ಪರಿಕರಗಳನ್ನು ತಯಾರಿಸಿಕೊಡುವ ಚಮ್ಮಾರಿಕೆಯ ಕಸುಬನ್ನು ತಮ್ಮ ವೃತ್ತಿಯನ್ನಾಗಿ ಅವಲಂಬಿಸಿದ್ದರು. ಚರ್ಮಗಾರಿಕೆಯು ಪಶುಪಾಲಕ ವೃತ್ತಿಯ ಭಾಗವಾಗಿ ಗೋಸಂಗಿಗಳಿಗೆ ಒಲಿದ ಮಹೋನ್ನತ ಕುಶಲ ಕಲೆ. ಚರ್ಮಕಾರರಾಗಿದ್ದ ಕಾರಣದಿಂದಾಗಿ ಚಮ್ಮಾರಿಕೆಗೆ ಬೇಕಾದ ಮೂಲವಸ್ತುವಾದ ಚರ್ಮವನ್ನು ಪಡೆಯಲು ಹರಿತವಾದ ಆಯುಧಗಳಿಂದ ಗೋವುಗಳನ್ನು ಕಡಿದು ಚರ್ಮವನ್ನು ಸುಲಿದು ತೆಗೆಯುತ್ತಿದ್ದರು.

ಗೋಸಂಗಿಗಳ ಆರ್ಥಿಕ ಮೂಲಾಂಶವಾದ ಗೋವುಗಳನ್ನು ತಮ್ಮ ಕೈವಶಮಾಡಿಕೊಂಡ ಆಕ್ರಮಣಶೀಲ ಆರ್ಯರು ಗೋಸಂಗಿಗಳ ಮೇಲೆ ನಿರಂತರ ದಾಳಿ ಮಾಡಿ, ಅವರನ್ನು ಸೋಲಿಸಿ ಬರಿಗೈಲಿ ದಕ್ಷಿಣ ಭಾರತದ ಕಡೆಗೆ ಓಡಿಸಿದರು. ದಕ್ಷಿಣಾಂತ್ಯಕ್ಕೆ ಬಂದು ನೆಲೆಸಿದ ಗೋಸಂಗಿಗಳು ಗೋಹೀನರಾಗಿ ಕೇವಲ 'ಗೋಸಂಗ'ಗಳನ್ನು ಮಾತ್ರ ಕಟ್ಟಿಕೊಂಡು, ಮೇಲ್ವರ್ಗದವರ ಸತ್ತ ಗೋವುಗಳನ್ನು ಸಿಗಿದು ಚರ್ಮವನ್ನು ಪಡೆದು, ಮಾಂಸ ತಿನ್ನುವುದನ್ನು ರೂಢಿಸಿಕೊಂಡರು. ನಾಗರಿಕತೆಯ ಬೆಳವಣಿಗೆಯೊಂದಿಗೆ ಗ್ರಾಮ ನಿರ್ಮಾಣ, ನಗರೀಕರಣ ಪ್ರಕ್ರಿಯೆಗಳೊಂದಿಗೆ ಹೊಂದಾಣಿಕೆಯಾಗಿ ಸಾಮಾಜಿಕವಾಗಿ ವಿಕಾಸಗೊಂಡ ಗೋಸಂಗಿಗಳು ಕಾಲಾನಂತರದಲ್ಲಿ ಮಾದಿಗರಾಗಿ ಗುರುತಿಸಿಕೊಂಡರೆ, ಈ ಪ್ರಕ್ರಿಯೆಯಲ್ಲಿ ಹೊಂದಿಕೊಳ್ಳಲಾಗದವರು ಬುಡಕಟ್ಟು ಹಂತದಲ್ಲಿಯೇ ಕಾಡುವಾಸಿಗಳಾಗಿ ತಮ್ಮ ಸಾಮಾಜಿಕ ಸಾಂಸ್ಕೃತಿಕ ಮೂಲ ನೆಲೆಯಲ್ಲಿಯೇ ಗೋಸಂಗಿಗಳಾಗಿ ಉಳಿದುಕೊಂಡರು.

ಕಾಡಿನಲ್ಲಿ ಸಿಗುತ್ತಿದ್ದ ಗೆಡ್ಡೆಗೆಣಸು, ಸೊಪ್ಪು, ನಾರುಬೇರುಗಳು ಮುಂತಾದ ಕಾಡಿನ ಉತ್ಪನ್ನಗಳನ್ನು ತಿಂದು ಜೀವಿಸತೊಡಗಿದ ಗೋಸಂಗಿಗಳು ಕಾಡು ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದು, ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು, ಗಂಧದ ಎಣ್ಣೆ

(ಅತ್ತರ್) ತಯಾರಿಸುವುದು, ಹೆಂಡ ಇಳಿಸುವುದು ಮುಂತಾದ ಕಲೆ ಮತ್ತು ಕಸುಬುಗಳನ್ನು ತಮ್ಮ ಜೀವನ ನಿರ್ವಹಣೆಗಾಗಿ ಶೋಧಿಸಿಕೊಂಡರು. ಕಾಡುಜೀವಿಗಳಾಗಿ ಗೋಹೀನರಾಗಿ ಗೋಸಾಕಣೆ ಮತ್ತು ಗೋಮಾಂಸ ಭಕ್ಷಣೆಯಿಂದ ದೂರವಾದರು. ಹಾಗಾಗಿಯೇ ಇವತ್ತಿನ ಸಮಾಜದಲ್ಲಿ ಕಂಡುಬರುವ ಗೋಸಂಗಿಗಳು ಗೋಮಾಂಸ ಸೇವನೆ ಮಾಡುವುದಾಗಲೀ, ಚರ್ಮಗಾರಿಕೆಯನ್ನು ವೃತ್ತಿಯನ್ನಾಗಿ ಕೈಗೊಳ್ಳುವುದಾಗಲೀ ಮಾಡುತ್ತಿಲ್ಲ.

ಗೋಸಂಗಿಗಳಿಂದ ವಿಕಾಸಗೊಂಡ ಮಾದಿಗರು ಮಾತ್ರ ಬಿಟ್ಟಿ ಚಾಕರಿಯ ಹೆಸರಿನಲ್ಲಿ ಸತ್ತದನಗಳನ್ನು ಹೊತ್ತೊಯ್ದು ಸುಲಿಯುವ, ಅವುಗಳ ಮಾಂಸವನ್ನು ಸೇವಿಸುವ ಹಾಗೂ ಚಮ್ಮಾರಿಕೆಯನ್ನು ವೃತ್ತಿಯನ್ನಾಗಿ ಕೈಗೊಂಡು ಮಲಿನ ಕೆಲಸಗಳನ್ನು ನಿರ್ವಹಿಸುತ್ತಾ ಸಾಮಾಜಿಕ ದಾಸ್ಯಕ್ಕೆ ಈಡಾದರು. ಕೆಲವು ಪ್ರದೇಶಗಳಲ್ಲಿ ಹೊಲೆಯರೂ ಸಹ ಸತ್ತ ದನಗಳನ್ನು ಹೊತ್ತೊಯ್ದು ಚರ್ಮ ಸುಲಿದು ಮಾಂಸ ತಿನ್ನುತ್ತಾರಾದರೂ ಚಮ್ಮಾರಿಕೆಯಲ್ಲಿ ಮಾದಿಗರು ಮಾತ್ರ ತೊಡಗಿದ್ದಾರೆ. ಕಾಡುಜೀವಿಗಳಾದ ಪೂರ್ವದ ಗೋಸಂಗಿಗಳು ಅಲೆಮಾರಿ ಭಿಕ್ಷುಕರಾಗಿ ಪರಿವರ್ತನೆ ಹೊಂದಿದರು. ಥರ್ಸ್ಟನ್ (1909) ಅಭಿಪ್ರಾಯದಲ್ಲಿ ಗೋಸಂಗಿಗಳು ಮಾದಿಗರ ಬಳಿ ಭಿಕ್ಷೆ ಬೇಡಿ ಬದುಕುವ ಒಂದು ಅಲೆಮಾರಿ ಸಮುದಾಯ.

ಆಕ್ಸ್‌ಫರ್ಡ್ ಯೂನಿವರ್ಸಿಟಿ ಟ್ರಸ್ಟ್ ಸಂಸ್ಥೆಯಿಂದ ಆಂತ್ರಪಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಹೊರತಂದಿರುವ People of India, National Series Volume II (2010)ರ The Scheduled Castes ಗ್ರಂಥದಲ್ಲಿ ಕೆ.ಎಸ್. ಸಿಂಗ್‌ರವರು ಗೋಸಿಕಾ, ಗೋಸಿಕೋಳ್ಳು, ಗೋಸಂಗೋಳ್ಳು ಎಂದು ಗುರುತಿಸಿರುವ ಗೋಸಂಗಿಗಳನ್ನು ಕುರಿತು 'ಗೋವಳಿಗರಾದ ಗೋಸಂಗಿಗಳು ಗೋಮಾಂಸ ಸೇವನೆ ಮಾಡುವುದರೊಂದಿಗೆ, ಗೋಮಾಂಸವನ್ನು ತಲೆ ಮೇಲೆ ಹೊತ್ತು ತಿರುಗಿ ಮಾರಾಟ ಮಾಡುತ್ತಾರೆ. ಉರ್ದು ಭಾಷೆಯಲ್ಲಿ 'ಗೋಶ್' ಎಂದರೆ ಮಾಂಸ. ಇದರಿಂದಾಗಿ 'ಗೋಸಂಗಿ'ಗಳೆಂದು ಹೆಸರು ಬಂದಿದೆ' ಎಂದು ವಿವರಿಸಿದ್ದಾರೆ. ವಾಸ್ತವವಾಗಿ ನಾಡಿಗೆ ಬಂದು ನೆಲೆಸಿ ಮಾದಿಗರಾಗಿ ಗುರುತಿಸಿಕೊಂಡ ಗೋಸಂಗಿಯವರು ಚಾರಿತ್ರಿಕ ಪಣವ್ಯಾಜ್ಯದ ಸಂದರ್ಭದವರೆಗೂ ತಮ್ಮನ್ನು 'ಮಾದಿಗರು' ಅಥವಾ 'ಗೋಸಂಗಿಗಳು' ಎಂದೇ ಗುರುತಿಸಿಕೊಂಡಿದ್ದರು. ಪಣವ್ಯಾಜ್ಯವನ್ನು ಕುರಿತ ಮಹತ್ವದ ದಾಖಲೆಯಾದ ಕಂಚಿ ಶಾಸನ ಅಥವಾ ಕಂಚಿ ಜಯರೇಖೆಯಲ್ಲಿ ಛಲವಾದಿ (ಹೊಲೆಯ) ಮತ್ತು ಗೋಸಂಗಿಗಳಿಗೆ (ಮಾದಿಗರಿಗೆ) ಯಾವ ಯಾವ ಸಾಮಾಜಿಕ ಸ್ಥಾನಮಾನ ಹಾಗೂ ಬಿರುದು ಬಾವಲಿಗಳನ್ನು ನೀಡಲಾಗಿತ್ತೆಂಬುದನ್ನು ವಿವರಿಸಲಾಗಿದೆ. ಪಣವ್ಯಾಜ್ಯದ ನಂತರದ ಕಾಲಘಟ್ಟದಲ್ಲಿ ಆದಿಜಾಂಬವರು, ಮಾತಂಗರು, ಮಾದಿಗರು ಎಂಬ ಜನಾಂಗವಾಚಿ ಶಬ್ದಗಳು ಮಾತ್ರ ವ್ಯಾಪಕವಾಗಿ ಚಲಾವಣೆಗೆ ಬಂದವು.

Encyclopaedia of Scheduled Castes in India, Volume I (2007:281) ಗ್ರಂಥದಲ್ಲಿ ನಂದೂರಾಮ್‌ರವರು 'ಗೋವು' ಮತ್ತು 'ಹಿಂಸಕ' ಎಂಬ ಎರಡು ಶಬ್ದಗಳಿಂದ ಉಪಲಬ್ಧವಾದ 'ಗೋಹಿಂಸಕ' ಅರ್ಥಾತ್ ಗೋವುಗಳನ್ನು ಹಿಂಸಿಸುವ ವ್ಯಕ್ತಿ 'ಗೋಸಂಗಿ'ಯಾಗಿ, ಗೋಹಿಂಸಕ ಸಮುದಾಯವೇ 'ಗೋಸಂಗಿ'ಯಾಗಿದೆಯೆಂದು ಗೋಸಂಗಿ ಪದ ನಿಷ್ಪತ್ತಿಯ ಹಿನ್ನೆಲೆಯನ್ನು ವಿಶ್ಲೇಷಿಸಿರುತ್ತಾರೆ. ಚರ್ಮಗಾರಿಕೆಗೆ ಬೇಕಾದ ಚರ್ಮವನ್ನು ಪಡೆಯಲು ಗೋವಿನ ಚರ್ಮವನ್ನು ಸುಲಿಯುವ ಕೆಲಸದಲ್ಲಿ ತೊಡಗಿದ್ದ ಗೋಸಂಗಿಯವರು ಗೋಹಿಂಸಕರಾಗಿ ನಂದೂರಾಮರಿಗೆ ಕಂಡುಬಂದಿರುವುದು ಸಹಜವೇ ಆಗಿದೆ. ದ್ರಾವಿಡರ ಮೇಲೆ ಆರ್ಯರು ದಿಗ್ವಿಜಯ ಸಾಧಿಸಿದ ನಂತರದ ದಿನಗಳಲ್ಲಿ ಜೀವಂತ ಗೋವುಗಳನ್ನು ಹಿಂಸಿಸಿ ಕೊಂದು, ಗೋಮಾಂಸ ಭಕ್ಷಣೆ ಮಾಡುತ್ತಿದ್ದವರು ಬ್ರಾಹ್ಮಣರೇ ಹೊರತು ದ್ರಾವಿಡರಾದ ಗೋಸಂಗಿಗಳಲ್ಲ.

ಜಾಂಬವ ವೇಷಧಾರಿ

ಸತ್ತ ದನಗಳನ್ನು ಹೊತ್ತೊಯ್ದು, ಅವುಗಳ ಚರ್ಮ ತೆಗೆದು, ಸತ್ತ ದನಗಳ ಮಾಂಸ ಸೇವಿಸುವುದು ಗೋಸಂಗಿಯವರಿಗೆ ಮೀಸಲಾಯಿತು. ಗೋಹಿಂಸಕರಾಗಿದ್ದ ಪೂರ್ವದ ಗೋಸಂಗಿಗಳು ಗೋಮಾಂಸ ಸೇವನೆಯನ್ನು ತಮ್ಮ ಆಹಾರ ಸಂಸ್ಕೃತಿಯನ್ನಾಗಿಸಿಕೊಂಡಿದ್ದರು. ಅವರು ಗೋಮಾಂಸ ಸೇವಿಸುತ್ತಿದ್ದ ಕಾಲದಲ್ಲಿ ಗೋಮಾಂಸವು ಸರ್ವ ಸಮಾಜ ಮಾನ್ಯವಾಗಿದ್ದ ಆಹಾರವಾಗಿತ್ತು. ತ್ರಿಮೂರ್ತಿಗಳಿಗೂ ಸಹ ಗೋಸಂಗಿಗಳು ಗೋಮಾಂಸ ಹಂಚಿರುವರೆಂದು ಸಾರುವ ಜನಪದ 'ಸಿಂದ್ ಕಾವ್ಯ'ವನ್ನು ಕೋಟಿಗಾನಹಳ್ಳಿ ರಾಮಯ್ಯನವರು ತಮ್ಮ ಪ್ರಸಿದ್ಧ 'ಸಿಂದ್ ಮಾದಿಗರ ಸಂಸ್ಕೃತಿ'ಯಲ್ಲಿ ಸಂಪಾದಿಸಿ ನೀಡಿದ್ದಾರೆ. ಸಿಂದ್ ಕಾವ್ಯದ ಕೆಲವು ಉಲ್ಲೇಖಗಳು ಹೀಗಿವೆ–

ಗೋವಿಂದ ಗೋವಿಂದ ಅಂತಾರೆ
ಈ ಪ್ರಪಂಚದಲ್ಲಿ ಗೋವಿಂದ ಗೋವಿಂದ ಅಂತಾರೆ
ಗೋಪುಗೆ ಸಂದ ಗೋಸಾಂಗನು ಯಾವ ಕುಲವಯ್ಯ (ಪು.275)

ಗೋವಿಂದ ಗೋವಿಂದ ಅಂತೀರಿ ಸ್ವಾಮಿ
ಗೋವಿಂದ ಹುಟ್ಟಿದ ತಾವೆಲ್ಲಿದು
ಗೋವನ್ನ ಕೊಯ್ದು ಗೋವನ್ನ ಅರಿದು
ಗೋವಿಂದ ಹಿಡಿಸುವ ಗೋಸಂಗಿಯೇ ಲಿಂಗ। ತಾಲಿಲ್ಲೋ

ಆ ಗೋವನ್ನ ಕೊಯ್ದು ಆ ಚರ್ಮದ ಮೇಲೆನೆ
ನಾಲ್ಕು ಮೂಲೆಗು ನಾಲ್ಕು ಪಾಲಾದ್ರು ಹಾಕಿದೆ।
ವಿಷ್ಣುದು ಒಂದು ಪಾಲು ಈಶ್ವರನದು ಒಂದು ಪಾಲು
ಬ್ರಹ್ಮನದು ಒಂದು ಪಾಲು ಜಾಂಬವನದು ಒಂದು ಪಾಲು

ವಿಷ್ಣುವಿಗೆ ಕೊಟ್ಟ ಪಾಲು ಸೇರಿಸಿಕೊಂಡು
ಸುದ್ದ ನಾಮವ ಮಾಡಿದ ಸೂತ್ರದಂತೆ ಅಣ್ಣ।
ಈಶ್ವರನಿಗೆ ಕೊಟ್ಟ ಪಾಲು ಒಟ್ಟು ಮಾಡಿಕೊಂಡು
ಈಭೂತಿ ಮಾಡಿದನು ಯಿಶ್ವದಲ್ಲಿ ಅಣ್ಣ

ಬ್ರಹ್ಮನಿಗೆ ಕೊಟ್ಟ ಪಾಲು ಒಟ್ಟು ಮಾಡಿಕೊಂಡು
ಚಂದನವ ಮಾಡಿದನು ಗೋಪ್ಯದಲ್ಲಿ ಅಣ್ಣ
ಜಾಂಬವನ ಪಾಲೆಲ್ಲ ಜಗತ್ತಿಗೆ ಹಂಚಿದ। ತಾಲಿಲ್ಲೋ (ಪು:279)

ಎಲ್ಲಾ ಸಮಾಜವಂದಿಗರ ಆಹಾರ ಸಂಸ್ಕೃತಿಯಲ್ಲಿ ಸಹಜವಾಗಿ ಬೆರೆತು ಹೋಗಿದ್ದ ಗೋಮಾಂಸ ಸೇವನೆಯನ್ನು ಕೀಳುಗಾಣುತ್ತಿರುವ ಇವತ್ತಿನ ಸಾಮಾಜಿಕ ಧೋರಣೆಯನ್ನು ಪ್ರಶ್ನಿಸುವ ಜನಪದ 'ಸಿಂದ್ ಕಾವ್ಯ'ವು ಗೋಸಂಗಿಗಳ ಸಂಸ್ಕೃತಿಯನ್ನು ಪ್ರತಿಪಲನಗೊಳಿಸುತ್ತದೆ. ಮಾತ್ರವಲ್ಲ ಸ್ವಾರ್ಥಪರ ತ್ರಿಮೂರ್ತಿಗಳಾದ ಬ್ರಹ್ಮ–ವಿಷ್ಣು–ಮಹೇಶ್ವರರು ತಮಗೆ ಹಂಚಿದ ಗೋಮಾಂಸವನ್ನು ಸುದ್ದನಾಮ, ಈಭೂತಿ, ಚಂದನಗಳನ್ನಾಗಿ ರೂಪಾಂತರಿಸಿ ತಮ್ಮ ಹಣೆಗೆ ಅಲಂಕಾರ ಸಾಮಗ್ರಿಯಾಗಿ ಬಳಸುತ್ತಾರೆ. ಗೋಮಾಂಸವನ್ನು ಜನರಿಗೆ ಗೊತ್ತುಪಡಿಸದೆ ಬಚ್ಚಿಟ್ಟು ಅಲಂಕಾರ ಸಾಮಗ್ರಿಯನ್ನಾಗಿ ರೂಪಾಂತರಿಸಿ ಸಾಮಾಜಿಕ ಮೇಲರಿಮೆ ಗಳಿಸಲು ಅವರು ಯತ್ನಿಸುತ್ತಾರೆ. ಆದರೆ ಜಾಂಬವನು ಮಾತ್ರ ಗೋಮಾಂಸವನ್ನು ಇಡೀ ಜಗತ್ತಿಗೆ ಹೊಟ್ಟೆಪಾಡು ನೀಗಿಸಲು ಹಂಚುತ್ತಾನೆ. ಗೋಪಿಗೆ ಒಲಿದ ಗೋಸಾಂಗನು ಅಥವಾ ಕೃಷ್ಣನೂ ಸಹ ಇದೇ ಗೋಸಂಗಿ ಕುಲದವನೆಂದು 'ಸಿಂದ್ ಕಾವ್ಯ' ಪ್ರಚುರಪಡಿಸಿದೆ.

ತೆಲುಗಿನಲ್ಲಿ ತಂಗಿರಾಲ ಸುಬ್ಬರಾವು ಸಂಪಾದಿಸಿರುವ 'ವೀರಗಾಥಲು–2' ಕೃತಿಯಲ್ಲಿ ಬೀರಿನೀಡು ಎಂಬ ಗೋಸಂಗಿ ವೀರನೊಬ್ಬನು ಕಾಟಮರಾಜನ ಸೇನೆಯಲ್ಲಿ ತನ್ನ ಗೋಸಂಗಿ ಸೇನಾದಳದ ನೇತೃತ್ವ ವಹಿಸಿ ಸಿದ್ದಿರಾಜನ ವಿರುದ್ಧ ಹೋರಾಡುವ ಪ್ರಸಂಗವು ಚಿತ್ರಣಗೊಂಡಿದೆ. ಶಿವನಾಗಮಯ್ಯನ ಉದರ ಸಂಜಾತನಾದ ಬೀರಿನೀಡು 'ಗೋಸಂಗಿ ಬಲುಡು, ಕುಲನಾಯಕೋತ್ತಮುಡು, ಜಗತಿಪೈ ಗೋಸಂಗಿ ಜಾಂಬವ ಕುಲುಡು' (ಪುಟ. 689) ಎಂಬೆಲ್ಲಾ ವಿಶೇಷಣಗಳಿಂದ ಸ್ತುತಿಸಲ್ಪಟ್ಟಿರುವನಲ್ಲದೆ, 'ಮಾತಂಗಿ ಗೋತ್ರ ಪಾಲುಂಡು ಜನುಲೆನ್ನಗಾ ನುರ್ವಿ ಜಾಂಬವ ಕುಲುಡು ಬೀರನ್ನಯನು ಪೇರ ಪೃಥ್ವಿ ಪೈ ಪೊಗಡ ತಮರಂಗ ಗೋಸಂಗುಲಂದುರುನಮುಡು' ಎಂದೂ ಬಹುವಾಗಿ ಕೊಂಡಾಡಲ್ಪಟ್ಟಿದ್ದಾನೆ.

ಡಾ. ಚಿಲುಮೂರಿ ಶ್ರೀನಿವಾಸರಾವು ಅವರು ತೆಲುಗಿನಲ್ಲಿ ಬರೆದಿರುವ 'ಮಾದಿಗಲ ಚರಿತ್ರ–ಸಂಸ್ಕೃತಿ' (2010) ಪುಸ್ತಕದಲ್ಲಿ ನೀಡಿರುವ ಮಾಹಿತಿಯ ಪ್ರಕಾರ ಆಂಧ್ರದ

ತೆಲಂಗಾಣದಲ್ಲಿ ನಲ್ಗೊಂಡ ಜಿಲ್ಲೆ ಭುವನಗಿರಿ ತಾಲ್ಲೂಕಿನ ಕೊನಲುಪಾಕ ಗ್ರಾಮದಲ್ಲಿರುವ ಮಾದಿಗ ಜನಾಂಗಕ್ಕೆ ಸೇರಿದ 'ನುಲುಕ ಚಂದಯ್ಯ ಮಠಂ'ದಲ್ಲಿ ತಾಳೆಗರಿಯಲ್ಲಿ ಬರೆಯಲಾಗಿರುವ 'ಗೋಸಂಗಿ ಪುರಾಣಂ' ಎಂಬ ಪುರಾತನ ಕಾವ್ಯಕೃತಿಯಿದೆ. ಈ ಮಠವು 'ದಕ್ಷಿಣ ಕಾಶಿ ಕೊನಲುಪಾಕ ಮಠಂ' ಎಂದು ಹೆಸರಾಗಿದ್ದು 'ನುಲುಕ ಸಂಗಯ್ಯಲು' ಪೀಠಾಧಿಕಾರಿಗಳಾಗಿ ಮಠದ ಆಡಳಿತವನ್ನು ನಿರ್ವಹಿಸುತ್ತಾ ಬಂದಿದ್ದಾರೆ. 'ನುಲುಕ ಸಂಗಯ್ಯಲು' ಜಾಂಬವ ಗುರುಗಳಾಗಿದ್ದು ತಾಳೆಗರಿಯ ಗ್ರಂಥದಲ್ಲಿರುವ ಮಾತಂಗಮುನಿಯನ್ನು ಕುರಿತ 'ಗೋಸಂಗಿ ಪುರಾಣ' ವನ್ನು ಪಠಿಸುತ್ತಾರೆ. ಜಾಂಬವ ಪುರಾಣವನ್ನು ಕಥಾ ಕಾಲಕ್ಷೇಪದ ರೂಪದಲ್ಲಿ ಮಂಡಿಸುವ ಸಿಂದ್ ಭಾಗವತರೂ ಸಹ 'ಗೋಸಂಗಿ' ವೇಷ ಧರಿಸಿ ಗೋಸಂಗಿ ಪುರಾಣವನ್ನು ಯಕ್ಷಗಾನ ರೂಪದಲ್ಲಿ ಪ್ರದರ್ಶಿಸುತ್ತಾರೆ. ಕರೀಂ ನಗರ ಜಿಲ್ಲೆಯ ಕಮಾನ್‌ಪೂರ್ ಮಂಡಲದ ಜೂಪಲ್ಲಿ ಗ್ರಾಮದಲ್ಲಿರುವ 'ಶ್ರೀ ಲಕ್ಷ್ಮೀನಾರಾಯಣ ಕಲಾ ಮಂಡಲಿ'ಯ ಸಿಂದ್ ಮಾದಿಗ ಕಲಾವಿದರು ಆರಂಜ್ಯೋತಿ ಪುರಾಣ, ಜಾಂಬವ ಪುರಾಣ ಮತ್ತು ಗೋಸಂಗಿ ಪುರಾಣಗಳನ್ನು ಯಕ್ಷಗಾನ ಕಲಾರೂಪದಲ್ಲಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಇದೇ ಮಾದರಿಯಲ್ಲಿ ಗುಂಟೂರು ಜಿಲ್ಲೆ ಅಮರಾವತಿ ಮಂಡಲದಲ್ಲಿ ನೆಲೆಸಿರುವ ದಕ್ಕಲಿಗ ಕಲಾವಿದರಾದ ಬಾಣಾಲ ಸಾಂಬಯ್ಯ ಮತ್ತು ತಂಡದವರು ಹಾಗೂ ನಲ್ಗೊಂಡ ಜಿಲ್ಲೆ ರಾಜುಪೇಟ ಮಂಡಲದ ಸೋಮಾರಂ ಗ್ರಾಮದಲ್ಲಿರುವ ಪಿಲ್ಲುಟು ಸಂಜೀವ, ಗುಂಡಾಲ ಮಂಡಲದ ಸುದ್ದಾಲ ಗ್ರಾಮದಲ್ಲಿರುವ ಗಡ್ಡಂ ಸಂಜೀವ ಮುಂತಾದ ಸಿಂದ್ ಮಾದಿಗ ಕಲಾವಿದರು ಆರಂಜ್ಯೋತಿ ಪುರಾಣವನ್ನು ಬುರ್ರಕಥಾ ರೂಪದಲ್ಲಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಅವರು ಈ ಪುರಾಣವನ್ನು ಚಿತ್ರಪಟಗಳ ಮೂಲಕವೂ ಮೌಖಿಕವಾಗಿ ನಿರೂಪಿಸುತ್ತಾರೆ.

ಗೋಸಂಗಿ ಪುರಾಣ, ಆರಂಜ್ಯೋತಿ ಪುರಾಣ ಮತ್ತು ಆದಿಜಾಂಬವ ಪುರಾಣಗಳು ಜಂಬೂ ಕುಲೋನ್ನತಿ ಮತ್ತು ವೃತ್ತಿಗೌರವಗಳನ್ನು ವಿವರಿಸುವ ಆದಿಮ ಪುರಾಣಗಳಾಗಿವೆ. ಆದಿಜಾಂಬವ ಚರಿತ್ರೆ ಮತ್ತು ಸಂಸ್ಕೃತಿಯ ನೆನಪುಗಳನ್ನು ಪ್ರಚಾರಕ್ಕೆ ತರುವ ಮತ್ತು ಸಂಗೋಪನೆ ಮಾಡುವ ಉದ್ದೇಶದಿಂದಲೇ ಮೌಖಿಕರು ಇಂತಹ ಸೃಜನಶೀಲ ಕುಲಪುರಾಣಗಳನ್ನು ರಚಿಸಿದ್ದಾರೆ ಅನ್ನಿಸುತ್ತದೆ. ಕರ್ನಾಟಕದಲ್ಲಿ ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಮಾತಂಗಪುರ, ಸುಗ್ಗಂಡಹಳ್ಳಿ, ಹುಳದೇನಹಳ್ಳಿ, ಕೂರ್ನಹೊಸಹಳ್ಳಿ ಹಾಗೂ ಕೋಲಾರ ತಾಲ್ಲೂಕಿನ ಆಲಹಳ್ಳಿ, ಗುಲಗಂಜಿಗುರ್ಕಿ, ಚಿಂತಾಮಣಿ ತಾಲ್ಲೂಕಿನ ಮಂಗಾಳಪಲ್ಲಿ, ಶ್ರೀರಾಮಪುರ ಕಾಲೋನಿ ಮುಂತಾದ ಕಡೆ ನೆಲೆಸಿರುವ ಸಿಂದ್ ಮಾದಿಗ ಕಲಾವಿದರು ಆದಿಜಾಂಬವ ಪುರಾಣ, ಆರಂಜ್ಯೋತಿ ಪುರಾಣ, ಗೋಸಂಗಿ ಪುರಾಣ, ಸಿಂದ್‌ಕತೆ ಮುಂತಾದವು ಗಳನ್ನು ಯಕ್ಷಗಾನ ಹಾಗೂ ಭಾಗವತ ರೂಪದಲ್ಲಿ ಪ್ರದರ್ಶಿಸುತ್ತಾ ಬಂದಿರುತ್ತಾರೆ.

ಕಲೆ ಮತ್ತು ಭಿಕ್ಷಾಟನೆಯನ್ನೇ ಕುಲಕುಸುಬು ಮಾಡಿಕೊಂಡು ಮಹೋನ್ನತ ಕಲಾವಿದರಾಗಿ ಶಾಲೆಯಿಂದಾಚೆಯ ಜನಪದ ಬದುಕಿನ ಅನುಭವಗಳಿಂದಲೇ ಅಪಾರ ಶಬ್ದ ಸಂಪತ್ತನ್ನು ಸಂಪಾದಿಸಿಕೊಂಡು, ಚುಂಬಕ ಕಂಠಸಿರಿಯಿಂದ ಹಾಡು, ನಾಟಕ, ಸಂಗೀತ, ಪುರಾಣ, ಕಥಾ ಕಾವ್ಯಗಳನ್ನು ನಿರೂಪಿಸುತ್ತಾ ಜನರನ್ನು ಆಕರ್ಷಿಸುತ್ತಿದ್ದ ಸಿಂದ್ ಮಾದಿಗರು, ದಕ್ಕಲಿಗರು, ಗೋಸಂಗಿಗಳು, ಬುಡ್ಗಜಂಗಾಲರು ಮುಂತಾದ ಹುಟ್ಟು ಕಲೆಗಾರರು ಆಧುನಿಕ ಸರಕು ಸಂಸ್ಕೃತಿಯ ಮೋಹಜಾಲಕ್ಕೆ ಸಿಲುಕಿರುವ ಇಂದಿನ ಜನಮಾನಸದಲ್ಲಿ ತಮ್ಮ ಕಲಾ ಕೌಶಲ್ಯವನ್ನು ವಿಸ್ತರಿಸಲಾಗದೆ ಕ್ರಮೇಣ ತಮ್ಮ ಕಲಾ ನೆಲೆಗಳಿಂದಲೇ ನಿರ್ವಸತಿಗರಾಗುತ್ತಿದ್ದಾರೆ. ಜಂಬೂ ಕುಲ ಸಂಸ್ಕೃತಿಯ ಮೂಲ ಸ್ವರೂಪವನ್ನು ಪ್ರಾತಿನಿಧಿಕ ಮಟ್ಟದಲ್ಲಾದರೂ ಪ್ರತಿನಿಧಿಸಬಲ್ಲ ಹಾಗೂ ಪುರಾಣ ಪ್ರಪಂಚದ ಅದ್ಭುತ ಕಾವ್ಯಗಳನ್ನು ಇವತ್ತಿನ ಸಮಾಜದ ಎಲ್ಲಾ ಜನವರ್ಗಗಳಿಗೂ, ಮುಂದಿನ ತಲೆಮಾರಿಗೂ ಸಾಗಿಸಬಲ್ಲ ಸಮರ್ಥ ಸಂಸ್ಕೃತಿ ವಾಹಕರಾಗಿ ಇಂದಿಗೂ ಉಳಿದುಕೊಂಡಿರುವುದು ಕಾಲದ ಭಾಗ್ಯ!

ಗೋಸಂಗಿಯವರ ಜನಪದ ಕಥೆಯೊಂದು ಗೋಸಂಗಿಯೇ ಭೂಮಂಡಲದ ಸೃಷ್ಟಿಕರ್ತನೆಂದು, ಭೂಮಂಡಲ ಹುಟ್ಟಿದ ತರುವಾಯ ಸಕಲ ಜೀವಕೋಟಿಗಳನ್ನು ಸಲಹುವ ಸಲುವಾಗಿ ಮೊಟ್ಟ ಮೊದಲಿಗೆ ಗೋಸಂಗಿಗಳು ಹುಟ್ಟಿ, ನಂತರ ಕುಲ ಹದಿನೆಂಟು ಜಾತಿಗಳು ಹುಟ್ಟಿದವೆಂದು ತಿಳಿಸುತ್ತದೆ.

ಕರ್ನಾಟಕದ ಗೋಸಂಗಿಗಳನ್ನು ಕುರಿತು ಅಧ್ಯಯನ ಮಾಡಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಗೋಸಂಗಿ; ಒಂದು ಜನಾಂಗಿಕ ಅಧ್ಯಯನ' ಕೃತಿಯನ್ನು ಬರೆದಿರುವ ಗೋಸಂಗಿ ಕುಲಸ್ಥನೇ ಆಗಿರುವ ಹಾಗೂ ಗೋಸಂಗಿ ಸಮುದಾಯದ ಮುಖಂಡನಾಗಿರುವ ಕೆ.ಚಾವಡೆ ಲೋಕೇಶ್ ಮತ್ತು ಗೋಸಂಗಿ ಕುಲಸ್ವಾಮಿಯವರಾದ ಅಪ್ಪಾಜಿ ಎಸ್ ಸಿಂಧೆಯವರು ನನ್ನ ನೆಚ್ಚಿನ ಸ್ನೇಹಿತರು. ಅಲೆಮಾರಿಗಳ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿರುವ 'ಕರ್ನಾಟಕ ಅಲೆಮಾರಿ ಬುಡಕಟ್ಟು ಮಹಾಸಭಾ'ದಲ್ಲಿ ಅವರು ನನ್ನೊಂದಿಗೆ ಕ್ರಿಯಾಶೀಲ ಕಾರ್ಯಕರ್ತರಾಗಿ ದುಡಿಯುತ್ತಿರುವ. ಲೋಕೇಶ್ ಮತ್ತು ಅಪ್ಪಾಜಿಯವರು ಹೇಳುವ ಪ್ರಕಾರ ಗೋಸಂಗಿಗಳಾದ ತಾವು ಆದಿಜಾಂಬವ ವಂಶದ ಮೂಲ ಸಂತತಿಯವರಾಗಿದ್ದು, ನೀರೇ ನಿರ್ಝಂಕಾರವಾಗಿದ್ದ ಜಲಗೋಳವನ್ನು ಭೂಮಿಯನ್ನಾಗಿ ರೂಪಿಸಿದ ಆದಿಜಾಂಬವ ತಾತನ ಮಕ್ಕಳ ಪೈಕಿ ಹಿರಿಮಗನಾಗಿ ಜನಿಸಿದವನೇ ಗೋಸಂಗಿ. ಅಲೆಮಾರಿಗಳಾದ ಗೋಸಂಗಿಗಳು ಹಂಪೆ ಸೀಮೆಯಲ್ಲಿ ಮಾದಿಗರೊಡನೆ ಸಂಪರ್ಕ ಸಾಧಿಸಿ ರಾಮ–ರಾವಣರ ಯುದ್ಧದಲ್ಲಿ ರಾಮನ ಸೇನೆಯ ಸಿಪಾಯಿಗಳಾಗಿ ಸೇರಿಕೊಂಡರೆಂದೂ, ರಾಮನಿಗೆ ನೆರವಾದ ಆದಿಜಾಂಬವನೇ ತಮ್ಮ ಆರಾಧ್ಯ ನಾಯಕನೆಂದೂ ಅವರು ಹೇಳಿಕೊಳ್ಳುತ್ತಾರೆ.

ಇಂದಿನ ಹೊಸಪೇಟೆ ಬಳಿಯಲ್ಲಿರುವ ಮಾತಂಗ ಪರ್ವತ, ಜಂಬುನಾಥೇಶ್ವರನ ಗುಡಿಯ ಪರಿಸರದ ಹಂಪೆಯು ಮಾದಿಗರ ಸಾಂಸ್ಕೃತಿಕ ಕೇಂದ್ರವಾಗಿ, ಆ ಪರಿಸರವೇ ಜಾಂಬವಂತ ವಾಲಿ–ಸುಗ್ರೀವರು ಬದುಕಿದ್ದ ಕಿಷ್ಕಿಂದೆಯಾಗಿ ಚರಿತ್ರಕಾರರಿಂದ ಗುರುತಿಸಲ್ಪಟ್ಟಿದೆ. ವಿಜಯನಗರ ಸಾಮ್ರಾಜ್ಯದ ಹಂಪೆಯು ಕೃಷ್ಣದೇವರಾಯನ ರಾಜಧಾನಿಯಾಗಿ ಸಾಹಿತ್ಯ, ಕಲೆ, ವಾಸ್ತುಶಿಲ್ಪ, ವಾಣಿಜ್ಯ ಮುಂತಾದ ಕ್ಷೇತ್ರಗಳಲ್ಲಿ ಅಪ್ರತಿಮ ಪ್ರಗತಿ ಸಾಧಿಸಿ 'ಮುತ್ತು ರತ್ನಗಳನ್ನು ಬೀದಿಗಳಲ್ಲಿ ಅಳೆದು ಮಾರಾಟ ಮಾಡುತ್ತಿದ್ದರು' ಎಂದು ವೈಭವದ ಸುವರ್ಣಯುಗವಾಗಿ ಚರಿತ್ರೆಯ ಪುಟಗಳನ್ನು ಅಲಂಕರಿಸಿದೆ.

ಹಂಪಿಯ ಪರಿಸರದಲ್ಲಿ ಇಂದಿಗೂ ಗೋಸಂಗಿಗಳು ವಾಸಿಸುತ್ತಿದ್ದು, ಕೃಷ್ಣದೇವರಾಯನ ಸೇನೆಯಲ್ಲಿ ತಾವು ಸೈನಿಕರಾಗಿ ಕಾದಾಡಿದ ನೆನಪುಗಳನ್ನು ಜನಪದ ಕಥೆಗಳಾಗಿ ನಿರೂಪಿಸುತ್ತಾರೆ. ಹಾಗೆಂದೇ ಶಿಷ್ಟ ಕವಿ ಕೃಷ್ಣದೇವರಾಯನು ತನ್ನ ಪ್ರಸಿದ್ಧ 'ಅಮುಕ್ತ ಮಾಲ್ಯದ' ಎಂಬ ತೆಲುಗು ಕೃತಿಯ ಆರನೆ ಆಶ್ವಾಸದಲ್ಲಿ ಗೋಸಂಗಿಗಳನ್ನು ಗುರುತಿಸಿ, ಮೊದಲ ಬಾರಿಗೆ 'ಮಹಾತ್ಮ'ರೆಂದು ಕೊಂಡಾಡಿದ್ದಾನೆ. ಕೃಷ್ಣದೇರಾಯನು ತನ್ನ ದಿಗ್ವಿಜಯ ಯಾತ್ರೆಯ ಭಾಗವಾಗಿ ತೆಲಂಗಾಣ ಪ್ರಾಂತ್ಯವನ್ನೆಲ್ಲ ಪರ್ಯಟನೆ ಮಾಡಿದನು. ಅವನು ಗೋಸಂಗಿ ಕುಲವನ್ನು ಕಂಡಿದ್ದು, ಅವರ ಬಗ್ಗೆ ಕೇಳಿ ತಿಳಿದುಕೊಂಡದ್ದು ಹಾಗೂ ಅವರ ಸೇನೆಯ ನೆರವು ಪಡೆದದ್ದು ಇಲ್ಲಿಯೇ ಅನ್ನಿಸುತ್ತದೆ.

ಕೃಷ್ಣದೇವರಾಯನು ರಚಿಸಿರುವ 'ಅಮುಕ್ತ ಮಾಲ್ಯದ' ಕೃತಿಯು ತೆಲುಗಿನ ಪಂಚಮಹಾಕಾವ್ಯಗಳ ಪೈಕಿ ಪ್ರಮುಖ ಕಾವ್ಯವಾಗಿದೆ. ಈ ಕೃತಿಯನ್ನು ಕುರಿತು ವಿಶ್ವನಾಥ ಸತ್ಯನಾರಾಯಣರವರು ತೆಲುಗಿನಲ್ಲಿ ಭಾಷ್ಯವೊಂದನ್ನು ಬರೆದು, ಅದರಲ್ಲಿ 'ಗೋಸಂಗಿ'ಗಳ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿರುತ್ತಾರೆ. ವೇದಂ ವೆಂಕಟರಾಯ ಶಾಸ್ತ್ರಿ ಎಂಬ ಮತ್ತೊಬ್ಬ ತೆಲುಗು ವಿದ್ವಾಂಸರು 'ಅಮುಕ್ತ ಮಾಲ್ಯದ' ಕಾವ್ಯದಲ್ಲಿ ಕೃಷ್ಣದೇವರಾಯನು 'ಗೋಸಂಗಿ ಮಹಾತ್ಮ'ರೆಂದು ಗೌರವಿಸಿದರುವುದನ್ನು ಗುರುತಿಸಿ, ಅದನ್ನು 'ಸಂಜೀವನಿ ವಾಖ್ಯ'ವೆಂದು ಮೆಚ್ಚಿಕೊಂಡಿದ್ದಾರೆ. ಈ ಭಾಷ್ಯವು 1929ರಲ್ಲಿ ಪ್ರಥಮ ಮುದ್ರಣ ಕಂಡಿದೆ. 1964ರಲ್ಲಿ

ದ್ವಿತೀಯ ಮುದ್ರಣ ಕಂಡಿರುವ 'ಸಂಜೀವನಿ ವಾಖ್ಯ' ಎಂಬ ಭಾಷ್ಯದಲ್ಲಿ ಮಾದಿಗರಾದ 'ಗೋಸಂಗಿ'ಯವರನ್ನು ಮಾಲ(ಹೊಲೆಯ)ರೆಂದು ವೇದಂ ಮಾರ್ಪಡಿಸಿರುತ್ತಾರೆ. ವೇದಂ ವೆಂಕಟರಾಯ ಶಾಸ್ತ್ರಿಯವರ ತಪ್ಪು ಗ್ರಹಿಕೆಯಿಂದಾದ ಕ್ರಮವನ್ನು ಖಂಡಿಸಿರುವ ಆಂಧ್ರದ ದಲಿತ ಕವಿ ಡಾ.ಎಂಡ್ಲೂರಿ ಸುಧಾಕರ್, ಕೃಷ್ಣದೇವರಾಯ ವಿರಚಿತ 'ಅಮುಕ್ತ ಮಾಲ್ಯದ' ಕೃತಿಯಲ್ಲಿ 'ಮಾಲ' ಶಬ್ದ ಎಲ್ಲಿಯೂ ಉಲ್ಲೇಖಗೊಂಡಿಲ್ಲದಿರುವ ಬಗ್ಗೆ ಗಮನ ಸೆಳೆಯುವ ಸಲುವಾಗಿ ಹಾಗೂ ಗೋಸಂಗಿಯವರ ಬಗ್ಗೆ ಸರಿಯಾದ ಮಾಹಿತಿ ನೀಡುವ ಉದ್ದೇಶದಿಂದಾಗಿ, ಜಾಂಬವ ಪರಂಪರೆಯ ಗೋಸಂಗಿಯವರ ಬದುಕು ಮತ್ತು ಚಾರಿತ್ರಿಕ ನೆನಪುಗಳನ್ನು ಆಧರಿಸಿ 'ಗೋಸಂಗಿ' ಎಂಬ ಹೆಸರಿನಲ್ಲಿಯೇ ದೀರ್ಘಕಾವ್ಯವನ್ನು ರಚಿಸಿರುತ್ತಾರೆ.

ಡಾ.ಎಂಡ್ಲೂರಿ ಸುಧಾಕರ್‌ರವರು ಕರ್ನಾಟಕಾಂಧ್ರ ಚರಿತ್ರೆಯಲ್ಲಿ ಮಹತ್ವದ ರಾಜನಾದ ಕೃಷ್ಣದೇವರಾಯನ 500ನೇ ಪಟ್ಟಾಭಿಷೇಕ ಮಹೋತ್ಸವದ ನೆನಪಿಗಾಗಿ 'ಗೋಸಂಗಿ' ಕಾವ್ಯವನ್ನು 05\07\2010ರ ಆಂಧ್ರಜ್ಯೋತಿ ಪತ್ರಿಕೆಯ 'ಸಾಹಿತ್ಯವೇದಿಕ' ಪುರವಣಿಯಲ್ಲಿ ಪ್ರಕಟಿಸಿದರು. ಈ ಕಾವ್ಯವನ್ನು ರಚಿಸಲೇಬೇಕಾಗಿ ಬಂದ ಅನಿವಾರ್ಯತೆಯನ್ನು ಕುರಿತು 'ಗೋಸಂಗಿ ಕಾವ್ಯ'ದ (ಮೇ 2011) ಪ್ರಸ್ತಾವನೆಯಲ್ಲಿ, 'ಚರಿತ್ರೆಯಲ್ಲಿ ಕೆಳಕ್ಕೆ ಬಿದ್ದು ಮಣ್ಣಿಗೆ ಸೇರಿದ ಮಾಣಿಕ್ಯದಂತಿರುವ ಮನುಷ್ಯರ ಚರಿತ್ರೆ ಹೊರಕ್ಕೆ ಬರಬೇಕು. ಇನ್ನು ಈ ಸಮಾಜದಲ್ಲಿ ಓಟಿನ ಹಕ್ಕು, ಕೂಡಿ ಬಾಳುವ ಹಕ್ಕುಗಳೂ ಸಹ ಇಲ್ಲದಿರುವ ಸಂಚಾರ ಜೀವಿಗಳಿಗೆ ಸಮುಚಿತವಾದ ಸ್ಥಾನ ದೊರೆಯಬೇಕು. ಯಾವತ್ತೂ ಹೊಲೆಮಾದಿಗರ ಚರ್ಚೆಗಳೇನು? ದಲಿತ ಕುಲಗಳಲ್ಲಿಯೇ ಗುರುತಿಸಿಕೊಂಡಿರುವ ಅತಿ ದಲಿತ ಕುಲಗಳ ಮಾತೇನು? ಅವರ ಪಾಡೇನು? ಸಾಹಿತ್ಯದಲ್ಲಿ ಮತ್ತು ಸಮಾಜದಲ್ಲಿ ಅವರಿಗೆ ಸಿಕ್ಕಿರುವ ಸ್ಥಾನವೇನು? ಗೋಸಂಗಿಗಳಿಗೆ, ದಕ್ಕಲಿಗರಿಗೆ ಇನ್ನೂ ಮುಂತಾದ ತಳದ ಜಾತಿಗಳಿಗೆ ಎಂತಹ ಸಾಮಾಜಿಕ ನ್ಯಾಯ ದೊರೆಯಬೇಕು? ಲಕ್ಷಾದಿ ಗೋಸಂಗಿಗಳ ಉಸಿರು ಕೃಷ್ಣದೇವರಾಯನಿಗೆ ಸೋಕಿರುವುದೇನೋ?' ಎಂದು ಭಾವುಕವಾಗಿ ವಿವರಿಸಿದ್ದಾರೆ.

'ಗೋಸಂಗಿ' ಎಂಬ ದೀರ್ಘಕಾವ್ಯವನ್ನು ಬರೆದು ತನ್ನನ್ನೂ ಗೋಸಂಗಿಗಳೊಂದಿಗೆ ಗುರುತಿಸಿಕೊಂಡಿರುವ ಎಂಡ್ಲೂರಿ ಸುಧಾಕರ್,

ನನ್ನನ್ನು ಗುರುತು ಹಿಡಿಯಲಿಲ್ಲವೇ ಕೃಷ್ಣರಾಯ
ನಾನು ಪ್ರಭೂ! ಚರ್ಮಕಾರನು
ಭೂಮಿ ಆಕಾಶದಲ್ಲಿ ಪ್ರತಿಧ್ವನಿಸಿದ
ಜಂಬೂದ್ವೀಪದ ಆದಿಸ್ವರ ಗೋಸಂಗಿಯು
ಎಂದು ತನ್ನನ್ನು 'ಗೋಸಂಗಿ'ಯೆಂದೇ ಪರಿಚಯಿಸಿಕೊಂಡಿದ್ದಾರೆ.

ಗೋಸಂಗಿಗಳು ತಮ್ಮದೇ ಕುಲಬಂಧುಗಳೊಂದಿಗೆ ವ್ಯವಹರಿಸುವಾಗ ತಮ್ಮಲ್ಲೇ ಬಳಕೆಯಲ್ಲಿರುವ 'ಮರುಗು' ಭಾಷೆ ಬಳಸುತ್ತಾರೆ. ಮರುಗು (ಮರೆಮಾಚಿದ) ಭಾಷೆಯು ಆಕ್ರಮಣಶೀಲ ಶತ್ರು ಸಮುದಾಯಗಳಿಂದ ತಮ್ಮನ್ನೂ ಮತ್ತು ತಮ್ಮ ಸಾಂಸ್ಕೃತಿಕ ಹಾಗೂ ಭೌಗೋಳಿಕ ನೆಲೆಗಳನ್ನೂ ರಕ್ಷಿಸಿಕೊಳ್ಳುವ ರಾಜಕೀಯ ಒತ್ತಡಗಳಿಂದ ಸೃಷ್ಟಿಯಾಗಿರಬಹುದು. ಆ ಭಾಷೆಯಲ್ಲಿ ಸಂಕೇತಗೊಂಡಿರುವ (Coded) ಭಾಷಿಕ ರಚನೆಗಳು ಸಾಂದರ್ಭಿಕವಾಗಿ ಅರ್ಥಗಳನ್ನು ವ್ಯಂಜಿಸುತ್ತವೆ. ಭಾಷೆಯೊಂದನ್ನು ಹೀಗೆ ಸಂಕೇತಗೊಳಿಸಿ ಅವುಚಿಟ್ಟಿರುವುದರಿಂದಾಗಿ ಗೋಸಂಗಿಗಳ ಮರುಗು ಭಾಷೆ ಒಂದು ಪ್ರತ್ಯೇಕ ಸ್ವತಂತ್ರ ಭಾಷೆಯಾಗಿ ಬೆಳೆಯುವ ಸಾಧ್ಯತೆಯಿಂದ ವಂಚಿತವಾಗಿದೆ. ಗೋಸಂಗಿಗಳು ತಮ್ಮ ರಹಸ್ಯ ಭಾಷೆಯನ್ನು 'ಗೋಸಂಗಿ ಭಾಷೆ' ಎಂದೇ ಕರೆದುಕೊಂಡಿದ್ದಾರೆ. ಮಾದಿಗರ ಉಪಜಾತಿಗಳಾದ ಮಾಸ್ತೀಕರು ಮತ್ತು ಸಿಂದ್ ಮಾದಿಗರು ಬಳಸುವ ಮರುಗು ಭಾಷೆಗಳು ಒಂದೇ ಎಂದು ಭಾಸವಾಗುವಷ್ಟು ಸಾಮ್ಯತೆಗಳಿಂದ ಕೂಡಿದ್ದರೆ, ಗೋಸಂಗಿಗಳ ಗೋಸಂಗಿ ಭಾಷೆ ಪ್ರತ್ಯೇಕವಾಗಿಯೇ ಉಳಿದುಕೊಂಡಿದೆ.

ಕೆ.ಎಸ್. ಸಿಂಗ್‌ರವರು ಉರ್ದು ಭಾಷೆಯಲ್ಲಿ 'ಗೋಶ್' ಎಂದರೆ ಮಾಂಸವೆಂಬ ಅರ್ಥವಿರುವುದರಿಂದ ಮಾಂಸಾಹಾರಿಗಳೂ, ಮಾಂಸ ವ್ಯಾಪಾರ ಮಾಡುವವರೂ ಆದ ಗೋಸಂಗಿಯವರಿಗೆ ತಮ್ಮ ಜನಾಂಗದ ಹೆಸರು 'ಗೋಶ್' ಎಂಬ ಉರ್ದು ಶಬ್ದದಿಂದ ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇವಲ ಐದು ಶತಮಾನಗಳಿಂದೀಚೆಗೆ ಹುಟ್ಟುವಳಿಯಾಗಿರುವ ಉರ್ದು ಕಾಲಕ್ಕಿಂತ ಸಾವಿರಾರು ವರ್ಷಗಳ ಪೂರ್ವದಿಂದಲೂ 'ಗೋಸಂಗಿ'ಗಳು ಜಂಬೂದ್ವೀಪದ ಮೂಲ ನಿವಾಸಿಗಳಾಗಿ ನೆಲೆಸಿದ್ದು ಪುರಾತನ ಕಾಲದಿಂದ 'ಗೋಸಂಗಿ' ಶಬ್ದವೂ ಇರುವುದರಿಂದ, ಗೋಸಂಗಿ ಶಬ್ದವು ಉರ್ದು ಭಾಷೆಯ ಮೂಲದ್ದಲ್ಲ ಎಂದು ಖಚಿತವಾಗಿ ಹೇಳಬಹುದು.

ಉರ್ದು, ಗುಜರಾತಿ ಮತ್ತು ಮರಾಠಿ ಮಿಶ್ರಿತ ಕನ್ನಡ ಭಾಷೆಯನ್ನಾಡುವ ಅರೆ-ಅಲೆಮಾರಿ ಗೋವಳಿಗರಾದ 'ಗೋಸಾಯಿ'ಗಳನ್ನು ಕೆಲವರು ಗೋಸಂಗಿಗಳೆಂದೇ ತಪ್ಪು ತಿಳಿದಿದ್ದಾರೆ. 'ಕರ್ನಾಟಕ ರಾಜ್ಯ ಗೋಸಾಯಿಗಳ ಸಂಘ'ದ ಅಧ್ಯಕ್ಷರಾಗಿರುವ ಭೂಪಾಲ್ ಗೋಸಾಯಿಯವರು ಹೇಳುವ ಪ್ರಕಾರ ಮರಾಠಿ ಜಂಗಮರಾದ 'ಗೋಸಾಯಿ' ಅಥವಾ 'ಗೋಸಾವಿ'ಗಳು ತುಳಜಾಪುರದ ಅಂಬಾ ಭವಾನಿ, ಪಂಡರಾಪುರದ ವಿಠ್ಠಲ ಹಾಗೂ ತಿರುಪತಿ ತಿಮ್ಮಪ್ಪನನ್ನು ಒಕ್ಕಲಾಗಿ ಆರಾಧಿಸುತ್ತಾರೆ. 'ಗೋಸ' (ಗೋಸಿ) ಧರಿಸುವುದರಿಂದ ತಮ್ಮನ್ನು 'ಗೋಸಾಯಿ'ಗಳೆಂದು ಕರೆಯುತ್ತಾರೆಂದೂ, 'ಗೋಸಂಗಿ'ಗಳಿಗೂ ಗೋಸಾಯಿಗಳಿಗೂ ಪಶುಪಾಲನಾ ವೃತ್ತಿಯ ಅಂಶದಲ್ಲಿ ಮಾತ್ರ ಸಾಮ್ಯತೆಯಿರುವುದೇ ಹೊರತು ಇವೆರಡೂ ಪ್ರತ್ಯೇಕ ಜಾತಿಗಳೆಂದೂ ಹೇಳುತ್ತಾರೆ. ಗೋಸಾಯಿಗಳು ಲಂಬಾಣಿಗರಿಗೆ ಗುರುವರ್ಗದವರಾಗಿದ್ದು 'ಬಾಲಾಜಿ' ಮತ್ತು 'ಬಾವಾಜಿ'ಗಳೆಂಬ ಹೆಸರಿನಲ್ಲಿ ವರ್ಷಕ್ಕೊಮ್ಮೆ ಲಂಬಾಣಿ ತಾಂಡಾಗಳಿಗೆ ಹೋಗಿ ಅವರಿಂದ ಗುರುಕಾಣಿಕೆ ಸ್ವೀಕರಿಸುತ್ತಾರೆ.

ಬೇಡ ಜಂಗಮ ಮತ್ತು ಬುಡ್ಗಜಂಗಮ ಎಂಬ ಹೆಸರುಗಳಲ್ಲಿ ಸವರ್ಣೀಯ ಲಿಂಗಾಯತ ಜಂಗಮರು ಖೊಟ್ಟಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಅಲೆಮಾರಿಗಳಾದ ಬುಡ್ಗಜಂಗಮರ ಮೀಸಲಾತಿಯನ್ನು ಕದ್ದು ಕಬಳಿಸುತ್ತಿರುವುದು ಜಗಜ್ಜಾಹೀರಾಗಿರುವ ಸಂಗತಿ. 'ಗೋಸಾವಿ'ಗಳನ್ನು 'ಗೋಸಂಗಿ'ಗಳೆಂದು ತಪ್ಪು ತಿಳಿದು ಗೋಸಾವಿಗಳಿಗೆ 'ಗೋಸಂಗಿ' ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸುವ ಪ್ರಮಾದಗಳೂ ಸಂಭವಿಸುತ್ತಿವೆ. 2008ನೇ ಇಸವಿಯಲ್ಲಿ 'ಗೋಸಂಗಿ'ಗಳೆಂದು 'ಗೋಸಾವಿ'ಗಳಿಗೆ ಜಾತಿಪತ್ರಗಳನ್ನು ವಿತರಿಸಿದ್ದ ಧಾರವಾಡದ ತಹಸೀಲ್ದಾರರ ಕ್ರಮವನ್ನು ಖಂಡಿಸಿ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಧಾರವಾಡದ ತಹಸೀಲ್ದಾರರಿಗೆ ಪತ್ರ ಬರೆದು, ಧಾರವಾಡ ನಗರದ ಸಾರಸ್ವತಪುರದಲ್ಲಿ ವಾಸಿಸುತ್ತಿರುವ 'ಗೋಸಾವಿ' (ಪ.ವರ್ಗ-1) ಜಾತಿಯ ಜನರಿಗೆ ನೀಡಲಾಗಿದ್ದ 'ಗೋಸಂಗಿ' (ಪ.ಜಾತಿ) ಜಾತಿಯ 115 ಜಾತಿ ಪ್ರಮಾಣ ಪತ್ರಗಳನ್ನು ರದ್ದುಪಡಿಸುವಂತೆ ಸೂಚನೆ ನೀಡಿತು.

ಗೋಸಂಗಿ ಕುಲಬಳ್ಳಿಯಾದ ದಕ್ಕಲ ಸಮುದಾಯದ ಕಟ್ಟೆಮನೆ ಹಂಪೆಯಲ್ಲಿದ್ದ ಬಗೆಗೆ ಶಾಲಿವಾಹನ ಶಕ 1126ರ ರಾಕ್ಷಸ ಸಂವತ್ಸರ, ಕಾರ್ತಿಕ ಶುದ್ಧ 5ರಂದು ಕ್ರಿ.ಶ. 1204ರಲ್ಲಿ ಬರೆದಿರುವ ಕಂಚಿ ಶಾಸನವು ಉಲ್ಲೇಖಿಸುತ್ತದೆ. ಜಂಬೂ ಕುಲಸ್ಥರಲ್ಲಿ ಕಟ್ಟೆಮನೆಗಳಿಗೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ

ಆದಿಜಾಂಬವ ಪುರಾಣವನ್ನು ಪ್ರದರ್ಶಿಸುತ್ತಿರುವ ಗೋಸಂಗಿ ಕಲಾವಿದರು

ಪ್ರತಿಗಳು ಮಾತ್ರ ಈಗ ದೊರೆಯುತ್ತವೆಯೆಂದು ಹೇಳುತ್ತಾರೆ. ಒಂದು ಕಾಲಘಟ್ಟದ ಚರಿತ್ರೆಯ ಬಗ್ಗೆ ಪಾರಂಪರಿಕ ಸಾಂಸ್ಕೃತಿಕ ಗುರುತುಗಳ ಬಗ್ಗೆ ಅಮೂಲ್ಯವಾದ ಮಾನವ ಶಾಸ್ತ್ರೀಯ ಮಾಹಿತಿಗಳನ್ನು ಒದಗಿಸಬಹುದಾದ ಕಂಚಿ ಶಾಸನದಂತಹ ಚಾರಿತ್ರಿಕ ದಾಖಲೆಗಳು ಇಂದಿನ ತಲೆಮಾರಿನವರಲ್ಲಿರುವ ಅಸಡ್ಡೆಯಿಂದಾಗಿ ಕಣ್ಮರೆಯಾಗಿ ಹೋಗುತ್ತಿವೆ. ಈಗಿರುವ ಕಂಚಿ ಶಾಸನದ ಅಸಲಿತನವು ಅನುಮಾನಾಸ್ಪದವಾಗಿರುವಂತೆ ತೋರುತ್ತದೆ. ಯಾಕೆಂದರೆ ಅಕ್ಷರಬಾರದ ಅಸ್ಪೃಶ್ಯರು ಅಕ್ಷರಬಲ್ಲ ಶಾನುಭೋಗರಿಂದಲೋ, ಮೇಲ್ವರ್ಗಗಳ

ಹೆಚ್ಚಿನ ಗೌರವದ ಸ್ಥಾನವಿದೆ. ಇಡೀ ಸಮುದಾಯದ ರೀತಿ ರಿವಾಜುಗಳನ್ನು, ನ್ಯಾಯನಿಗರಗಳನ್ನು ನಿರ್ಧರಿಸಲು ಕಟ್ಟೆಮನೆಯೇ ಕೇಂದ್ರಸ್ಥಾನ. ಹಂಪೆಯ ಕಟ್ಟೆಮನೆಯ ಉನ್ನತ ಸ್ಥಾನ ಪಡೆದಿತ್ತೆಂಬುದನ್ನು ಗಮನಿಸಿದರೆ 1204ರ ಹೊತ್ತಿಗೂ ಪೂರ್ವದಿಂದಲೇ ಹಂಪೆಯ ಸುತ್ತಮುತ್ತ 'ಗೋಸಂಗಿ'ಗಳು ನೆಲೆಸಿದ್ದಾರೆನ್ನಿಸುತ್ತದೆ. ಇಂದಿಗೂ ಕರ್ನಾಟಕದಲ್ಲಿ ಮಾದಿಗರಿಂದ ಹಕ್ಕಿನ ಎತ್ತುವಳಿ ಭಿಕ್ಷೆ ಮಾಡುವ ದಕ್ಕಲರು ಹಂಪೆಯೇ ತಮ್ಮ ಮೂಲ ನೆಲೆಯೆಂದು ಹೇಳಿಕೊಳ್ಳುತ್ತಾರೆ. ಹಾಗೂ ಕಂಚಿಯಲ್ಲಿ ತಮ್ಮ ಕುಲಾಚಾರಗಳಿಗೆ ಸಂಬಂಧಿಸಿದ ಶಾಸನವಿದೆ, ಅಖಿಲ ಭಾರತ ಮಟ್ಟದಲ್ಲಿರುವ ಜಂಬೂ ಕುಲಸ್ಥರೆಲ್ಲರಿಗೂ ಕಂಚಿಯೇ ಕೇಂದ್ರಸ್ಥಾನವೆಂದು ಹೇಳುತ್ತಾರೆ. ಅಲೆಮಾರಿ 'ಗೋಸಂಗಿ' ಕುಲಸ್ಥರೂ ಸಹ ಕಂಚಿಯಲ್ಲಿ ತಮಗೆ ಸೇರಿದ ಶಾಸನವಿದೆಯೆಂದು ತಮ್ಮ ಸಾಂಸ್ಕೃತಿಕ ರಾಜಧಾನಿ ಕಂಚಿಯೆಂದು ದೂರದ ಕಂಚಿಯ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ.

ಎಡಗೈ-ಬಲಗೈ ಪಣ ಸಂಘರ್ಷವನ್ನು ಕುರಿತು ಪಣಕಟ್ಟು ಜಾತಿಗಳ ಹುಟ್ಟು, ಪೂರ್ವೋತ್ತರಗಳು, ಪ್ರತಿ ಜಾತಿಗೆ ಸಲ್ಲಬೇಕಾದ ಸ್ಥಾನಮಾನಗಳು, ಗೌರವಗಳು, ಕುಲಲಾಂಛನಗಳು ಮುಂತಾದ ವಿಷಯಗಳನ್ನು ವಿವರಿಸುವ ಕಂಚಿ ಶಾಸನವು ನಿರ್ದಿಷ್ಟವಾಗಿ ಚರಿತ್ರೆಯ ಯಾವ ಕಾಲಘಟ್ಟದಲ್ಲಿ ರಚಿತವಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಜಂಬೂ ಕುಲಸ್ಥರಾದ ಮಾದಿಗರು, ಸಿಂದ್‌ಮಾದಿಗರು, ಮಾಸ್ತೀಕರು, ದಕ್ಕಲರು, ಗೋಸಂಗಿಗಳು ಮುಂತಾದವರ ನಾಲಗೆ ಮೇಲಿರುವ ನಂಬಿಕೆಯ ಪ್ರಕಾರ 'ತಮ್ಮ ಮನೆ ಮಗಳಾದ ಆರಂಜ್ಯೋತಿಯು ತಮ್ಮ ಕುಲದ ಸ್ಥಾನಮಾನಗಳಿಗೆ ಧಕ್ಕೆಯಾಗದಂತೆ ಎಲ್ಲ ಸವಲತ್ತುಗಳನ್ನು ಶಾಸನ ರೂಪದಲ್ಲಿ ಕೆತ್ತಿಸಿ, ಅದನ್ನು ಕಂಚಿಯ ಒಂದು ಕೊಳದಲ್ಲಿ ಮುಳುಗಿಸಿಟ್ಟಿದ್ದಾಳಂತೆ. ಅದು ಇಂದಿಗೂ ಆ ಕೊನೇರಿಯಲ್ಲಿ(ಕೊಳ)ದೆಯಂತೆ. ಆ ಶಾಸನದ ಪಡಿಯಚ್ಚು ಪಡೆಯಬೇಕಾದರೆ 'ಜಲಸ್ತಂಭನ' ವಿದ್ಯೆಯನ್ನು ಕಲಿತು ಬೆನ್ನಿಗೆ ಮೇಣ ಮೆತ್ತಿಕೊಂಡು ಕೊಳದಲ್ಲಿ ಮುಳುಗಿ ಆ ಶಾಸನದ ಮೇಲೆ ಅಂಗಾತ ಮಲಗಬೇಕೆಂದೂ ಆಗ ಆ ಶಿಲಾಕ್ಷರಗಳು ಆ ಮೇಣ ಮೆತ್ತಿದ ಬೆನ್ನಲ್ಲಿ ಪಡಿಯಚ್ಚಾಗಿ ಒಡಮೂಡುತ್ತವೆಂದೂ, ಆ ನಂತರ ನೀರಿನಿಂದ ಮೇಲೆ ಬಂದು ಅದನ್ನು ಆಧರಿಸಿ ಪ್ರತಿ ಮಾಡಿಕೊಳ್ಳಬೇಕಾಗಿದೆಯೆಂಬುದು ಪಂಚ ಮಾದಿಗ ಕುಲಗಳ ನಂಬಿಕೆ' (ಕೋಟಿಗಾನಹಳ್ಳಿ ರಾಮಯ್ಯ, 1993: 44,45).

ಮಾದಿಗ ಕುಲಸ್ಥನೊಬ್ಬ 'ಜಲಸ್ತಂಭನ' ವಿದ್ಯೆ ಕಲಿತು ಮೇಲೆ ಹೇಳಿದ ಮಾದರಿಯಲ್ಲಿಯೇ ಬೆನ್ನಿನ ಮೇಲೆ ಮೂಡಿಸಿಕೊಂಡು ಬಂದ ಮೂಲ ಶಾಸನದ ಪಡಿಯಚ್ಚನ್ನು ಆಧರಿಸಿ ಕಂಚು, ಕಾಗದ, ತಾಳೆಗರಿಗಳ ಮೇಲೆ ಪ್ರತಿ ಮಾಡಿಸಿಕೊಂಡ ಶಾಸನ

ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯದ ನೆಲಗೊಂಡ ಗ್ರಾಮದಲ್ಲಿರುವ ಗೋಸಂಗಿಗಳ ಶ್ರದ್ಧಾ ಕೇಂದ್ರ

ಅಕ್ಷರಸ್ಥರಿಂದಲೋ ಪ್ರತಿ ಮಾಡಿಸಿಕೊಳ್ಳುವ ಪರಿಪಾಠ ಅನುಸರಿಸುತ್ತಿದ್ದರಿಂದಾಗಿ ಪಾಠಾಂತರಗೊಂಡಿರುವ, ಹಾಗೆಯೇ ಹಲವಾರು ಅಂಶಗಳು ಪ್ರಕ್ಷಿಪ್ತಗೊಂಡಿರುವ ಸಾಧ್ಯತೆಯಿದೆ. ಹಾಗಾಗಿ ಹಂಪೆಯ ದಕ್ಕಲರ ಕಟ್ಟೆಮನೆ ಕುರಿತು ತಿಳಿಸಿಸುವ ಕ್ರಿ.ಶ. 1204ರ ಕಂಚಿ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಕಾಲಘಟ್ಟವು, ಇದಕ್ಕೂ ಪೂರ್ವದಲ್ಲಿಯೇ ರಚಿಸಲಾಗಿರಬಹುದಾದ ಕಂಚಿ ಶಾಸನವನ್ನು ಆಧರಿಸಿ ಮರು ಸೃಷ್ಟಿಸಿರುವ ಶಾಸನವಾಗಿರಬಹುದು. ಆದುದರಿಂದ ಹಂಪಿ ಶಾಸನದ ಕಾಲಘಟ್ಟವು ಶಾಸನದ ಮರುಸೃಷ್ಟಿಯ ಕಾಲವನ್ನು ಸೂಚಿಸಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಹಾಗೊಂದು ವೇಳೆ ಮೂಲ ಕಂಚಿ ಶಾಸನವಿರುವುದೇ ಊಹಾತ್ಮಕ ಸತ್ಯವೆಂದು ಭಾವಿಸಿದರೂ ಅಥವಾ ಕಂಚಿ ಶಾಸನ ಒಂದು 'ನಕಲಿ ಸೃಷ್ಟಿ' ಎಂದುಕೊಂಡರೂ ಆ ಶಾಸನವು ವಿವರಿಸಿರುವ ಪಣವ್ಯಾಜದ ಸ್ವರೂಪ, ಊರುಗಳು, ಎಡಗೈ-ಬಲಗೈ ಪಣಗಳ ಸಕಲ ಕುಲಸ್ಥರ ಹೆಸರುಗಳು, ಸ್ಥಳ ವಿವರಗಳು ಮುಂತಾದ ಸಂಗತಿಗಳನ್ನು ತಾರ್ಕಿಕವಾಗಿ ಪರಿಶೀಲಿಸಿ ನೋಡಿದಾಗ ಈ ಪ್ರಮಾಣದ ನಕಲಿತನ ಅಸಾಧ್ಯವೆಂದೇ ತೋರುತ್ತದೆ.

ಕಂಚಿ ಶಾಸನದ ಪ್ರಕಾರ ಕರ್ನಾಟಕದ ಮಂಗಳೂರು ಕಸಬಾ ಮಸಕೂರಿನಲ್ಲಿ ಎಡಗೈ ಪಣದ ಗೋಸಂಗಿ ವಂಶಸಂಜಾತನಾದ ಮಾದಿಗರ ಬಸವನಿಗೂ ಬಲಗೈ ಪಣದ ಛಲವಾದಿ ವೆಂಕಟರಾಮನಿಗೂ ಮದುವೆ ಸಂಬಂಧದಲ್ಲಿ ಉದ್ಭವಿಸಿದ ವ್ಯಾಜ್ಯವೊಂದು ಎಡಗೈ-ಬಲಗೈ ಪಣಗಳ ಸಕಲ ಕುಲಗಳ ಗಣ್ಯರನ್ನು ಒಳಗೊಂಡು ನಡೆಸಿದ ನ್ಯಾಯ ಪಂಚಾಯ್ತಿಗಳಲ್ಲಿ ಬಗೆ ಹರಿಯದೆ, ವ್ಯಾಜ್ಯದ ಇತ್ಯರ್ಥಕ್ಕಾಗಿ ಗೋಸಂಗಿ ಬಸವನು ನೂರಾರು ಜನರನ್ನು ಒಂದುಗೂಡಿಸಿಕೊಂಡು ಕಂಚಿಗೆ ಪಯಣ ಬೆಳೆಸುತ್ತಾನೆ. ಗೋಸಂಗಿ ಪುತ್ರಿಯಾದ ಆರಂಜ್ಯೋತಿ ಮತ್ತು ಬ್ರಾಹ್ಮಣ ಪುತ್ರನಾದ ವಸಿಷ್ಠರ ನಡುವೆ ಮದುವೆಯಾದ ಕಾಲದಲ್ಲಿ ಬರೆಸಿದ್ದೆನ್ನಲಾದ ಕಂಚಿ ಪಣಕಟ್ಟು ತಾಮ್ರ ಶಾಸನವನ್ನು ತೆಗೆಸಿ, ಛಲವಾದಿ ವೆಂಕಟರಾಮನ ವಿರುದ್ಧ ಲಿಖಿತ ದಾಸ್ತಾವೇಜು ತೀರ್ಪು ತರುತ್ತಾನೆ. ಆ ತೀರ್ಪಿನ ಪ್ರಕಾರ ಎಡಗೈ ಪಣದ 'ಗೋಸಂಗಿ'ಗಳು ಗೆದ್ದರು; ಬಲಗೈ ಛಲವಾದಿಗಳು ಸೋತರು.

ಕಂಚಿ ಫರ್ಮಾನಿನಲ್ಲಿ ಗೋಸಂಗಿ ಬಸವನು ಎಡಗೈ ಪಣದ ಮಾದಿಗರವನೇ ಆಗಿರುವುದರಿಂದ, ಸಕಲ ಜಂಬೂ ಕುಲಬಳ್ಳಿಗಳ ಪ್ರಾತಿನಿಧಿಕ ವ್ಯಕ್ತಿಯಾಗಿ 'ಗೋಸಂಗಿ'ಯವರಿಗೆ ಅಗ್ರಪಟ್ಟವನ್ನು ದೊರಕಿಸಿಕೊಟ್ಟಿದ್ದಾನೆ. ಹಾಗಾಗಿ ಪುರಾಣಿಮವೂ, ಪುರಾತನವೂ ಆದ 'ಗೋಸಂಗಿ' ಕುಲವೇ ವಿಕಾಸಗೊಂಡು ಆದಿಜಾಂಬವ ಮಾದಿಗ ಜನಾಂಗದವರಾಗಿ ಇಂದಿನ ಮಾದಿಗರು ಗುರುತಿಸಿಕೊಂಡಿರುವುದನ್ನು ಮರೆಯಬಾರದು.

ಸಕಲ ನರಕುಲಗಳನ್ನು ಬೆಸೆಯುವ ಇಂತಹ ನೆನಪುಗಳನ್ನು ಸಂಗೋಪನೆ ಮಾಡುವ ಮತ್ತು ಆದಿಮ ಪರಂಪರೆಯ ವೈಚಾರಿಕ ಜೀವಜಲವನ್ನು ಶೋಧಿಸುವ ಕಡೆ ಇಂದಿನ ಸಂಶೋಧಕರು ಹೊರಳಿಕೊಳ್ಳಬೇಕಾದ ಅಗತ್ಯವಿದೆ. ■

ಫಲ್ಗುಣಿಯಲಿ ಕೇಳಿಬಂದ ರುದ್ರವೀಣೆ
ಲೇ: ಮಲ್ಲಿಕಾರ್ಜುನ ಕಡಕೋಳ
ಬೆಲೆ: ರೂ. 150/-

ಒಂದೂವರೆ ದಶಕದಷ್ಟು ಹಿಂದೆ ಬರೆದ ಇಲ್ಲಿನ ಅಂಕಣ ಬರಹಗಳಿಗೆ ಸಾರ್ವಜನಿಕ ಎಲ್ಲಾ ಮಗುಲುಗಳ ಬಗ್ಗೆ ಒಳನೋಟವಿದೆ. ಸದಾಕಾಲ ಕಾಡುವ ಗುಣವಿರುವುದರಿಂದ ಪ್ರಸ್ತುತ ಸಂದರ್ಭದಲ್ಲೂ ಓದುಗರ ಗಮನ ಸೆಳೆಯುತ್ತದೆ. ಜನಪರ ಚಿಂತನೆಯ ಎಳೆಯಿದ್ದು ಜಾತ್ಯಾತೀತ ಮತ್ತು ಹೃದಯ ವೈಶಾಲ್ಯದ ಕ್ಷಣಗಳು ಮನಮುಟ್ಟುವಂತೆ ಚಿತ್ರಿತಗೊಂಡಿವೆ. ಜನಸಾಮಾನ್ಯರ ಬಗ್ಗೆ ಅಸಡ್ಡೆ ತೋರುವವರ ಬಗ್ಗೆ ನೈತಿಕ ಸಿಟ್ಟು, ಅಪ್ರಮಾಣಿಕರು, ಭ್ರಷ್ಟರು ಹಾಗೂ ಜನರಲ್ಲಿ ಮೌಢ್ಯವನ್ನು ಬೆಳೆಸುವವರ ಹುನ್ನಾರಗಳ ಅನಾವರಣ ಇಲ್ಲಿ ಸಮರ್ಪಕವಾಗಿ ಆಗಿದೆ. ಸಾಮಾಜಿಕ ಎಚ್ಚರವುಳ್ಳ ಇಲ್ಲಿನ ಬರಹಕ್ಕೆ ಲವಲವಿಕೆಯ ಗುಣವಿದ್ದು, ಚೆತೋಹಾರಿ ನಿರೂಪಣಾ ಶೈಲಿ ಗಮನ ಸೆಳೆಯುತ್ತದೆ.

ಪ್ರ: ಮಂಜುಶ್ರೀ ಪ್ರಕಾಶನ, ದಾವಣಗೆರೆ.





ಕೋಮುವಾದ ಮತ್ತು ದೇಶೋದ್ಧಾರ
ಅನು: ದಾಸನೂರು ಕೂಸಣ್ಣ
ಬೆಲೆ: ರೂ. 90/-

ಮಾನವೀಯ ಮೌಲ್ಯಗಳಿಗಾಗಿ ತುಡಿಯುವ ಇಲ್ಲಿನ ಲೇಖನಗಳು ಜನರ ನಡುವಿನ ಸೌಹಾರ್ದ ಬದುಕಿನ ಅಗತ್ಯತೆ ಬಗ್ಗೆ ಪ್ರತಿಪಾದಿಸುತ್ತವೆ. ಸಾಮಾಜಿಕ ನ್ಯಾಯಕ್ಕಾಗಿ ಕನವರಿಸುತ್ತಿರುವ ಶೋಷಿತರು, ಮತೀಯ ಶಕ್ತಿಗಳ ಅಟ್ಟಹಾಸ, ಮೇರೆ ಮೀರಿದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಧರ್ಮ-ಧರ್ಮಗಳ ನಡುವಿನ ಸಂಘರ್ಷಗಳು ದೇಶದ ಪ್ರಗತಿಗೆ ಹೇಗೆ ಕಂಟಕಪ್ರಾಯವಾಗಿವೆ ಎಂಬುದನ್ನು ಸವಿಸ್ತಾರವಾಗಿ ಕಟ್ಟಿಕೊಡುತ್ತವೆ. ಪ್ರತಿಯೊಂದು ಲೇಖನವೂ ಆ ವಿಚಾರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ಮಾಹಿತಿಯಿಂದ ಕೂಡಿದ ಒಂದು ಉಪಯುಕ್ತ ಕೃತಿಯಾಗಿದೆ.

ಪ್ರ: ಮಾತಂಗ ಪ್ರಕಾಶನ, ಮೈಸೂರು

ಮುಂಬೆಳಕು
ಲೇ: ಡಾ॥ ಖದೀಜಾ ಮುಮ್ತಾಝ್
ಅನು: ಡಾ॥ ಸಾರಾ ಅಬೂಬಕ್ಕರ್
ಬೆಲೆ: ರೂ. 160/-

ಇಸ್ಲಾಮಿನ ಯಥಾರ್ಥ ಶಕ್ತಿಯನ್ನು ಹುಡುಕುತ್ತಾ ಹೊರಟ ಮಹಿಳೆಯೊಬ್ಬಳು ಎದುರುಗೊಳ್ಳುವ ಮೂಲಭೂತವಾದಿಗಳ ಮಧ್ಯಪ್ರವೇಶ ಹಾಗೂ ಪ್ರಾರಂಭ ಕಾಲದ ಇಸ್ಲಾಮಿನ ಶುದ್ಧರೂಪ; ಇಂತಹ ಅನುಭವಗಳೊಡನೆ ಸಂಚರಿಸಿದ ಅವಳು ಸ್ತ್ರೀಯದೇ ಆದ ಇಸ್ಲಾಂ ಧರ್ಮವನ್ನು ಕಂಡುಕೊಳ್ಳುವುದೇ ಈ ಕಾದಂಬರಿಯ ಅಡಿಪಾಯವಾಗಿದೆ. ಸ್ತ್ರೀತ್ವದ ಬೆಂಬಲದಿಂದ ಬೆಳೆದ ಇಸ್ಲಾಂ ಧರ್ಮ ನಂತರದ ದಿನಗಳಲ್ಲಿ ಸ್ತ್ರೀವಿರೋಧಿಮತವೆಂದು ಕುಖ್ಯಾತಿ ಪಡೆದಿರುವ ಬಗ್ಗೆ ಹಾಗೂ ಸಮತಾಭಾವವನ್ನು ಎತ್ತಿ ಹಿಡಿದ ಖುರ್‌ಆನ್‌ನ್ನು ತಪ್ಪಾಗಿ ಅರ್ಥೈಸುತ್ತಿರುವವರ ಬಗ್ಗೆ ವಿಷಾದ ವ್ಯಕ್ತಪಡಿಸುವ ಈ ಕೃತಿ ಪ್ರವಾದಿಗಳು ಮುಸ್ಲಿಂ ಜಗತ್ತಿನ ಪ್ರಪ್ರಥಮ ಸ್ತ್ರೀವಾದಿಗಳಾಗಿದ್ದರು ಎಂಬುದನ್ನು ಉದಾಹರಣೆ ಸಹಿತ ನಿರೂಪಿಸುತ್ತದೆ.



ಹೊಸ ಪುಸ್ತಕ

ಇಳಿಜಾರು
ಲೇ: ಡಾ॥ ಸಾರಾ ಅಬೂಬಕ್ಕರ್
ಬೆಲೆ: ರೂ. 125/-

ಕೇವಲ ಮನುಷ್ಯರಾಗಿ, ಆತ್ಮೀಯ ಸ್ನೇಹಿತರಾಗಿ ಬದುಕುತ್ತಿರುವವರ ಮನದಾಳದ ಕೆಲವು ವಿಕೃತಿಗಳು ಎಂತೆಂತಹ ದುರಂತಗಳಿಗೆ ಹಾದಿಯೊದಗಿಸುತ್ತದೆ; ಅದರಿಂದ ಒಂದು ಸಂಸಾರದಲ್ಲಿ ಬಿರುಕಿನ ಅಲೆಗಳೆದ್ದು ಆ ಇಡೀ ಕುಟುಂಬವನ್ನು ಎಂತಹ ದುರಂತಕ್ಕೆ ತಳ್ಳುತ್ತದೆ ಎಂಬುದರ ಒಂದು ನೈಜ ಚಿತ್ರಣವನ್ನು ಮನಮಿಡಿಯುವಂತೆ ಈ ಕಾದಂಬರಿ ಕಟ್ಟಿಕೊಡುತ್ತದೆ. ಅದರಲ್ಲೂ ವಿಭಿನ್ನ ಧರ್ಮೀಯ ಹೆಣ್ಣು-ಗಂಡಿನ ನಡುವಿನ ಜಟಿಲ ಸಂಬಂಧಗಳು ತಂದೊಡ್ಡುವ ತಾಕಲಾಟಗಳ ಬಗ್ಗೆ ಆಳವಾದ ನೋಟವಿದೆ.

ಈ ಎರಡು ಪುಸ್ತಕಗಳ ಪ್ರಕಾಶಕರು **ಚಂದ್ರಗಿರಿ ಪ್ರಕಾಶನ, ಮಂಗಳೂರು.**



ರೈತ ಮತ್ತು ಆದಿವಾಸಿ ಚಳವಳಿ
ಲೇ: ಡಾ॥ ಸಿ. ಚಂದ್ರಪ್ಪ
ಬೆಲೆ: ರೂ. 150/-

ರೈತರು ಮತ್ತು ಆದಿವಾಸಿಗಳು ನಡೆಸಿದ ಹೋರಾಟದ ಕಥನವನ್ನು ವೈಜ್ಞಾನಿಕವಾಗಿ ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಆ ವರ್ಗಗಳ ಚಳವಳಿಗಳ ಸ್ವರೂಪ ಭಿನ್ನವಾಗಿದ್ದು, ಹಲವಾರು ವಿಷಯಗಳ ವೈವಿಧ್ಯತೆಯನ್ನು ಬಹು ಸಮರ್ಪಕವಾಗಿ ವ್ಯಾಖ್ಯಾನಿಸಲಾಗಿದೆ. ಜನಜೀವನದ ಸತ್ಯ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಗಂಭೀರ ಅಧ್ಯಯನ ನಡೆಸಿರುವ ಲೇಖಕರ ಪರಿಶ್ರಮ ಎದ್ದುಕಾಣುತ್ತದೆ. ರಾಷ್ಟ್ರನಿರ್ಮಾಣದ ಪ್ರಕ್ರಿಯೆಯಲ್ಲಿ ಈ ಎರಡೂ ಸಮುದಾಯಗಳ ಮಹತ್ವವನ್ನು ಪ್ರತಿಪಾದಿಸುವ ಲೇಖಕರ ಬದ್ಧತೆಯಿಂದಾಗಿ ಇತಿಹಾಸದ ವಾಸ್ತವಿಕತೆಯನ್ನು ಮೈಗೂಡಿಸಿಕೊಂಡ ಸಂಶೋಧನೆಯ ಅತಿ ಮಹತ್ವದ ಕೃತಿಯಾಗಿದೆ.

ಪ್ರ: ಮನೋಜ್ ಪಬ್ಲಿಕೇಷನ್ಸ್, ಬೆಂಗಳೂರು



ಕುವೆಂಪು ನೆನಪು
ಸಂ: ಪ್ರಭು ಜಯರಾಮ್
ಬೆಲೆ: ರೂ. 50/-

ಕನ್ನಡದ ದಾರ್ಶನಿಕ ಕವಿ ಕುವೆಂಪು ಕುರಿತು ಹಾಗೂ ಅವರನ್ನು ನೆನೆಸುವ ನೆಪದಲ್ಲಿ ನಾಡಿನ ಖ್ಯಾತ ಬರಹಗಾರರ ಅನಿಸಿಕೆಗಳನ್ನು ಒಟ್ಟುಗೂಡಿಸಿದ ಕೃತಿ ಇದು. ಕುವೆಂಪು ಅವರ ಸ್ವಹಸ್ತಾಕ್ಷರದ ಪದ್ಯವೂ ಒಳಗೊಂಡಂತೆ ವಿವಿಧ ಕ್ಷೇತ್ರಗಳ ಸುಮಾರು ಅರವತ್ತಕ್ಕೂ ಹೆಚ್ಚು ಗಣ್ಯರಿಂದ ಕುವೆಂಪು ಬಗ್ಗೆ ಅವರು ಹೊಂದಿರುವ ಭಾವನೆಗಳನ್ನು ಕಲೆಹಾಕಿ, ಅಷ್ಟೂ ಜನರ ಅಭಿಪ್ರಾಯಗಳನ್ನು ಅವರ ಸ್ವಹಸ್ತಾಕ್ಷರ ರೂಪದಲ್ಲಿಯೇ ಮುದ್ರಿಸಿರುವುದು ಔಚಿತ್ಯಪೂರ್ಣವಾಗಿದೆ.

ಪ್ರ: ಪ್ರಭು ಜಯರಾಮ್ ಸೇವಾ ಸಮಿತಿ ಬೆಂಗಳೂರು

ಜಾನಪದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅಂತರ್‌ಶಿಸ್ತೀಯ ಅಧ್ಯಯನದ ಅಗತ್ಯ

ಮನುಕುಲದ ಚರಿತ್ರೆಗೂ ಮತ್ತು ಜಾನಪದದ ಹುಟ್ಟಿಗೂ ಒಂದು ನಂಟಿದೆ. ಒಂದನ್ನು ತಿಳಿಯಹೊರಟರೆ ಇನ್ನೊಂದರ ಅರಿವಿನ ದಾರಿಗಳು ನಮಗೆ ಗೊತ್ತಿಲ್ಲದೆ ತಾನೇ ತೆರೆದುಕೊಳ್ಳುತ್ತವೆ. ಕಾಲ ಹೇಗೆ ನಿರಂತರ ಪರಿವರ್ತನಾಶೀಲವೋ ಹಾಗೆ ಮನುಕುಲದ ಸಮಗ್ರ ಸಂಸ್ಕೃತಿಯ ಪ್ರಧಾನಧಾರೆಯಾದ ಜಾನಪದವು ಸಹ ನಿರಂತರ ಪರಿವರ್ತನಾಶೀಲ ಮತ್ತು ಚಲನಶೀಲವಾದುದು. ಬಹುಮುಖಿಯಾದ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಅಧ್ಯಯನಗಳು ಇಂದು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿವೆ. ಹೊಸ ಹೊಸ ಸಂಶೋಧನೆಗಳು ಅದರ ಕ್ಷೇತ್ರ ಬಾಹುಳ್ಯತೆಯನ್ನು ಕಾಣಿಸುವ ಕೆಲಸ ಮಾಡುತ್ತಿವೆಯಾದರೂ, ಇನ್ನೂ ಹೆಚ್ಚಿನ ರೀತಿಯಲ್ಲಿ ಕರ್ನಾಟಕದ ಜಾನಪದಕ್ಕೆ ಸಂಬಂಧಿಸಿದ ಕೆಲಸಗಳು ಆಗಬೇಕಾಗಿವೆ.

ವಿಲಿಯಂ ಜೆ. ಥಾಮ್ಸ್ 1846ರಲ್ಲಿ ಜಾನಪದ ಎಂಬ ಪದ ಬಳಸಿದ. 19ನೇ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿನಲ್ಲಿ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳು ಆರಂಭವಾದವು. ಆಂಗ್ಲಭಾಷೆಯ 'ಫೋಕಲೋರ್' ಎಂಬ ಪದಕ್ಕೆ ಕನ್ನಡದಲ್ಲಿ ಜಾನಪದ ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ 'ಜನಪದ' ಮತ್ತು 'ಜಾನಪದ' ಎಂಬೆರೆಡು ಪದಗಳು ಚಾಲ್ತಿಯಲ್ಲಿವೆ. ಜನಪದ ಎಂದರೆ ಬಿಡಿಬಿಡಿಯಾದ ಅಂಶಗಳಿಗೆ ಸಂಬಂಧಿಸಿದ್ದು, ಜಾನಪದ ಇಡಿಯಾದ ಅಥವಾ ಸಮಗ್ರ ಅಂಶಗೊಳನ್ನೊ ಒಗೊಂಡದ್ದಾಗಿದೆ.

ಯುರೋಪ್‌ನಲ್ಲಿ 19 ನೇ ಶತಮಾನದ ಸಂದರ್ಭದಲ್ಲಿ ಕಾಣಿಸಿಕೊಂಡ ರಾಷ್ಟ್ರೀಯ ಪ್ರಜ್ಞೆ ಮತ್ತು ರಮ್ಯ ಪ್ರಜ್ಞೆಗಳ ಫಲವಾಗಿ ಜಾನಪದದ ಅಧ್ಯಯನಕ್ಕೆ ಅಲ್ಲಿನ ವಿದ್ವಾಂಸರು ಆಸಕ್ತಿಯಿಂದ ತೊಡಗಿದರು. ಜಾನಪದವನ್ನು ಅದರ ಮೂಲನೆಲೆಯಲ್ಲಿ ದಾಖಲಿಸುವ ಅರ್ಥೈಸುವ ಮತ್ತು ವಿಶ್ಲೇಷಿಸುವ ಪ್ರಯತ್ನಗಳು ನಡೆದವು. ಜರ್ಮನಿಯ ಗ್ರೀಮ್ ಬ್ರದರ್ಸ್, ಮ್ಯಾಕ್ಸ್‌ಮುಲ್ಲರ್, ಥಿಯಾಡರ್ ಬೆನ್ಫೆ, ಆಂಡ್ರೂಲಾಂಗ್, ಬಿ.ಎಲ್.ಗೊಮ್ಮೆ, ಹಾರ್ಟ್‌ಲ್ಯಾಂಡ್, ಆಲ್‌ಫ್ರಡ್‌ನೆಟ್, ಎಡ್ವರ್ಡ್‌ಕ್ಲಾರ್ಕ್, ಫ್ರಾಂಜ್ ಬೋವಾಸ್, ರೂತ್ ಬೆನೆಡಿಕ್ಟ್, ಡಬ್ಲ್ಯೂ.ಆರ್. ಬಾಸ್ಕಂ, ಲೆವಿಸ್ಟ್ರಾಸ್ ಮೊದಲಾದ ವಿದ್ವಾಂಸರ ಚರ್ಚೆ ಭಿನ್ನಾಭಿಪ್ರಾಯಗಳಿಂದಾಗಿ ಹಲವು ಸಿದ್ಧಾಂತಗಳು ಹುಟ್ಟಿಕೊಂಡವು. ಮನೋವಿಶ್ಲೇಷನಾತ್ಮಕ ಸಿದ್ಧಾಂತ, ಕ್ರಿಯಾತ್ಮಕ ಸಿದ್ಧಾಂತ, ಪ್ರದರ್ಶನ ಸಿದ್ಧಾಂತ, ರಾಚನಿಕ ವಿಶ್ಲೇಷಣಾ ಸಿದ್ಧಾಂತ ಮುಂತಾದವುಗಳು ಹುಟ್ಟಿಕೊಂಡವು. ಆದರೆ ಆ ಎಲ್ಲ ಸಿದ್ಧಾಂತಗಳು ಎಲ್ಲೋ ಒಂದು ಕಡೆಗೆ ತಾವು ಗ್ರಹಿಸಿ, ಅರ್ಥೈಸುವ, ವಿಶ್ಲೇಷಿಸುವ ಅಂಶಗಳು ಮನುಕುಲಕ್ಕೆ ಸಂಬಂಧಿಸಿದುವೇ ಎಂಬ ತೀರ್ಮಾನಕ್ಕೆ ಬಂದು ತಲುಪಿದವು. ಮನುಷ್ಯನ ಒಟ್ಟು ಸ್ವಭಾವ, ನಡವಳಿಕೆ ಮೇಲೆ ಬೆಳಕು ಚೆಲ್ಲುವದಕ್ಕಾಗಿ ಅದನ್ನು ಜಾಗತಿಕ ನೆಲೆಯಲ್ಲಿ ಸೈದ್ಧಾಂತಿಕ ಹಿನ್ನೆಲೆಯಲ್ಲಿ ನೋಡಲು ಮಾಡಿದ ಫಲವಾಗಿ ಜಾನಪದ ಸಿದ್ಧಾಂತಗಳು ಹುಟ್ಟಿಕೊಂಡವು ಎನ್ನಬಹುದು. ಈ ಸಿದ್ಧಾಂತಗಳು ಮನುಷ್ಯನ ಇತಿ–ಮಿತಿ–ಅತಿಗಳನ್ನು ಆಧಾರವಾಗಿಟ್ಟುಕೊಂಡ ಕಾರಣಕ್ಕೆ ಅವುಗಳು ಮನುಕುಲದ ಚರಿತ್ರೆಯನ್ನು ಮತ್ತು ಜಾನಪದವನ್ನು ಏಕಕಾಲಕ್ಕೆ ಅರಿಯಲು ಕಿಂಡಿಗಳಂತೆ ತೋರುತ್ತವೆ. ಜಗತ್ತಿನ ಯಾವುದೋ ಒಂದು ಭಾಷೆ, ಒಂದು ದೇಶದ ಹಿನ್ನೆಲೆಯಲ್ಲಿ ರೂಪಗೊಂಡ ಸಿದ್ಧಾಂತಗಳು ಇತರ ದೇಶಗಳ ಜಾನಪದಕ್ಕೂ ಅನ್ವಯಗೊಳ್ಳುವ ಅರ್ಹತೆ ಹೊಂದಿವೆ ಎಂದರೆ ಅದು ಜಾನಪದಕ್ಕಿರುವ ಸಾರ್ವತ್ರಿಕ ಗುಣದಿಂದಾಗಿ ಮಾತ್ರ.

ಮನುಷ್ಯ ಬದುಕಿನ ಅನುಭವದ ಆಧಾರದ ಮೇಲೆಯೇ ಜಗತ್ತಿನ ಯಾವುದೇ ಸಿದ್ಧಾಂತಗಳು ಹುಟ್ಟಿಕೊಳ್ಳುವುದು. ಯಾವುದೇ ಸಿದ್ಧಾಂತ, ತತ್ವ, ವಾದ, ವಿಧಾನಗಳು ತನ್ನಷ್ಟಕ್ಕೆ ತಾನು ಸಮರ್ಥವಾದವುಗಳಲ್ಲ. ಎಲ್ಲ ತತ್ವ–ಸಿದ್ಧಾಂತಗಳು ಮಿತಿಗಳನ್ನು ಹೊಂದಿರುತ್ತವೆ. ಇದಕ್ಕೆ ಕಾರಣ ಮಾನವನ ಜ್ಞಾನಸಂಗ್ರಹದ ಕೊರತೆಯೇ ಆಗಿದೆ. ಸಂಸ್ಕೃತಿಯ ಸಮಗ್ರತೆಯನ್ನು ಅರಿಯುವ ಭಾಗವಾಗಿ ನಡೆಯುವ ಜ್ಞಾನ ಸಂಗ್ರಹದಂಥ ಕಾರ್ಯಗಳು ಅಲ್ಪವೆಂದೇ ತೋರುತ್ತವೆ. ಇದರಿಂದ ಮಾನವನ ಮಿತಿಗಳೂ ಸ್ಪಷ್ಟವಾಗುತ್ತವೆ.

ಜಾನಪದದ ಕುರಿತು ಗಂಭೀರವಾಗಿ ಚರ್ಚೆ ನಡೆಸಿದ ಡಾಂಡೇಸ್ ತನ್ನ ಕೃತಿಯಲ್ಲಿ 'ಪರಂಪರೆ ಮತ್ತು ಪ್ರಸರಣ'ಗಳನ್ನು ಉಲ್ಲೇಖಿಸುತ್ತಾನೆ. ಪರಂಪರೆ ಮತ್ತು ಪ್ರಸರಣ ಜಾನಪದದ ಅಂತಃಶಕ್ತಿಯಾಗಿವೆ. ಚಲನಶೀಲ ನಿರಂತರತೆಯನ್ನು ಪರಂಪರೆ ಎನ್ನುವುದಾದರೆ, ಪ್ರಸರಣ ಜಾನಪದದ ಚಲನಶೀಲತೆಯನ್ನು ಸಂಕೇತಿಸುತ್ತದೆ. ಚಲನಶೀಲ ಪರಂಪರೆ ಎಂದರೆ ಅದು ಜಾನಪದ. ಹೀಗಾಗಿ ನಿರಂತರ ಮಾರ್ಪಡಕ್ಕೊಳಗಾಗುತ್ತಲೇ ನಡೆಯುವ ಜಾನಪದ ಅಧ್ಯಯನಕ್ಕೆ ಪ್ರಚಲಿತವಿರುವ ಅನೇಕ ಸಿದ್ಧಾಂತಗಳ ಪೈಕಿ ಪಶ್ಚಿಮದವುಗಳೇ ಹೆಚ್ಚಾಗಿರುವುದು. ವಸಾಹತೋತ್ತರ ಕಾಲದಲ್ಲಿರುವ ನಾವು ವಸಾಹತುಶಾಹಿ ಪ್ರಭಾವದಿಂದ ಸಂಪೂರ್ಣ ಮುಕ್ತಿ ಹೊಂದಿ ಯಾವ ಕ್ಷೇತ್ರದ ಅಧ್ಯಯನಗಳನ್ನೂ ಮಾಡಲಾಗುವುದಿಲ್ಲವೇನೋ? ಭಾರತೀಯ ಸಮಾಜಕ್ಕೆ

ಸಂಬಂಧಿಸಿದ ಯಾವ ಕ್ಷೇತ್ರದ ಅಧ್ಯಯನಗಳೂ ಪಶ್ಚಿಮದ ಮಾದರಿಗಳನ್ನೇ ಅವಲಂಬಿಸಿ ನಡೆದಿವೆ ಅನ್ನುವ ಕಾರಣಕ್ಕೆ ಈ ಪ್ರಶ್ನೆ ಎದುರಾಗುತ್ತದೆ. ಹಾಗಾಗಿ ಈ ಮಾತು ಜಾನಪದ ಕ್ಷೇತ್ರದ ಅಧ್ಯಯನಕ್ಕೂ ಅನ್ವಯಿಸುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದುವರೆಗೂ ನಮ್ಮಲ್ಲಿ ನಡೆದ ಜಾನಪದ ಅಧ್ಯಯನಗಳು ಬಹುತೇಕ ಸಾಹಿತ್ಯಿಕ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಂದಲೇ ಆಗಿದ್ದು, ಮೂಲದಲ್ಲಿ ಜಾನಪದವನ್ನು ಓದಿಕೊಂಡು ಅಧ್ಯಯನದಲ್ಲಿ ತೊಡಗಿದವರಿಂದ ಇಷ್ಟರೊಳಗಾಗಿ ಹೊಸದಾದ ನಮ್ಮದೇ ಅಧ್ಯಯನದ ಮಾದರಿಗಳನ್ನು ಕಂಡುಕೊಳ್ಳಲು ಸಾಧ್ಯವಿತ್ತೇನೋ ಎಂಬ ಪ್ರಶ್ನೆ ಏಳುತ್ತದೆ. ಈ ಮಧ್ಯೆ ಅಧ್ಯಯನದ ಮಾದರಿಗಳ ಹುಡುಕಾಟ ವಿದ್ವಾಂಸರಿಂದ ಆಗಿದ್ದು

ನಿಜವಾದರೂ ಅವು ನಮ್ಮನೇ ಅಧ್ಯಯನದ ಮಾದರಿಗಳನ್ನು ರೂಪಿಸಿಕೊಳ್ಳುವಲ್ಲಿ ಯಶಕಂಡಿಲ್ಲ. ಆ ಪ್ರಯತ್ನಗಳು ಈಗ ತೀವ್ರವಾಗಿ ನಾಡಿನ ಜಾನಪದ ಜಾನಪದ ವಿದ್ವತ್‌ವಲಯದಲ್ಲಿ ನಡೆದಿರುವುದನ್ನು ಗುರತಿಸಬಹುದು. ಅದೇನೇ ಇರಲಿ ಬಹುವಿಶಾಲ ಮತ್ತು ಬಹುವಿಸ್ತರಿತ ಕ್ಷೇತ್ರವಾದ ಜಾನಪದವನ್ನು ಅಧ್ಯಯನ ಮಾಡುವುದು ಎಂದರೆ ಭಾರತೀಯ ಜೀವನ ಕ್ರಮದ ಅಧ್ಯಯನವೇ ಆಗುತ್ತದೆ.

ಹಲಸಂಗಿ ಗೆಳೆಯರು, ಮಧುರಚೆನ್ನ, ಮಾಸ್ತಿ, ಎಚ್.ಎಲ್.ನಾಗೇಗೌಡರು, ಜೀಶಂಪ, ಕರೀಂಖಾನ್, ಸಿಂಪಿ ಲಿಂಗಣ್ಣ, ಗೊರೂರರು, ಡಾ.ಹಾ.ಮಾ.ನಾ, ಡಾ.ಎಸ್.ಎಸ್.ಹಿರೇಮಠ ಮುಂತಾದವರು ಕರ್ನಾಟಕದಲ್ಲಿ ಜಾನಪದ ಕ್ಷೇತ್ರಕ್ಕೆ ಅಗಾಧವಾದ ಸೇವೆ ಸಲ್ಲಿಸಿದ್ದಾರೆ. ಡಾ. ತೀ.ನಂ. ಶಂಕರನಾರಾಯಣ, ಡಾ. ಅಂಬಳಿಕೆ ಹಿರಿಯಣ್ಣ, ಡಾ.ಹಿ.ಶಿ ರಾಮಚಂದ್ರೇಗೌಡ, ಎಚ್. ಎಂ. ಮಹೇಶ್ವರಯ್ಯ, ಡಾ. ವಿವೇಕ ರೈ, ಡಾ.ಸೋಮಶೇಖರ ಇಮ್ರಾಪುರ, ಡಾ.ದೇವೇಂದ್ರ ಕುಮಾರ ಹಕಾರಿ, ಡಾ. ಎಂ.ಐ.ಸವದತ್ತಿ, ಎಂ.ಎಂ.ಕಲಬುರ್ಗಿ, ಡಾ. ಪುರುಷೋತ್ತಮ ಬಿಳಿಮಲೆ, ಮುಂತಾದವರು ಮಾಡುತ್ತಿರುವ ಕೆಲಸಗಳು ಅನನ್ಯವಾದುದು. ಅವರ ಪರಂಪರೆಯ ಮುಂದುವರಿಕೆ ಎಂಬಂತೆ ಅನೇಕ ಯುವ ವಿದ್ವಾಂಸ ಪಡೆ ಜಾನಪದ ಕ್ಷೇತ್ರಕ್ಕೆ ಅಗಾಧ ಕೊಡುಗೆ ನೀಡಲು ನಿರತರಾದಂತೆ ತೋರುತ್ತದೆ ಎನ್ನುವುದೂ ಸತ್ಯ. ಈವರೆಗಿನ ಕಾರ್ಯಗಳನ್ನು ಅಲ್ಪಮಟ್ಟಿಗೆ ಗಣನೀಯವೆಂದು ಭಾವಿಸಿದರೂ ಆ ಬಗ್ಗೆ ಬೀಗುವಂತಿಲ್ಲ. ಈ ಕ್ಷೇತ್ರದಲ್ಲಿ ಆದ ಕೆಲಸ ಇಲ್ಲಿವರೆಗೆ ಕೇವಲ ಸಂಗ್ರಹದಂತ ಮೇಲ್ಪೈಪದರದಲ್ಲಿ ಆದಂತಹವು. ನಾಡಿನ ಕೆಲ ವಿ.ವಿ.ಗಳಲ್ಲಿನ ಜಾನಪದ ವಿಭಾಗಗಳು ಅದರಲ್ಲೂ ಹಂಪಿ ಕನ್ನಡ ವಿ.ವಿ.ಯ ಜಾನಪದ ವಿಭಾಗ ಮತ್ತು ಪ್ರತ್ಯೇಕವಾದ ಬುಡಕಟ್ಟು ಅಧ್ಯಯನ ವಿಭಾಗ ಮಾಡಿದ ಕಾರ್ಯಗಳನ್ನು ಹೊರತುಪಡಿಸಿದರೆ ಇನ್ನೂ ಜಾನಪದದ ಅಂತರ್‌ಶಿಸ್ತೀಯ ಅಧ್ಯಯನಗಳು ಹೆಚ್ಚು ಆಗಬೇಕಿದೆ. ಆ ಕಾರಣಕ್ಕೆ ಈಗಾಗಲೇ ಸ್ಥಾಪನೆ ಆಗಿರುವ ಕರ್ನಾಟಕ ಜಾನಪದ ವಿ.ವಿ. ಮೇಲೆ ಹೆಚ್ಚು ನಿರೀಕ್ಷೆಗಳನ್ನೂ ಇಟ್ಟುಕೊಳ್ಳಲಾಗಿದೆ.

> ಜಾನಪದ ಅಧ್ಯಯನ ಎಂದರೆ ಪೂರ್ವಿಕರ ಕತೆ, ಕಾವ್ಯ, ಹಳ್ಳಿ ಸಂಸ್ಕೃತಿಯ ಜನರ ಜೀವನ ಕ್ರಮ, ಹಿಂದುಳಿದವರ, ಬುಡಕಟ್ಟು ಜನರ, ಗಿರಿಜನರ, ಅನಕ್ಷರಸ್ಥರ ಕುರಿತ ಅಧ್ಯಯನ ಎಂಬ ನಂಬಿಕೆಯಿದೆ. ಇವೆಲ್ಲದರೊಂದಿಗೆ ಸ್ವಯಂಪರಿಪೂರ್ಣ ಸ್ವಾವಲಂಬಿ ಜೀವನಕ್ಕೆ ಬೇಕಾದ ಎಲ್ಲ ವಿಚಾರಗಳು, ವೇಷ-ಭೂಷಣಗಳು, ರಂಗಭೂಮಿ, ವ್ಯವಸಾಯ, ಬೇಟೆ, ಪಶುಪಾಲನೆ, ಜನಪದ ವೈದ್ಯ ಪದ್ಧತಿಗಳು, ಸಲಕರಣೆ, ಧಾರ್ಮಿಕ ವಿಧಿ ವಿಧಾನಗಳು, ಆಚರಣೆ ನಂಬಿಕೆ, ದೈವ, ಪ್ರಾಣಿ, ಪಕ್ಷಿ ಮುಂತಾದವುಗಳು ಜಾನಪದ ಅಧ್ಯಯನದ ವ್ಯಾಪ್ತಿಯೊಳಗೆ ಬರುತ್ತವೆ.
>
> ಸಂಗಮೇಶ್ ಎಸ್. ಗಣಿ

ಜಾನಪದ ಅಧ್ಯಯನ ಎಂದರೆ ಪೂರ್ವಿಕರ ಕತೆ, ಕಾವ್ಯ, ಹಳ್ಳಿ ಸಂಸ್ಕೃತಿಯ ಜನರ ಜೀವನ ಕ್ರಮ, ಹಿಂದುಳಿದವರ, ಬುಡಕಟ್ಟು ಜನರ, ಗಿರಿಜನರ, ಅನಕ್ಷರಸ್ಥರ ಕುರಿತ ಅಧ್ಯಯನ ಎಂಬ ನಂಬಿಕೆಯಿದೆ. ಇವೆಲ್ಲದರೊಂದಿಗೆ ಸ್ವಯಂಪರಿಪೂರ್ಣ ಸ್ವಾವಲಂಬಿ ಜೀವನಕ್ಕೆ ಬೇಕಾದ ಎಲ್ಲ ವಿಚಾರಗಳು, ವೇಷ-ಭೂಷಣಗಳು, ರಂಗಭೂಮಿ, ವ್ಯವಸಾಯ, ಬೇಟೆ, ಪಶುಪಾಲನೆ, ಜನಪದ ವೈದ್ಯ ಪದ್ಧತಿಗಳು, ಸಲಕರಣೆ, ಧಾರ್ಮಿಕ ವಿಧಿ ವಿಧಾನಗಳು, ಆಚರಣೆ ನಂಬಿಕೆ, ದೈವ, ಪ್ರಾಣಿ, ಪಕ್ಷಿ ಮುಂತಾದವುಗಳು ಜಾನಪದ ಅಧ್ಯಯನದ ವ್ಯಾಪ್ತಿಯೊಳಗೆ ಬರುತ್ತವೆ. ಹಳ್ಳಿಗಳಲ್ಲಿರುವ ಜನಪದರ ಮಧ್ಯೆ ಇನ್ನೂ ಜೀವಂತವಿರುವ ಎಲ್ಲ ರೀತಿಯ ಕ್ರೀಡೆಗಳಾದ ಕಬಡ್ಡಿ, ಕೋಲಾಟ, ಮಲ್ಲಕಂಭ, ಕುಸ್ತಿ, ಚೆಂಡು-ದಾಂಡು, ಕಣ್ಣಮುಚ್ಚಾಲೆ ಆಟಗಳು, ಗ್ರಾಮೀಣ ಕಲೆಗಳಾದ ಗೀಗೀ ಪದ, ಚೌಡಿಕೆ ಪದ, ಸೋಬಾನೆ ಪದ, ಕುಟ್ಟುವ ಬೀಸುವ ಹಾಡು, ಜನಪದ ರಂಗಭೂಮಿ, ರಂಗಗೀತೆಗಳು, ಬಯಲಾಟ, ದೈವಪೂಜಾ ವಿಧಾನಗಳು, ಆಹಾರ ಪದ್ಧತಿಗಳು, ಹಬ್ಬ ಹರಿದಿನಗಳು, ಮುಂತಾದ ಜನಪದರ ಬದುಕಿನ ಭಾಗಗಳಾಗಿ ಬಂದ ಕಲೆಗಳ ಕುರಿತು ವ್ಯಾಪಕ ಅಧ್ಯಯನದ ಅಗತ್ಯ ಇದೆ. ಪಾಶ್ಚಿಮಾತ್ಯ ಪ್ರಭಾವದಿಂದ ಅಷ್ಟೇ ಅಲ್ಲ ನಾಗರಿಕ ಬದುಕಿನಿಂದ ದೂರ ಉಳಿದ ಎಷ್ಟೋ ಬಡಕಟ್ಟು ಜನಾಂಗಗಳ ಬಗ್ಗೆ ಅಧ್ಯಯನಗಳನ್ನು ಕನ್ನಡ ವಿ.ವಿ.ಯ ಬುಡಕಟ್ಟು ಅಧ್ಯಯನದ ವಿಭಾಗ ಮಾಡಿದೆಯಾದರೂ, ಇನ್ನೂ ನಾಡಿನ ಮೂಲೆ ಮೂಲೆಯಲ್ಲಿರುವ ನಿರ್ಲಕ್ಷಕ್ಕೊಳಗಾದ ಎಲ್ಲ ರೀತಿಯ ಬುಡಕಟ್ಟು ಜನರ ಸಂಸ್ಕೃತಿಯ ಕುರಿತ ಅಧ್ಯಯನಗಳನ್ನು ನಾಡಿನ ಸಂಶೋಧಕರು, ಅಧ್ಯಯನಕಾರರು ಮಾಡಬೇಕಿದೆ. ಜನಪದ ವೈದ್ಯಕ್ಷೇತ್ರ ಅತ್ಯಂತ ವಿಶ್ವಾಸನೀಯವಾಗಿ ಇನ್ನೂ ಹಳ್ಳಿಗಾಡಿನಲ್ಲಿ ಕೆಲಸ ಮಾಡುತ್ತಿದೆ. ಆಧುನಿಕ ವೈದ್ಯ ಪದ್ಧತಿಗಳು ಎಷ್ಟೆ ಬಂದರೂ, ಗ್ರಾಮೀಣ ಪ್ರದೇಶ ಗಳಲ್ಲಿ, ಕೆಳಸಮುದಾಯಗಳಲ್ಲಿ ದೇಸಿ ವೈದ್ಯ ಪದ್ಧತಿ ಮತ್ತು ಚಿಕಿತ್ಸೆಯ ಮೇಲೆ ವಿಶ್ವಾಸ ಇರಿಸಿಕೊಳ್ಳಲಾಗಿದೆ. ಔಷಧಿಗಳೇ ಜನಪದ ವೈದ್ಯಪದ್ಧತಿಯ ಜೀವಾಳ. ಆಧುನಿಕ ವೈದ್ಯಪದ್ಧತಿಗೆ ಸವಾಲು ಎಂಬಂತೆ ಅವು ಇನ್ನೂ ನಮ್ಮಲ್ಲಿ ಜೀವಂತವಾಗಿವೆ. ಆದ್ದರಿಂದ ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ಮತ್ತು ವೈಚಾರಿಕ ನೆಲೆಯಲ್ಲಿ ಅಧ್ಯಯನಗಳು ಆಗಬೇಕಿದೆ. ನಮ್ಮದು ಶ್ರೇಣಿಕೃತ ಸಮಾಜವಾದುದರಿಂದ ಪ್ರಾದೇಶಿಕವಾಗಿ ಜನಪದ ಸ್ವರೂಪವೂ ಭಿನ್ನವಾಗಿರುತ್ತದೆ ಹೀಗಾಗಿ ಆಯಾ ಪ್ರಾದೇಶಿಕ ಜನರ ಜೀವನಕ್ರಮಗಳ ವಸ್ತುನಿಷ್ಠ ಅಧ್ಯಯನ ಮತ್ತು ಸಂಶೋಧನೆಗಳು ನಡೆಯಬೇಕಿದೆ. ಪ್ರಾರಂಭದಲ್ಲಿ ಜಾನಪದ ಎಂದರೆ ಕೆಳ ಸಮುದಾಯಗಳ ಸಂಸ್ಕೃತಿ ಎಂದು ಅರ್ಥೈಸಲಾಗುತ್ತಿತ್ತು. ಆದರೆ ಜಾನಪದ ಕಾಲಕ್ಕೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಾ ಬಂದಿದೆ. ಅದು ಅದರ ಗುಣ. ಪರಿಣಾಮವಾಗಿ ಒಂದು ಜನಸಮುದಾಯ ತನ್ನ ಅಭಿವ್ಯಕ್ತಿಯನ್ನು ಅನೇಕ ರೂಪಗಳಲ್ಲಿ ವ್ಯಕ್ತಪಡಿಸುತ್ತಾ ಬರುತ್ತದೆ. ಗಾದೆ, ಒಗಟು, ಹಾಡು, ಕತೆ ಮುಂತಾದ ಮಾಧ್ಯಮದ ಮೂಲಕ ಅವರ ಭಾವನೆಗಳು ವ್ಯಕ್ತವಾಗುತ್ತಿರುತ್ತವೆ. ಇವುಗಳ ಚಾರಿತ್ರಿಕ ಅಧ್ಯಯನ ನಡೆಯಬೇಕು. ಈ ಸಂಕೀರ್ಣ ಸಂದರ್ಭದಲ್ಲಿ ಜನಾಂಗೀಯ ಅಧ್ಯಯನಗಳು ಇನ್ನೂ ಜಟಿಲ. ಕಾರಣ ಆಧುನಿಕ ಶಿಕ್ಷಣ ಪಡೆದ ಪರಿಣಾಮ ಆ ಜನಾಂಗಗಳಲ್ಲಿ ಒಂದು ರೀತಿಯ ಪ್ರಜ್ಞೆ ಜಾಗೃತಗೊಂಡಿದೆ. ಪರಸ್ಪರರ ನಡುವೆ ವೈಚಾರಿಕ ಸಂಘರ್ಷ ನಡೆದು, ತನ್ನ ಸಾಂಸ್ಕೃತಿಕ ಚಹರೆಗಳನ್ನು ಭಿನ್ನವಾಗಿಸಿಕೊಂಡ ಜನಸಮುದಾಯಗಳ ಅಧ್ಯಯನಕ್ಕೆ ಹೊಸ ಆಯಾಮಗಳು ದಕ್ಕುತ್ತ ಹೋಗುವುದರಿಂದ ಅಧ್ಯಯನ ಸಂಕೀರ್ಣ ಎನಿಸುತ್ತದೆ. ಇಂದಿನ ದಿನಗಳಲ್ಲಿ ಜನಪದರ ಬದಲಾದ ಜೀವನಕ್ರಮಗಳಲ್ಲಿನ ಎಲ್ಲ ರೀತಿಯ ಮಾರ್ಪಾಡುಗಳನ್ನು ಅಧ್ಯಯನಗಳು ಗುರುತಿಸಿ ಸಂಗ್ರಹಿಸಿ, ದಾಖಲಿಸಿ, ವಿಶ್ಲೇಷಿಸುವ ಕೆಲಸ ಮಾಡಬೇಕಿದೆ. ಸಾಮಾಜಿಕ, ಆರ್ಥಿಕ ಬದಲಾವಣೆಗಳು ಜನಪದರ ಜೀವನದ ಮೇಲೆ ಪರಿಣಾಮ ಉಂಟುಮಾಡುತ್ತವೆ. ಜೀವನ ವಿಧಾನ ಬದಲಾದಂತೆ ಅವರ ನಂಬಿಕೆ, ಆಚರಣೆ, ಮನೋಧರ್ಮ ಎಲ್ಲವೂ ಬದಲಾಗುತ್ತವೆ. ಈ ಬದಲಾವಣೆಯ ವಿವಿಧ ಹಂತಗಳು ಅಧ್ಯಯನದ ಶಿಸ್ತಿಗೆ ಒಳಪಡುವುದರಿಂದ ಇವುಗಳಿಗೆ ಸಂಬಂಧಿಸಿದಂತೆ ಐತಿಹಾಸಿಕ ಮತ್ತು ಪ್ರಾಗೈತಿಹಾಸಿಕ ನೆಲೆಗಳಲ್ಲಿ ಅಧ್ಯಯನಗಳು ನಡೆಯಬೇಕು.

ಜಾನಪದದ ಸಂಶೋಧನೆ ಸಾಧ್ಯ. ಜಾನಪದ ಅಧ್ಯಯನಕ್ಕೆ ಪಶ್ಚಿಮದ ಮಾದರಿಗಳ ಕಿಂಡಿಯ ಮೂಲಕ ನಾವು ನಮ್ಮತನದ ವಿಶಾಲ ವಿಸ್ತಾರವಾದ ಬಯಲನ್ನು ನೋಡುವ ಆ ಮೂಲಕ ನೋಡಲು ಬೇಕಾದ ಕ್ರಮ ಅಥವಾ ಮಾದರಿಗಳನ್ನು ಶೋಧಿಸಿಕೊಂಡು ಕಾಲದ ಸೆಳೆತಕ್ಕೆ ಸಿಕ್ಕು ಚಲಿಸುತ್ತಲೇ ಇರುವ ಜಾನಪದದ ಬಗೆಗಿನ ಅಧ್ಯಯನಕ್ಕೆ ಅಂತರ್‌ಶಿಸ್ತೀಯ ಮಾರ್ಗಗಳನ್ನು ಕಂಡುಕೊಂಡಾಗಲೇ ಸಮಗ್ರ ಸಂಸ್ಕೃತಿಯ ಪ್ರಮುಖ ಧಾರೆಯಾದ ಜಾನಪದವನ್ನು ಆಮೂಲಾಗ್ರವಾಗಿ ಅರಿಯಲು ಸಾಧ್ಯವಾಗುತ್ತದೆ. ■

ಜಾತಿವಿನಾಶಕ್ಕೆ ಜಾತಿವಿರೋಧಿ ಶಕ್ತಿಗಳ ಒಗ್ಗೂಡುವಿಕೆ ಅನಿವಾರ್ಯ

ಭಾಗ ೧
ಸಂದರ್ಶನ

ಮೂಲ ಸಂದರ್ಶನ: ಆರ್.ಕೆ ಬಿಜುರಾಜ್

ಅನು: ಡಾ॥ ಎಚ್.ಎಸ್ ಅನುಪಮಾ

'ಖೈರ್ಲಾಂಜಿ' ಖ್ಯಾತಿಯ ಚಿಂತಕ, ಮಾನವಹಕ್ಕು ಹೋರಾಟಗಾರ ಆನಂದ್ ತೇಲ್ತುಂಬ್ಡೆ ಅವರನ್ನು ಆರ್.ಕೆ. ಬಿಜುರಾಜ್ ಇಂಟರ್ನೆಟ್ ಮೂಲಕ ಸಂದರ್ಶಿಸಿದಾಗ ಪ್ರಸ್ತುತ ದಲಿತ ರಾಜಕೀಯ ಪರಿಸ್ಥಿತಿ, ದಲಿತ್ ಪ್ಯಾಂಥರ್ ಚಳವಳಿ, ಕಮ್ಯುನಿಸ್ಟರು, ಮಾಯಾವತಿ ಹಾಗೂ ಇತ್ತೀಚಿನ ಕೋರ್ಟ್ ತೀರ್ಪುಗಳ ಬಗ್ಗೆ ಪ್ರಶ್ನಿಸಿದ್ದು ಅದಕ್ಕೆ ಅವರು ನೀಡಿದ ಉತ್ತರಗಳು ಈ ಕೆಳಗಿನಂತೆ ಇವೆ.

ದಲಿತರ ಇಂದಿನ ಸ್ಥಿತಿಗತಿಗಳೇನು? ಪ್ರಗತಿಪರ ಅಭಿವೃದ್ಧಿ ಆಗುತ್ತಿದೆ ಎನಿಸುತ್ತಿದೆಯೆ? ಅಥವಾ ಹಿನ್ನಡೆ ಎದುರಿಸುತ್ತಿದೆಯೆ?

ದಲಿತರು ಹಿಂದೆಂದಿಗಿಂತ ಇಂದು ಬಹುರೂಪಿ ಸಮುದಾಯ. ಬಹುಶಃ ದಲಿತ ಎನ್ನುವುದು ಅಸ್ಪೃಶ್ಯ ಸಮುದಾಯವನ್ನು ಒಂದೆಡೆ ತರುವ ಉದ್ದೇಶದಿಂದ ಬಳಸಿದ ಪದ. ಅದನ್ನು ಗ್ರಹಿಸಿದ ಮೊದಲ ದಿನಗಳಲ್ಲಿ ಒಂದು ಸ್ಪಷ್ಟವಾದ ವರ್ಗ ಸಮುದಾಯವನ್ನು ಅದು ಪ್ರತಿನಿಧಿಸುತ್ತಿತ್ತು. ಉಳಿದ ಸಮಾಜದಲ್ಲಿ ಹೇಗೆ ಭಿನ್ನವರ್ಗಗಳಿವೆಯೋ ಹಾಗೇ ಸರ್ಕಾರದ ಮೀಸಲಾತಿ ನೀತಿ ಮತ್ತಿತರ ಆಧುನೀಕರಣದ ಕ್ರಮಗಳಿಂದ ಭಿನ್ನವರ್ಗ ಸಮುದಾಯವಾದ ದಲಿತರನ್ನು ಅದು ಪ್ರತಿನಿಧಿಸುತ್ತದೆ. ಸರ್ಕಾರದ ನವ ಉದಾರವಾದದ ದೆಸೆಯಿಂದ 90%ಗಿಂತ ಹೆಚ್ಚಿನ ದಲಿತರು ಇಂದಿಗೂ ದುಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಉತ್ತಮ ಶಿಕ್ಷಣ, ಉದ್ಯೋಗಕ್ಕೆ ಅವರಿಗೆ ಅವಕಾಶವಿಲ್ಲ. ಮೀಸಲಾತಿಯ ಬಗೆಗೆ ಇಷ್ಟೆಲ್ಲ ಮಾತನಾಡಿದರೂ ಮೀಸಲಾತಿಗಾಗಿ ಲಭ್ಯವಿರುವ ಉದ್ಯೋಗಗಳ ಸಂಖ್ಯೆಯೇ ಕಡಿಮೆಯಾಗುತ್ತಿದೆ. ದಲಿತರು ಭಾಗವಾಗಿರುವ ಗ್ರಾಮೀಣ ಆರ್ಥಿಕತೆ ಚೂರುಚೂರಾಗುತ್ತಿದೆ. ಅಧಿಕಾರ ಸರಿಯಾಗಿ ಹಂಚಿಕೆಯಾಗದಿರುವ ಪರಿಣಾಮ ಜಾತಿದೌರ್ಜನ್ಯಗಳು ಈಗಲೂ ಸಂಭವಿಸುತ್ತಿವೆ. ಜಾಗತೀಕರಣವಾದ ಈ ಎರಡು ದಶಕಗಳಲ್ಲಿ ಯಾವುದೇ ಮಹತ್ತಾದ ಬದಲಾವಣೆ ಸಂಭವಿಸುತ್ತಿರುವಂತೆ ನನಗನಿಸುತ್ತಿಲ್ಲ. ಒಳ್ಳೆಯದೇನು ಸಂಭವಿಸುತ್ತಿದೆಯೋ ಅದು ಕೈಬೆರಳೆಣಿಕೆಯಷ್ಟು ಗಣ್ಯ ದಲಿತರಿಗಷ್ಟೇ ಸಂಭವಿಸುತ್ತಿದೆ. ತಮ್ಮ ಮೇಲ್ಜಾತಿ ಸ್ನೇಹಿತರಂತೇ ಕೆನೆಪದರ ಅನುಭವಿಸುವ ಸವಲತ್ತುಗಳನ್ನು ದೊರಕಿಸಿಕೊಂಡು ನೆಮ್ಮದಿಯಾಗಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲೂ ನಿಜವಾದ ದಲಿತರು ಹಿನ್ನಡೆ ಅನುಭವಿಸುತ್ತಿದ್ದಾರೆ.



ಮಾನವ ಹಕ್ಕುಗಳ ಹೋರಾಟಗಾರ, ಚಿಂತಕ ಆನಂದ್ ತೇಲ್ತುಂಬ್ಡೆ

ಜಾತಿಪದ್ಧತಿಯನ್ನು ನಾಶಮಾಡುವುದು ಹೇಗೆ? ಅದೂ ರಾಜಕೀಯವಾಗಿ ಹೇಗೆ ಆ ಕುರಿತು ಪ್ರಯತ್ನಿಸಬಲ್ಲೆವು?

ಜಾತಿಪದ್ಧತಿಯನ್ನು ನಾಶಮಾಡಲು ಮೊದಲು ಅದನ್ನು ನಿರಾಕರಿಸಬೇಕು, ನಂತರ ಅದರ ಅಳಿದುಳಿದ ರೂಪಗಳ ವಿರುದ್ಧ ಹೋರಾಡಬೇಕು. ಇದರರ್ಥವೇನು? ಏನೆಂದರೆ ಬರಿಯ ಮುಗ್ಧತೆಯಿಂದಲೋ ಅಥವಾ ಜಾತಿಸಂಘರ್ಷದಿಂದಲೋ ಜಾತಿಪದ್ಧತಿಯನ್ನು ವಿರೋಧಿಸುವುದರಿಂದ ಅದು ನಾಶವಾಗುವುದಿಲ್ಲ. ಅದನ್ನು ನಾಶಮಾಡಲು ಅದನ್ನು ಮೀರಿಹೋಗಬೇಕು. ಜಾತಿಯು ಮೂಲತಃ ವಿಭಜಿಸುವ ಸಂಗತಿ; ಅದು ಶ್ರೇಣಿ ಮತ್ತು ನಿರಂತರತೆಯನ್ನು ಬಯಸುತ್ತದೆ. ಅದು ಎಂದಿಗೂ ಒಗ್ಗೂಡಿಸುವುದಿಲ್ಲ. ಜಾತಿಗೆ ಪ್ರತಿಮದ್ದು ಏನೆಂದರೆ ಅದರ ಮತ್ತೊಂದು ತುದಿಯಲ್ಲಿರುವ ವರ್ಗವ್ಯವಸ್ಥೆಯನ್ನು ಬಳಸಿಕೊಳ್ಳುವುದು. ಐಹಿಕವಾಗಿಯಾದರೂ ಅದು ಜನರನ್ನು ಒಗ್ಗೂಡಿಸುತ್ತದೆ.

ಇದು ಕಷ್ಟವೆನಿಸಬಹುದು, ಆದರೆ ಹಾಗೇನಿಲ್ಲ. ಜಾತಿ-ಸಂಪ್ರದಾಯಗಳ ಒಂದೇ ಕಾರಣ ಒಡ್ಡಿ ಅಸ್ಪೃಶ್ಯ ಜಾತಿಗಳನ್ನು ಒಗ್ಗೂಡಿಸಲು ಸಾಧ್ಯವಿಲ್ಲ. ನೀವು ಜಾತಿಯನ್ನು ತಂದ ಕೂಡಲೇ ಜಾತಿಪ್ರಜ್ಞೆ ಮತ್ತು ಜಾತಿ ಅಹಂಕಾರ ಅದರೊಟ್ಟಿಗೆ ಬಂದೇ ಬರುತ್ತವೆ. ಇವು ನಿಮ್ಮನ್ನು ಒಗ್ಗೂಡಲು ಎಂದೂ ಬಿಡುವುದಿಲ್ಲ. ಜಾತಿಯನ್ನು ಬಳಸದೇ ವರ್ಗಚಹರೆಯ ಆಧಾರದ ಮೇಲೆ ಜನರನ್ನು ಗುರುತಿಸಲು ಶುರುಮಾಡಿ. ಎಲ್ಲ ಸಾಮಾಜಿಕ ಅನಿಷ್ಟಗಳ ವಿರುದ್ಧ ವಿಶಾಲ ಸಮುದಾಯವನ್ನು ಆಗ ಒಗ್ಗೂಡಿಸಬಹುದು.

ಪ್ರಾಯೋಗಿಕವಾಗಿ ಇದನ್ನು ಸಾಧಿಸಬೇಕೆಂದರೆ ಜಾತಿಯ ವಿರುದ್ಧ ಇರುವ ಶಕ್ತಿಗಳನ್ನು ನಿಧಾನ ಬೆಳೆಸಬೇಕು. ಅದರಲ್ಲೂ ಇಂದು ಉಪಜಾತಿಗಳಾಗಿ ಸಂಘಟನೆ ಒಡೆದುಹೋಗಿರುವ ದಿನಗಳಲ್ಲಿ ತಾವೊಬ್ಬರೇ ಜಾತಿ ಪದ್ಧತಿ ನಾಶಮಾಡಲು ಅಸಾಧ್ಯ ಎಂದು ಅರಿತು ದಲಿತ ಚಳವಳಿಯು ಪ್ರಜ್ಞಾಪೂರ್ವಕವಾಗಿ ವರ್ಗನೆಲೆಯ ಗ್ರಹಿಕೆ ಬೆಳೆಸಿಕೊಳ್ಳಬೇಕು. ಎಡಪಂಥೀಯ ಚಳವಳಿಯೂ ಸಹಾ ಜಾತಿವಿನಾಶದಲ್ಲಿ ಪಾಲ್ಗೊಳ್ಳದೇ ತಳಸಮುದಾಯಗಳ ಕಾರ್ಮಿಕ-ಶ್ರಮಿಕರನ್ನು ಬಿಡುಗಡೆಗೊಳಿಸಿ ತಮ್ಮ ಜೊತೆ ಸೇರಿಸಿಕೊಳ್ಳದೇ ಸಾಮಾಜಿಕ ಕ್ರಾಂತಿಯ ಕನಸನ್ನು ನನಸಾಗಿಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಅರಿಯಬೇಕು.

ಚಳವಳಿಗಳು ಇಲ್ಲಿನವರೆಗೆ ತಪ್ಪು ಹಾದಿ ಹಿಡಿದಿವೆ. ತಮ್ಮ ವಿಫಲತೆಯ ಹಿನ್ನೆಲೆಯಲ್ಲಿ ಇದನ್ನು ಅರಿಯಲು ಅವರಿಗೆ ಕಷ್ಟವಾಗಲಿಕ್ಕಿಲ್ಲ. ಕೆಳಜಾತಿಗಳ ಒಗ್ಗೂಡುವಿಕೆಯೇ ಸಮಾಜದ ಜಾತಿಪ್ರಜ್ಞೆಯನ್ನು ದುರ್ಬಲಗೊಳಿಸಬಹುದು. ಆದರೆ ಇಷ್ಟರಿಂದಲೇ ಜಾತಿನಾಶವಾಗುವುದಿಲ್ಲ, ಅದು ಒಂದಲ್ಲಾ ಒಂದು ಜಾತಿ ದೌರ್ಜನ್ಯದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ಎದುರಿಸಲು ಎಡಪಂಥೀಯರು ಒಗ್ಗೂಡಬೇಕು ಹಾಗೂ ಬಲಪ್ರಯೋಗ ಅನಿವಾರ್ಯವಾದಲ್ಲಿ ಸಿದ್ಧರಾಗಬೇಕು. ದಲಿತರ ಆತಂಕದ

ಕ್ಷಣಗಳಲ್ಲಿ ಎಡಪಂಥವು ಅವರ ರಕ್ಷಣೆಗೆ ಧಾವಿಸಿದರೆ ಅವರಿಗೆ ಎಡಪಂಥದ ಬಗ್ಗೆ ಇರುವ ಅನುಮಾನವೂ ಪರಿಹಾರವಾಗುತ್ತದೆ, ಅವರನ್ನು ಹತ್ತಿರ ತರುತ್ತದೆ ಹಾಗೂ ಎಡಶಕ್ತಿ ಬಲಗೊಳ್ಳುತ್ತದೆ. ಈ ಬಲವನ್ನೇ ಜಾತಿನಾಶಕ್ಕೆ ಬಳಸಿಕೊಳ್ಳಬಹುದು. ಹೀಗೆ ಜಾತಿವಿರೋಧಿ ಶಕ್ತಿಗಳ ಪರಸ್ಪರ ಹೊಂದಾಣಿಕೆಯಿಂದ ಜಾತಿವಿನಾಶ ಕೊನೆಗೊಮ್ಮೆ ಸಾಧ್ಯವಾಗಬಹುದು.

ಬೆಂಗಳೂರಿನಲ್ಲಿ ನಡೆದ 'ಖೈರ್ಲಾಂಜಿ' ಪುಸ್ತಕ ಬಿಡುಗಡೆ ಸಮಾರಂಭ

ಜಾತಿಸಂಘರ್ಷ ಹಿಂಸಾತ್ಮಕವಾಗಿರಬೇಕೋ, ಅಹಿಂಸಾತ್ಮಕವಾಗಿರಬೇಕೋ?

ಇತಿಹಾಸದ ಉದಾಹರಣೆ ಹೇಳುವಂತೆ ಜಾತಿಸಂಘರ್ಷ ಎಂದೂ ವಿಧ್ವಂಸಕಾರಿಯಾಗಿಯೇ ಇದೆ. ಆದರೆ ಜಾತಿಗಳು ತಮ್ಮತಮ್ಮಲ್ಲೇ ಮೇಲ್ಮೆಗಾಗಿ ಕಚ್ಚಾಡಿದವೇ ಹೊರತು ಮೇಲ್ಜಾತಿ ಸ್ಥಾನ ಅನಿರ್ಬಂಧಿತವಾಗಿ ಮುಂದುವರೆಯಿತು. ನಿಜವಾದ ಸಂಘರ್ಷವಿಲ್ಲದಿದ್ದರೆ ಜಾತಿಸಂಘರ್ಷ ಕೇವಲ ಅವ್ಯಾವಹಾರಿಕ ಹಾಗೂ ಪೊಳ್ಳು ಆಡಂಬರವಾಗುತ್ತದೆ. ಜಾತಿಸಂಘರ್ಷ ಎಂದರೇನು? ಯಾವ ಜಾತಿ ಯಾವ ಜಾತಿಯ ವಿರುದ್ಧ ಹೋರಾಡುತ್ತದೆ? ಇತಿಹಾಸದಲ್ಲಿ ಈ ತೆರನ ಯುದ್ಧ ನಡೆದ ಉದಾಹರಣೆಗಳಿಲ್ಲ. ಹಾಗೆ ಸಂಭವಿಸಿತೆಂದು ಹೇಳುವ್ವವರಿಗೆ ತಾವೇನು ಹೇಳುತ್ತಿದ್ದೇವೆಂಬ ಅರಿವಿರಲಿಕ್ಕಿಲ್ಲ. ಹಿಂಸೆಯೋ, ಅಹಿಂಸೆಯೋ ಅದು ನನಗೆ ಮುಖ್ಯವಲ್ಲ.

ಕ್ರಿಯಾಶೀಲ ದಲಿತ್ ಪ್ಯಾಂಥರ್ ಚಳವಳಿ ನೋಡಿದ್ದೇವೆ. ಆ ಚಳವಳಿಯಿಂದ ಕಲಿಯಬೇಕಾದ ಪಾಠಗಳಿವೆಯೇ?

ವಿಶ್ವವಿದ್ಯಾಲಯಗಳಿಂದ ಹೊರಬಂದ, ಭವಿಷ್ಯದಲ್ಲಿ ಯಾವ ಭರವಸೆಯೂ ಕಾಣದ, ಜಾತಿದೌರ್ಜನ್ಯಗಳು ನಡೆಯುತ್ತ ಅದಕ್ಕೆ ಮುಖ್ಯವಾಹಿನಿಯ ನಾಯಕರಿಂದ ಯಾವ ಪ್ರತಿಕ್ರಿಯೆಯನ್ನೂ ಕಾಣದೆ ಹತಾಶಗೊಂಡಿದ್ದ ದಲಿತ ತರುಣರ ಗುಂಪಿನ ಸಹಜ ಪ್ರತಿಕ್ರಿಯೆ ದಲಿತ್ ಪ್ಯಾಂಥರ್ಸ್ ಉಗಮಕ್ಕೆ ಕಾರಣವಾಯಿತು. ಅದೇ ವೇಳೆಗೆ ಪ್ರಪಂಚದಾದ್ಯಂತ ಕ್ರಾಂತಿಕಾರಿ ಬದಲಾವಣೆಗಳು ಸಂಭವಿಸುತ್ತಿದ್ದವು. ದಲಿತ್ ಪ್ಯಾಂಥರ್ಸ್ ಮಿಲಿಟೆಂಟ್ ಭಾಷೆಯಲ್ಲಿ ಮಾತನಾಡಿದ್ದೂ ಸಹಜವಾಗಿತ್ತು, ಅವರಿಗೆ ಅಮೆರಿಕದ ಬ್ಲ್ಯಾಕ್ ಪ್ಯಾಂಥರ್ಸ್ ಸ್ಫೂರ್ತಿಯಾಗಿದ್ದರು. ಆದರೆ ಅವರ ಅವರ ಮಿಲಿಟೆಂಟ್ ಹೋರಾಟಕ್ಕೆ ಬೆಂಬಲವಾಗಿ ಅಂಬೇಡ್ಕರ್ 1936ರಲ್ಲಿ ಹೇಳಿದ ಮೂರು ವಿಷಯಗಳು–ಸಂಘಟನಾ ಶಕ್ತಿ, ಆರ್ಥಿಕ ಶಕ್ತಿ ಮತ್ತು ಬೌದ್ಧಿಕ ಶಕ್ತಿ ಬೆಂಬಲವಾಗಿ ದೊರೆಯಲಿಲ್ಲ.

ರ‍್ಯಾಡಿಕಲ್ ಐಡಿಯಾಲಜಿಯನ್ನಿಟ್ಟುಕೊಂಡು ಅವರು ಮುಗ್ಗರಿಸಿದರು. ಆದರೆ ಅದೇ ಐಡಿಯಾಲಜಿಯಿಂದ ಬೌದ್ಧಿಕ ಹಾಗೂ ಸಂಘಟನಾತ್ಮಕ ಶಕ್ತಿ ಪಡೆಯಬಹುದಾಗಿತ್ತು. ಅವರಲ್ಲೇ ಒಂದು ಗುಂಪು ಅಂಬೇಡ್ಕರ್ ಬೋಧಿಸಿದ ಬೌದ್ಧಧರ್ಮದ ದಾರಿಯಿಂದ ದೂರ ಸರಿಯುತ್ತಿರುವುದನ್ನು ಬೊಟ್ಟುಮಾಡಿ ತೋರಿಸಿ ಬೇರೆಯಾದರು. ಇದು ದಲಿತ ಚಳವಳಿಯ ಸೈದ್ಧಾಂತಿಕ ಮಿತಿಯನ್ನು ಬಹಿರಂಗಗೊಳಿಸಿತು. ಈಗ ಅದರ ಪಳೆಯುಳಿಕೆ ಸ್ವಲ್ಪ ಕಾಣಿಸಿದರೂ ದಲಿತ್ ಪ್ಯಾಂಥರ್ಸ್ ಅಕಾಲಮೃತ್ಯುವಿಗೀಡಾಯಿತು. ವ್ಯಾವಹಾರಿಕವಾಗಿ ವಿಶ್ಲೇಷಿಸಿದರೆ ಅದರಿಂದ ಇತ್ಯಾತ್ಮಕ ಫಲಿತಾಂಶವೇನೂ ಬಂದಿಲ್ಲವೆನಿಸಬಹುದು. ಆದರೆ ಸಾಂಕೇತಿಕವಾಗಿ ದಲಿತ ತರುಣರ ಪ್ರತಿರೋಧವು ವ್ಯವಸ್ಥೆಯ ಅಡಿಪಾಯವನ್ನೇ ಅಲುಗಾಡಿಸಿ ಭಯಗೊಳಿಸಿದ್ದು ಸುಳ್ಳಲ್ಲ.

ನನ್ನ ಪ್ರಕಾರ ದಲಿತ್ ಪ್ಯಾಂಥರ್ಸ್ ವೈಫಲ್ಯದಿಂದ ಕಲಿಯಬಹುದಾದ ಪಾಠ ಏನೆಂದರೆ: ದಲಿತರ ವಾಸ್ತವ ಅಗತ್ಯಗಳಿಗೂ ಮತ್ತು ದಲಿತ ಚಳವಳಿಯ ಕಲ್ಪಿತ ಸಿದ್ಧಾಂತಕ್ಕೂ ನಡುವೆ ಹೊಂದಾಣಿಕೆ ಇಲ್ಲದೇ ಇದ್ದದ್ದು. ರಾಜಾ ಢಾಳೆ ನೇತೃತ್ವದ ಗುಂಪು ಅಂಬೇಡ್ಕರ್ ಮಾರ್ಗದ ಅಂತಿಮ ಗುರಿ ಬೌದ್ಧಧರ್ಮದೆಡೆಗಿನ ನಡಿಗೆಯೇ ಎಂದು ಭಾವಿಸಿತು ಹಾಗೂ ಎಡ ಸಿದ್ಧಾಂತ ಅದಕ್ಕೆ ಸಂಪೂರ್ಣ ವಿರೋಧಿಯೆಂದು ಬಗೆಯಿತು. ಅಂಬೇಡ್ಕರ್ ಜೊತೆಜೊತೆ ಪರಿಭಾವಿಸುವುದರಿಂದ ಬೌದ್ಧಧರ್ಮವು ಭಾವುಕವಾಗಿ ತುಂಬ ಆಕರ್ಷಕವೇನೋ ಹೌದು. ಈ ವಿಚಾರ ಭಿನ್ನತೆ ದಲಿತ್ ಪ್ಯಾಂಥರ್ಸ್‌ನ್ನು ಒಡೆಯಿತು ಮತ್ತು ಅದು ನಂತರ ಒಡೆದು ಹೋಳಾಗುತ್ತಲೇ ಬಂತು.

ಈಗ ಉಳಿದಿರುವುದು ಅದರ ಸವಕಲು ದೇಹ, ಅದೂ ಅದರ ವಿರೋಧಾಭಾಸವಾಗಿ ಕಾಣಿಸುತ್ತದೆ. ಅದು ಆಳುವವರ ಪರವಾಗಿ ದಲಿತ ಚಳವಳಿಯನ್ನು ಸಂಪೂರ್ಣ ನಾಶಮಾಡುತ್ತಿದೆ. ಅದು ಬೇರೆ ರಾಜ್ಯಗಳಲ್ಲಿಯೂ ಶುರುವಾದರೂ ಮಹಾರಾಷ್ಟ್ರದ ಮಾದರಿಯಲ್ಲೇ ಅಕಾಲ ಮರಣಕ್ಕೀಡಾಯಿತು. ಇದರಿಂದ ಕಲಿಯಬೇಕಾಗಿರುವ ಇನ್ನೊಂದು ಪಾಠವೆಂದರೆ ದಲಿತರು ತಮ್ಮದೇ ವರ್ಗದ ಇತರರೊಂದಿಗೆ ಕೈಜೋಡಿಸದಿದ್ದರೆ ತಮ್ಮ ಗುರಿ ಸಾಧಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಮೂರನೆಯ ಪಾಠವೆಂದರೆ ನೀತಿಯ ಕುರಿತಾದುದು. ಸರಿಯಾದ ನೀತಿಬೆಂಬಲವಿಲ್ಲದಿದ್ದರೆ ಮಿಲಿಟೆಂಟ್ ಧೋರಣೆಯೇ ಚಳವಳಿಗೆ ತಿರುಗುಬಾಣವಾಗುವ ಸಾಧ್ಯತೆಯಿದೆ.

ಮೇಲ್ಕಾಣಿಸಿದ ವಿಷಯಗಳು ದಲಿತ್ ಪ್ಯಾಂಥರ್ಸ್ ಎಲ್ಲಿ ತಪ್ಪಿತು ಎಂದು ಸೂಚಿಸುತ್ತವೆ. ಮತ್ತೆ ಒತ್ತಿ ಹೇಳಬೇಕೆಂದರೆ ಅದು ರ‍್ಯಾಡಿಕಲ್(ಪುರೋಗಾಮಿ) ಕಾರ್ಯನೀತಿಗೆ ತಕ್ಕ ಸೈದ್ಧಾಂತಿಕ ಪುನಾರಚನೆ ಮಾಡುವಲ್ಲಿ ವಿಫಲವಾಯಿತು. ಮುಖ್ಯವಾಹಿನಿಯ ದಲಿತ ಚಳವಳಿ ಏಕೆ ವಿಫಲವಾಯಿತು ಎಂಬ ಬಗ್ಗೆ ಪ್ಯಾಂಥರ್ಸ್ ಯೋಚಿಸಿ ಹೆಜ್ಜೆ ಇಟ್ಟಿದ್ದರೆ ಬಹುಶಃ ಸೈದ್ಧಾಂತಿಕ ಮತ್ತು ಇನ್ನಿತರ ತಪ್ಪುಗಳನ್ನು ತಿದ್ದಿಕೊಳ್ಳಬಹುದಿತ್ತು. ಅದಕ್ಕೆ ಪುರೋಗಾಮಿಯಾದ ಗುರಿಯಿದ್ದರೂ ಜಾತಿ ಸಮುದಾಯಗಳ ಹುದಲದಲ್ಲಿ ಸಿಲುಕಿಕೊಂಡಿತು ಮತ್ತು ತನ್ನ ಸಂಘಟನಾ ಶಕ್ತಿಯನ್ನು ವೃದ್ಧಿಗೊಳಿಸಿಕೊಳ್ಳುವಲ್ಲಿ ಸೋಲಬೇಕಾಯ್ತು.

ನೀವು ದಲಿತ ಪ್ರಜ್ಞೆ ಹಾಗೂ ಜಾತಿವಿನಾಶ ಚಳುವಳಿಯಲ್ಲಿ ಹೇಗೆ ತೊಡಗಿಸಿಕೊಂಡಿರಿ?

ಭೂಹೀನ ಕೃಷಿಕಾರ್ಮಿಕ ಕುಟುಂಬದಲ್ಲಿ ಹುಟ್ಟಿ ನಮ್ಮ ಹಳ್ಳಿಯಲ್ಲಿದ್ದ ಬೇರೆಬೇರೆ ತೆರನ ಅಸಮಾನತೆಗಳ ಕುರಿತು ತಿಳಿವಳಿಕೆ ಹುಟ್ಟಿತು. ಹಾಗೆ ನಮ್ಮದು ಪಕ್ಕಾ ಹಳ್ಳಿಯೇನಾಗಿರಲಿಲ್ಲ. ಅಲ್ಲೊಂದು ರೈಲ್ವೇ ಸ್ಟೇಷನ್ ಇತ್ತು. ತಾಲೂಕು ಕೇಂದ್ರ ಸಂಪರ್ಕಿಸುವ ರಸ್ತೆಯಿತ್ತು. ಸುಣ್ಣದ ಫ್ಯಾಕ್ಟರಿಗಳು ಹಾಗೂ ಕಲ್ಲಿದ್ದಲು ಗಣಿಗಳಿದ್ದವು. ಜಾತಿ ಸಾಮಾಜೀಕರಣವನ್ನು ದಾಟಿ ಆಚೆ ಬರಲು ನನಗಿದರಿಂದ ಸಾಧ್ಯವಾಯ್ತು. ಎಲ್ಲವನ್ನೂ ಕ್ರಾಂತಿಕಾರಿ ದೃಷ್ಟಿಕೋನದಿಂದ ನೋಡತೊಡಗಿದೆ. ಎರಡನೇ ತರಗತಿಯಿರುವಾಗ ತರಗತಿಗೆ ಅತಿ ಹೆಚ್ಚು ಅಂಕ ಗಳಿಸಿದ್ದಕ್ಕೆ ದೊರೆತ ಜೋಸೆಫ್ ಸ್ಟಾಲಿನ್ನನ ಆತ್ಮಕತೆ ಓದಿ ಮಾರ್ಕ್ಸಿಸಂನತ್ತ ಆಕರ್ಷಿತನಾದೆ. ಅದು ಅಂಬೇಡ್ಕರ್ ಕುರಿತು ಏನಾದರೂ ಓದುವ ಬಹಳ ವರ್ಷಗಳ ಮುಂಚೆಯೇ ಸಂಭವಿಸಿದ್ದು.

ಮಾರ್ಕ್ಸ್‌ವಾದ ಕಲಿಸಲು ನನಗ್ಯಾರೂ ಗುರುಗಳಿರಲಿಲ್ಲವಾಗಿ ನಿಧಾನವಾಗಿ ವಾಸ್ತವ

ಕೆಳಜಾತಿಗಳ ಒಗ್ಗೂಡುವಿಕೆಯೇ ಸಮಾಜದ ಜಾತಿಪ್ರಜ್ಞೆಯನ್ನು ದುರ್ಬಲಗೊಳಿಸಬಹುದು. ಆದರೆ ಇಷ್ಟರಿಂದಲೇ ಜಾತಿನಾಶವಾಗುವುದಿಲ್ಲ, ಅದು ಒಂದಲ್ಲಾ ಒಂದು ಜಾತಿ ದೌರ್ಜನ್ಯದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ಎದುರಿಸಲು ಎಡಪಂಥೀಯರು ಒಗ್ಗೂಡಬೇಕು ಹಾಗೂ ಬಲಪ್ರಯೋಗ ಅನಿವಾರ್ಯವಾದಲ್ಲಿ ಸಿದ್ಧರಾಗಬೇಕು. ದಲಿತರ ಆತಂಕದ ಕ್ಷಣಗಳಲ್ಲಿ ಎಡಪಂಥವು ಅವರ ರಕ್ಷಣೆಗೆ ಧಾವಿಸಿದರೆ ಅವರಿಗೆ ಎಡಪಂಥದ ಬಗ್ಗೆ ಇರುವ ಅನುಮಾನವೂ ಪರಿಹಾರವಾಗುತ್ತದೆ, ಅವರನ್ನು ಹತ್ತಿರ ತರುತ್ತದೆ ಹಾಗೂ ಎಡಶಕ್ತಿ ಬಲಗೊಳ್ಳುತ್ತದೆ. ಈ ಬಲವನ್ನೇ ಜಾತಿನಾಶಕ್ಕೆ ಬಳಸಿಕೊಳ್ಳಬಹುದು. ಹೀಗೆ ಜಾತಿವಿರೋಧಿ ಶಕ್ತಿಗಳ ಪರಸ್ಪರ ಹೊಂದಾಣಿಕೆಯಿಂದ ಜಾತಿವಿನಾಶ ಕೊನೆಗೊಮ್ಮೆ ಸಾಧ್ಯವಾಗಬಹುದು.

ಮತ್ತು ಸಿದ್ಧಾಂತಗಳನ್ನು ಜಿಜ್ಞಾಸೆಗೊಳಪಡಿಸುತ್ತ ಅರಿತುಕೊಳ್ಳುತ್ತ ಹೋದೆ. ಅದು ಬಗೆಹರಿಸಿಕೊಳ್ಳಬೇಕಾದ ಎಷ್ಟೋ ಅಸಂಬದ್ಧತೆಗಳನ್ನು ತೋರಿಸಿಕೊಟ್ಟಿತು. ಜಾತಿಪ್ರಜ್ಞೆಯು ವರ್ಗಪ್ರಜ್ಞೆ ಮೂಡುವ ಪ್ರಕ್ರಿಯೆಯನ್ನೇ ತಡೆದುಬಿಡುವ ವಾಸ್ತವದೆದುರು ಇದು ನನ್ನನ್ನು ತಂದು ನಿಲ್ಲಿಸಿತು. ನನಗೆ ನಂತರ ಗಟ್ಟಿಯಾಯಿತು ಜಾತಿಪ್ರಜ್ಞೆ ಮತ್ತು ವರ್ಗಪ್ರಜ್ಞೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಇರುವ ದ್ವಂದ್ವವೇ ಮೊದಲ ಕಮ್ಯುನಿಸ್ಟರ ವೈಫಲ್ಯ ಎಂದು. ವರ್ಗ ವಿಶ್ಲೇಷಣೆ ಮಾಡುವಾಗ ಈ ದೇಶದ ಸಾಮಾಜಿಕ ವಾಸ್ತವದ ವಿಶಿಷ್ಟತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿ ಪಾಶ್ಚಿಮಾತ್ಯ ಎರಕಕ್ಕೆ ತಕ್ಕಂತೆ ಇಲ್ಲಿನ ವಿಶ್ಲೇಷಣೆ ಕೈಗೊಂಡರು. ಯಾವುದೇ ದೇಶದ ಸನ್ನಿವೇಶವನ್ನು ಅರ್ಥಮಾಡಿಕೊಂಡು ವರ್ಗ ವಿಶ್ಲೇಷಣೆ ಮಾಡಬೇಕಾಗುತ್ತದೆ. ಇದನ್ನು ಮಾಡಿದ್ದರೆ ಜಾತಿಗಳನ್ನು ವರ್ಗದೊಳಗೆ ಕೂರಿಸಿಬಿಡಬಹುದಿತ್ತು. ದುರದೃಷ್ಟವಶಾತ್ ಹಾಗಾಗದೇ ಇಂದಿನವರೆಗೂ ದ್ವಂದ್ವ ಉಳಿದುಕೊಂಡೇ ಬಂತು. ಹಾಗೇನಾದರೂ ಆಗಿದ್ದಲ್ಲಿ ಭಾರತ ದೇಶದ ಚರಿತ್ರೆಯೇ ಬದಲಾಗಿಬಿಡುತ್ತಿತ್ತು.

ಈ ವಿಷಯಕ್ಕೆ ಮುಖಾಮುಖಿಯಾಗದೇ ಗಮನಾರ್ಹವಾದದ್ದೇನೂ ಇಲ್ಲಿ ಸಂಭವಿಸುವುದಿಲ್ಲ. ಜನರನ್ನು ಒಡೆಯಲು ಜಾತಿಯೆನ್ನುವುದು ಯಾವಾಗಲೂ ಆಳುವ ವರ್ಗದ ಅಸ್ತ್ರವಾಗಿದೆ. ಈ ಅಸ್ತ್ರವನ್ನು ನಾಶಮಾಡುವುದು ಅತ್ಯವಶ್ಯವಾಗಿದೆ. ತಳ ಸಮುದಾಯಗಳನ್ನು ಪೂರಾ ಒಗ್ಗೂಡಿಸುವುದು ಭಾರತದ ಯಾವುದೇ ಕ್ರಾಂತಿಕಾರಿ ಚಳವಳಿಯ ಪ್ರಥಮ ಹೆಜ್ಜೆಯಾಗಬೇಕಾಗಿದೆ.

'ನನ್ನ ಕ್ಷೇತ್ರದಲ್ಲಿ ನಾನು ಅತ್ಯುಚ್ಚ ವಿದ್ಯಾರ್ಹತೆ ಹೊಂದಿದ್ದೇನೆ. ಆದರೂ ಪರಿಶಿಷ್ಟ ಜಾತಿಯವನಾಗೇ ಉಳಿದಿದ್ದೇನೆ' ಎಂದು ಒಮ್ಮೆ ಹೇಳಿದ್ದಿರಿ. ಈ ಬಗ್ಗೆ ವಿವರಿಸಿ.

ಭಾರತದಲ್ಲಿ ಮೂಲಭೂತವಾಗಿ ಯಾವುದೂ ಒಮ್ಮೆಲೇ ಬದಲಾಗುವುದಿಲ್ಲ. ಹೌದು, ಇದು ವಾಸ್ತವ. ಪ್ರಗತಿಪರರೆಂದುಕೊಂಡವರೂ ನಿಮ್ಮನ್ನು ದಲಿತ ಎಂದು ಗುರುತಿಸುವುದನ್ನು ನೋಡುವಾಗ ದಂಗಾಗುತ್ತದೆ. ಇವು ಎಷ್ಟು ಆಳವಾಗಿ ಬೇರೂರಿರುವ ಭಾವನೆಗಳು ಎನ್ನುವುದು ತಿಳಿಯುತ್ತದೆ. ನನ್ನ ವಿದ್ಯಾರ್ಥಿ ದೆಸೆಯಿಂದಲೂ ನಾನು ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿ. ಮಾಡುವುದನ್ನೆಲ್ಲ ಪ್ರಾಮಾಣಿಕವಾಗಿ ಮಾಡಿದೆ, ಕೈಹಾಕಿದಲ್ಲೆಲ್ಲ ಗುರುತು ಉಳಿಯುವಂತಹ ಕೆಲಸವನ್ನೇ ಮಾಡಿದೆ, ಯಾರ ಜೊತೆಗಾದರೂ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ, ಛಲ ಹೊಂದಿದ್ದೆ. ಆದರೆ ವಾಸ್ತವದಲ್ಲಿ ನನಗಿಂತ ಕುಬ್ಜರಾದವರಿಂದ ಹಿಂದೂಡಲ್ಪಟ್ಟಿದ್ದೇನೆ. ಇದನ್ನು ಹೇಗೆ ವಿವರಿಸುವುದು?

ನನಗನಿಸುವಂತೆ ಜಾತಿಯು 'ಕಂತು ಮತ್ತು ಕಡಿತ' (ಪ್ರೀಮಿಯಂ ಅಂಡ್ ಡಿಸ್ಕೌಂಟ್) ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ. ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಸಂಕೀರ್ಣವಾಗಿ. ಕೇವಲ ದಲಿತ ಎನ್ನುವುದು ನಿಮ್ಮನ್ನು ಕನಿಷ್ಠಗೊಳಿಸುವುದಿಲ್ಲ. ಆದರೆ ದಲಿತನಾಗಿ ಸಾಮರ್ಥ್ಯ ಹೊಂದಿದ್ದರೆ ಅದು ನಿಮ್ಮ ವಿರುದ್ಧ ಕೆಲಸ ಮಾಡುತ್ತದೆ. ಹಳೆಯ ನಂಬಿಕೆಯೇ ಇಲ್ಲಿ ಕೆಲಸ ಮಾಡುತ್ತದೆ. ನಿಮ್ಮ ಜಾತಿನಿಯಮಗಳ ಚೌಕಟ್ಟಿಗೆ ನೀವು ಬದ್ಧರಾಗಿದ್ದಿರೋ ನಿಮಗೆ ರಕ್ಷಣೆಯಿದೆ. ನೀವು ಮೀಸಲಾತಿಗಾಗಿ ಬೇಡುವವರಾದರೆ ಅವರು ನಿಮಗೆ ಏನನ್ನಾದರೂ ಕೊಟ್ಟಾರು. ಆದರೆ ನೀವು ಮೀಸಲಾತಿ ನಿರಾಕರಿಸಿದಿರೋ, ನಿಮ್ಮನ್ನು ತುಳಿಯುತ್ತಾರೆ.

ನಾನು ಯಾವಾಗಲೂ ರ್‍ಯಾಡಿಕಲ್ ಆಗಿಯೇ ಯೋಚಿಸುವವ. ಸಿದ್ಧಮಾದರಿಯಲ್ಲಿ ಜಾತಿಯ ಬಗ್ಗೆ ಮಾತನಾಡುವುದಿಲ್ಲ. ನನ್ನ ಬಹಳಷ್ಟು ಬರವಣಿಗೆಗಳೂ ಜಾತಿಯನ್ನು ಹೊರತುಪಡಿಸಿ ಇರುತ್ತವೆ. ಆದರೂ ನನ್ನ ಅರ್ಹತೆ ಪ್ರಮಾಣಪತ್ರವೋ ಎಂಬಂತೆ ನನ್ನನ್ನು 'ದಲಿತ' ಲೇಖಕ ಎಂದು ಗುರುತಿಸಲಾಗುತ್ತದೆ. ಉಳಿದವರನ್ನೂ ಅವರವರ ಜಾತಿಗಳಿಂದ ಗುರುತಿಸುವರೇ? ಹಾಗಿದ್ದರೆ ದಲಿತರನ್ನಷ್ಟೇ ಅವರ ಜಾತಿಯಿಂದೇಕೆ ಗುರುತಿಸಬೇಕು? ಅವರ ಮನಸ್ಸಿನಲ್ಲಿರುವ ಜಾತಿವಿಷವನ್ನಷ್ಟೇ ಇದು ಬಹಿರಂಗಪಡಿಸಬಲ್ಲದು.



ನನ್ನ ಬದುಕಿನ ಭಾಗವಾಗಿರುವ ಕಾರ್ಪೊರೇಟ್ ಸ್ಪರ್ಧಾ ಜಗತ್ತನ್ನು ಬಿಡಿ, ಎಲ್ಲ ಕಡೆ ಇದು ಸಂಭವಿಸುವುದನ್ನು ನೋಡುತ್ತೀರಿ. ಐಐಎಂ ಅಹ್ಮದಾಬಾದ್‌ನ ಹಳೆಯ ವಿದ್ಯಾರ್ಥಿಯೊಬ್ಬ ಸಮಾಜದ ಕಾರ್ಯಗಳಲ್ಲಿ ತೊಡಗಿಸಿಕೊಂಡರೆ ಎಲ್ಲ ಕಡೆಯಿಂದ ಪ್ರಶಂಸೆಯ ಸುರಿಮಳೆ ಗಳಿಸುತ್ತಾನೆ. ಮಾಧ್ಯಮ, ಹಳೆಯ ವಿದ್ಯಾರ್ಥಿಗಳ ಸಂಘ, ಹೀಗೇ ಎಲ್ಲರಿಂದ. ಎರಡು ದಶಕಗಳಿಂದ ನಾನು ಇಂತಹ ಚಟುವಟಿಕೆಯಲ್ಲೇ ತೊಡಗಿಕೊಂಡಿದ್ದೇನೆ, ಆದರೆ ಯಾವ ಮೆಚ್ಚುಗೆಯ ಮಾತನ್ನೂ ಕೇಳಲಿಲ್ಲ, ಅದಕ್ಕೆ ವಿರುದ್ಧವಾಗಿ ಇಂಥ ದಲಿತ, ಅಂಥ ದಲಿತ ಎಂಬ ಮಾತುಗಳನ್ನೇ ಕೇಳುತ್ತ ಬಂದಿದ್ದೇನೆ. ಐಐಎಂಎ ಹಳೆಯ ವಿದ್ಯಾರ್ಥಿ ಒಂದು ಕತೆ ಪುಸ್ತಕ ತಂದರೆ ಅದು ಸುದ್ದಿಯಾಗುತ್ತದೆ. ದೀರ್ಘಾವಧಿ ಪರಿಣಾಮ ಬೀರಬಲ್ಲ ವಿಷಯಗಳನ್ನೊಳಗೊಂಡ ನನ್ನ 18 ಪುಸ್ತಕಗಳು ಬಂದಿವೆ. ಅದನ್ನು ಯಾರೂ ಗಮನಿಸಲೂ ಇಲ್ಲ. ನನ್ನ ಬಗ್ಗೆ ನಾನೇ ಕಾಳಜಿ ವಹಿಸಿ ಬಣ್ಣಿಸುತ್ತಿಲ್ಲ, ಆದರೆ ನಿಮ್ಮ ಸುತ್ತಮುತ್ತ ತುಂಬಿರುವ ಕೊಳಕುರಾಡಿ ಕಣ್ಣಿಗೆ ರಾಚುತ್ತದೆ.

ಖೈರ್ಲಾಂಜಿ ಘಟನೆಯ ಬಗೆಗೆ ಮಾತನಾಡುತ್ತ ನೀವು 'ಶಾಕ್ ಟ್ರೀಟ್‌ಮೆಂಟ್' ಎಂಬ ಮಾತು ಬಳಸಿದ್ದಿರಿ. ಅದನ್ನು ವಿವರಿಸುತ್ತೀರಾ?

ಈ ಉಕ್ತಿ ಬಹಳಷ್ಟು ಗೊಂದಲ, ವಿವಾದ ಸೃಷ್ಟಿಸಿದೆ. ಜಾತಿದೌರ್ಜನ್ಯದ ವಿಷಯದಲ್ಲಿ ಅತ್ಯಾಚಾರಕ್ಕೆ ಅತ್ಯಾಚಾರ, ಕೊಲೆಗೆ ಕೊಲೆ ಎಂಬ ನೀತಿಯನ್ನು ನಾನು ಪ್ರತಿಪಾದಿಸಿದೆನೆಂದು ಹಲವರು ತಿಳಿದರು. ಇದು ತಿರುಚಲ್ಪಟ್ಟ ಮಾತು. ವಾಸ್ತವವಾಗಿ 'ಶಾಕ್ ಟ್ರೀಟ್‌ಮೆಂಟ್' ಎಂಬ ಪದವನ್ನು ಜಾತಿವಿನಾಶಕ್ಕಾಗಿ ಒಗ್ಗಟ್ಟಾಗಿ ಹೋರಾಡುವ ವರ್ಗಐಕ್ಯತೆಗಾಗಿ ಬಳಸಿದ್ದೆ. ಜಾತಿ ಎನ್ನುವುದು ಸಾಮಾಜಿಕ ಅನಿಷ್ಟವೆಂದು ಸಮಾಜದ ಜ್ಞಾನದಲ್ಲಿ ಅಂತರ್ಗತವಾಗಬೇಕು. ಪ್ರಜ್ಞಾಪೂರ್ವಕವಾಗಿ ಜಾತಿ ಪದಬಳಕೆ ತಪ್ಪಿಸಿ ಜನರನ್ನು ಅವರವರ ಅಂತಸ್ತಿಗೆ ತಕ್ಕಂತೆ ಸಂಬೋಧಿಸಿದಲ್ಲಿ ಇದು ಸಾಧ್ಯವಾಗಬಹುದು. ದಲಿತರ ಮೇಲಿನ ಬಹಳಷ್ಟು ಜಾತಿ ದೌರ್ಜನ್ಯಗಳು ಹಿಂದುಳಿದ ಜಾತಿಗಳಿಂದಲೇ ಸಂಭವಿಸುತ್ತವೆ. ತಮ್ಮ ಜಾತಿಯ ಗಣ್ಯರಿಂದ ಆ ಜಾತಿಯ ಕೆಳವರ್ಗವನ್ನು ಬೇರ್ಪಡಿಸಿದರೆ ದಲಿತ ಸಮುದಾಯದ ಮೇಲಿನ ದೌರ್ಜನ್ಯ ತಡೆಯಬಹುದು ಎನ್ನುವುದು ನನ್ನ ಅಭಿಮತವಾಗಿತ್ತು. ಈ ರೀತಿ ಸರ್ವಜಾತಿಗಳ ವರ್ಗಗಳೂ ಒಗ್ಗಟ್ಟಾಗುವುದೆಂದರೆ ಅದು ಜಾತಿವ್ಯವಸ್ಥೆಯ ವಿರುದ್ಧ ನಿಂತ ಹಾಗೆಯೇ. ಈ ಅರಿವು ವರ್ಗಹಿತಾಸಕ್ತಿ ತಮ್ಮನ್ನು ಕಾಯುವುದಿಲ್ಲ ಎಂಬ ದಲಿತರ ಹಳೆಯ ಅವಿಶ್ವಾಸವನ್ನೂ ಹೋಗಲಾಡಿಸುತ್ತದೆ.

ಇಂಥ ಕ್ರಮವು ಹಳ್ಳಿಗಳಲ್ಲಿ ಜಾತಿಮಯ ವಾತಾವರಣವನ್ನು ಸ್ವಲ್ಪವಾದರೂ ತಿಳಿಗೊಳಿಸಬಹುದು. ಸಾವಿರಾರು ವರ್ಷಗಳಿಂದ ಚಾಲ್ತಿಯಲ್ಲಿರುವ ಜಾತಿ ವ್ಯವಸ್ಥೆ ಅಲ್ಲಿಲ್ಲಿ ತಲೆಹಾಕಬಹುದು. ಅದನ್ನು ವರ್ಗ ಐಕ್ಯಗೊಂಡ ಸಮುದಾಯದ ಸಹಾಯದಿಂದ ಬಲಪ್ರಯೋಗ ಮಾಡಿಯಾದರೂ ಹತ್ತಿಕ್ಕಬಹುದು. ಈ ತೆರನ ನೇರ ಶಿಕ್ಷೆ ಇಲ್ಲದಿದ್ದರೆ, ದೈಹಿಕ ಶಿಕ್ಷೆ ಇಲ್ಲದಿದ್ದರೆ ಶೋಷಕರಿಗೆ ವಿವೇಚನೆ ಬರುವುದಿಲ್ಲ. ಅವರ ಸಾಂಸ್ಕೃತಿಕ ತೆರೆಯಿಂದ ಈಚೆಗೆ ಅವರನ್ನು ಎಳೆಯಬೇಕು. ಈ ದೃಷ್ಟಿಯಿಂದ ನಾನು 'ಶಾಕ್ ಟ್ರೀಟ್‌ಮೆಂಟ್' ಎನ್ನುವ ಪದ ಬಳಸಿದ್ದೆ.

ಜಾತಿದೌರ್ಜನ್ಯಗಳು ದಲಿತರ ಮೇಲೇ ಏಕೆ ಆಗುತ್ತವೆ ಎಂದು ನೀವು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಶೋಷಕನಿಗೆ ದಲಿತರು ತಿರುಗಿ ಬೀಳಲಾರರೆಂಬ ವಿಶ್ವಾಸವಿದೆ. ಅದೇ ತಿರುಗಿ ಬೀಳುವುದು ಖಚಿತವಾದರೆ ಅಷ್ಟು ಸುಲಭದಲ್ಲಿ ದೌರ್ಜನ್ಯಕ್ಕಿಳಿಯಲಾರರು. ಕಾನೂನು ಕೆಲಸ ಮಾಡುವುದೂ ಇದೇ ನೀತಿಯ ಆಧಾರದ ಮೇಲೆ. ಸಾಮಾಜಿಕ ಪೂರ್ವಗ್ರಹಗಳಿಂದ ಜಾತಿದೌರ್ಜನ್ಯ ಸಂಭವಿಸುವುದಾದರೆ ಕೇವಲ ಕಾನೂನುಪಾಲನಾ ವ್ಯವಸ್ಥೆಯಿಂದ ಅದನ್ನು ಜಾರಿಮಾಡಲಾಗುವುದಿಲ್ಲ. ಶೋಷಿತರ ನೆಲೆಯಿಂದ ಆಗುವ ರಚನಾತ್ಮಕ ಬದಲಾವಣೆ ಮಾತ್ರ ಇದನ್ನು ನೇರ್ಪಡಿಸಬಲ್ಲದು. ಇದಕ್ಕೆ ಬೆಂಬಲವಾಗಿ ಸಾಂಸ್ಕೃತಿಕ ಬದಲಾವಣೆಯ ಸಿದ್ಧಾಂತವನ್ನೇ ಎದುರಿಗಿಡಬಲ್ಲೆ. ಅದಕ್ಕೆ ಅಂಕಿಅಂಶಗಳನ್ನೂ ಆಧಾರವಾಗಿ ನೀಡಬಲ್ಲೆ.

'ಅಯೋಧ್ಯಾ ತೀರ್ಪು ಮತ್ತೊಂದು ಡಿಸೈನರ್ ತೀರ್ಪು. ಮೊದಲು ನಾನೀ ಪದ ಬಳಸಿದ್ದು ಖೈರ್ಲಾಂಜಿ ಕೇಸಿನಲ್ಲಿ ಭಂಡಾರಾ ಕೋರ್ಟ್ ನೀಡಿದ ತೀರ್ಪನ್ನು ಕೇಳಿದ ನಂತರ' ಎಂದು ಹೇಳಿದ್ದಿರಿ. ಇದನ್ನು ವಿವರಿಸಿ ಹೇಳಿ.

ಹೌದು. ನವ ಉದಾರವಾದದ ಈ ದಿನಗಳಲ್ಲಿ ಕೋರ್ಟ್ ಕೂಡಾ ಮಾರುಕಟ್ಟೆ ದೃಷ್ಟಿಕೋನ ಹೊಂದಿರುವಂತಿದೆ. ತೀರ್ಪುಗಳು ಕೋರ್ಟಿನ ಪರಿಧಿಯಾಚೆ ಚಾಚತೊಡಗಿವೆ ಮತ್ತು ಅವು 'ಗ್ರಾಹಕರ ಪರೀಕ್ಷೆ'ಯನ್ನೆದುರಿಸಿ ಮಾರುಕಟ್ಟೆಯನ್ನವಲಂಬಿಸಿವೆ. ಖೈರ್ಲಾಂಜಿ ಕೇಸಿನಲ್ಲೇ ಕೋರ್ಟು ಆರು ಜನರಿಗೆ ಮರಣದಂಡನೆಯನ್ನು ವಿಧಿಸಿತ್ತು. ಖೈರ್ಲಾಂಜಿ ಜಾತಿ ಆಯಾಮವನ್ನು ಹೊಂದಿಲ್ಲ ಎಂದು ಹೇಳಿತ್ತು. ಅಲ್ಲಿ

ಯಾವುದೇ ಪಿತೂರಿ ನಡೆದಿಲ್ಲ, ಹೆಣ್ಣಿನ ಮಾನಭಂಗಕ್ಕೆ ಪ್ರಯತ್ನಿಸಿಲ್ಲ ಎಂದೂ ಹೇಳಿತ್ತು. ಹಾಗಾದರೆ ಸಿಟ್ಟಿನ ಒಂದು ಘಳಿಗೆಯಲ್ಲಿ ಸಂಭವಿಸಿದ ಕೊಲೆ ಪ್ರಕರಣವೇ ಮಾತ್ರವೇ ಆಗಿದ್ದಲ್ಲಿ, ಉದ್ದೇಶ ಪೂರ್ವಕವಲ್ಲದ ಅಚಾತುರ್ಯದ ಘಟನೆ ಆಗಿದ್ದಲ್ಲಿ, ಅದು 'ಅಪರೂಪದಲ್ಲಿ ಅಪರೂಪದ' ಕೇಸು ಆಗುವುದಿಲ್ಲ ಹಾಗೂ ಮರಣ ದಂಡನೆ ಶಿಕ್ಷೆ ವಿಧಿಸುತ್ತಿರಲಿಲ್ಲ. ಆದರೆ ಕೋರ್ಟ್ ಮರಣದಂಡನೆ ವಿಧಿಸುತ್ತದೆ. ಏಕೆಂದರೆ ಆ ಘಟನೆಯಿಂದ ಜನ ದಂಗೆಯೆದ್ದಿರುವುದು ಹಾಗೂ ಅಪರಾಧಿಗಳಿಗೆ ಕಠಿಣಶಿಕ್ಷೆಯಾಗಲೆಂದು ಬಯಸುವುದು ಕೋರ್ಟಿಗೆ ಗೊತ್ತಿತ್ತು. ಇಡೀ ಹಳ್ಳಿಯೇ ಭೋತಮಾಂಗೆ ಕುಟುಂಬದ ಮೇಲೆ ಮುಗಿಬಿದ್ದು ಕೊಲೆಮಾಡಿತ್ತೆನ್ನುವುದು ಎಲ್ಲರಿಗೂ ಗೊತ್ತಿರುವಾಗ ಕೋರ್ಟ್ ಎಂಟು ಜನರನ್ನು ಬಿಟ್ಟು ಮಿಕ್ಕವರೆಲ್ಲರನ್ನೂ ನಿರಪರಾಧಿಗಳೆಂದು ಘೋಷಿಸಿದ್ದರ ವಿರುದ್ಧ ಆಗಲೇ ಪ್ರತಿಭಟನೆ ಶುರುವಾಗಿದ್ದವು. ಆ ಜನರನ್ನು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡುವ ಮೂಲಕವಷ್ಟೇ ತಣಿಸಬಹುದಿತ್ತು ಎಂದೂ, ಮೇಲಿನ ಕೋರ್ಟಿನಲ್ಲಿ ಆ ಶಿಕ್ಷೆ ಊರ್ಜಿತವಾಗುವುದಿಲ್ಲವೆಂದೂ ಕೋರ್ಟಿಗೆ ತಿಳಿದಿತ್ತು. ಅದು ಹಾಗೇ ಆಯಿತು. ಕೆಳಕೋರ್ಟಿನ ತೀರ್ಪು ಕೇಳಿದ್ದೇ ದಲಿತರು ನಂತರ ಎಲ್ಲವನ್ನು ಮರೆತೇಬಿಟ್ಟರು. ಕೆಳಗಿನ ಕೋರ್ಟ್ ನೀಡಿದ ತೀರ್ಪಿಗೆ ಖುಷಿಗೊಂಡು ಸಿಹಿ ಹಂಚಿ ಸಂಭ್ರಮಪಟ್ಟರು. ಹೈಕೋರ್ಟು ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸುವ ಹೊತ್ತಿಗೆ ಅದು ಜನರ ನೆನಪಿನಿಂದ ಮರೆಯಾಗಿ ಹೋಗಿತ್ತು. ಆದ್ದರಿಂದ ಇದು 'ಮಾರುಕಟ್ಟೆ ಹಿತಾಸಕ್ತಿ'ಗೆ ತಕ್ಕಂತೆ ನೀಡಲ್ಪಟ್ಟ 'ಡಿಸೈನರ್ ತೀರ್ಪು.'

ಅಯೋಧ್ಯಾ ಕೇಸಿನಲ್ಲೂ ಹಾಗೇ ಆಯಿತು. ಮೂವರು ನ್ಯಾಯಾಧೀಶರಿದ್ದ ಪೀಠದಲ್ಲಿ ಇಬ್ಬರು ಹಿಂದೂಗಳು ಹಾಗೂ ಒಬ್ಬರು ಮುಸ್ಲಿಂ ಇದ್ದರು. ಅವರು ಸ್ವತಂತ್ರ ತೀರ್ಪುಗಳನ್ನು ಬರೆದರು. ಆದರೆ ಮೂರೂ ಕೂಡಾ ಬಾಬ್ರಿಮಸೀದಿಯ ನಡುಮಧ್ಯದ ಗುಮ್ಮಟದ ಕೆಳಗೇ ರಾಮ ಹುಟ್ಟಿದ್ದು ಎನ್ನುವ ಜನಾಭಿಪ್ರಾಯವನ್ನು ಮನ್ನಿಸಿದ್ದವು. ಹಾಗೆ ನೋಡಿದರೆ ಅದು ಮೂರು ಜನರಿಂದ ಕೋರ್ಟಿಗೆ ಸಲ್ಲಿಸಲಾಗಿದ್ದ ಆಸ್ತಿ ತಗಾದೆ. ದಾಖಲೆ ಆಧಾರಗಳಿಲ್ಲದಾಗ ಆಸ್ತಿ ಯಾರ ಅಧೀನದಲ್ಲಿದೆಯೋ ಅವರಿಗೆ ಕೊಡುವ ನೀತಿಯನ್ವಯ ಕೋರ್ಟ್ ತೀರ್ಮಾನ ತೆಗೆದುಕೊಳ್ಳಬೇಕಿತ್ತು. ರಾಮನು ಮಸೀದಿಯ ನಡುಮಧ್ಯದ ಗುಮ್ಮಟದ ಕೆಳಗೆ ಹುಟ್ಟಿದನೋ ಇಲ್ಲವೋ ಎಂದು ತೀರ್ಮಾನಿಸುವುದು ಕೋರ್ಟಿನ ವ್ಯಾಪ್ತಿಗೆ ಬರುವ ವಿಷಯವಲ್ಲ ಎಂದು ಸುಪ್ರೀಕೋರ್ಟು ಆಗಲೇ ತೀರ್ಪು ನೀಡಿತ್ತು. ಆದರೆ ಅಸಾಧ್ಯವಾದುದನ್ನು ಅಲಹಾಬಾದ್ ಕೋರ್ಟು ಮಾಡಲು ಹೊರಟಿತು. ಅವರು ಪುರಾತತ್ವ ಶಾಸ್ತ್ರಜ್ಞರನ್ನು ಕರೆಸಿದರು. ಮಸೀದಿಯ ತಳಭಾಗದಲ್ಲಿ ಪೂಜಾಸ್ಥಳವಿತ್ತೆಂದು ಖಚಿತಪಡಿಸಿದರು. ಕೊನೆಗೆ ಹಿಂದೂಗಳ ವಿಶ್ವಾಸ ಮತ್ತು ನಂಬಿಕೆಯಂತೆ ಎಂದು ತೀರ್ಪು ಬರೆದರು. ಹಾಗೆಂದು ಪೂರ್ತಿ ಭೂಮಿಯನ್ನು ಹಿಂದೂಗಳಿಗೇ ಕೊಡಲಿಲ್ಲ. ಅದು ಗಲಭೆ ಸೃಷ್ಟಿಸುವುದೆಂದು ಅವರಿಗೆ ಗೊತ್ತಿತ್ತು. ವಿವಾದಿತ ಜಾಗವನ್ನು ಮೂರು ಸಮ ಪಾಲುಗಳಾಗಿ ಮಾಡಿ ಮೂವರೂ ಫಿರ್ಯಾದುದಾರರಿಗೆ ನೀಡಿದರು. ಅದರಲ್ಲಿ ಅತಿ ಮುಖ್ಯವಾದ ಮಧ್ಯದ ಭಾಗವನ್ನು ರಾಮ್‌ಲಲ್ಲಾವಾಲಾಗಳಿಗೆ ಕೊಡಲಾಯಿತು. 'ಮಂದಿರ್ ವಹೀ ಬನಾಯೇಂಗೇ' ಎಂದು ಸಾರ್ವಜನಿಕ ಹೇಳಿಕೆ ನೀಡಿದ್ದ ಸಂಘ ಪರಿವಾರದ ಬೆಂಬಲ ಪಡೆದ ಸಂಘಟನೆ ಅದು. ಇಡೀ ತೀರ್ಪು ತಾತ್ವಿಕವಾಗಿ ನ್ಯಾಯ ವ್ಯವಸ್ಥೆಯ ಆಚೆ ಚಾಚಿಕೊಂಡಿದ್ದರೂ ದೀರ್ಘಕಾಲೀನ ಪರಿಣಾಮ ಏನಾದರಾಗಿರಲಿ, ಸದ್ಯದ ಮಟ್ಟಿಗೆ ಫಿರ್ಯಾದುದಾರರನ್ನು ಸಮಾಧಾನಗೊಳಿಸುವುದೇ ಅದರ ಉದ್ದೇಶವಾಗಿತ್ತು.

ಭಾರತದ ದಲಿತ ಸಂಘಟನೆಗಳು ಮತ್ತು ಪಕ್ಷಗಳ ಬಗೆಗೆ ಏನು ಹೇಳುತ್ತೀರಿ? ನಿಮ್ಮ ಅಭಿಪ್ರಾಯದಲ್ಲಿ ಅವುಗಳ ದೋಷಗಳಾವುವು?

ಭಾರತದಲ್ಲಿ ಅಸಂಖ್ಯಾತ ದಲಿತ ಸಂಘಟನೆಗಳೂ, ಪಕ್ಷಗಳೂ ಇವೆಯೆನ್ನುವುದೇ ಅವುಗಳ ಸಂಘಟನಾ ದೋಷವನ್ನು ಎತ್ತಿತೋರಿಸುತ್ತದೆ. ಅವು ಒಂದಲ್ಲ ಒಂದು ಹಳೆಯ ವಿಷಯವನ್ನೆತ್ತಿಕೊಂಡೇ ಹೋರಾಟದ ಮನಸ್ಥಿತಿಯಲ್ಲಿರುತ್ತವೆ. ಉದಾಹರಣೆಗೆ ಬ್ರಾಹ್ಮಣ್ಯ, ಬ್ರಾಹ್ಮಣ್ಯದ ವಿರುದ್ಧ ಹೋರಾಡುವುದಾಗಿ ಹೇಳಿಕೊಂಡರೂ ಹಾಗೆಂದರೇನು ಮತ್ತು ಅದು ಯಾವುದರಲ್ಲಿದೆ ಎಂದು ಅವರಿಗೆ ಗೊತ್ತಿಲ್ಲ. ದಲಿತ ಪಕ್ಷಗಳು ರಾಜಕೀಯ ಆಡಂಬರಗಳಲ್ಲಿ ಮತ್ತು ಭಾವುಕ ಘೋಷಣೆಗಳಲ್ಲಿ ಮುಳುಗಿ ತಮ್ಮ ನೆಲೆ ಭದ್ರಪಡಿಸಿಕೊಳ್ಳಲು ಯತ್ನಿಸುತ್ತಿವೆ. ಜನರೊಂದಿಗಿನ ತಮ್ಮ ಸಂಬಂಧದ ಕೊಂಡಿಯನ್ನು ಬಹಳ ಹಿಂದೆಯೇ ಕಳಚಿಕೊಂಡಿದ್ದು ಆಳುವ ವರ್ಗದ ಬಾಲಂಗೋಚಿಗಳಾಗಿವೆ. ಕೆಲವರು ಸ್ವಾತಂತ್ರ್ಯ ಬಯಸಿದರೆ, ಮತ್ತೆ ಕೆಲವರು ಕಾನ್ಶೀರಾಂ ಚುನಾವಣಾ ಮಾರುಕಟ್ಟೆಗೆಂದು ಸಿದ್ಧಪಡಿಸಿದ 'ಬಹುಜನ' ಎಂಬ ಮಾರಣಾಂತಿಕ ಉಪಕರಣದ ಬೆನ್ನುಬಿದ್ದಿದ್ದಾರೆ. ಬಿಎಸ್‌ಪಿಯ ಯಶಸ್ಸಿನಿಂದ ಸ್ಫೂರ್ತಿಗೊಂಡು ಬಹಳಷ್ಟು ಜನ ಅದೇ ಗೆಲುವಿನ ಸೂತ್ರ ಹಿಡಿಯುವ ಹುನ್ನಾರದಲ್ಲಿದ್ದಾರೆ. ಆದರೆ ಉಳಿದ ಯಾರಿಗೂ ಅದು ಯಶಸ್ಸು ತಂದಿಲ್ಲ. ಬಿಎಸ್‌ಪಿಯ ಯಶಸ್ಸೂ ಕೂಡಾ ಉತ್ತರಪ್ರದೇಶದ ಜಾತಿಹಂಚಿಕೆ ಮತ್ತು ಆ ಪಕ್ಷದ ಚುನಾವಣಾ ಹೊಂದಾಣಿಕೆ ನೀತಿಯ ಫಲವೇ ಹೊರತು ಮತ್ತೇನಲ್ಲ. ಆದರೆ ದಿನದಿಣದ ದಿನಕ್ಕೆ ಸ್ಪರ್ಧಾತ್ಮಕವಾಗುತ್ತಿರುವ ಚುನಾವಣಾ ರಾಜಕೀಯ ಕಣದಲ್ಲಿ ಅದರ ಆಕರ್ಷಣೆ ಹೆಚ್ಚುತ್ತಿದೆ. ಅವರ ಸೂತ್ರವು ಇನ್ನು ಬಹಳಷ್ಟು ದಿನ ಲಾಭದಾಯಕವಾಗಿ ನಡೆಯಬಹುದು. ಆ ಥರದ ಆಟದಲ್ಲಿ ನೀವು ತೊಡಗಬೇಕೆಂದರೆ ಸಾಂಕೇತಿಕತೆಯಲ್ಲಿ ನಂಬಿಕೆಯಿಡುತ್ತ ಹೋಗಬೇಕಾಗುತ್ತದೆ. ಅದನ್ನವರು ಸರಿಯಾಗಿ ನಿಭಾಯಿಸಿದ್ದಾರೆ. ಅಂಬೇಡ್ಕರರನ್ನೇ ದೊಡ್ಡ ಸಂಕೇತವಾಗಿ ಕಟ್ಟಿ ಬೆಳೆಸಿ ಜನರನ್ನು ಅದರ ಸುತ್ತ ಸಂಘಟಿಸಿ ಕಲೆ ಹಾಕಿ ಜನರೆಲ್ಲ ಆ ಪಕ್ಷವನ್ನೇ ನಂಬಿದ್ದಾರೇನೋ ಎಂಬ ಭ್ರಮೆ ಹುಟ್ಟಿಸಲಾಗುತ್ತಿದೆ.

ದೋಷಗಳು? ನನಗೀಗ ಕಾಣುವಂತೆ ದೋಷಗಳ ದೊಡ್ಡ ಪಟ್ಟಿಯೇ ಇದೆ. ಅತಿದೊಡ್ಡ ದೋಷವೆಂದರೆ ಈ ಸಂಘಟನೆಗಳು ವಾಸ್ತವ ಪರಿಸ್ಥಿತಿಯ ನಕಲುಗಳಾಗಿ ವರ್ತಿಸುತ್ತಿವೆ. ನಿಜವಾದ ಸಂಕಟದಲ್ಲಿ ಸಿಲುಕಿದ ದಲಿತರಿಗೆ ಇದೊಂದು ದುಃಖಮಯ ವಿಪರ್ಯಾಸ. ಅಪ್ರಾಮಾಣಿಕವಾಗಿ ತಮ್ಮ ಚುನಾವಣಾ ಅಂಗಡಿ ತೆರೆದು ಕುಳಿತು ವ್ಯಾಪಾರ ನಡೆಸುತ್ತಿರುವವರನ್ನು ಅವರಷ್ಟಕ್ಕೆ ಅವರನ್ನು ಬಿಡುವುದು ಒಳ್ಳೆಯದು.

ದಲಿತ ಮತ್ತು ಆದಿವಾಸಿ ಸಮುದಾಯಗಳ ಬಹಳಷ್ಟು ತರುಣರು ಈಗ ಮಾವೋವಾದಿಗಳ ಜೊತೆ ಇದ್ದಾರೆ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು?

ಎಲ್ಲ ದಲಿತರ ಬಗ್ಗೆ ಹೀಗೇ ಎಂದು ಸ್ಪಷ್ಟವಾಗಿ ಹೇಳಲಾರೆ. ಆದರೆ ದಲಿತ ತರುಣರು ಮಾವೋವಾದಿ ದಾರಿಯತ್ತ ಆಕರ್ಷಿತರಾಗುತ್ತಿದ್ದಾರೆ. ಅವರಿಗೆ ಬೇರೇನೂ ದಾರಿ ಈಗ ಉಳಿದಿಲ್ಲ. 1960ರ ಸುಮಾರಿಗೆ ತಮ್ಮ ಆಕ್ರೋಶವನ್ನೆಲ್ಲ ಅವರು ದಲಿತ್ ಪ್ಯಾಂಥರ್ಸ್ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು. ಈಗ ಪರಿಸ್ಥಿತಿ ಎಷ್ಟು ಬದಲಾಗಿದೆಯೆಮದರೆ ಅಂತಹ ಒಂದು ಅವಕಾಶವೂ ಅವರಿಗಿಲ್ಲ. ಅವರ ಪರಿಸ್ಥಿತಿಯ ಕಡೆಗೆ ಕಣ್ಣುಹಾಯಿಸಿದರೆ ನಿಮಗೆ ಈ ಮಾತು ಅರ್ಥವಾಗುತ್ತದೆ. ಅವರಿಗೆ ಗುಣಮಟ್ಟದ ಶಿಕ್ಷಣ ಲಭ್ಯವಿಲ್ಲ, ಶಿಕ್ಷಣ ಪಡೆದರೂ ಉದ್ಯೋಗ ಭರವಸೆಯಿಲ್ಲ. ತಮ್ಮ ಕಷ್ಟ-ಸುಖ ಹೇಳಿಕೊಳ್ಳಲು ಪ್ರಜಾಪ್ರಭುತ್ವವಾದಿ ಅವಕಾಶವಿಲ್ಲ, ಇದನ್ನು ಅರ್ಥಮಾಡಿಕೊಂಡು ಸಹಾಯ ಮಾಡುವ ಯಾವುದೇ ಪ್ರಯತ್ನಗಳೂ ನಡೆಯುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಇನ್ನೇನು ತಾನೇ ಮಾಡಬಲ್ಲರು? ತಮ್ಮ ದನಿಯೆತ್ತರಿಸಿದರೆ ಅಂಥವರನ್ನು ನಕ್ಸಲೈಟರೆಂಬ ಹಣೆಪಟ್ಟಿ ಹಚ್ಚಿ ತೊಂದರೆ ಕೊಡಲಾಗುತ್ತದೆ. ನಿಜವಾಗಿ ಹೇಳಬೇಕೆಂದರೆ ಈ ಆಡಳಿತ ವ್ಯವಸ್ಥೆ ಮತ್ತು ಪೊಲೀಸ್ ಈ ಎರಡೂ ಮಾವೋ ಸಂಘಟನೆಗೆ ಅತಿ ಹೆಚ್ಚು ಜನರನ್ನು ರಿಕ್ರುಟ್ ಮಾಡುವ ಏಜೆಂಟ್‌ಗಳು. ಎಷ್ಟೋ ದಲಿತ ತರುಣರು ಮಾವೋವಾದ ಎಂದರೇನೆಂದು ತಿಳಿಯುವ ಮೊದಲೇ ಮಾವೋವಾದಿಯೆಂಬ ಹಣೆಪಟ್ಟಿಯನ್ನು ಪೊಲೀಸರಿಂದ ಹೊತ್ತುಕೊಳ್ಳುತ್ತಾರೆ. ಆಗ ಅವರಿಗೆ ಮಾವೋವಾದಿಯಾಗಿ ಭೂಗತರಾಗುವುದು ಬಿಟ್ಟು ಬೇರೆ ದಾರಿಯೇ ಉಳಿಯುವುದಿಲ್ಲ. ಹಲವಾರು ದಲಿತ ತರುಣರು ಮಾವೋ ಹಣೆಪಟ್ಟಿ ಹೊತ್ತು ಬಂಧನಕ್ಕೊಳಗಾದವರು ಹೇಳಿರುವಂತೆ ಪೊಲೀಸರೇ ಅವರನ್ನು ಮಾವೋವಾದಿಗಳನ್ನಾಗಿ ಮಾಡಿದ್ದಾರೆ.

ಬಹಳಷ್ಟು ದಲಿತ ಆದಿವಾಸಿ ತರುಣರಿಗಾಗುತ್ತಿರುವುದು ಇದೇ. ದೇಶದಲ್ಲಾಗುತ್ತಿರುವ ಭ್ರಮಾತ್ಮಕ ಅಭಿವೃದ್ಧಿಯ ಪ್ರದರ್ಶನದಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು ಅವರಲ್ಲಿ ಪರದೇಶಿಗಳೆಂಬ ಭಾವನೆ ಮೂಡುತ್ತಿದೆ. ರಚನಾತ್ಮಕವಾದ ಯಾವ ಪರಿಹಾರವೂ ಅವರಿಗೀಗ ಕಾಣಿಸುತ್ತಿಲ್ಲ. ಅವರ ರಾಜಕಾರಣವೂ ಚಿಂದಿಯಾಗುತ್ತಿದೆ. ಯಾವುದೇ ನೈತಿಕ-ತಾತ್ವಿಕತೆಯ ಬಲದ ಮೇಲೆ ರಾಜಕೀಯ ಸಾಧ್ಯವಿಲ್ಲ ಎಂದು ಗೊತ್ತಾಗಿದೆ. ಸಹಜವಾಗಿ ಯಾವುದೇ ರಾಜಿಯಿಲ್ಲದ ಮಾವೋವಾದಿ ಕ್ರಾಂತಿಯ ಕರೆ ಅವರನ್ನು ಆಕರ್ಷಿಸುತ್ತದೆ.

(ಮುಂದುವರಿಯುವುದು)

ಬೆಳಕು ತೋರಿದ ಕರುಣಾಳು ಆರ್. ಭರಣಯ್ಯ

ಡಾ॥ ಅಪ್ಪಗೆರೆ ಸೋಮಶೇಖರ್

ಭರಣಯ್ಯನವರು ಅವಮಾನವನ್ನು ನುಂಗಿಕೊಂಡು, ವ್ಯವಸ್ಥೆಯೊಟ್ಟಿಗಿನ ಸಾಮರಸ್ಯದಿಂದಲೇ ಸಮುದಾಯದ ಅಸ್ತಿತ್ವಕ್ಕಾಗಿ ದುಡಿಯುತ್ತಾರೆ. ತಮ್ಮ ಸೌಜನ್ಯದ ನಡವಳಿಕೆಯ ಮೂಲಕ ದಲಿತೇತರರನ್ನು ಪಶ್ಚಾತಾಪಕ್ಕೆ ಒಳಗು ಮಾಡುತ್ತಲೇ ಅವರಲ್ಲೊಂದು ಬಗೆಯ ಮಾನಸಿಕ ಬದಲಾವಣೆಗೆ ಕಾರಣರಾಗುತ್ತಾರೆ. ಜಾತೀಯತೆ ಪ್ರಬಲವಾಗಿದ್ದ ಆ ಕಾಲದಲ್ಲೆ ಇವರ ವ್ಯಕ್ತಿತ್ವಕ್ಕೆ ಮಾರುಹೋದ ಸೀಳನೆರೆ ಸವರ್ಣೀಯ ಸಾಹುಕಾರರು ಇವರನ್ನ ತಮ್ಮ ಮನೆಗೆ ಆಹ್ವಾನಿಸಿ ಬೆಳ್ಳಿತಟ್ಟೆಯಲ್ಲಿ ಊಟ ಹಾಕುತ್ತಾರೆ.

ಅಂಬೇಡ್ಕರ್ ಕಲ್ಪಿಸಿಕೊಟ್ಟ ಮೀಸಲಾತಿಯ ಫಲಾನುಭವಿಗಳಾದ ಬಹುತೇಕ ದಲಿತ ನೌಕರರು, ಅಧಿಕಾರಿಗಳು, ರಾಜಕಾರಣಿಗಳು ಮೀಸಲಾತಿಯ ಸಾಮಾಜಿಕ ಉದ್ದೇಶವನ್ನೇ ಮರೆತು, ಸ್ವಾರ್ಥಿಗಳಾಗಿದ್ದು ನಿಜವಾದ ಅಂಬೇಡ್ಕರ್ ದ್ರೋಹಿಗಳಾಗಿದ್ದಾರೆ. ಸತ್ಯನಾರಾಯಣ ಪೂಜೆ ಮಾಡುತ್ತ ಸಮುದಾಯದ ಬದ್ಧ ಜವಾಬ್ದಾರಿಗಳನ್ನ ಮರೆತಿದ್ದಾರೆ. ಅದರಲ್ಲೂ ಇವತ್ತಿನ ದಲಿತ-ದಲಿತೇತರ ವಿದ್ಯಾರ್ಥಿಗಳಿಗೆ ಭರಣಯ್ಯನವರ ಬದುಕು ಮಾದರಿಯಾಗಬೇಕಿದೆ.

ಅಕ್ಕರೆಯ ಕಡಲು: ಆರ್. ಭರಣಯ್ಯ ನೆನಪಿನ ಸಂಪುಟ
ಸಂಪಾದಕ: ತುಕಾರಾಮ್ ಎಸ್.
ಪ್ರಕಾಶಕರು: ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಷನ್(ರಿ), ಬೆಂಗಳೂರು.
ಬೆಲೆ: ರೂ. 360/-

ಅಂಬೇಡ್ಕರ್ ಅವರು 1955 ಮಾರ್ಚ್ 18 ರಂದು ಆಗ್ರಾದಲ್ಲಿ ಭಾಷಣ ಮಾಡುತ್ತ ಹೇಳಿದ: "ನಮ್ಮ ಸಮಾಜ ಶಿಕ್ಷಣದಲ್ಲಿ ಇಂದು ಸ್ವಲ್ಪಮಟ್ಟಿನ ಪ್ರಗತಿ ಕಂಡಿದೆ. ಶಿಕ್ಷಣ ಪಡೆದಿದ್ದರಿಂದ ಸ್ವಲ್ಪ ಜನ ಉನ್ನತಸ್ಥಾನ ಗಳಿಸಿದ್ದಾರೆ. ಆದರೆ ಈ ಸುಶಿಕ್ಷಿತ ಜನರು ನನಗೆ ಮೋಸ ಮಾಡಿದ್ದಾರೆ. ಶಿಕ್ಷಣ ಪಡೆದ ಮೇಲೆ ಅವರು ಸಮಾಜಸೇವೆ ಮಾಡುತ್ತಾರೆ ಎಂದು ನಾನು ಆಶಿಸಿದ್ದೆ. ಆದರೆ ಅವರೆಲ್ಲ ತಮ್ಮನ್ನು, ತಮ್ಮ ಕುಟುಂಬಗಳನ್ನು ಮಾತ್ರ ಪೋಷಿಸಿಕೊಳ್ಳುತ್ತಾ ಸ್ವಾರ್ಥಿಗಳಾಗಿದ್ದಾರೆ. ಅವಿದ್ಯಾವಂತರಿಗಾಗಿ ಹೆಚ್ಚಿನದೇನನ್ನೂ ಮಾಡಲಾಗಿಲ್ಲ. ಅನುಕೂಲ ಪಡೆದ ವಿದ್ಯಾವಂತರಿಂದ ಅವರಿಗೆಲ್ಲ ಪ್ರಯೋಜನವಾಗಬೇಕು ಎಂಬುದು ನನ್ನ ಬಯಕೆಯಾಗಿತ್ತು. ಆದರೆ, ನಾನು ವಿಶ್ವಾಸವಿಟ್ಟಿದ್ದ ನನ್ನವರೇ ನನಗೆ ನಂಬಿಕೆ ದ್ರೋಹ ಮಾಡಿದರು." ಈ ಮಾತಿಗೆ ಸಾಕ್ಷಿಗಳಿರುವ ಹಾಗೆಯೇ; ಅಪವಾದವಾಗಿ ಆರ್. ಭರಣಯ್ಯ ಅವರಿದ್ದಾರೆ. ಶೋಷಿತ ಸಮುದಾಯದಿಂದ ಬಂದ ಪ್ರತಿಯೊಬ್ಬ ವಿದ್ಯಾವಂತ ನೌಕರ ವರ್ಗವು, ಬಾಬಾಸಾಹೇಬರ ಮಾತು ಹಾಗೂ ಭರಣಯ್ಯ ಅವರ ಬದುಕನ್ನು ಗಂಭೀರವಾಗಿ ಯೋಚಿಸಬೇಕಿದೆ. ನಮ್ಮ ನಡುವಿನ ಸೂಕ್ಷ್ಮ ಕಥೆಗಾರರೂ, ಸಂಸ್ಕೃತಿ ಚಿಂತಕರೂ ಆದ ಶ್ರೀ ತುಕಾರಾಮ್ ಎಸ್. ಸಂಪಾದಿಸಿರುವ "ಅಕ್ಕರೆಯ ಕಡಲು: ಆರ್. ಭರಣಯ್ಯ ನೆನಪಿನ ಸಂಪುಟ"ವು ಪ್ರತಿಯೊಬ್ಬರೂ ಓದಲೇಬೇಕಾದ ಗ್ರಂಥವಾಗಿದೆ. ಪುಸ್ತಕದ ಕೊನೆಯಲ್ಲಿ ದಾಖಲಿಸಿರುವ ಭರಣಯ್ಯನವರ ಅಪರೂಪದ ಫೋಟೋಗಳು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಂತಿವೆ.

'ಅಕ್ಕರೆಯ ಕಡಲು' ದಲಿತ ಸಮುದಾಯದ ಪ್ರಜ್ಞಾವಂತ ಐ.ಎ.ಎಸ್. ಅಧಿಕಾರಿಯಾದ ಆರ್. ಭರಣಯ್ಯ ಅವರ ಬದುಕು, ಸಾಧನೆಯನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಗ್ರಂಥ. ಹಲವರು ಕಂಡ ಭರಣಯ್ಯನವರ ಜಾತ್ಯತೀತ ವ್ಯಕ್ತಿತ್ವ ಇಲ್ಲಿ ಅಳಿಸದ ಅಕ್ಷರವಾಗಿದೆ. ಭರಣಯ್ಯ ಅವರು 14 ಫೆಬ್ರವರಿ 1912 ರಂದು ಮಾರಮ್ಮ, ಚಿಕ್ಕರಂಗಯ್ಯ ದಂಪತಿಗಳ ಮಗನಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನ ಸೋಮನಾಥಪುರದಲ್ಲಿ ಜನಿಸಿದರು. ಬೆಂಗಳೂರಿನ ನರಸಿಂಹರಾಜ ಹಾಸ್ಟಲ್, ಆರ್. ಗೋಪಾಲಸ್ವಾಮಿ ಅಯ್ಯರ್ ವಸತಿ ನಿಲಯ, ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಮತ್ತು ಪೂನಾ ಕಾನೂನು ಕಾಲೇಜಿನಲ್ಲಿ ವ್ಯಾಸಂಗ. ನೇರವಾಗಿ ನೋಡಿ ಮಾತನಾಡಿದ್ದ ಗಾಂಧೀಜಿ, ಅಂಬೇಡ್ಕರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಮಿರ್ಜಾ ಇಸ್ಮಾಯಿಲ್, ದಿವಾನ್ ಪೂರ್ಣಯ್ಯ, ಗೋಪಾಲಸ್ವಾಮಿ ಅಯ್ಯರ್, ಎನ್.ಸಿ. ಬಿಳಿಗಿರಿ ರಂಗಯ್ಯ, ಮೈಸೂರು ವಿಶ್ವವಿದ್ಯಾಲಯದ ಆಗಿನ ಕುಲಪತಿ ಮೆಟ್‌ಕಾಫ್; ರೂಸೋ, ಗ್ಯಾರಿಬಾಲ್ಡಿ, ಲಿಯೋ ಟಾಲ್‌ಸ್ಟಾಯ್ ಅವರ ಪ್ರಭಾವದ ಹಿನ್ನೆಲೆಯಲ್ಲಿ ತಮ್ಮ ಪ್ರಾಮಾಣಿಕವಾದ ಸಾರ್ವಜನಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಇವರು ಎಲ್ಲ ಜಾತಿಯ ಬಡವರಿಗೆ ಬದುಕಾಗಿದ್ದು ಇತಿಹಾಸ. 1935ರಲ್ಲಿ ಪ್ರೊಬೆಷನರಿ ಅಮಲ್ದಾರರಾಗಿ ಸರ್ಕಾರಿ ಸೇವೆಗೆ ಸೇರಿಕೊಂಡ ಭರಣಯ್ಯ ಅವರು ಅನೇಕ ಇಲಾಖೆಗಳ ಪ್ರತಿಷ್ಠಿತ ಹುದ್ದೆಗಳನ್ನು ನಿರ್ವಹಿಸುವುದರ ಜೊತೆಗೆ ಜಿಲ್ಲಾಧಿಕಾರಿಗಳಾಗಿಯೂ ದುಡಿದಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದ(ಕೆ.ಪಿ.ಎಸ್.ಸಿ.) ಸದಸ್ಯರಾಗಿ ಎಲ್ಲ ಜಾತಿಯ ಸಾವಿರಾರು ಬಡ ನಿರುದ್ಯೋಗಿಗಳಿಗೆ ಸರ್ಕಾರಿ ಉದ್ಯೋಗವನ್ನು ಕಲ್ಪಿಸಿದ್ದಾರೆ. 1972ರಲ್ಲಿ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿದ ಇವರು ಒಬ್ಬ ಅಧಿಕಾರಿಯಾಗಿ ನಿರ್ಮಿಸಿದ 'ಉದ್ಯೋಗ ಕ್ರಾಂತಿ'ಯು ಚಾರಿತ್ರಿಕ ದಾಖಲೆಯಾಗಿದೆ. ಸರ್ಕಾರಿ ಅಧಿಕಾರಿ ಇರುವುದೇ ಜನರ ಸೇವೆಗಾಗಿ ಎಂಬುದನ್ನು ಬದುಕಿ ತೋರಿದರು. ಮಹಾನ್ ಸಂಸ್ಕೃತ ಪಂಡಿತರಾದ ಇವರು ಜಯಚಾಮರಾಜ ಒಡೆಯರ್ ಅವರಿಂದ 'ಗೌರವ ಪದಕ' ಪಡೆದರು.

ವಿನಯ, ಸಜ್ಜನಿಕೆ, ನಿಷ್ಠೆ, ಶಿಸ್ತು, ಸಂಸ್ಕಾರದ ವ್ಯಕ್ತಿತ್ವದವರಾದ ಭರಣಯ್ಯನವರು, ಹಸಿದವರಿಗೆ ಆಸರೆಯಾದವರು. ಶೋಷಿತ ಸಮುದಾಯಗಳ ಬಿಡುಗಡೆ ಮತ್ತು ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಪ್ರತಿಪಾದಿಸುತ್ತಿದ್ದರು. ಭರಣಯ್ಯ ಅವರ ಶ್ರೀಮತಿ ಶಾಂತಮ್ಮ ಹೇಳುವ ಹಾಗೆ : "ಕೆಲಸ ಕೊಡೋದೇ ಕೆಲಸ ಅವರಿಗೆ." ಅಧಿಕಾರದಲ್ಲಿದ್ದಷ್ಟು ದಿನ ಸಹಾಯ ಬೇಡಿ ಬರುತ್ತಿದ್ದ ಎಲ್ಲ ಜಾತಿಯ ಬಡವರಿಗೆ ಊಟ ಮಾಡಿಸಿ, ಅವರ ಸಮಸ್ಯೆ ಏನೆಂಬುದನ್ನ ಕೇಳಿ, ನೌಕರಿಯ ಆದೇಶ ಪತ್ರ ಕೊಟ್ಟು, ಊರಿಗೆಹೋಗಲು ಬಸ್ಸ್ ಚಾರ್ಜ್ ಕೊಟ್ಟು ಕಳುಹಿಸುತ್ತಿದ್ದರು. ಮಾತೃ ಅಂತಃಕರಣದವರಾದ ಇವರು ಜನರ ಕಷ್ಟ ಕೇಳಿ ಕಣ್ಣೀರ್ಹಾಕುತ್ತಿದ್ದದ್ದುಂಟು. "ಪಾಪ,

ಪುಸ್ತಕ ಅವಲೋಕನ

ವಿನಯ, ಸಜ್ಜನಿಕೆ, ನಿಷ್ಠೆ, ಶಿಸ್ತು, ಸಂಸ್ಕಾರದ ವ್ಯಕ್ತಿತ್ವದವರಾದ ಭರಣಯ್ಯನವರು, ಹಸಿದವರಿಗೆ ಆಸರೆಯಾದವರು. ಶೋಷಿತ ಸಮುದಾಯಗಳ ಬಿಡುಗಡೆ ಮತ್ತು ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಪ್ರತಿಪಾದಿಸುತ್ತಿದ್ದರು. ಇವರಿಂದ ಉದ್ಯೋಗ ಪಡೆದ ಎಲ್ಲ ಜಾತಿಯ ಜನ ತಮ್ಮ ಮನೆಗಳಲ್ಲಿ ಭರಣಯ್ಯ ಅವರ ಫೋಟೋ ಇಟ್ಟು ಪೂಜೆ ಮಾಡುತ್ತಿರುವುದನ್ನು ಇವತ್ತಿಗೂ ಕಾಣಬಹುದು. ಹಲವರ ದೃಷ್ಟಿಯಲ್ಲಿ ಇವರು: 'ಮನೆ ದೇವರು, ದೇವತಾ ಮನುಷ್ಯ, ಜನತಾ ಮನುಷ್ಯ, ಭರಣಿ ಮಳೆ, ಗ್ರಾಮ ಶಿಲ್ಪಿ, ಕೆಲಸದ ಕಾಮಧೇನು, ಅನ್ನ ಕೊಟ್ಟ ಧಣಿ, ಎಲ್ಲ ಜನವರ್ಗಗಳ ಸಮನ್ವಯಕಾರ, ಕಾರುಣ್ಯಮೂರ್ತಿ, ಮಾನವತಾವಾದಿ, ಭೂದಾನಿ' ಯಾಗಿದ್ದಾರೆ.

ನನ್ನನ್ನು ನೋಡಲಿಕ್ಕೆ ಅಷ್ಟುದೂರದಿಂದ ಬಸ್ ಚಾರ್ಜ್ ಖರ್ಚು ಮಾಡಿಕೊಂಡು ಬಂದಿದ್ದಾರೆ. ಊಟ ಮಾಡಿದ್ದಾರೋ ಇಲ್ಲವೋ. ತಮ್ಮವರ ಕೆಲಸಕ್ಕಾಗಿ ಅದ್ಯಾವ ಒಡವೆ ಗಿರಿವಿ ಇಟ್ಟು ಬಂದಿದ್ದಾರೋ" ಎಂದು ದುಃಖದಿಂದ ತಮ್ಮ ಆಪ್ತರ ಬಳಿ ಹೇಳುತ್ತಿದ್ದರು. ಬಡವರಿಗೆ ಕೆಲಸ ಕೊಡಿಸುತ್ತಿದ್ದ ಪರಿ ನೋಡಿದ ಸೋಮನಾಥಪುರದ ಹಿರಿಯರು: "ಅಲ್ಲಪ್ಪಾ ಭರಣಪ್ಪ ನೀನು ಹೀಗೆ ಎಲ್ಲರನ್ನೂ ಹಿಡಿದು ಸರ್ಕಾರಿ ಕೆಲಸಕ್ಕೆ ತುಂಬಿದರೆ ವ್ಯವಸಾಯದ ಗತಿಯೇನು? ಊರಲ್ಲಿ ಒಕ್ಕಲುತನ ಮಾಡಿ ಹೊಲ-ಗದ್ದೆ ಉಳುವವರು ಯಾರು?" ಎಂದು ಪ್ರಶ್ನಿಸುತ್ತಿದ್ದದ್ದುಂಟು. ಹಳ್ಳಿಗಳಿಗೆ ಪ್ರವಾಸ ಹೋಗುವಾಗ ಇವರು, ಜೊತೆಯಲ್ಲಿ ಟೈಪ್‌ರೈಟರ್ ಮತ್ತು ಟೈಪಿಸ್ಟ್ ಅನ್ನು ಕರೆದೊಯ್ಯುತ್ತಿದ್ದರು. ಕೆಲಸ ಬೇಕೆಂದವರಿಂದ ಅರ್ಜಿ ಪಡೆದು ಸ್ಥಳದಲ್ಲೆ ಅವರಿಗೆ ಉದ್ಯೋಗದ ಆದೇಶ ಪತ್ರವನ್ನು ಕೊಡುತ್ತಿದ್ದರು. ಒಮ್ಮೆ ಅಂಬೇಡ್ಕರ್ ಅವರು ದೆಹಲಿಯಲ್ಲಿ ಕರೆದಿದ್ದ ಡಿಪ್ರೆಸ್ಡ್ ಕ್ಲಾಸ್ ಸಭೆಯಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದ ಭರಣಯ್ಯರನ್ನು ಪರಿಚಯ ಮಾಡಿಕೊಂಡ ಬಾಬಾಸಾಹೇಬರು: 'ನೀವು ವಿದ್ಯಾಭ್ಯಾಸ ಮಾಡಿಕೊಂಡು ಉನ್ನತ ಸ್ಥಾನಕ್ಕೆ ಬಂದಾಗ ಜನಾಂಗಕ್ಕೆ ನಿಮ್ಮ ಕೊಡುಗೆ ಏನು?' ಎಂದು ಕೇಳಿದಾಗ, 'ನಾನು ಉನ್ನತ ಹುದ್ದೆಗೆ ಬಂದಾಗ ನಮ್ಮ ಜನಾಂಗದವರ ಕಷ್ಟ-ಸುಖಕ್ಕೆ ಭಾಗಿಯಾಗುತ್ತೇನೆ. ನನ್ನ ಜೀವನಪರ್ಯಂತ ನಾನು ಲಂಚ ತೆಗೆದುಕೊಳ್ಳುವುದಿಲ್ಲ.' ಎಂದು ಮಾತು ಕೊಟ್ಟು ಹಾಗೆಯೇ ಬದುಕಿದರು. ಆ ಕಾರಣದಿಂದಲೇ 'ಕರ್ನಾಟಕದ ಅಂಬೇಡ್ಕರ್' ಎಂಬ ಹೆಸರಿಗೆ ಭಾಜನರಾಗುತ್ತಾರೆ. ಇವರಿಂದ ಉದ್ಯೋಗ ಪಡೆದ ಎಲ್ಲ ಜಾತಿಯ ಜನ ತಮ್ಮ ಮನೆಗಳಲ್ಲಿ ಭರಣಯ್ಯ ಅವರ ಫೋಟೋ ಇಟ್ಟು ಪೂಜೆ ಮಾಡುತ್ತಿರುವುದನ್ನು ಇವತ್ತಿಗೂ ಕಾಣಬಹುದು. ಹಲವರ ದೃಷ್ಟಿಯಲ್ಲಿ ಇವರು: 'ಮನೆ ದೇವರು, ದೇವತಾ ಮನುಷ್ಯ, ಜನತಾ ಮನುಷ್ಯ, ಭರಣಿ ಮಳೆ, ಗ್ರಾಮ ಶಿಲ್ಪಿ, ಕೆಲಸದ ಕಾಮಧೇನು, ಅನ್ನ ಕೊಟ್ಟ ಧಣಿ, ಎಲ್ಲ ಜನವರ್ಗಗಳ ಸಮನ್ವಯಕಾರ, ಕಾರುಣ್ಯಮೂರ್ತಿ, ಮಾನವತಾವಾದಿ, ಭೂದಾನಿ' ಯಾಗಿದ್ದಾರೆ.

ಬಾಬಾಸಾಹೇಬ್ ಮತ್ತು ಭರಣಯ್ಯ ಅವರು ಚಿಂತನೆಯ ಎರಡು ಮಾದರಿಗಳಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಇಬ್ಬರ ಉದ್ದೇಶವೂ ಒಂದೇ ಅದು, ಶೋಷಿತರು ಮತ್ತು ಎಲ್ಲ ಜಾತಿಯ ಬಡವರ ಬಿಡುಗಡೆ ಮತ್ತು ಏಳ್ಗೆ. ಆದರೆ ಮಾರ್ಗ ಬೇರೆಬೇರೆ. ಬಾಬಾಸಾಹೇಬರು ವ್ಯವಸ್ಥೆಯನ್ನು ನಿಷ್ಠೂರವಾಗಿ ಮುಖಾಮುಖಿಯಾಗುತ್ತಲೇ ಸಮುದಾಯದ ಪರ ನಿಂತರೆ; ಭರಣಯ್ಯನವರು ಅವಮಾನವನ್ನು ನುಂಗಿಕೊಂಡು, ವ್ಯವಸ್ಥೆಯೊಟ್ಟಿಗಿನ ಸಾಮರಸ್ಯದಿಂದಲೇ ಸಮುದಾಯದ ಅಸ್ತಿತ್ವಕ್ಕಾಗಿ ದುಡಿಯುತ್ತಾರೆ. ತಮ್ಮ ಸೌಜನ್ಯದ ನಡವಳಿಕೆಯ ಮೂಲಕ ದಲಿತೇತರರನ್ನು ಪಶ್ಚಾತಾಪಕ್ಕೆ ಒಳಗು ಮಾಡುತ್ತಲೇ ಅವರಲ್ಲೊಂದು ಬಗೆಯ ಮಾನಸಿಕ ಬದಲಾವಣೆಗೆ ಕಾರಣರಾಗುತ್ತಾರೆ. ಜಾತೀಯತೆ ಪ್ರಬಲವಾಗಿದ್ದ ಆ ಕಾಲದಲ್ಲೆ ಇವರ ವ್ಯಕ್ತಿತ್ವಕ್ಕೆ ಮಾರುಹೋದ ಸೀಳನೆರೆ ಸವರ್ಣಿಯ ಸಾಹುಕಾರರು ಇವರನ್ನ ತಮ್ಮ ಮನೆಗೆ ಆಹ್ವಾನಿಸಿ ಬೆಳ್ಳಿತಟ್ಟೆಯಲ್ಲಿ ಊಟ ಹಾಕುತ್ತಾರೆ.

ಅಸ್ಪೃಶ್ಯತೆಯ ಅವಮಾನದ ಹಿನ್ನೆಲೆಯಿದ್ದ ಭರಣಯ್ಯ ಅವರಿಗೆ ಅದರ ವಿರುದ್ಧ ಸಾತ್ವಿಕ ಸಿಟ್ಟು, ಅಸಮಾಧಾನವಿತ್ತು. ಸೋಮನಾಥಪುರದಲ್ಲಿ ಆ ಕಾಲದಲ್ಲಿ ದಲಿತರಿಗೆ ಸವರ್ಣೀಯರ ಬಾವಿಗಳಿಗೆ ಪ್ರವೇಶವಿರಲಿಲ್ಲ. ಇದನ್ನ ಮನಗಂಡ ಭರಣಯ್ಯನವರು ತಮ್ಮ ಮನೆಯ ಪಕ್ಕದಲ್ಲೊಂದು ಬಾವಿ ತೋಡಿಸಿದರು. ಇಷ್ಟಾಗಿಯೂ ಕೂಡ ಅವರಿಗೆ ದಲಿತೇತರ ಬಗೆಗೆ ಯಾವ ರೀತಿಯ ದ್ವೇಷ, ಸಿಟ್ಟುಗಳಿರಲಿಲ್ಲ. ಇವರನ್ನು 'ಯಾವನೋ ಅವನು ಹೊಲೆಯ ಬಡ್ಡಿಮಗ. ಭಾಳ ಜಬರದಸ್ತಾಗಿ ಠಾಕು ಠೀಕಾಗಿ ಹೋಯ್ತಾನೆ' ಎಂದು ಬೈದು ನಿಂದಿಸಿದ ಹೊನ್ನಗಿರಿಗೌಡರು ಒಮ್ಮೆ ತಮ್ಮವರೊಬ್ಬರಿಗೆ ಕೆಲಸ ಬೇಡಿ ಹೋದಾಗ, ಭರಣಯ್ಯನವರು ಹಳೆಯದನ್ನ ಮರೆತು ಸಹಾಯ ಮಾಡುವ ಮೂಲಕ ಅವರನ್ನೇ ಪಶ್ಚಾತ್ತಾಪಕ್ಕೆ ಒಳಗುಮಾಡುತ್ತಾರೆ. ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ 'ಹೊಸ ನಂಜಾಪುರ, ಸಂಜೀವ ನಗರ' ಎಂಬ ಹೊಸ ಗ್ರಾಮಗಳನ್ನೇ ಕಟ್ಟಿದ ಭರಣಯ್ಯನವರು, ಐವತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿನ ಕುಟುಂಬಗಳಿಗೆ ನೂರಾರು ಎಕರೆ ಸರ್ಕಾರಿ ಭೂಮಿಯನ್ನ ದಾನ ಮಾಡಿದ್ದಾರೆ. ಹೊಲದಲ್ಲಿ ಕೂಲಿ ಮಾಡುತ್ತಿದ್ದ ಪದವೀಧರ ನರಸಿಂಹಯ್ಯನನ್ನು ಸ್ವತಃ ತಾವೇ ಆತ ಕೆಲಸ ಮಾಡುತ್ತಿದ್ದ ಹೊಲಕ್ಕೋಗಿ ಅವನನ್ನ ಸರ್ಕಾರಿ ಹುದ್ದೆಗೆ ಆಹ್ವಾನಿಸುತ್ತಾರೆ. ಒಮ್ಮೆ ಇವರು ರಸ್ತೆಯಲ್ಲಿ ಹೋಗುವಾಗ ಇವರ ಕಾರಿಗೆ ಅಬ್ದುಲ್ ರಶೀದ್‌ನ ತಳ್ಳುಗಾಡಿ ಅಡ್ಡಬರುತ್ತದೆ. ಪೋಲೀಸರು ಆತನನ್ನು ನಿಂದಿಸುತ್ತಿದ್ದಾಗ ಕಾರಿನಿಂದ ಇಳಿದು ಬಂದ ಭರಣಯ್ಯನವರು ತಮ್ಮ ಸಿಬ್ಬಂದಿಗೆ ತಿಳಿಹೇಳಿ, ಅಬ್ದುಲ್ ರಶೀದನನ್ನು ವಿಚಾರಿಸಿ ಆತನಿಗೆ ಪೋಲೀಸ್ ಇಲಾಖೆಯಲ್ಲಿ ಕೆಲಸ ಕೊಡುತ್ತಾರೆ. ನಿರುದ್ಯೋಗವನ್ನು ನಿವಾರಿಸುವ ಕಾರಣ "ಸರ್ವೆ ಸೆಟ್ಲ್‌ಮೆಂಟ್ ಅಂಡ್ ಲ್ಯಾಂಡ್ ರೆಕಾರ್ಡ್ಸ್" ಎಂಬ ಹೊಸ ಇಲಾಖೆಯನ್ನು ಸ್ಥಾಪಿಸಿ ಸಾವಿರಾರು ಜನರಿಗೆ ಉದ್ಯೋಗ ನೀಡುತ್ತಾರೆ. ಇಂತಹ ಅಸಂಖ್ಯಾತ ಉದಾಹರಣೆಗಳು ಇವರ ಬದುಕಿನಲ್ಲಿವೆ.

ಅಧಿಕಾರಿಯಾಗಿ ಜನಪರ ಕೆಲಸ ಮಾಡಿದ ಭರಣಯ್ಯನವರು, ರಾಜಕೀಯ ಅಧಿಕಾರ ಸಿಕ್ಕರೆ ಇನ್ನಷ್ಟು ಸಮಾಜಸೇವೆ ಮಾಡಬಹುದೆಂಬ ಉದ್ದೇಶದಿಂದ ಹುದ್ದೆಗೆ ರಾಜೀನಾಮೆ ನೀಡಿ 1972ರಲ್ಲಿ ಕೊಳ್ಳೇಗಾಲದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಇವರನ್ನು ಅರ್ಥಮಾಡಿಕೊಳ್ಳದ ಅವತ್ತಿನ ಮೂಢ ಜನ, ಅನಕ್ಷರಸ್ಥ ಸಿದ್ದಮಾದಯ್ಯನ ವಿರುದ್ಧ ಇವರನ್ನು ಸೋಲಿಸಿ ತಮಗೆ ತಾವೇ ಅಪಚಾರ ಮಾಡಿಕೊಳ್ಳುತ್ತಾರೆ. ಮನನೊಂದ ಭರಣಯ್ಯನವರು ಇದೇ ಕೊರಗಿನಿಂದ 17 ಜನವರಿ 1974ರಂದು ಹೃದಯಾಘಾತದಿಂದ ಸಾವನ್ನಪ್ಪುತ್ತಾರೆ. ಸಮಾಜದ ಎಲ್ಲ ಬಡವರು ಗೌರವದಿಂದ ಬದುಕುವಂತಾಗಬೇಕೆಂದು ಪ್ರಾಮಾಣಿಕವಾಗಿ ದುಡಿದ ಮಹಾನ್ ಸಾಧಕರಾದ ಆರ್. ಭರಣಯ್ಯನವರು ಎಲ್ಲ ಜಾತಿ ಸಮುದಾಯದವರಿಗೆ ಆದರ್ಶವಾಗಬೇಕಿದೆ. ಇಂತಹ ವ್ಯಕ್ತಿತ್ವವನ್ನು ದಾಖಲಿಸಿಕೊಟ್ಟ ತುಕಾರಾಮ್ ಅವರಿಗೆ ಕೃತಜ್ಞತೆಗಳು. ■

ಅಬುಜ್ಮಾರ್ ಇಲ್ಲಿ ಯಾರೂ ಅಮುಖ್ಯರಲ್ಲ!

ಭಾರತದ ಈಶಾನ್ಯ ಮತ್ತು ಮಧ್ಯಪೂರ್ವ ರಾಜ್ಯಗಳು ಅತಿ ಹೆಚ್ಚು ಮಲೇರಿಯಾ ಸಂಭವಿಸುವ ತಾಣಗಳು. ಬುಡಕಟ್ಟು ಜನರ ಜೊತೆಗೇ ಅಲ್ಲಿ ನೇಮಿಸಲ್ಪಟ್ಟ ಪಡೆಗಳು, ನೌಕರರು, ಮಾವೋವಾದಿಗಳು, ವರದಿಗಾರರು, ಪ್ರವಾಸಿಗಳನ್ನೂ ಮಲೇರಿಯಾ ಬಾಧಿಸಿದೆ. ಇಲ್ಲಿಯವರೆಗೆ ಕೋಟ್ಯಂತರ ಜನ ಮಲೇರಿಯಾಗೆ ಪ್ರಾಣ ತೆತ್ತಿದ್ದಾರೆ.

ಅಬುಜ್ಮಾರ್. ಗೊಂಡಿ ಬುಡಕಟ್ಟುಗಳ ಭಾಷೆಯಲ್ಲಿ ಇದರರ್ಥ ಅಜ್ಞಾತ ಪರ್ವತ. 6000 ಚ.ಕಿಮೀ ವ್ಯಾಪಿಸಿರುವ ಛತ್ತೀಸ್‌ಘರ್‌ನ ಈ ಗುಡ್ಡಬೆಟ್ಟ ಅರಣ್ಯಗಳ ಪ್ರದೇಶ ಹಲವು ಬುಡಕಟ್ಟುಗಳ ನಾಡು. ಪೂರ್ತಿ ಮಾವೋವಾದಿಗಳ ಹಿಡಿತದಲ್ಲಿರುವ ಪ್ರದೇಶವೆಂಬ ತಲೆಬರಹ ಹೊತ್ತು ಯಾರೂ ಭೇಟಿ ನೀಡದ ಗೊಂಡಾರಣ್ಯವೆನಿಸಿತ್ತು. ಮಾರ್ಚ್ 15ರಂದು ಪೊಲೀಸ್, ಸೇನೆ, ಅರೆಸೇನಾ ಪಡೆಗಳು 'ಆಪರೇಷನ್ ಹಕ್ಕಾ' ದಾಳಿ ನಡೆಸುವವರೆಗೆ ಅದು ಮಾವೋವಾದಿಗಳ ಭದ್ರ ನೆಲೆ, ಶಸ್ತ್ರಾಸ್ತ್ರಗಳ ಉಗ್ರಾಣ ಎಂದೇ ಭಾವಿಸಲಾಗಿತ್ತು. ಮಾವೋವಾದಿಗಳು ಜಿಲ್ಲಾ ಕಲೆಕ್ಟರ್ ಅಲೆಕ್ಸ್ ಮೆನನ್ ಅವರನ್ನು ಅಪಹರಿಸಿ ಇಬ್ಬರು ಅಂಗರಕ್ಷಕರನ್ನು ಕೊಂದಾಗ ಮತ್ತೆ ಸುದ್ದಿಯಾಗಿತ್ತು.

'ತೆಹೆಲ್ಕಾ' ವಾರಪತ್ರಿಕೆ ತನ್ನಿಬ್ಬರು ವರದಿಗಾರರನ್ನು ಅಬುಜ್ಮಾರ್‌ಗೆ ಕಳಿಸಿತು. ಬುಡಕಟ್ಟು ಜನರನ್ನೂ, ಮಾವೋವಾದಿಗಳನ್ನೂ ಭೇಟಿಮಾಡಿದ ವರದಿ ಪ್ರಕಟವಾಯಿತು. ಅಲ್ಲಿಂದ ಹಿಂದಿರುಗಿದ ಕೂಡಲೇ ರಿಪೋರ್ಟರ್ ತುಷಾ ಮಿತ್ತಲ್ (27) ಹಾಗೂ ಫೋಟೋಗ್ರಾಫರ್ ತರುಣ್ ಸೆಹ್ರಾವತ್ (22) ಸೆರೆಬ್ರಲ್ ಮಲೇರಿಯಾಗೆ ತುತ್ತಾದರು. ತುಷಾ ಚೇತರಿಸಿಕೊಂಡರೆ ತರುಣ್ ಸೆರೆಬ್ರಲ್ ಮಲೇರಿಯಾದಿಂದ ನಿಧನ ಹೊಂದಿದ. ಅವರ ವರದಿ ಹಾಗೂ ತರುಣನ ಸಾವು ಬುಡಕಟ್ಟು ಜನರ ದುಸ್ತರ ಬದುಕು, ಆರೋಗ್ಯ ಸಮಸ್ಯೆಗಳು, ವಾಸಿಸುವ ಭೌಗೋಳಿಕ ಪ್ರದೇಶ, ಮಾವೋವಾದಿ–ಪೊಲೀಸರ ಕಾರ್ಯಾಚರಣೆ, ಸರ್ಕಾರದ ಇಬ್ಬಂದಿತನಗಳ ಕುರಿತು ಹಲವು ಪ್ರಶ್ನೆಗಳನ್ನೆತ್ತಿ ಸೂಕ್ಷ್ಮವಿಚಾರಗಳನ್ನು ಮುನ್ನೆಲೆಗೆ ತಂದಿದೆ.



ತರುಣ್ ಸೆಹ್ರಾವತ್

ಬಸ್ತಾರ್ ಪ್ರದೇಶದ ಕಡಿದಾದ ಪರ್ವತಗಳ ನಡುವೆ, ಕಲ್ಲು ಮುಳ್ಳಿನ ಕಾಡುದಾರಿಯಲ್ಲಿ ಮೈಲುಗಟ್ಟಲೆ ನಡೆದು ತುಷಾ ಮಿತ್ತಲ್ ಮತ್ತು ತರುಣ್ ಸೆಹ್ರಾವತ್ ಕಳಿಸಿದ ಸಚಿತ್ರ ವರದಿಯ ಸಾರಾಂಶ ಆಧರಿಸಿ ಕೆಲ ವಿಷಯಗಳು ಹಾಗೂ ಮಲೇರಿಯಾ ಕುರಿತು ಕೆಲ ಮಾಹಿತಿಗಳನ್ನಿಲ್ಲಿ ನೀಡಲಾಗಿದೆ:

* * *

ಉಪಗ್ರಹ ಹಾರಿಸಿ ಗೂಢಚಾರಿಕೆ ನಡೆಸುತ್ತಿರುವ ಕಾಲದಲ್ಲಿ ಭೂಮಿ ಮೇಲಿನ ಒಂದಿಂಚು ಜಾಗವನ್ನೂ ಗುರುತಿಸದೇ ಬಿಟ್ಟಿಲ್ಲ, ಸಂಪರ್ಕ ಕ್ರಾಂತಿಯಿಂದ 'ಕವರ್' ಮಾಡದ ಏರಿಯಾವೇ ಇಲ್ಲ ಎಂಬ ಹೆಗ್ಗಳಿಕೆ ಮಾನವನದ್ದು. ಭೂಮಿ, ಸಮುದ್ರಗಳ ಆಳಗಲವನ್ನು ಅಳೆದಿದ್ದೇವೆಂಬ ಹೆಮ್ಮೆ ಮುರಿಯಲೆಂದೇ ಅಬುಜ್ಮಾರ್‌ನಂಥ ಕೆಲವು ಸ್ಥಳಗಳು ಈಗಲೂ ಉಳಿದುಕೊಂಡಿವೆ. ಬುಡಕಟ್ಟು ಪ್ರದೇಶದಲ್ಲಿರುವ ಮಾವೋವಾದಿಗಳ ಕುರಿತು ಪ್ರಭಾವಳಿಯಂತೆ ಹಬ್ಬಿರುವ ಕಥನಗಳು ಎಷ್ಟು ಭಯಾನಕವಾಗಿವೆಯೆಂದರೆ ಹೊರಜಗತ್ತು ಅಬುಜ್ಮಾರ್ ಕುರಿತೂ ಇಂಥದೇ ತಿಳುವಳಿಕೆ ಹೊಂದಿತ್ತು. ಮಾವೋವಾದಿಗಳ ಬೃಹತ್ ಶಸ್ತ್ರಾಸ್ತ್ರ ಸಂಗ್ರಹವೆಂದು ಭಾವಿಸಲಾದ ವೈಮಾನಿಕ ಚಿತ್ರಗಳ ಕಪ್ಪು–ಕಂದು ಬಣ್ಣದ ಪ್ಯಾಚ್‌ಗಳು ವಾಸ್ತವವಾಗಿ ಮಾದಿಯಾ ಬುಡಕಟ್ಟು ಜನರ ಬಿದಿರು–ಹುಲ್ಲಿನ ಚದುರಿದ ಗುಡಿಸಲುಗಳು, ರಾಮಕೃಷ್ಣ ಮಿಷನ್ ಶಾಲೆಗಳು ಹಾಗೂ ಮಾವೋವಾದಿಗಳ ಕ್ಯಾಂಪುಗಳಾಗಿದ್ದವು.

ಅಬುಜ್ಮಾರ್ ಪ್ರವೇಶಿಸುವಲ್ಲಿ ದೊಡ್ಡಮರದ ಕಾಂಡಕ್ಕೆ ಬಿಳಿಹಾಳೆಯಲ್ಲಿ ಬರೆದು ಸಿಗಿಸಲಾಗಿತ್ತು: 'ಜನ ಯುದ್ಧ. ಜನಯುದ್ಧದ ಪ್ರದೇಶದಲ್ಲಿರುವ ಗ್ರಾಮಸ್ಥರು, ಅಧ್ಯಾಪಕರು, ಮಕ್ಕಳು, ಹಿರಿಯರು ಮತ್ತು ಇತರರ ಗಮನಕ್ಕೆ. ಸಿಪಿಐ (ಎಂ) ಪಕ್ಷದ ವಿನಂತಿ ಇದು. ನಿಮಗೆ ತಿಳಿಸುವ ಮಾಹಿತಿಯೇನೆಂದರೆ ಮಾರ್ ಪ್ರದೇಶದ ಬೆಟ್ಟಗುಡ್ಡ, ಹಳ್ಳಿ, ಹೊಲ, ಹಳ್ಳ, ರಸ್ತೆಗಳ ಆಚೀಚೆ ಸ್ಫೋಟಕ ಸಾಮಗ್ರಿಗಳನ್ನು ಹರಡಲಾಗಿದೆ. ಮಾರ್‌ನ ಉದ್ದಗಲಕ್ಕೆ ಗುಂಡಿಗಳನ್ನು ತೋಡಲಾಗಿದೆ. ಸಾವಧಾನವಾಗಿ ಓಡಾಡಿ. ಅರಣ್ಯದೊಳಗೆ ಬರಬೇಡಿ. ಏನಾದರೂ ಅವಘಡವಾದಲ್ಲಿ ನಮ್ಮ ಜವಾಬ್ದಾರಿಯಲ್ಲ. ನಮ್ಮ ಪ್ರದೇಶ ಮಾರ್ ಅನ್ನು ಭಾರತೀಯ ಸೇನೆ, ಸಿಆರ್‌ಪಿಎಫ್, ಕೋಬ್ರಾ ಫೋರ್ಸ್‌ಗಳು ಪ್ರವೇಶಿಸಲು ಸಿದ್ಧವಾಗಿವೆ. ಅದಕ್ಕೇ ಇವೆಲ್ಲ ಅಗತ್ಯವಾಗಿದೆ. ಏಪ್ರಿಲ್ 15ರಿಂದ ಈ ಸೂಚನೆ ಅನ್ವಯಿಸುತ್ತದೆ.'

ಈ ಸೂಚನೆ ದಾಟಿ ಮುಂದೆ ಕಡಿದಾದ ಗುಡ್ಡ, ಕುರುಚಲು ಕಾಡುಗಳನ್ನು ಹಾಯ್ದು ಹೋಗುವಾಗ ಇಂಡಿಯಾ ಗೇಟಿನಂತೆ ಕಾಣುವ ದೊಡ್ಡ ಕಮಾನಿನ ಹೊರಗಡೆ, 'ಭಾರತೀಯ ಸೇನೆಯೇ, ವಾಪಸು ಹೋಗಿ. ಬಸ್ತಾರ್ ವಾಸಿಗಳು ಹೊರಗಿನವರಲ್ಲ.

ನಮ್ಮೊಡನೆ ಯುದ್ಧ ಮಾಡಬೇಡಿ' ಎಂದೂ; ಕಮಾನಿನ ಒಳಗಡೆ, 'ತರುಣರೇ, ಸರ್ಕಾರದ ವಿರುದ್ಧ ಜನಯುದ್ಧದಲ್ಲಿ ಭಾಗಿಯಾಗಿ' ಎಂದೂ ಬರೆಯಲಾಗಿತ್ತು. ಮಾವೋ ಭದ್ರಕೋಟೆಯೆಂದರೆ ಮಾರಿಗೊಬ್ಬ ಮೊಳಕ್ಕೊಬ್ಬ ಗೆರಿಲ್ಲಾ ಯೋಧ, ಚೆಕ್ ಪಾಯಿಂಟ್ ಇರಬಹುದೆಂಬ ನಿರೀಕ್ಷೆಗೆ ವ್ಯತಿರಿಕ್ತವಾಗಿ ಎಷ್ಟು ದೂರ ಹೋದರೂ ಚೆಕ್ ಪಾಯಿಂಟ್ ಆಗಲೀ, ಮಾವೋ ಸೆಂಟ್ರಿಯಾಗಲೀ ರಿಪೋರ್ಟರುಗಳಿಗೆ ಸಿಗಲಿಲ್ಲ. ಪಾದವಿಡುವಷ್ಟೇ ಅಗಲದ ಏರುತಗ್ಗಿನ ದಾರಿಯ ಆಚೀಚೆ ಲ್ಯಾಂಡ್‌ಮೈನ್ ಆಗಲೀ, ಬೂಬಿ ಟ್ರಾಪ್ ಆಗಲೀ ಸಿಗಲಿಲ್ಲ. ಜೊತೆಗಿದ್ದ ಮಾವೋ ಗೈಡ್ ತೋರುಗಾಣಿಕೆಗೆ ಕೆಲ ಹೇಳಿಕೆ ನೀಡಬೇಕಾಗುತ್ತದೆ ಎಂದು ನಸುನಕ್ಕಿದ್ದ.

ಮೈಲಿಗಟ್ಟಲೆ ದೂರದಲ್ಲಿ ಚದುರಿರುವ ಜನವಸತಿಗಳಿರುವ ಪ್ರದೇಶ ಅದು. ರೇಡಿಯೋ ಹಿಡಿದ ಒಬ್ಬ ವ್ಯಕ್ತಿ – ಆತ ಸರಪಂಚ ಅಥವಾ ಮಾವೋ ನಾಡಿನ 'ಗ್ರಾಮ್ ಅಧ್ಯಕ್ಷ್' – ಸಿಕ್ಕಿದ. ವರದಿಗಾರರ ಬ್ಯಾಗ್ ಚೆಕ್ ಮಾಡಬೇಕೆಂದು ಒಬ್ಬ ಅಜ್ಜ ತಪಾಸಣೆ ಮಾಡಿದಾಗ ಅವನಿಗೆ ಬ್ಯಾಗಿನಲ್ಲಿ ತುಂಬ ಆಸಕ್ತಿದಾಯಕವಾಗಿ ಕಾಣಿಸಿ ತೆಗೆದಿಟ್ಟುಕೊಂಡಿದ್ದು ಔಷಧಿಗಳನ್ನು! ಅಜ್ಜ ಕೆಮ್ಮುತ್ತಿದ್ದ. ಗ್ರಾಮ ಅಧ್ಯಕ್ಷ ತೀವ್ರ ಬೆನ್ನುನೋವಿನಿಂದ ನರಳುತ್ತಿದ್ದ. ಪಟ್ಟಣಕ್ಕೆ ಹೋಗುವುದು ಅಪಾಯಕರ ಎಂದು ಚಿಕಿತ್ಸೆಗೆ ಹೋಗದೇ ಅವರು ಕಾಯಿಲೆ ಅನುಭವಿಸುತ್ತಿದ್ದರು. ಅವನಷ್ಟೇ ಅಲ್ಲ, ಅಲ್ಲಿದ್ದ ಇತರರಿಗೂ ಪಟ್ಟಣಕ್ಕೆ ಹೋಗಲು ಹೆದರಿಕೆ. ಏಕೆಂದರೆ ಅದಕ್ಕೆ ಪಕ್ಷದ ಅನುಮತಿಯಿಲ್ಲ. ಅನುಮತಿಯಿಲ್ಲದೆ ಹೋಗಿ, ಪಟ್ಟಣದಲ್ಲಿ ಯಾವುದೋ ಕೆಲಸ ಅಥವಾ ಚಿಕಿತ್ಸೆ ನಿಮಿತ್ತ ಹೆಚ್ಚುದಿನ ಉಳಿದರೆ ಅವರನ್ನು ಪೊಲೀಸ್ ಮಾಹಿತಿದಾರರೆಂದು ಶಂಕಿಸಲಾಗುತ್ತದೆ. ಪೊಲೀಸರು ಕೂಡಾ ಊರುಬಿಟ್ಟು ಬಂದ ಬುಡಕಟ್ಟುಗಳನ್ನು ಮಾಹಿತಿಗಾಗಿ ಹಿಡಿದಿಟ್ಟುಕೊಳ್ಳುತ್ತಾರೆ.

ಪ್ರಭುತ್ವದಿಂದ 'ವಿಮೋಚನೆ'ಗೊಂಡ ಮಾವೋನಾಡಿನ ಬುಡಕಟ್ಟು ಜನರಿಗೆ ಸ್ವಾತಂತ್ರ್ಯ ದೂರದ ಮಾತು. ತಮಗಿಷ್ಟ ಬಂದಲ್ಲಿ ಸಂಚರಿಸಲು, ವ್ಯವಹರಿಸಲು ಅವರು ಮುಕ್ತರಲ್ಲ. ಸದಾ ಅವರ ಮೇಲೊಂದು ಕಾಯುವ ಕಣ್ಣಿರುತ್ತದೆ. ಮಾದಿಯಾ ಬುಡಕಟ್ಟಿನ ಸಂಜು ವದ್ದೆ ಟಿಬಿ ಕಾಯಿಲೆಯಿಂದ ನರಳುತ್ತಿದ್ದ. ಹಳ್ಳಿಯಿಂದ ಚಿಕಿತ್ಸೆಗೆ ನಾರಾಯಣಪುರ ಪಟ್ಟಣಕ್ಕೆ ಹೋದವ ಆರು ತಿಂಗಳ ಬಳಿಕ ವಾಪಸು ಬಂದ. ಜನ್‌ಅದಾಲತ್‌ನಲ್ಲಿ ವಿಚಾರಣೆ ನಡೆಸಿ ಅವನಿಗೆ ಮರಣದಂಡನೆ ವಿಧಿಸಲಾಯಿತು. 500 ಜನ ಪೋಲೀಸರನ್ನು ಕರೆತಂದ ಹಾಗೂ ಯಾವುದೋ ವಿಷವನ್ನು (ಅದನ್ನು ಕೋಳಿಯ ಮೇಲೆ ಪ್ರಯೋಗಿಸಿದಾಗ ಅದು ಸತ್ತು ಹೋಯಿತಂತೆ!) ಪಟ್ಟಣದಿಂದ ತಂದ ಆರೋಪದ ಮೇಲೆ ಮೂವರು ಬುಡಕಟ್ಟು ಹೆಣ್ಣುಮಕ್ಕಳನ್ನು ಜನ್‌ಅದಾಲತ್ ವಿಚಾರಣೆ ನಡೆಸಿ ಮರಣ ದಂಡನೆ ವಿಧಿಸಿತು. ಸೋನುವಿನ ಕಾಲಿಗೆ ಆಪರೇಷನ್ ಹಕ್ಕಾ ವೇಳೆ ಒಂದು ಬುಲೆಟ್ ಹೊಕ್ಕಿದ್ದು ಎರಡಿಂಚು ಕೊಯ್ದರೂ ಬುಲೆಟ್ ಸಿಕ್ಕಿಲ್ಲ. ಆದರೂ ಅವನಿಗೆ ಪಟ್ಟಣಕ್ಕೆ ಹೋಗಲು ಭಯ. ಅಜ್ಜನೊಬ್ಬ ಅರಣ್ಯಭೂಮಿಯ ಪಟ್ಟಾ ತೆಗೆದುಕೊಳ್ಳಲು ಕಚೇರಿಗೆ ಹೋಗಬೇಕಿದೆ. ಆದರೆ ಸರ್ಕಾರ ಕೊಡುವ ಯಾವುದನ್ನೂ ತೆಗೆದುಕೊಳ್ಳದಂತೆ ಪಾರ್ಟಿಯವರ ಸೂಚನೆಯಿದೆ. 'ಹೋಗಿಬಂದವರೆಷ್ಟೋ ಜನ ವಿಚಾರಣೆಯ ನಂತರ ಕಾಣೆಯಾಗಿದ್ದಾರೆ' ಎಂದು ಹೋಗಲು ಅವರಿಗೆ ಹೆದರಿಕೆ.

ಡಾ|| ಎಚ್. ಎಸ್. ಅನುಪಮಾ

9

ಅಬುಜ್ಮಾರ್ ತೊರೆದು ಪಟ್ಟಣಕ್ಕೆ ಹೋದ ಕೆಲ ಬುಡಕಟ್ಟು ಗ್ರಾಮಸ್ಥರು ಅಲ್ಲೇ ನೆಲೆಸಿದ್ದಾರೆ. ನಗರ ಜೀವನದ ದುಡಿಮೆ, ಸವಲತ್ತುಗಳಿಗೆ ಒಗ್ಗಿಕೊಂಡಿದ್ದಾರೆ. 10 ವರ್ಷದ ಕೆಳಗೆ ಅಚ್ಪಾಲ್ ಊರಿನ ಸರಪಂಚ್ ಆಗಿದ್ದ ಮಾಂಗ್ರು ನಾರಾಯಣಪುರಕ್ಕೆ ಹೋದವ ಅಲ್ಲೇ ಉಳಿದಿದ್ದಾನೆ. ಅವನೀಗ ಅಬುಜ್ಮಾರ್ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ. ಆತ ಹಳ್ಳಿಗೆ ಹಿಂದಿರುಗಬಯಸುವುದಿಲ್ಲ. ಸೋನು ಗೊಟ್ಟಾ ಎಂಬಾಕೆ ತನ್ನ ಗಂಡ ಮತ್ತು ಕಾಯಿಲೆಯ ಮಗುವಿನೊಂದಿಗೆ ಪಟ್ಟಣಕ್ಕೆ ಬಂದವಳು ಹಳ್ಳಿಗೆ ಹಿಂತಿರುಗಲು ಹೆದರಿ ಈಗ ಪಟ್ಟಣದಲ್ಲಿ ಕೂಲಿ ಮಾಡಿ ಬದುಕುತ್ತಿದ್ದಾಳೆ. ಗೊಟ್ಟಾ ಬಿಜೆಪಿ ಟಿಕೆಟಿನಿಂದ ಕುಳಿತಲ್ಲೇ ವಾರ್ಡ್‌ನ ಸರಪಂಚ್ ಆಗಿದ್ದಾಳೆ. ಅವಳಂತೆಯೇ ಹಳ್ಳಿ ಬಿಟ್ಟು ಕೆಲಸ ಅರಸಿ ಬರುವ ತರುಣರನ್ನು ವಿಶೇಷ ಕಾರ್ಯಪಡೆಯ ಪೊಲೀಸ್ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಅಂಥ 12 ಜನ ವಿಶೇಷ ಪಡೆಯಲ್ಲಿದ್ದು ಆಪರೇಷನ್ ಹಕ್ಕಾ ಸಮಯದಲ್ಲಿ ಪೊಲೀಸ್ ಪಡೆಗಳಿಗೆ ಮಾರ್ಗದರ್ಶಿಯಾದವರು ಅವರೇ.

ರಾಮಕೃಷ್ಣ ಮಿಷನ್ ಈ ಪ್ರದೇಶದಲ್ಲಿ ಐದು ಆಶ್ರಮ ನಡೆಸುತ್ತಿದೆ. ಮಾವೋವಾದಿಗಳೂ ಏಳು ಶಾಲೆ ನಡೆಸುತ್ತಿದ್ದಾರೆ. ಮೊದಲು ರಾಮಕೃಷ್ಣ ಮಿಷನ್ನಿನ ಆಶ್ರಮಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಧಾನ್ಯ ಕೊಡುವ ಕೇಂದ್ರಗಳಾಗಿದ್ದವು. ಬುಡಕಟ್ಟು ಜನರಿಗಾಗಿರುವ ಧಾನ್ಯ ಮಾವೋವಾದಿಗಳಿಗೆ ಸಿಗಬಾರದೆಂಬ ಉದ್ದೇಶದಿಂದ ಈಗದನ್ನು ಸಿಆರ್‌ಪಿಎಫ್ ಕ್ಯಾಂಪ್ ಬಳಿ ಇಡಲಾಗಿದೆ. ಗುಡ್ಡಬೆಟ್ಟಗಳ ದಾರಿಯಲ್ಲಿ ಜನ ಮೈಲುಗಟ್ಟಲೆ ನಡೆದು ಧಾನ್ಯ ತರಬೇಕು. ವರ್ಷಕ್ಕೆ 5 ರೂ. ಕೊಟ್ಟವರು ಪಕ್ಷದ ಕಾರ್ಯಕರ್ತರಾಗುತ್ತಾರೆ. ಆ 5 ರೂ. ಸದಸ್ಯತ್ವದಿಂದ 'ಜನತಾ' ಆಗಬಹುದು. ಅದು ಜನ್‌ಅದಾಲತ್‌ನಲ್ಲಿ ಓಟು ಮಾಡುವ ಅಧಿಕಾರ ಕೊಡುತ್ತದೆ. ಈ ಜನತಾ ಹೆಸರಿನಲ್ಲೇ ಮಾವೋ ಗುಂಪು ತಾನು ಆಡಳಿತ ನಡೆಸುವ ಹಕ್ಕು ಹೊಂದಿರುವುದಾಗಿ ಘೋಷಿಸುತ್ತದೆ.

ಆದರೆ ಇದೇ 'ಜನತಾ' ಭಾರತ ಸರ್ಕಾರದ ಪ್ರಜೆಗಳೂ ಹೌದು. ಅವರ ಹೆಸರಿನಲ್ಲಿ ಪ್ರಜಾಪ್ರಭುತ್ವವೂ ಆಡಳಿತ ನಡೆಸುತ್ತಿದೆ. ಸಮಾನ ಅವಕಾಶಗಳು ಸಿಕ್ಕವೋ ಇಲ್ಲವೋ, ಬಸ್ತಾರ್‌ವಾಸಿಗಳ ಪರವಾಗಿ ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರುತ್ತದೆ. ಮಾವೋವಾದಿಗಳು ಹತ್ತು ವರ್ಷಗಳ ಕೆಳಗೆ ಅಬುಜ್ಮಾರ್ ಆಕ್ರಮಿಸಿ ತಮ್ಮದೆಂದು ಘೋಷಿಸಿದ್ದರೆ, ಕಳೆದ 60 ವರ್ಷಗಳಿಂದ ಅದು ಭಾರತ ಸರ್ಕಾರದ್ದೇ ಆಗಿದೆ. ಆದರೆ ಕೆಲವು ಶಾಲೆಗಳು, ಪೊಲೀಸ್ ಸ್ಟೇಷನ್, ಸಿಆರ್‌ಪಿಎಫ್ ಕ್ಯಾಂಪುಗಳ ಹೊರತು ಸರ್ಕಾರವಿದ್ದ ಕುರುಹುಗಳಾವುವೂ ಅಲ್ಲಿ ಗೋಚರಿಸುವುದಿಲ್ಲ. ಎಲ್ಲಿ ದೆಹಲಿ ಸರ್ಕಾರ ಕೊನೆಯಾಗುತ್ತದೆ, ಎಲ್ಲಿ ಮಾವೋ ಸರ್ಕಾರ ಶುರುವಾಗುತ್ತದೆ? ಮಾವೋವಾದಿಯಾಗಿ ಶಸ್ತ್ರಾಸ್ತ್ರ ಹಿಡಿದವರಾರು? ಆತ್ಮರಕ್ಷಣೆಗಾಗಿ, ಹಕ್ಕಿ ಬೇಟೆಯಾಡುವುದಕ್ಕಾಗಿ ನಾಡ ಬಂದೂಕಿನಂತಹ ಶಸ್ತ್ರಾಸ್ತ್ರ ಹಿಡಿದವರು ಯಾರು? ಎಂದು ಗುರುತಿಸುವುದು ಸುಲಭವಲ್ಲ. ರಕ್ಷಣಾಪಡೆಗಳು ಎದುರಿಸುವ ಗೊಂದಲ, ದೌರ್ಜನ್ಯದ ಮೂಲ ಇಲ್ಲಿಂದಲೇ ಶುರುವಾಗುತ್ತದೆ.

ಬಸ್ತಾರ್ ಪ್ರದೇಶದಲ್ಲೀಗ 104 ಪೊಲೀಸ್ ಸ್ಟೇಷನ್‌ಗಳು, 56 ಸಿಆರ್‌ಪಿಎಫ್ ಕ್ಯಾಂಪುಗಳು, 30 ಬಿಎಸ್‌ಎಫ್ ಕ್ಯಾಂಪುಗಳಿವೆ. ಬಸ್ತಾರ್ ಐಜಿ, 'ಮಣಿಪುರ ನಮ್ಮ ಕಾಲು ಭಾಗದಷ್ಟು ಪ್ರದೇಶವನ್ನೂ ಹೊಂದಿಲ್ಲ. ಆದರೆ ಅಲ್ಲಿ ನಮ್ಮ ಎರಡರಷ್ಟು ಪಡೆಗಳು ಇವೆ' ಎಂದು ಆರೋಪ ಮಾಡುತ್ತಾ ಹೆಚ್ಚೆಚ್ಚು ಭದ್ರತಾ ತುಕಡಿಗಳಿಗಾಗಿ ಒತ್ತಾಯಿಸಿದ್ದಾರೆ. ಆದರೆ ರಕ್ಷಣೆಯ ಹೆಸರಲ್ಲಿ ಬಂದ ಪಡೆಗಳ ದೌರ್ಜನ್ಯ ಕಡಿಮೆಯದಲ್ಲ. ಐತೆ ಗೊಟ್ಟಾಳ ಗಂಡನನ್ನು ರಕ್ಷಣಾ ಪಡೆಗಳು ಸಾಯುವಂತೆ ಹೊಡೆದವು. ಕೇಯಾನ ಮನೆ ಸುಡಲಾಯಿತು. ಗೋಯಾನ ಮನೆಯ ಕೋಳಿಯನ್ನು ಕದ್ದು ಅಡಿಗೆ ಮಾಡಿದರು. ಕುಕ್ರಾಝೋರ್ ಬೇಸ್ ಕ್ಯಾಂಪಿಗೆ ಮೂರು ದಿನ ಕಷ್ಟಪಟ್ಟು ನಡೆದು, ಹೊತ್ತು ತಂದಿದ್ದ 40 ಕೆಜಿ ಅಕ್ಕಿ, ಅಡಿಗೆ ಪಾತ್ರೆ ಎತ್ತಿಕೊಂಡುಹೋದರು. ಹುಣಿಸೆ ಮರ, ಕಾಳುಕಡಿ ಸುಟ್ಟು ಹಾಕಲಾಯಿತು.

ಬಜೆಟಿನ ಸಾವಿರಾರು ಕೋಟಿ ರೂಪಾಯಿಗಳನ್ನು 'ಡಿಫೆನ್ಸ್'ಗಾಗಿ ಕಾಯ್ದಿರಿಸಲು ಸರ್ಕಾರವು ದೇಶಭಕ್ತಿ–ರಾಷ್ಟ್ರೀಯತೆಯನ್ನು ಉದ್ದೀಪಿಸುವ ಮಾತನಾಡಿದರೆ ಸಾಕಾಗುವುದಿಲ್ಲ. ಸಶಸ್ತ್ರ ಪಡೆಗಳನ್ನು ನೇಮಿಸಿಕೊಳ್ಳಲು, ತನ್ನ ಪ್ರದೇಶದ ಪ್ರಜೆಗಳಿಗೆ ರಕ್ಷಣೆ ಒದಗಿಸಲು ಕೋಟ್ಯಂತರ ದುಡ್ಡು ಖರ್ಚು ಮಾಡುವ ಸರ್ಕಾರ ಅದರಲ್ಲೊಂದು ಪಾಲನ್ನು ಅವರ ನೆಮ್ಮದಿಯ ಬದುಕಿಗಾಗಿ ಖರ್ಚು ಮಾಡಿದ್ದರೆ ಹೋರಾಡುವ ಗುಂಪುಗಳು ಹುಟ್ಟುತ್ತಿರಲಿಲ್ಲ. ಯಾವ ಮೀಸಲಾತಿಯೂ ಮಾದಿಯಾಗಳನ್ನಾಗಲೀ, ಗೊಂಡ್ ಬುಡಕಟ್ಟನ್ನಾಗಲೀ ತಲುಪುವುದು ಸಾಧ್ಯವಿಲ್ಲ. ಯಾವ ಹೊಸ ಯೋಜನೆಗಳೂ ದುರ್ಗಮ ಗೊಂಡಾರಣ್ಯವನ್ನು ತಲುಪುವುದಿಲ್ಲ. ಪ್ರಾದೇಶಿಕ, ಜನಾಂಗೀಯ ಹಾಗೂ ಆರ್ಥಿಕ ಅಸಮಾನತೆಗಳು ಮತ್ತು ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಆಳುವವರ ಜಡತೆ – ಬುಡಕಟ್ಟು ಹಾಗೂ ಮಾವೋವಾದಿಗಳು ಸರ್ಕಾರದೊಡನೆ ಸಂಘರ್ಷಕ್ಕಿಳಿಯಲು ಕಾರಣವಾಗಿವೆ. ಜನರ ಜೀವನಮಟ್ಟ ಸುಧಾರಿಸುವ ಬಜೆಟು–ಯೋಜನೆಗಳಲ್ಲಿ ಸಿಂಹಪಾಲನ್ನು ನಗರ ಪ್ರದೇಶವೇ ಕಬಳಿಸುವುದರಿಂದ ವಿರಳ ಜನಸಂಖ್ಯೆಯುಳ್ಳ ಗುಡ್ಡಗಾಡುಗಳತ್ತ ಆಳುವವರ ಗಮನ ಹರಿಯುವುದು ಅಲ್ಲಿಗೆ ಯೋಜನೆಗಳನ್ನು ಮಂಜೂರು ಮಾಡುವಾಗ, ಅಥವಾ ಅಂಥ ಯೋಜನೆಗೆ ಸ್ಥಳೀಯರು ವಿರೋಧ ತೋರಿದಾಗ. ಸ್ಥಳೀಯರ ವಿರೋಧ ಸಂಘಟಿತ ರೂಪ ತಾಳಿ ಅಲ್ಲಿ ಬಂದೂಕಿನ ಸಪ್ಪಳ ಕೇಳಲು ಶುರುವಾದ ಕೂಡಲೇ ಎಚ್ಚೆತ್ತುಕೊಳ್ಳುವ ಸರ್ಕಾರ ಕೂಡಲೇ ಹಲವು ಕಲ್ಯಾಣ ಯೋಜನೆ–ಕಾರ್ಯಕ್ರಮಗಳನ್ನು ಘೋಷಿಸುತ್ತದೆ. ವಿಶೇಷ ಪ್ಯಾಕೇಜ್‌ಗಾಗಿ ಹಣ

ಬಿಡುಗಡೆಯಾಗುತ್ತದೆ. ಕಾಗದದ ಮೇಲೆ ಸ್ವರ್ಗವನ್ನೇ ಅವರ ಪಾಲಿಗೆ ಇಳಿಸಲಾಗುತ್ತದೆ.

ಒಂದು ಪ್ರದೇಶದಲ್ಲಿರಬಹುದಾದ ಅವ್ಯವಸ್ಥೆ, ಅಸಮಾನ ಹಂಚಿಕೆ ಮತ್ತು ಜನಜೀವನದ ಕಷ್ಟಗಳ ಕುರಿತು ಶಸ್ತ್ರಧಾರಿಗಳಿರುವ ಸಂಘಟನೆ ಹೇಳುತ್ತಿದೆಯೆಂಬ ಅಸಹನೆಯಲ್ಲಿ ಹಕ್ಕು ಕೇಳುವ ಧ್ವನಿಗಳನ್ನು ಶಸ್ತ್ರಗಳಿಂದ ದಮನ ಮಾಡಲು ಸರ್ಕಾರ ಪ್ರಯತ್ನಿಸುತ್ತದೆ. ಆದರೆ ಇಂಥ ಪ್ರಯತ್ನಗಳು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವಂತೆ, ಬದುಕು ಇನ್ನಷ್ಟು ದುಸ್ತರಗೊಳ್ಳುವಂತೆ ಮಾಡುತ್ತದೆಂದು ಸರ್ಕಾರ ಹಾಗೂ ಮಾವೋವಾದಿಗಳಿಬ್ಬರೂ ಅರಿಯಬೇಕಾಗಿದೆ.

ಲಕ್ಷಾಂತರ ಬುಡಕಟ್ಟುಗಳ ಪಾಲಿಗೆ ಲಭ್ಯವಿರುವುದು ಎರಡೇ ಆಯ್ಕೆ – ಭಾರತ ಸರ್ಕಾರ ಅಥವಾ ಮಾವೋ ಆಡಳಿತ. ದೀರ್ಘಾವಧಿ ಮತ್ತು ದೂರಗಾಮಿ ಯೋಜನೆ ರೂಪಿಸಲಾಗದ, ಅಹಿಂಸೆಯನ್ನು ಮೌಲ್ಯವೆಂದು ಪರಿಗಣಿಸದ, ಏಟಿಗೆ ಎದಿರೇಟು ಎಂಬ ತತ್‌ಕ್ಷಣದ ನ್ಯಾಯದಲ್ಲಿ ನಂಬಿಕೆಯಿಡುವ, ರಣನೀತಿ ತಂತ್ರಗಳ ಬಗೆಗೆಲ್ಲ ತಲೆ ಕೆಡಿಸಿಕೊಳ್ಳದ ಬುಡಕಟ್ಟು ಜನರನ್ನು ರೊಚ್ಚಿಗೆಬ್ಬಿಸುವುದು ಸುಲಭ. ಇದೇ ಅವರನ್ನು ಜನ್ ಮಿಲಿಷಿಯಾ ಕೈಗೆ, ಸಲ್ವಾ ಜುಡುಂ ಕೈಗೆ ಒಪ್ಪಿಸಿರುವುದು. ಕುಡಿಯುವ ನೀರಿಗೆ, ರೇಷನ್ ಅಕ್ಕಿಗೆ ಮೈಲಿಗಟ್ಟಲೆ ಗುಡ್ಡದ ಕಾಡುಹಾದಿ ಕ್ರಮಿಸುವ ಬುಡಕಟ್ಟುಗಳ ಅಸಹಾಯಕತೆ ಮತ್ತು ಆಕ್ರೋಶ ಆಳುವವರ ಸಮರ ಉದ್ದೇಶಕ್ಕೆ ದಾಳವಾಗಿಯೂ, ಗುರಾಣಿಯಾಗಿಯೂ ಬಳಕೆಯಾಗುತ್ತಿದೆ.

ಹಂದಿ, ಕೂಗುವ ನಾಯಿಗಳ ಜೊತೆ ತೆರೆದ ಬಯಲಿನಲ್ಲಿ ಮಲಗುವ; ಕುಡಿಯುವ ನೀರಿಗಾಗಿ ಪರದಾಡುವ; ಪಿಡಿಎಸ್ ನೀಡುವ ಅಕ್ಕಿ ಸಿಕ್ಕರೆ ಬರೀ ಅನ್ನ ಬೇಯಿಸಿಕೊಂಡು ತಿನ್ನುವ; ಆಹಾರಭದ್ರತೆಯಿಲ್ಲದೇ ಅತಿ ಹೆಚ್ಚು ಅಪೌಷ್ಟಿಕತೆಯ ಮಕ್ಕಳನ್ನು ಹೊಂದಿರುವ ಮಾದಿಯಾ, ಗೊಂಡ್ ಮತ್ತಂಥವೇ ಬುಡಕಟ್ಟಿನ ಜನರಿಗೆ ಅವರ ಬದುಕುವ ಕಷ್ಟಗಳ ನಡುವೆ ಅಭಿವೃದ್ಧಿ ಯೋಜನೆಗಳು, ಸೇನೆ, ಶಸ್ತ್ರಾಸ್ತ್ರಧಾರಿಗಳ ಹಿಂಸೆಯೂ ಸೇರಿದರೆ ಆ ಜೀವಗಳ ಉಸಿರಾಟವನ್ನು ಬದುಕೆಂದು ಹೇಗೆ ಪರಿಗಣಿಸುವುದು? ದುರ್ಗಮ ಪ್ರಕೃತಿ, ಸಹಜೀವಿಗಳ ಬಿಗಿ ನಿಯಂತ್ರಣ, ರೋಗರುಜಿನಗಳ ಭಾರವನ್ನು ನಾಡ ಬಂದೂಕಿನಂತೆ ಬೆನ್ನಮೇಲೆ ಹೊತ್ತು ಸಾಗುತ್ತಿರುವ ಬುಡಕಟ್ಟು ಜನರಿಗಿದೋ,

ಶರಣು ಶರಣು..

* * *

ಎರಡನೇ ಮಹಾಯುದ್ಧ ಕಾಲದ ಪೋಸ್ಟರ್:

'ಎಚ್ಚರಿಕೆ,
ನೀವೀಗ ಮಲೇರಿಯಾ ಪ್ರದೇಶವನ್ನು ಪ್ರವೇಶಿಸುತ್ತಿದ್ದೀರಿ.
ನಿಮ್ಮನ್ನೂ, ನಿಮ್ಮ ಸಹವರ್ತಿಗಳನ್ನೂ ಮಲೇರಿಯಾ ವಿರುದ್ಧ
ರಕ್ಷಿಸಿಕೊಳ್ಳಿ. ನಿಮ್ಮ ಕಮ್ಯಾಂಡಿಂಗ್ ಆಫೀಸರ್ ಸೂಚಿಸಿದ
ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನೂ ತೆಗೆದುಕೊಳ್ಳಿ.
ಮಲೇರಿಯಾ ಶತ್ರುಗಳಿಗಿಂತಲೂ ಹೆಚ್ಚು ಜನರನ್ನು ಕೊಂದುರುಳಿಸಬಲ್ಲದು
ಈ ಗಂಡಾಂತರದ ವಿರುದ್ಧ ಹೋರಾಡಿ.'

ಮನುಷ್ಯ ಹುಟ್ಟುವುದಕ್ಕಿಂತ ಮೊದಲೇ ಈ ಭೂಮಿಯ ಮೇಲೆ ಅವತರಿಸಿದ ಮಲೇರಿಯಾ ರೋಗಾಣು ಮಾನವ ಇತಿಹಾಸದುದ್ದಕ್ಕೂ ಸಾವುನೋವಿಗೆ ಕಾರಣವಾಗಿದೆ. ಮೂರೂವರೆ ಸಾವಿರ ವರ್ಷಗಳ ಕೆಳಗೆ ಈಜಿಪ್ಟಿನ ಪ್ರಖ್ಯಾತ ದೊರೆ, 18 ವರ್ಷದ ಟುಟಾಂಖಮೆನ್ ಮಲೇರಿಯಾದಿಂದ ತೀರಿಕೊಂಡ. ಪಿರಮಿಡ್ ಕಟ್ಟುವ ಕೆಲಸಗಾರರಿಗೆ ಮಲೇರಿಯಾ ರಕ್ಷಣೆಗಾಗಿ ಹೆಚ್ಚೆಚ್ಚು ಬೆಳ್ಳುಳ್ಳಿ ತಿನ್ನಿಸಲಾಗುತ್ತಿತ್ತು. ರಾಣಿ ಕ್ಲಿಯೋಪಾತ್ರಾ ಸೊಳ್ಳೆ ಪರದೆಯಿಲ್ಲದೇ ಮಲಗುತ್ತಿರಲಿಲ್ಲ. ಎಷ್ಟೋ ನಗರ ನಾಗರಿಕತೆಗಳು ಮಲೇರಿಯಾದಿಂದಲೇ ಅವನತಿ ಹೊಂದಿದವು. ಘನಘೋರ ಯುದ್ಧ ಗೆದ್ದು ಬಂದ ಸೇನಾನಾಯಕರೂ ಮಲೇರಿಯಾಗೆ ಬಲಿಯಾದರು. ಸೈನ್ಯ ಕಾಯಿಲೆಗೆ ತುತ್ತಾಗಿ ಮುಂದುವರೆಯಲಾರದೇ ಸೋತ ಸಂದರ್ಭಗಳಿವೆ. ಎರಡನೇ ಮಹಾಯುದ್ಧದ ಸಮಯದಲ್ಲಿ 60 ಸಾವಿರ ಅಮೆರಿಕನ್ ಸೈನಿಕರು ಮಲೇರಿಯಾಗೆ ಜೀವತೆತ್ತರು. ಅನಾದಿಯಿಂದ ಭಾರತದಲ್ಲೂ ಬೆಟ್ಟ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಬುಡಕಟ್ಟುಗಳು ಹಾಗೂ ಮಲೆನಾಡಿನ, ಮಳೆ ಕಾಡಿನ ಜನ ಈ ಕಾಯಿಲೆಗೆ ತುತ್ತಾಗಿದ್ದಾರೆ. ಹಸಿವು, ಅನಾರೋಗ್ಯ, ಅಭದ್ರತೆಯನ್ನೆದುರಿಸುತ್ತ ದುಸ್ತರ ಬದುಕು ಸಾಗಿಸುತ್ತಿರುವ ಆದಿವಾಸಿ ನೆಲೆಗಳಲ್ಲಿ ಅಪಾಯ ಲೆಕ್ಕಿಸದೇ ಭೇಟಿ ನೀಡಿದ ಎಷ್ಟೋ ಜನ ಮಲೇರಿಯಾಗೆ ಜೀವವೊಪ್ಪಿಸಿದ್ದಾರೆ. ಸಮಾಜಶಾಸ್ತ್ರಜ್ಞೆ, ಬುಡಕಟ್ಟುಗಳ ನಡುವೆ ದಶಕಗಟ್ಟಲೆ ಕೆಲಸ ಮಾಡಿದ ಅನುರಾಧಾ ಗಾಂಧಿ 2009ರಲ್ಲಿ ಸೆರೆಬ್ರಲ್ ಮಲೇರಿಯಾದಿಂದ ತೀರಿಕೊಂಡರು. ಭಾರತದ ಈಶಾನ್ಯ ಮತ್ತು ಮಧ್ಯಪೂರ್ವ ರಾಜ್ಯಗಳು ಅತಿ ಹೆಚ್ಚು ಮಲೇರಿಯಾ ಸಂಭವಿಸುವ ತಾಣಗಳು. ಬುಡಕಟ್ಟು ಜನರ ಜೊತೆಗೇ ಅಲ್ಲಿ ನೇಮಿಸಲ್ಪಟ್ಟ ಪಡೆಗಳು, ನೌಕರರು, ಮಾವೋವಾದಿಗಳು, ವರದಿಗಾರರು, ಪ್ರವಾಸಿಗಳನ್ನೂ ಮಲೇರಿಯಾ ಬಾಧಿಸಿದೆ. ಇಲ್ಲಿಯವರೆಗೆ ಕೋಟ್ಯಂತರ ಜನ ಮಲೇರಿಯಾಗೆ ಪ್ರಾಣ ತೆತ್ತಿದ್ದಾರೆ.

ಮಲೇರಿಯಾಗೆ ಯಾರೂ ಅಮುಖ್ಯರಲ್ಲ!

'ಪ್ಲಾಸ್ಮೋಡಿಯಂ' ಎಂಬ ಪರೋಪಜೀವಿ ರೋಗಾಣುವಿನಿಂದ ಉಂಟಾಗುವ ಮಲೇರಿಯಾ ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯದ ಕಾಯಿಲೆ. ಹೆಚ್ಚು ಮಳೆ, ಬೆಚ್ಚನೆಯ ತೇವಾಂಶಭರಿತ ವಾತಾವರಣ ಹಾಗೂ ಸೊಳ್ಳೆಯ ಸಂತಾನೋತ್ಪತ್ತಿಗೆ ಪೂರಕವಾಗುವಂತೆ ನಿಂತ ನೀರಿನ ಮೂಲಗಳಿರುವ ಪ್ರದೇಶದಲ್ಲಿ ಮಲೇರಿಯಾ ಉಪಟಳ ಹೆಚ್ಚು. ಮಲೇರಿಯಾ ಒಬ್ಬರಿಂದೊಬ್ಬರಿಗೆ ಸೊಳ್ಳೆಗಳಿಂದ ಹರಡುವ ಕಾಯಿಲೆ. ಮನುಷ್ಯರಲ್ಲಿ ಮಲೇರಿಯಾ ಉಂಟುಮಾಡುವ ಪ್ಲಾಸ್ಮೋಡಿಯಂ ರೋಗಾಣುಗಳಲ್ಲಿ ನಾಲ್ಕು ಗುಂಪುಗಳಿದ್ದು ಇವುಗಳಲ್ಲಿ ಫಾಲ್ಸಿಪಾರಂ ಭಯಾನಕವಾದ, 80% ಮಲೇರಿಯಾ ಸಾವಿಗೆ ಕಾರಣವಾದ ತಳಿ. ಚಳಿ, ನಡುಕ ಮಲೇರಿಯಾದ ಮುಖ್ಯ ಲಕ್ಷಣಗಳು. ಎರಡು, ಮೂರು, ನಾಲ್ಕು ದಿನಕ್ಕೊಮ್ಮೆ ನಿಯಮಿತವಾಗಿ ಶುರುವಾಗುವ; ಆರೇಳು ಕಂಬಳಿ ಹೊದಿಸಿದರೂ ಗಡಗಡ ನಡುಗುವ ವ್ಯಕ್ತಿಗೆ ನಂತರ ಸಿಕ್ಕಾಪಟ್ಟೆ ತಾಪ ಏರಿ ಬೆವರಿಳಿದು ಜ್ವರ ಬಿಡುತ್ತದೆ. ಮೈಕೈ ನೋವು, ಜಾಂಡೀಸ್, ವಾಂತಿ, ರಕ್ತಹೀನತೆ ಇದರ ಲಕ್ಷಣಗಳು. ಮಲೇರಿಯಾ ಗುಣವಾದರೂ ಮತ್ತೆಮತ್ತೆ ಶುರುವಾಗಬಹುದು. ಫಾಲ್ಸಿಪಾರಂ



ಆದಿವಾಸಿ ಮಕ್ಕಳೊಂದಿಗೆ ಸೆಹ್ರಾವತ್

ಲಕ್ಷಾಂತರ ಬುಡಕಟ್ಟುಗಳ ಪಾಲಿಗೆ ಲಭ್ಯವಿರುವುದು ಎರಡೇ ಆಯ್ಕೆ – ಭಾರತ ಸರ್ಕಾರ ಅಥವಾ ಮಾವೋ ಆಡಳಿತ. ದೀರ್ಘಾವಧಿ ಮತ್ತು ದೂರಗಾಮಿ ಯೋಜನೆ ರೂಪಿಸಲಾಗದ, ಅಹಿಂಸೆಯನ್ನು ಮೌಲ್ಯವೆಂದು ಪರಿಗಣಿಸದ, ಏಟಿಗೆ ಎದಿರೇಟು ಎಂಬ ತತ್‌ಕ್ಷಣದ ನ್ಯಾಯದಲ್ಲಿ ನಂಬಿಕೆಯಿಡುವ, ರಣನೀತಿ ತಂತ್ರಗಳ ಬಗೆಗೆಲ್ಲ ತಲೆ ಕೆಡಿಸಿಕೊಳ್ಳದ ಬುಡಕಟ್ಟು ಜನರನ್ನು ರೊಚ್ಚಿಗೆಬ್ಬಿಸುವುದು ಸುಲಭ. ಇದೇ ಅವರನ್ನು ಜನ್ ಮಿಲಿಷಿಯಾ ಕೈಗೆ, ಸಲ್ವಾ ಜುಡುಂ ಕೈಗೆ ಒಪ್ಪಿಸಿರುವುದು. ಕುಡಿಯುವ ನೀರಿಗೆ, ರೇಷನ್ ಅಕ್ಕಿಗೆ ಮೈಲಿಗಟ್ಟಲೆ ಗುಡ್ಡದ ಕಾಡುಹಾದಿ ಕ್ರಮಿಸುವ ಬುಡಕಟ್ಟುಗಳ ಅಸಹಾಯಕತೆ ಮತ್ತು ಆಕ್ರೋಶ ಆಳುವವರ ಸಮರ ಉದ್ದೇಶಕ್ಕೆ ದಾಳವಾಗಿಯೂ, ಗುರಾಣಿಯಾಗಿಯೂ ಬಳಕೆಯಾಗುತ್ತಿದೆ.

ಮಲೇರಿಯಾ ತೀವ್ರ ಸ್ವರೂಪ ಪಡೆದು ಅಕ್ಷಿಪಟಲದ ತೊಂದರೆ, ಮಿದುಳಿನ ರಕ್ತಸ್ರಾವ, ದೇಹದ ಅಂಗಾಂಗಗಳ ಒಳಗೆ ರಕ್ತಸ್ರಾವ, ಕೋಮಾ ಸಂಭವಿಸಿ ಸಾವನ್ನಪ್ಪಲೂಬಹುದು. ರೋಗ ತಡೆಗಟ್ಟುವಿಕೆಗೆ ಲಸಿಕೆ ತಯಾರಿ ಪ್ರಯತ್ನಗಳು ನಡೆಯುತ್ತಿದ್ದರೂ ಉತ್ತಮ ಲಸಿಕೆ ಲಭ್ಯವಾಗಿಲ್ಲ.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ 2010ರಲ್ಲಿ ವಿಶ್ವಾದ್ಯಂತ ಮಲೇರಿಯಾ 21.6 ಕೋಟಿ ಜನರನ್ನು ಬಾಧಿಸಿದ್ದು 6.55 ಲಕ್ಷ ಜನ ಮರಣ ಹೊಂದಿದ್ದಾರೆ. 85% ಸಾವು ಆಫ್ರಿಕಾದಲ್ಲೇ ಸಂಭವಿಸಿದೆ. ಅವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು 5 ವರ್ಷದೊಳಗಿನ ಮಕ್ಕಳು. ರಕ್ತಹೀನತೆ (ಅನೀಮಿಯಾ) ಇರುವ ಗರ್ಭಿಣಿ ಮಹಿಳೆಯರಲ್ಲಿ ಸಾವು ಸಂಭವಿಸುವ ಸಾಧ್ಯತೆ ಹೆಚ್ಚು.

ತನಿಖಾ ಪತ್ರಿಕೋದ್ಯಮದಲ್ಲಿ ಇವು ಸೇರುವುದಿಲ್ಲವೆ?

ಕಾಯಿಲೆಯೆಂದರೆ ವ್ಯಕ್ತಿಯೊಬ್ಬನ ನರಳಾಟವಲ್ಲ, ಅಥವಾ ಅವನ ಕುಟುಂಬದ ಅಸಹಾಯಕತೆಯಲ್ಲ. ಅವು ಸಮಾಜ ವ್ಯವಸ್ಥೆಯ ಪ್ರತಿಬಿಂಬಗಳು. ಗುಂಡಿಯಿಲ್ಲದ ರಸ್ತೆ, ಜನರ ಖರ್ಚು ಮಾಡುವ ಶಕ್ತಿ, ಜನ ಬಳಸುವ ಕಬ್ಬಿಣ–ಪೆಟ್ರೋಲುಗಳು ಅಭಿವೃದ್ಧಿ ಸೂಚ್ಯಂಕಗಳಾದರೆ, ಕಾಯಿಲೆ ಮತ್ತು ಸಾವುನೋವುಗಳು ಸಮಾಜವೊಂದರ ಅಸ್ವಸ್ಥತೆಯ, ಅನಭಿವೃದ್ಧಿಯ, ಅಸಮಾನತೆ–ತಾರತಮ್ಯದ ಸಂಕೇತಗಳು. ಬಡತನ ಹೆಚ್ಚಿರುವಲ್ಲಿಯೇ ರೋಗರುಜಿನಗಳು ಹೆಚ್ಚಿರುವುದು ಕೇವಲ ಕಾಕತಾಳೀಯವಲ್ಲ.

ತಡೆಗಟ್ಟಬಹುದಾದ ಸಾಂಕ್ರಾಮಿಕ ರೋಗಗಳ ಕುರಿತು, ಅದರ ಕಾರಣ–ನಿಯಂತ್ರಣದ ಕುರಿತು ಪ್ರಚಾರ, ಕಾಳಜಿ ಅಗತ್ಯ. ಅದು ಕೇವಲ ಆರೋಗ್ಯ ಇಲಾಖೆಯ ಕೆಲಸವಲ್ಲ. ಅದರಲ್ಲೂ ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳು ಸಾರ್ವಜನಿಕ ಆರೋಗ್ಯದ ಮೇಲೆ ಬೀರುವ ದೀರ್ಘಾವಧಿ ದುಷ್ಪರಿಣಾಮಗಳು ದೇಶದ ಆರ್ಥಿಕತೆಗೇ ಪೆಟ್ಟು ನೀಡಬಲ್ಲವು. ಒಂದೊಂದು ಕೊಲೆ, ಸಂಶಯಾಸ್ಪದ ಸಾವಿನ ಬಗ್ಗೆ ಎಪಿಸೋಡುಗಟ್ಟಲೆ, ಪುಟಗಟ್ಟಲೆ ಪ್ರಚಾರ ಕೊಡುವ ಮಾಧ್ಯಮಗಳಿಗೆ 2010ರಲ್ಲಿ ಛತ್ತೀಸ್‌ಘರ್ ರಾಜ್ಯದ ತಾಲೂಕೊಂದರಲ್ಲೇ 180 ಜೀವಗಳು (ಅವರಲ್ಲಿ 80% ಆದಿವಾಸಿಗಳು – ಅದರಲ್ಲೂ ಅಪೌಷ್ಟಿಕತೆಯ ಮಕ್ಕಳು ಹಾಗೂ ರಕ್ತಹೀನತೆಯಿಂದ ನರಳುವ ಗರ್ಭಿಣಿ ಮಹಿಳೆಯರು) ಮಲೇರಿಯಾ ಎಪಿಡೆಮಿಕ್‌ಗೆ ಪಟಪಟನೆ ಜೀವ ಒಪ್ಪಿಸಿದರೆ ಅದು ಅಂಥ ಸುದ್ದಿಯಾಗುವುದಿಲ್ಲ. ಇಂಥ ಇನ್ನೆಷ್ಟೋ ಘಟನೆಗಳು ಸಂಭವಿಸಿರಬಹುದು. ಮಲೇರಿಯಾ ನಿರ್ಮೂಲನೆಗಾಗಿ ಲಾಗಾಯ್ತಿನಿಂದ ಭಾರತದಲ್ಲಿ ಕಾರ್ಯಕ್ರಮಗಳು ಚಾಲ್ತಿಯಲ್ಲಿದ್ದರೂ ಇನ್ನೂ ಅದು ಕೊಲೆಗಡುಕನಾಗೇ ಉಳಿದಿರುವುದೊಂದು ವಿಪರ್ಯಾಸ. ಬಹು ಉದ್ದೇಶವುಳ್ಳ, ಹೇರಳ ನಿಧಿಯುಳ್ಳ 'ಇಂಟೆಗ್ರೇಟೆಡ್ ಡಿಸೀಸ್ ಸರ್ವಿಯಲೆನ್ಸ್ ಪ್ರೋಗ್ರಾಂ' ಚಾಲ್ತಿಯಲ್ಲಿರುವಾಗಲೇ ಆ ಪ್ರದೇಶದಲ್ಲಿ ಈ ಮರಣಗಳು ಸಂಭವಿಸುತ್ತಿವೆ. ಹೀಗಿರುವಾಗ ಕಾಯಿಲೆ ಕುರಿತು ವೈಜ್ಞಾನಿಕ ಮಾಹಿತಿ, ವಿಫಲತೆಯ ಕಾರಣಗಳ ತನಿಖಾ ವರದಿ ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿಯಲ್ಲವೆ?

ತೀವ್ರ ಸ್ವರೂಪದ ಕಾಯಿಲೆ ಉಂಟಾದಾಗ ಅತ್ಯಾಧುನಿಕ ಸೌಲಭ್ಯಗಳ ಚಿಕಿತ್ಸೆ ಬೇಕಾಗುತ್ತದೆ. ನಗರಗಳ ಅತ್ಯಾಧುನಿಕ ಆಸ್ಪತ್ರೆಗಳು ಕೈಗೆಟುಕದೇ, ಸೂಕ್ತಸಮಯದಲ್ಲಿ ಉನ್ನತ ಚಿಕಿತ್ಸೆ ಸಿಗದೇ ಗ್ರಾಮೀಣ ಪ್ರದೇಶದ ಬಹಳಷ್ಟು ರೋಗಿಗಳು ಸಾವನ್ನಪ್ಪುತ್ತಾರೆ. ನಗರ ಪ್ರದೇಶಗಳ ವೈದ್ಯರ ಸಾಂದ್ರತೆ ಹಳ್ಳಿಗಳಿಗಿಂತ ನಾಲ್ಕು ಪಟ್ಟು ಹೆಚ್ಚಿದೆ. ಹಳ್ಳಿಗಳಲ್ಲಿ ನಕಲಿ ವೈದ್ಯರ ಹಾವಳಿಯೂ ಹೆಚ್ಚಿದೆ. ಆದ್ದರಿಂದ ಸರ್ಕಾರ ಆರೋಗ್ಯ ಸೌಲಭ್ಯಗಳಿಲ್ಲದ ಹಿಂದುಳಿದ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಶುರುಮಾಡಬೇಕು. ಮೆಡಿಕಲ್ ಕಾಲೇಜುಗಳು ಮೇಲ್ದರ್ಜೆಯ ಆಸ್ಪತ್ರೆ ಹಾಗೂ ತಜ್ಞವೈದ್ಯರನ್ನೊಳಗೊಂಡಿದ್ದು ಅಲ್ಲಿಯ ಆರೋಗ್ಯ ಸೌಲಭ್ಯ ಸಾಮಾನ್ಯನಿಗೂ ಎಟುಕುವಂತಿರುತ್ತವೆ. ದೇಶದ 640 ಜಿಲ್ಲೆಗಳಲ್ಲಿ 193 ಜಿಲ್ಲೆಗಳಷ್ಟೇ ಮೆಡಿಕಲ್ ಕಾಲೇಜು ಹೊಂದಿವೆ. ಖಾಸಗಿ ಕುಳಗಳು ದೊಡ್ಡದೊಡ್ಡ ನಗರಗಳಲ್ಲೇ, ಐದಾರು ಮೆಡಿಕಲ್ ಕಾಲೇಜು ಇರುವ ಊರಿನಲ್ಲೇ ಮತ್ತೆಮತ್ತೆ ಕಾಲೇಜು ಶುರುಮಾಡಲು ಅನುಮತಿ ಕೇಳುತ್ತವೆ. ಆರೋಗ್ಯ ಕ್ಷೇತ್ರ ವ್ಯಾಪಾರೀಕರಣಗೊಂಡಿರುವುದರಲ್ಲಿ ಗ್ರಾಮೀಣ ಆರೋಗ್ಯ ತಮ್ಮ ಜವಾಬ್ದಾರಿಯಲ್ಲ ಎಂದು ಭಾವಿಸಿದ ಖಾಸಗಿ ಕಾಲೇಜುಗಳ ಪಾತ್ರ ದೊಡ್ಡದಿದೆ. 30 ವರ್ಷಗಳ ನಂತರ ಕರ್ನಾಟಕದಲ್ಲೇನೋ 6 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಸ್ಥಾಪನೆಯಾದರೂ ಅವು ಮೂಲಸೌಕರ್ಯ ಕೊರತೆಯಿಂದ ನರಳುತ್ತಿವೆ.

ವಿಶ್ವ ಆರೋಗ್ಯ ಸಂಸ್ಥೆ 2000ನೇ ಇಸವಿಗೆ 'ಹೆಲ್ತ್ ಫಾರ್ ಆಲ್' ಗುರಿ ಹೊಂದಿತ್ತು. ಅದಾಗಿ 12 ವರ್ಷ ಸಂದಿವೆ. ಎಲ್ಲರಿಗೂ ಆರೋಗ್ಯ ಒತ್ತಟ್ಟಿಗಿರಲಿ, ಆರೋಗ್ಯ ಸೇವೆಯೂ ಲಭ್ಯವಾಗಿಲ್ಲ. ಭಾರತದ ಐದು ವರ್ಷ ಕೆಳಗಿನ ಅರ್ಧಕ್ಕರ್ಧ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿವೆ. ಅವು ಮಲೇರಿಯಾ ಅಷ್ಟೇ ಅಲ್ಲ, ಮತ್ಯಾವುದೇ ಸಾಂಕ್ರಾಮಿಕ ಕಾಯಿಲೆ ಬಂದರೂ ಸುಲಭದಲ್ಲಿ ತುತ್ತಾಗಬಹುದಾದ ಜೀವಗಳು. ರಾಷ್ಟ್ರದ ಉಗ್ರಾಣಗಳಲ್ಲಿ ಕೋಟ್ಯಂತರ ಟನ್ನುಗಳಷ್ಟು ಆಹಾರ ಬೂಸಲು ಹಿಡಿದು, ಇಲಿ ಹೆಗ್ಗಣಗಳ ಪಾಲಾಗಿ ಕೊಳೆತು ಹೋಗುವಾಗ ಮೂಲೆಮೂಲೆಗಳಲ್ಲಿ ಜನ ಹಸಿವಿನಿಂದ, ಅದು ಕೈ ಹಿಡಿದು ಎಳೆತರುವ ಕಾಯಿಲೆಗಳಿಂದ ಸಾವುನೋವು ಅನುಭವಿಸುತ್ತಿದ್ದಾರೆ. ಎಲ್ಲ ಪ್ರದೇಶಗಳಲ್ಲಿಯೂ ಸಮನಾದ ಆರೋಗ್ಯ ಸೇವೆ ಒದಗಿಸಿದರೆ ಮಲೇರಿಯಾ ನಿವಾರಣೆಯಾಗುವುದೆಂದು ನಮ್ಮ ಬಳಿಯೇ ಇರುವ ಪುಟ್ಟ ದ್ವೀಪ ಮಾರಿಷಿಯಸ್ ಮಾಡಿ ತೋರಿಸಿದೆ.

ಅದು ನಮ್ಮ ಮಾಡೆಲ್ ಆಗಬಾರದೇಕೆ? ■

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಹೊಸ ಭವಿಷ್ಯಕ್ಕೆ ಕಾಲಿಡುತ್ತಾ

'ನಷ್ಟಕ್ಕೆ ತರೆದುಕೊಳ್ಳದಿದ್ದರೆ ಲಾಭವೂ ಇರುವುದಿಲ್ಲ' ಎಂಬುದು ಉದ್ಯಮ ಪ್ರಪಂಚದ ಒಂದು ಹೇಳಿಕೆ.

ಎಲ್ಲಾ ಉದ್ಯಮಗಳೂ ಒಂದಲ್ಲಾ ಒಂದು ಸಮಯದಲ್ಲಿ ಸರ್ಕಾರ, ಸಾರ್ವಜನಿಕರು ಅಥವಾ ಮಾರುಕಟ್ಟೆಗಳಿಂದ ಹಣಕಾಸನ್ನು ಪಡೆಯಬೇಕಾಗುತ್ತದೆ. ಈ ರೀತಿಯ ಹಣಕಾಸಿನ ಮೂಲಗಳೆಂದರೆ ಬ್ಯಾಂಕುಗಳು, ಖಾಸಗಿ ಸಾಲ ನೀಡುವವರು, ವೆಂಚರ್ ಫಂಡ್‌ಗಳು ಮತ್ತು ಸರ್ಕಾರ. ಬ್ಯಾಂಕುಗಳು–ಸರ್ಕಾರಿಯಾಗಲಿ ಅಥವಾ ಖಾಸಗಿಯಾಗಲಿ ಹೆಚ್ಚು ವೇಳೆ ಹಣಕಾಸಿನ ಮುಖ್ಯ ಮೂಲಗಳು. ಷೇರುಗಳನ್ನು ಮಾರಿ ಹೂಡಿಕೆದಾರರಿಂದ ಹಣ ಸಂಗ್ರಹಿಸುವುದು ನಂತರ ಬರುತ್ತದೆ. ವೆಂಚರ್ ಫಂಡ್‌ಗಳಿಂದ ಹಣ ಪಡೆಯುವುದು ವಿಶೇಷವಾದುದು.

ಬ್ಯಾಂಕ್‌ಗಳಿಂದ ಸಾಲ ಪಡೆಯುವುದು ಮತ್ತು ವೆಂಚರ್ ಫಂಡ್‌ಗಳಿಂದ ಹಣ ಪಡೆಯುವುದು ಇವುಗಳಲ್ಲಿನ ವ್ಯತ್ಯಾಸ ನನಗೊಂದು ದೊಡ್ಡ ಪಾಠ. ಬ್ಯಾಂಕುಗಳು ಯೋಜನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಸಾಲ ನೀಡುತ್ತವೆ, ಕಂಪನಿಯ ಇತಿಹಾಸ, ಅದರ ಆಯವ್ಯಯ ದಾಖಲೆ ಮತ್ತು ಗ್ಯಾರಂಟಿಗಾಗಿ ನೀಡಬಹುದಾದ ಇತರ ಆಸ್ತಿ ಇವುಗಳ ಆಧಾರದ ಮೇಲೆ ಬ್ಯಾಂಕುಗಳು ಸಾಲ ನೀಡುತ್ತವೆ. ತಾವು ನೀಡಿದ ಸಾಲವನ್ನು ಉಪಯೋಗಿಸಿ ಕಂಪೆನಿ ಲಾಭ ಪಡೆಯಿತೆ ಇಲ್ಲವೆ ಎಂಬುದರ ಬಗ್ಗೆ ಬ್ಯಾಂಕ್‌ಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಸಾಲ ಪಡೆದ ದಿನದಿಂದ 90 ದಿನಗಳೊಳಗೆ ಸಾಲ ಪಡೆದ ಕಂಪನಿ ಬಡ್ಡಿ ಕಟ್ಟಲು ಪ್ರಾರಂಭಿಸಬೇಕಾಗುತ್ತದೆ. ಹಾಗೆ ಮಾಡುವಲ್ಲಿ ಕಂಪನಿ ಸೋತರೆ ಬ್ಯಾಂಕು ಅದನ್ನು ಹಿಂಸಿಸತೊಡಗುತ್ತದೆ. 'ಗ್ಯಾರಂಟಿ' ನೀಡಿದ ಆಸ್ತಿಯನ್ನೇ ಅದು ವಶಕ್ಕೆ ತೆಗೆದುಕೊಳ್ಳಬಹುದು.

ವೆಂಚರ್ ಕ್ಯಾಪಿಟಲ್ ಫಂಡ್ ಈ ರೀತಿಯದಲ್ಲ. ಅದೊಂದು ಅಪಾಯಕರ ಹಣ ಹೂಡುವಿಕೆ. ಅದರಲ್ಲಿ ಹೆಚ್ಚು ಹಣಗಳಿಸುವ ಸಾಧ್ಯತೆಯೂ ಇದೆ. ವೆಂಚರ್ ಫಂಡ್ ಕಂಪನಿಗಳು ಎರಡು ಕಾರಣಗಳಿಗಾಗಿ ಬಂಡವಾಳ ಹೂಡುತ್ತವೆ. ಮೊದಲನೆಯದು ಅದು ಹಣ ಹೂಡುವ ಕಂಪನಿಗಳು ಹೆಚ್ಚು ಲಾಭಗಳಿಸುವ ಎಲ್ಲಾ ಸಾಧ್ಯತೆಗಳನ್ನೂ ಹೊಂದಿರುತ್ತವೆ. ಎರಡನೆಯದು ಆ ಕಂಪನಿ ನಡೆಸುವವರು ನಂಬಿಕೆಗೆ ಅರ್ಹರಾಗಿರುತ್ತಾರೆ.

ಈ ರೀತಿ ವೆಂಚರ್ ಬಂಡವಾಳ ಹೂಡುವ ಕಂಪನಿಗಳು ತಾವು ಹೂಡಿದ ಬಂಡವಾಳದ ಸಮನಾಗಿ ಷೇರುಗಳನ್ನು ನೀಡುವಂತೆ ಒತ್ತಾಯಿಸುತ್ತವೆ. ಈ ವೆಂಚರ್ ಫಂಡ್‌ಗಳ ಹಣ ಹೂಡುವಿಕೆ ಬಡ್ಡಿಗಾಗಿಯಂತೂ ಅಲ್ಲ. ವೆಂಚರ್ ಫಂಡ್ ಕಂಪೆನಿಗಳು ಹಣ ಹೂಡಿದ ಕಂಪೆನಿಯ ಪಾಲುದಾರರಾಗುತ್ತಾರೆ. ಮತ್ತು ಅದರ ಯಶಸ್ಸಿನಲ್ಲಿ ಆಸಕ್ತಿಯುಳ್ಳವರಾಗುತ್ತಾರೆ. ತಾವು ಹಣ ಹೂಡಿದ ಕಂಪೆನಿಯು ಯಶಸ್ಸು ಗಳಿಸಲು ಬೇಕಾದ ಎಲ್ಲಾ ಪ್ರಯತ್ನವನ್ನೂ ಅವರು ಮಾಡುತ್ತಾರೆ. ವೆಂಚರ್ ಫಂಡ್ ಕಂಪನಿಗಳು ನಷ್ಟದಲ್ಲಿಯೂ ಭಾಗಿಗಳಾಗುತ್ತಾರೆ. ಬ್ಯಾಂಕ್‌ಗಳು ಹಾಗೆ ಮಾಡುವುದಿಲ್ಲ. ಬ್ಯಾಂಕ್‌ಗಳು ನಷ್ಟಹೊಂದುವ ಕಂಪನಿಗಳನ್ನು ತಮ್ಮ ಕಪ್ಪುಪಟ್ಟಿಗೆ ಸೇರಿಸಿಬಿಡುತ್ತವೆ.

ಹೆಚ್ಚು ವೇಳೆ ವೆಂಚರ್ ಫಂಡ್ ಕಂಪನಿಗಳು ಉತ್ತಮ ಯೋಜನೆಗಳನ್ನು ಹೊಂದಿರುವ ಪ್ರಾರಂಭದ ಉದ್ದಿಮೆಗಳನ್ನು ಮತ್ತು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳನ್ನು ಬೆಂಬಲಿಸುತ್ತವೆ. ಸಾಮಾನ್ಯವಾಗಿ ಬ್ಯಾಂಕುಗಳು ತಾಂತ್ರಿಕ ಕಾರಣಗಳಿಗಾಗಿ ಇಂತಹವುಗಳಲ್ಲಿ ಹಣ ಹೂಡಲು ಅಥವಾ ಸಾಲ ನೀಡಲು ನಿರಾಕರಿಸುತ್ತವೆ. ಒಮ್ಮೊಮ್ಮೆ ಬ್ಯಾಂಕ್ ಮ್ಯಾನೇಜರ್‌ಗಳು ಉತ್ತಮ ಯೋಜನೆಗಳುಳ್ಳ ಆದರೆ ಬ್ಯಾಂಕಿನ ನೀತಿ ನಿಯಮಗಳಿಗೆ ಹೊಂದದ ಉದ್ಯಮಗಳಿಗೆ ಸಾಲ ನಿರಾಕರಿಸಿದ್ದಕ್ಕಾಗಿ ನೊಂದುಕೊಳ್ಳುತ್ತಾರೆ.

ದಲಿತರ ಉದ್ದಿಮೆಗಳು ವೆಂಚರ್ ಬಂಡವಾಳದ ಮೂಲಕ ಹಣ ಪಡೆಯಲು ಬಹಳ ಅರ್ಹವಾಗಿರುತ್ತವೆ. ನಿಜವಾಗಿಯೂ ಬೃಹದಾಕಾರದ ಕೆಲವೇ ಕೆಲವು ದಲಿತ ಉದ್ದಿಮೆಗಳನ್ನು ಬಿಟ್ಟರೆ ಹೆಚ್ಚು ದಲಿತ ಉದ್ದಿಮೆಗಳು ಸಣ್ಣ ಮತ್ತು ಮಧ್ಯಮ ಗ್ರಾತ್ರದವಾಗಿರುತ್ತವೆ. ಹೆಚ್ಚು ದಲಿತ ಉದ್ದಿಮೆದಾರರು ನಂಬಲರ್ಹರಾಗಿದ್ದು ಅವರ ಯೋಜನೆಗಳು ಬೆಳವಣಿಗೆಯ ಎಲ್ಲ ಲಕ್ಷಣಗಳನ್ನೂ ಹೊಂದಿರುತ್ತವೆ. 1990ರ ಜಾಗತೀಕರಣ ಹುಟ್ಟುಹಾಕಿದ ಉದ್ದಿಮೆಗಳು ಬ್ಯಾಂಕುಗಳನ್ನೊಳಗೊಂಡಂತೆ ಹಣಕಾಸು ಸಂಸ್ಥೆಗಳ ಜೊತೆ ಹೆಚ್ಚು ಸಂಪರ್ಕ ಹೊಂದಿರುವುದಿಲ್ಲ. ಆದರೆ ಅವುಗಳಿಗೆ ಹಣಕಾಸಿನ ಸೌಲಭ್ಯ ಬೇಕಾಗಿರುತ್ತದೆ. ಇವು ಪ್ರಾರಂಭದ ಉದ್ದಿಮೆಗಳಾಗಿದ್ದು ದಲಿತ ಉದ್ದಿಮೆದಾರರು ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅವಶ್ಯವಾದ ಇತರೆ ಆಸ್ತಿಗಳ ಗ್ಯಾರಂಟಿ ನೀಡಲು ಶಕ್ತರಾಗಿರುವುದಿಲ್ಲ.

ಆದರೆ 250 ದಶಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ವಹಿವಾಟು ಹೊಂದಿರುವ ದಲಿತ ಉದ್ದಿಮೆಗಳು ಏತಕ್ಕಾಗಿ ಸಾಲ ಪಡೆಯಲು ಬಯಸುತ್ತವೆ?

ಈಗ ಭಾರತದ ಹೆಚ್ಚು ಉದ್ದಿಮೆಗಳು ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಿವೆ. ಕಾರ್ಮಿಕರ ಸಮಸ್ಯೆಗಳು ನಿಜವಾಗಿ ಹಾಸ್ಯಾಸ್ಪದವಾಗಿರುತ್ತವೆ. ಮೊದಲಿಗೆ ಹಳ್ಳಿಗಾಡಿನಿಂದ ಕೈಗಾರಿಕಾ ಪಟ್ಟಣಗಳಿಗೆ ವಲಸೆ ಬರುವ ಕಾರ್ಮಿಕರು ತಮ್ಮ ಹಳ್ಳಿಗಳ ಜೊತೆ ಸಂಪರ್ಕವನ್ನು ಮುಂದುವರೆಸುತ್ತಿದ್ದು ಅನೇಕ ವೇಳೆ ಅದರಲ್ಲೂ ಬೇಸಿಗೆ ಕಾಲದಲ್ಲಿ ಒಂದೆರಡು ತಿಂಗಳು ಮಾಯವಾಗಿಬಿಡುತ್ತಾರೆ. ಇದು ಮಾಲಿಕರ ಮೇಲೆ ಹೆಚ್ಚು ಒತ್ತಡ ತರಬಲ್ಲದು. ಎರಡನೆಯದಾಗಿ ಯಾವುದೇ ಕಂಪನಿ 50ಕ್ಕಿಂತ ಹೆಚ್ಚು ಕೆಲಸಗಾರರನ್ನು ಹೊಂದಿದ್ದಲ್ಲಿ ಅದು ಅನೇಕ ಕಾರ್ಮಿಕ ಕಾನೂನುಗಳನ್ನು ಅನುಸರಿಸಬೇಕು. ಈ ಕಾನೂನುಗಳು ಮಾಲಿಕ ವಿರೋಧಿ ಎಂದು ಉದ್ದಿಮೆದಾರರು ತಿಳಿದುಕೊಂಡಿದ್ದಾರೆ.

ದಲಿತರ ಜಂಟಿ ಉದ್ದಿಮೆಗಳು

ಮೂರನೆಯದಾಗಿ ಕಾರ್ಮಿಕರು ಸಂಘ ಕಟ್ಟಿಕೊಂಡರೆ ಅದರ ತಾಪ ಮಾಲಿಕರಿಗೆ ತಟ್ಟುತ್ತದೆ. ಗುಣಮಟ್ಟ ಮತ್ತು ಬೆಲೆಯ ಪ್ರಶ್ನೆಗಳೂ ಅದರಿಂದೆಯೇ ಏಳುತ್ತವೆ.

ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಹೆಚ್ಚು ಕಾರ್ಮಿಕರನ್ನು ಬಯಸುವ ಯಂತ್ರಗಳನ್ನು ಬದಲಾಯಿಸಿ ಹೆಚ್ಚು ಬಂಡವಾಳ ಬಯಸುವ ಯಂತ್ರಗಳನ್ನು ಅವುಗಳ ಸ್ಥಾನದಲ್ಲಿ ಸ್ಥಾಪಿಸಬಯಸುತ್ತವೆ. ಇದರ ಉದ್ದೇಶ ಕಾರ್ಮಿಕರ ಸಮಸ್ಯೆ, ಗುಣಮಟ್ಟದ ಸಮಸ್ಯೆ ಮತ್ತು ಬೆಲೆಯ ಸಮಸ್ಯೆಗಳನ್ನು ಹತೋಟಿಗೆ ತರುವುದಾಗಿರುತ್ತದೆ. ಆದುದರಿಂದ ಅವರು ಬಂಡವಾಳ ಹೂಡಿಕೆಯ ಸಾಂಪ್ರದಾಯಿಕ ಮೂಲವಾದ ಬ್ಯಾಂಕುಗಳಿಂದ ಒದಗಲಾಗದ ಹಣಕಾಸಿಗಾಗಿ ಬೇರೆ ಕಡೆ ನೋಡುತ್ತಾರೆ. ದಲಿತ ಉದ್ಯಮಿಗಳೂ ಸಹ ಇಂತಹವುದೇ ಸಮಸ್ಯೆಗಳನ್ನು ಎದುರಿಸುತ್ತಾರೆ. ಅವರೂ ಸಹ ಸ್ವಯಂಚಾಲಿತ ಯಂತ್ರಗಳನ್ನು ಕೊಳ್ಳಬಯಸುತ್ತಾರೆ ಮತ್ತು ಅದಕ್ಕಾಗಿ ಅವರಿಗೆ ಹಣ ಬೇಕಾಗಿರುತ್ತದೆ ಆದರೆ ಅಂತಹ ಹಣ ನೀಡುವವರು ಯಾರು?

ಡಿ.ಐ.ಸಿ.ಸಿ.ಐಯಲ್ಲಿ ಇದಕ್ಕೆ ಉತ್ತರವಿದೆ. ದಲಿತ ಉದ್ಯಮಿಗಳಿಗಾಗಿಯೇ ಮೀಸಲಾದ ಒಂದು ವೆಂಚರ್ ಫಂಡನ್ನು ಡಿ.ಐ.ಸಿ.ಸಿ.ಐ ಸ್ಥಾಪಿಸುತ್ತಿದೆ. ಈ ವೆಂಚರ್ ಫಂಡ್ ಕೆಳಗಿನಂತೆ ಕೆಲಸ ಮಾಡುತ್ತದೆ.

1. ಡಿ.ಐ.ಸಿ.ಸಿ.ಐನ ವೆಂಚರ್ ಕ್ಯಾಪಿಟಲ್ ಫಂಡ್ (ಡಿ.ವಿ.ಸಿ.ಎಫ್) ದೊಡ್ಡ ಉದ್ದಿಮೆದಾರರಾದ ಡಿ.ಐ.ಸಿ.ಸಿ.ಐನ ಸದಸ್ಯರಿಂದ, ಇತರೆ ಹೂಡಿಕೆದಾರರಿಂದ ಮತ್ತು ಸಾಧ್ಯವಾದಲ್ಲಿ ಸರ್ಕಾರದಿಂದ ಹಣ ತೊಡಗಿಸಿಕೊಳ್ಳುತ್ತದೆ.
2. ಡಿ.ವಿ.ಸಿ.ಎಫ್ ದಲಿತ ಮಾಲಿಕರನ್ನುಳ್ಳ ಉದ್ದಿಮೆಗಳಲ್ಲಿ ಪಾಲುದಾರರಾಗಿ ಹಣ ತೊಡಗಿಸುತ್ತದೆ.
3. ಡಿ.ವಿ.ಸಿ.ಎಫ್ ತಾನು ತೊಡಗಿಸಿದ ಹಣಕ್ಕೆ ಯಾವುದೇ ಬಡ್ಡಿ ಕೇಳುವುದಿಲ್ಲ. ಆದರೆ ಅಂತಹ ಕಂಪೆನಿಗಳ ಲಾಭಾಂಶದಲ್ಲಿ ಪಾಲು ಪಡೆಯುತ್ತದೆ.
4. ವೆಂಚರ್ ಕ್ಯಾಪಿಟಲ್ ಫಂಡ್‌ಗಳ ಹಾಗೆ ಡಿ.ವಿ.ಸಿ.ಎಫ್ ಕೂಡ ತನ್ನ ಪಾಲುದಾರಿಕೆಯುಳ್ಳ ದಲಿತ ಕಂಪೆನಿಗಳ ಯಶಸ್ಸಿಗೆ ಶ್ರಮಿಸುತ್ತದೆ.
5. ಈ ರೀತಿ ಗಳಿಸಿದ ಲಾಭದಲ್ಲಿ ಡಿ.ವಿ.ಸಿ.ಎಫ್‌ನಲ್ಲಿ ಹಣ ತೊಡಗಿಸಿರುವ ಎಲ್ಲ ಸದಸ್ಯರೂ ಪಾಲು ಪಡೆಯುತ್ತಾರೆ.

ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಕಾಪಾಡಿಕೊಳ್ಳಲು ತಾನು ಪಾಲುದಾರನಾಗಿರುವ ದಲಿತ ಕಂಪೆನಿಗಳ ಹಣಕಾಸಿನ ಸ್ಥಿತಿ ಮತ್ತು ಅವುಗಳ ಸದೃಢತೆಯ ಮೇಲೆ ಗಮನ ಇಡಲು ಡಿ.ವಿ.ಸಿ.ಎಫ್ ಒಂದು ಫೈನಾನ್ಸ್ ಕಂಪೆನಿಯ ಸೇವೆಯನ್ನು ಪಡೆದಿರುತ್ತದೆ.

ಡಿ.ಐ.ಸಿ.ಸಿ.ಐಗೆ ಈ ಹೊಸ ಪ್ರಯೋಗಕ್ಕೆ ಸೋಲಾಗುವುದು ಇಷ್ಟವಿಲ್ಲ. ಆದ್ದರಿಂದ ಡಿ.ವಿ.ಸಿ.ಎಫ್ ನಷ್ಟದಲ್ಲಿರುವ ದಲಿತ ಕಂಪೆನಿಗಳಲ್ಲಿ ಹಣ ಹೂಡುವುದಿಲ್ಲ.

DICCI

Developing Business Leadership

ದಲಿತರು ನೀಡಬಯಸುತ್ತಾರೆ, ಪಡೆಯಬಯಸುವುದಿಲ್ಲ ಮತ್ತು ದಲಿತ ಕಂಪೆನಿಗಳಲ್ಲಿ ಹಣ ಹೂಡಿದವರು ಹೆಚ್ಚು ಹಣ ಗಳಿಸುತ್ತಾರೆ ಎಂಬ ಅಂಶವನ್ನು ಡಿ.ಐ.ಸಿ.ಸಿ.ಐ ಖಾಸಗಿ ಹೂಡಿಕೆದಾರರಿಗೆ ಮತ್ತು ಸರ್ಕಾರಕ್ಕೆ ತಿಳಿಸಬಯಸುವ ಉದ್ದೇಶವನ್ನೂ ಹೊಂದಿದೆ. ಇದೆಲ್ಲವೂ ಒಂದು ದಶಕದಲ್ಲಿ ನಡೆದಿದೆ. ಈಗ ದಲಿತರು ಹೊಸ ಭವಿಷ್ಯದ ಕಡೆ ಕಾಲಿಟ್ಟಿದ್ದಾರೆ. ತಮಗೆ ಹಸ್ತಲಾಘವ ನೀಡಿದವರ ಜೊತೆ ತಮ್ಮ ಲಾಭಾಂಶವನ್ನು ಹಂಚಿಕೊಳ್ಳುವ ಭವಿಷ್ಯದತ್ತ ಅವರು ನಡೆದಿದ್ದಾರೆ.

ದಲಿತರು ನೀಡಬಯಸುತ್ತಾರೆ, ಪಡೆಯಬಯಸುವುದಿಲ್ಲ ಮತ್ತು ದಲಿತ ಕಂಪೆನಿಗಳಲ್ಲಿ ಹಣ ಹೂಡಿದವರು ಹೆಚ್ಚು ಹಣ ಗಳಿಸುತ್ತಾರೆ ಎಂಬ ಅಂಶವನ್ನು ಡಿ.ಐ.ಸಿ.ಸಿ.ಐ ಖಾಸಗಿ ಹೂಡಿಕೆದಾರರಿಗೆ ಮತ್ತು ಸರ್ಕಾರಕ್ಕೆ ತಿಳಿಸಬಯಸುವ ಉದ್ದೇಶವನ್ನೂ ಹೊಂದಿದೆ.

2002ರ ಜನವರಿಯಲ್ಲಿ ಸರ್ಕಾರಿ ಕೊಳ್ಳುವಿಕೆಯಲ್ಲಿ ಸರಬರಾಜುದಾರರ ವೈವಿಧ್ಯತೆಯನ್ನು ಹುಡುಕಿ ಹೊರಟ ಬೋಪಾಲ್ ಘೋಷಣೆಯಿಂದ 20112ರ ದಲಿತ ಉದ್ದಿಮೆದಾರರು ಕೃಪಾಕಟಾಕ್ಷವನ್ನು ಬೇಡುವವರ ಮಟ್ಟದಿಂದ ಡಿ.ವಿ.ಸಿ.ಎಫ್‌ನಲ್ಲಿ ಪಾಲುದಾರರಾಗುವ ಮಟ್ಟಕ್ಕೆ ಬಂದಿರುವುದು ಎಂತಹ ಅದ್ಭುತ ಪ್ರಯಾಣ!

ಇದೆಲ್ಲವೂ ಒಂದು ದಶಕದಲ್ಲಿ ನಡೆದಿದೆ. ಈಗ ದಲಿತರು ಹೊಸ ಭವಿಷ್ಯದ ಕಡೆ ಕಾಲಿಟ್ಟಿದ್ದಾರೆ. ತಮಗೆ ಹಸ್ತಲಾಘವ ನೀಡಿದವರ ಜೊತೆ ತಮ್ಮ ಲಾಭಾಂಶವನ್ನು ಹಂಚಿಕೊಳ್ಳುವ ಭವಿಷ್ಯದತ್ತ ಅವರು ನಡೆದಿದ್ದಾರೆ.

* * *

ಕೆಲ ಸಮಯದ ಹಿಂದೆ ನನ್ನ ಸ್ನೇಹಿತೆ ಮೀನಾಕ್ಷಿನಾಥ್, "ಭಾರತದ ಸಾಂಪ್ರದಾಯಿಕ ಉದ್ಯಮ ಸಂಸ್ಥೆಗಳು ಇನ್ನು ಮುಂದೆ ಭಾರತದ ನೂರು ದೊಡ್ಡ ಕಂಪನಿಗಳ ಪಟ್ಟಿಯಲ್ಲಿ ಸೇರಲಾರವು" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಸಾಂಪ್ರದಾಯಿಕ ಉದ್ದಿಮೆಗಳು ಎಂದರೆ ಕುಟುಂಬಗಳ ಮಾಲಿಕತ್ವದ ದೊಡ್ಡ ಉದ್ದಿಮೆಗಳು ಎಂಬುದು ಅವರ ಅರ್ಥ. ಅಂದರೆ ಬನಿಯಾಗಳಂತ ಸಾಂಪ್ರದಾಯಿಕ ವ್ಯಾಪಾರಸ್ಥರು ನಡೆಸುವ ಉದ್ದಿಮೆಗಳು.

ಮೀನಾಕ್ಷಿನಾಥ್ ಅವರು ಬನಿಯಾ ಸಮುದಾಯಕ್ಕೇ ಸೇರಿದವರಾಗಿದ್ದು, ಒಂದು ಹೆಸರಾಂತ ಬಿಸಿನೆಸ್ ಸ್ಕೂಲ್‌ನಲ್ಲಿ ಡಿಗ್ರಿ ಪಡೆದವರು. 1990ರ ನಂತರ ವಾಣಿಜ್ಯೋದ್ಯಮದಲ್ಲಿ ಹೊಸ ನಿಯಮಗಳ ಅವತರಣಿಕೆಯ ವಾಸನೆಯನ್ನು ಮುಂಚಿತವಾಗಿಯೇ ಹಿಡಿದವರು. "ಸಾಂಪ್ರದಾಯಿಕ ಉದ್ಯಮ ಮನೆತನಗಳು ತಮ್ಮ ಉದ್ದಿಮೆಗಳನ್ನು ಕುಟುಂಬದ ಹಿಡಿತದ ಒಳಗೆ ಇಟ್ಟುಕೊಳ್ಳುವುದಕ್ಕೋಸ್ಕರ ಅವುಗಳನ್ನು ಸಾರ್ವಜನಿಕ ರಂಗಕ್ಕೆ ತರಲು ಇಚ್ಛೆ ಪಡುವುದಿಲ್ಲ", ಮೀನಾಕ್ಷಿ ವಿವರಿಸಿದರು.

1990ರ ನಂತರ ಹಣಕಾಸು ಎತ್ತಲು ಸಾರ್ವಜನಿಕ ರಂಗಕ್ಕೆ ಬಂದ ಕಂಪನಿಗಳು ದೊಡ್ಡದಾಗಿ ಬೆಳೆದುವು. ಆದರೆ ಕುಟುಂಬದ ನಿಯಂತ್ರಣದಲ್ಲಿದ್ದ ಕಂಪನಿಗಳು ಹಿಂಜರಿತ ಅನುಭವಿಸಿದುವು. ಏಕೆಂದರೆ ಅವುಗಳ ಬಂಡವಾಳವನ್ನು ಇತರ ಹೂಡಿಕೆದಾರರು ಕೊಂಡರು. ಕುಟುಂಬದ ಮಾಲೀಕತ್ವದಲ್ಲಿದ್ದಾಗ, ಅದರ ಮಾಲಿಕ ಒಂದು ಬಿಲಿಯನ್ ರೂಪಾಯಿ ಬೆಲೆಯುಳ್ಳವನಾಗಿದ್ದ. ಹೊರಗಿನ ಹೂಡಿಕೆಗೆ ಅವಕಾಶ ಕೊಟ್ಟಾಗ ಮಾಲೀಕ ತನ್ನ ಕಂಪನಿಯ ಶೇ.49ರಷ್ಟು ಷೇರುಗಳನ್ನು ಇತರರಿಗೆ ನೀಡಬಹುದು. ಆದರೆ ಶೇ.51ರಷ್ಟು ಷೇರುಗಳನ್ನು ಹೊಂದಿರುವ ಮಾಲಿಕನೇ ಕಂಪನಿಯ ಮೇಲೆ ತನ್ನ ಹಿಡಿತವನ್ನು ಮುಂದುವರೆಸುತ್ತಾನೆ. ಆದರೆ ಆ ಕಂಪನಿಯಲ್ಲಿ ಹಣ ತೊಡಗಿಸಿರುವ ಇತರ ಷೇರುದಾರರು ಕಂಪನಿಯ ಬೋರ್ಡ್‌ಗಳಲ್ಲಿ ಇರುತ್ತಾರೆ. ಹೊಸ ವಾಣಿಜ್ಯೋದ್ಯಮದ ಈ ನಿಯಮವನ್ನು ಅರಿತುಕೊಂಡ ಸಾಂಪ್ರದಾಯಿಕ ಆಟಗಾರರು ದೊಡ್ಡದಾಗಿ ಬೆಳೆದರು.

ಜಂಟಿ ಉದ್ಯಮಗಳು ಅಥವಾ ಚಿಕ್ಕದಾಗಿ ಜೆ.ವಿಗಳೆಂದು ಕರೆಯಲ್ಪಡುವ ಸಾರ್ವಜನಿಕ ಉದ್ದಿಮೆಗಳೂ ಸಹ 1990ರ ನಂತರ ಕಣ್ಣುಕುಕ್ಕುವಂತಾದುವು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕಂಪನಿಗಳು ಇತರ ಉದ್ಯಮಗುಂಪುಗಳೊಡನೆ ಜಂಟಿ ಉದ್ದಿಮೆಗಳನ್ನು ಸ್ಥಾಪಿಸಲು ಮೂರು ಕಾರಣಗಳಿವೆ. ಅವುಗಳೆಂದರೆ ಹೊಸ ತಂತ್ರಜ್ಞಾನ, ಬಂಡವಾಳ ಮತ್ತು ಸಂಪರ್ಕ. ಉದಾಹರಣೆಗೆ ದಕ್ಷಿಣ ಕೋರಿಯಾದ ಕಂಪನಿಯೊಂದು ಭಾರತಕ್ಕೆ ಬರಲು ಇಚ್ಛಿಸುತ್ತಿದೆ ಎಂದುಕೊಳ್ಳೋಣ. ಭಾರತದ ಒಬ್ಬ ಪಾಲುದಾರನ ಜತೆ ದಕ್ಷಿಣ ಕೋರಿಯಾದ ಈ ಕಂಪನಿ ಸುಲಭವಾಗಿ ಭಾರತ ಪ್ರವೇಶಿಸಬಹುದು. ಆಗ ಭಾರತದ ಕಂಪನಿ ಕೊರಿಯಾ ಕಂಪನಿ ತರಬಹುದಾದ ಉತ್ತಮ ತಂತ್ರಜ್ಞಾನದಿಂದ ಪ್ರಯೋಜನ ಪಡೆಯಬಹುದು. ಬಂಡವಾಳ ಸಹ ದೊರೆಯಬಹುದು.

ಭಾರತದೊಳಗೆ ದಕ್ಷಿಣ ಭಾರತದ ಕಂಪನಿಯೊಂದು ಉತ್ತರ ಭಾರತದಲ್ಲಿ ತನ್ನ ಉತ್ಪಾದನೆಯನ್ನು ಮಾರಲು ಬಯಸುತ್ತದೆ ಎಂದುಕೊಳ್ಳೋಣ. ಸಾಗಾಣಿಕೆ ವಸ್ತುವಿನ

> ಹೆಚ್ಚು ದಲಿತ ಕೈಗಾರಿಕೋದ್ಯಮಿಗಳ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳು ಶ್ರೀಮಂತರೇನೂ ಇರುವುದಿಲ್ಲ. ಆದುದರಿಂದ ಅವರು ತಮ್ಮ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳನ್ನು ಆರ್ಥಿಕವಾಗಿ ಗಟ್ಟಿ ಮಾಡಬೇಕು ಮತ್ತು ತಮ್ಮ ಸ್ವಂತ ಕಾಲಮೇಲೆ ನಿಲ್ಲುವಂತೆ ಮಾಡಬೇಕು. ಇದರಿಂದ ವಿಶಾಲ ಸಮುದಾಯಕ್ಕೆ ಬಹಳ ಸಹಾಯವಾಗುತ್ತದೆ. ದಲಿತ ಉದ್ಯಮಿಯೊಬ್ಬರು ತನ್ನ ಸಂಬಂಧಿಕರು ಉದ್ಯಮವನ್ನು ಪ್ರರಂಭಿಸಲು ಸಹಾಯ ಮಾಡಿದರೆಂದರೆ ಅದರ ಲಾಭಗಳು ಅನೇಕ. ಹೀಗೆ ಲಾಭ ಪಡೆದ ದಲಿತ ಉದ್ಯಮಿ ಸರ್ಕಾರಿ ಕೆಲಸಕ್ಕೆ ಮೊರೆಹೋಗುವುದಿಲ್ಲ. ಮತ್ತು ಅವನ ಸ್ಥಳದಲ್ಲಿ ಬಡ ದಲಿತನೊಬ್ಬ ಆ ಕೆಲಸವನ್ನು ಹೊಂದಲು ಸಹಾಯವಾಗುತ್ತದೆ.

ಬೆಲೆಯನ್ನು ದುಬಾರಿ ಮಾಡಬಹುದು. ಬೆಲೆಯಲ್ಲಿ ಸ್ಪರ್ಧಾತ್ಮಕವಾಗಿರುವ ದೃಷ್ಟಿಯಿಂದ ದಕ್ಷಿಣ ಭಾರತದ ಕಂಪನಿ ಉತ್ತರ ಭಾರತ ದಲ್ಲಿನ ಕಂಪನಿಯ ಜೊತೆ ಜಂಟಿ ಉದ್ದಿಮೆ ಸ್ಥಾಪಿಸುವುದರಿಂದ ಉತ್ತಮ ಯಶಸ್ಸು ಪಡೆಯುತ್ತದೆ. ಮೂರನೇ ಅಂಶ ಕೂಡ ಬಹು ಮುಖ್ಯವಾದುದು. ಜಂಟಿ ಉದ್ದಿಮೆಗಳು ಔದ್ಯಮಿಕ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು ಮತ್ತು ವಿಸ್ತರಿಸಲು ಇದು ಬಹು ಮುಖ್ಯವಾಗಿರುತ್ತವೆ. ಉದಾಹರಣೆಗೆ ಶರ್ಟುಗಳನ್ನು ತಯಾರಿಸುವ ಒಬ್ಬ ಉದ್ದಿಮೆದಾರನಿರುತ್ತಾನೆ. ಅವನ ಕಂಪನಿಯ ಹೆಚ್ಚುವರಿ ಹಣದಿಂದ ಈ ಉದ್ದಿಮೆದಾರ ಮತ್ತೊಂದು ಉದ್ಯಮವನ್ನು ಪ್ರಾರಂಭಿಸಬಹುದು. ಉದಾಹರಣೆಗೆ ಓಮರಕ್ಷಿತ ಆಹಾರದ ಉದ್ಯಮ. ಆಗ ಅವನು ಆ ಉದ್ಯಮದಲ್ಲಿ ಈಗಾಗಲೇ ಇರುವ ಉದ್ದಿಮೆದಾರರೊಡನೆ ಜಂಟಿ ಉದ್ದಿಮೆ ಸ್ಥಾಪಿಸಿ ಇನ್ನೂ ದೊಡ್ಡದಾಗಿ ಬೆಳೆಯಬಹುದು.

ಖಂಡಿತವಾಗಿ ಜಂಟಿ ಉದ್ದಿಮೆ ವೇಗವಾಗಿ ಬೆಳೆಯುತ್ತಿರುವ ವಾಣಿಜ್ಯ ಮಾದರಿ. ದಲಿತ ಉದ್ದಿಮೆದಾರರು, ಮುಖ್ಯವಾಹಿನಿಯ ಉದ್ಯಮಗಳ ರೀತಿ ನೀತಿಗಳನ್ನು ಅನುಭವದಿಂದ ಕಲಿತು ಹೊಸ ವಾಣಿಜ್ಯ ಮಾದರಿಯನ್ನು ಬೆಳೆಸುತ್ತಿದ್ದಾರೆ.

ದಲಿತ ಉದ್ಯಮದಾರರು ತಮ್ಮ ಉದ್ಯಮಗಳನ್ನು ಕುಟುಂಬದ ಸದಸ್ಯರಿಂದ ನಡೆಸುವುದನ್ನೂ ತಿರಸ್ಕರಿಸಬೇಕು. ಆ ಮಾದರಿ, ದಲಿತ ಉದ್ದಿಮೆದಾರರಿಗೆ ಹೆಚ್ಚೆಂದರೆ ಸಾಕಷ್ಟು ಆದಾಯ ಮತ್ತು ಸ್ವಲ್ಪ ರಕ್ಷಣೆ ನೀಡಬಹುದು. ಆದರೆ ಅವರು ಬಿ.ಎಮ್.ಡಬ್ಲ್ಯೂ/ಆಡಿ/ಮರ್ಸಿಡಿಸ್/ನಿಸ್ಸಾನ್ ಕಾರುಗಳನ್ನು ಹೊಂದಿರುವವರ ಗುಂಪನ್ನು ಸೇರಲಾರರು. ಆ ದೃಷ್ಟಿಯಿಂದ ದಲಿತ ಉದ್ದಿಮೆದಾರರು ತಮ್ಮ ಉದ್ದಿಮೆಗಳಲ್ಲಿ ಇತರರು ಷೇರು ತೊಡಗಿಸುವ ಕಲ್ಪನೆಗೆ ತೆರೆದುಕೊಳ್ಳಬೇಕು. ಮತ್ತು ಷೇರುಗಳನ್ನು ಮಾರುಕಟ್ಟೆಯಲ್ಲಿ ಮಾರಬೇಕು.

ಜಂಟಿ ಉದ್ಯಮಗಳ ಕಲ್ಪನೆ ಎಲ್ಲಾ ದಿಕ್ಕಿನಲ್ಲೂ ಆಚರಣೆಯಲ್ಲಿದೆ. ಆದುದರಿಂದ ದಲಿತ ಉದ್ದಿಮೆದಾರರು ಸಹ ಅದರ ಲಾಭ ಪಡೆಯಬೇಕು. ಅನೇಕ ಡಿ.ಐ.ಸಿ.ಸಿ.ಐನ ಸದಸ್ಯರು ಸಹ ಜಂಟಿ ಉದ್ಯಮಗಳನ್ನು ಸ್ಥಾಪಿಸುತ್ತಿದ್ದಾರೆ ಮತ್ತು ಇತರ ಉದ್ಯಮಗಳಲ್ಲಿ ಷೇರುಗಳನ್ನು ಖರೀದಿ ಮಾಡುತ್ತಿದ್ದಾರೆ ಎಂಬುದು ಒಳ್ಳೆಯ ಸುದ್ದಿ. ಆದರೆ ಇದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಡಿ.ಐ.ಸಿ.ಸಿ.ಐನ ವಿಸ್ತರಣೆ ನಡೆಯುತ್ತಿದ್ದು, ಅದರ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಹೆಚ್ಚು ಸದಸ್ಯರು ಜಂಟಿ ಉದ್ಯಮದ ಕಲ್ಪನೆಯನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಷೇರುಗಳನ್ನು ಕೊಳ್ಳುತ್ತಾರೆ.

ಜಂಟಿ ಉದ್ಯಮಗಳು ಮತ್ತು ಇತರ ಉದ್ಯಮಗಳಲ್ಲಿ ಷೇರು ಕೊಳ್ಳುವ ವಾಣಿಜ್ಯ ಮಾದರಿಗೆ ಸ್ವಲ್ಪ ಬೆಲೆ ಕೂಡ ತೆರಬೇಕಾಗುತ್ತದೆ. ಷೇರುಗಳನ್ನು ಮಾರಲಿಚ್ಛಿಸುವ ದಲಿತ ಉದ್ದಿಮೆದಾರರು ಕಪ್ಪು ಹಣದಲ್ಲಿ ವ್ಯವಹಾರ ಮಾಡಲು ಸಾಧ್ಯವಿರುವುದಿಲ್ಲ. ಮತ್ತು ಅವರು ತಮ್ಮ ಆಯವ್ಯಯ ಪಟ್ಟಿಯಲ್ಲಿ ಲಾಭದಾಯಕ ಎಂದು ತೋರಿಸಬೇಕಾಗುತ್ತದೆ. ನಷ್ಟದಲ್ಲಿರುವ ಕಂಪನಿಗಳಲ್ಲಿ ಯಾರೂ ಹಣ ಹೂಡಲು ಇಚ್ಛಿಸುವುದಿಲ್ಲ. ಜೊತೆಗೆ ಹಣ ಹೂಡುವ ಮೊದಲು ಅಥವಾ ಜಂಟಿ ಉದ್ಯಮಗಳನ್ನು ಸ್ಥಾಪಿಸ ಹೊರಡುವ ಮೊದಲು ಹೂಡಿಕೆದಾರರು ಅಥವಾ ಪಾಲುದಾರ ಕಂಪನಿಗಳವರು ಆಯವ್ಯಯ ಪಟ್ಟಿಗಳನ್ನು ಪರಿಶೀಲಿಸಲು ಇಚ್ಛಿಸುತ್ತಾರೆ.

ಷೇರುಗಳ ರೂಪದಲ್ಲಿ ಹಣ ಎತ್ತಲಿಚ್ಛಿಸುವ ಅಥವಾ ಜಂಟಿ ಉದ್ದಿಮೆಗಳನ್ನು ಸ್ಥಾಪಿಸಲಿಚ್ಛಿಸುವ ಎಲ್ಲಾ ದಲಿತ ಉದ್ದಿಮೆದಾರರೂ ಅತಿ ಮುಖ್ಯವಾಗಿ ಲಾಭದಾಯಕವೆಂದು ತೋರಿಸುವ ಆಯವ್ಯಯ ಪಟ್ಟಿಯನ್ನು ತಯಾರಿಸಿಡಬೇಕು. ಯಾರು ಹೆಚ್ಚು ವ್ಯವಹಾರವನ್ನು ಕಪ್ಪು ಹಣದ ಮೂಲಕ ನಡೆಸುತ್ತಿದ್ದಾರೆಯೋ ಅಂತಹವರು ಜಂಟಿ ಉದ್ಯಮಗಳಿಗೆ ಹೂಡಿಕೆದಾರರು ಅಥವಾ ಪಾಲು ದಾರರನ್ನು ಹುಡುಕಿಕೊಳ್ಳುವುದು ಬಹಳ ಕಷ್ಟ. ನನ್ನ ಅನುಭವದಂತೆ ಅತೀ ಹೆಚ್ಚು ದಲಿತ ಉದ್ಯಮಿಗಳು ತಮ್ಮ ವ್ಯಾಪಾರೋದ್ಯಮವನ್ನು ಮುಕ್ತವಾಗಿಯೇ ಮಾಡುತ್ತಿದ್ದಾರೆ. ಇದರಿಂದ ದಲಿತ ಉದ್ದಿಮೆದಾರರು ಒಂದು ಒಳ್ಳೆಯ ಉದಾಹರಣೆಯನ್ನು ಇತರರ ಮುಂದಿಡುತ್ತಿದ್ದಾರೆ.

ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಎಲ್ಲಾ ಅನುಯಾಯಿಗಳೂ ಸ್ವಚ್ಛವಾಗಿರಬೇಕು. ಇದಕ್ಕೆ ದಲಿತ ಉದ್ದಿಮೆದಾರರು ನಡೆದುಕೊಳ್ಳುತ್ತಿರುವ ರೀತಿಗಿಂತ ಬೇರೆ ಉದಾಹರಣೆ ಬೇಕೆ? ಜಂಟಿ ಉದ್ಯಮಗಳ ಹೊಸ ವಾಣಿಜ್ಯ ಮಾದರಿ ಮುಂದುವರೆಯುತ್ತದೆ. ದಲಿತ ಉದ್ಯಮಿಗಳು ಈ ಅವಕಾಶದ ಲಾಭ ಪಡೆಯಬೇಕು.

* * *

ಪ್ರಪಂಚದುದ್ದಕ್ಕೂ ಕಾರ್ಪೋರೇಟ್‌ಗಳು ತಮ್ಮ ಲಾಭಾಂಶದ ಸ್ವಲ್ಪ ಭಾಗವನ್ನು ಸಾರ್ವಜನಿಕ ಹಿತಕ್ಕಾಗಿ ಖರ್ಚು ಮಾಡಬೇಕಾಗಿದೆ. ಕೆಲವರು ಪರಿಸರದ ಮೇಲೆ ಹಣ ಹೂಡುತ್ತಾರೆ. ಮತ್ತೆ ಕೆಲವರು ಆಸ್ಪತ್ರೆಗಳನ್ನು ಕಟ್ಟುತ್ತಾರೆ. ಕೆಲವರು ಬಡಮಕ್ಕಳಿಗೆ ಸ್ಕಾಲರ್‌ಶಿಪ್ ನೀಡುತ್ತಾರೆ ಮತ್ತು ಅನಾಥಾಶ್ರಮಗಳನ್ನು ಕಟ್ಟುತ್ತಾರೆ. ಕಾರ್ಪೋರೇಟರ್‌ಗಳು ಮಾಡುವ ಇಂತಹ ಖರ್ಚುಗಳನ್ನು ಸಾಮಾಜಿಕ ಜವಾಬ್ದಾರಿ ಅಥವಾ ಸಿ.ಎಸ್.ಆರ್‌ಗಾಗಿ ಮಾಡಿದ ಖರ್ಚು ಎನ್ನುತ್ತಾರೆ.

ದಲಿತ ಕಂಪನಿಗಳು ಸಹ ಸಾಮಾಜಿಕ ಜವಾಬ್ದಾರಿಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಡಿ.ಐ.ಸಿ.ಸಿ.ಐ ಮುಂಬೈನ ಕೈಗಾರಿಕೋದ್ಯಮಿ ಸುನಿಲ್ ಜೋಡೆ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಜೋಡೆಯವರು ಡಿ.ಐ.ಸಿ.ಸಿ.ಐನ ಸದಸ್ಯರು, ಹೋರಾಟಗಾರರು ಮತ್ತು ವಿದ್ವಾಂಸರನ್ನು ದಲಿತ ಕಂಪನಿಗಳು ಅಳವಡಿಸಿಕೊಳ್ಳಬೇಕಾದ ಸಿ.ಎಸ್.ಆರ್ ಬಗ್ಗೆ ಕೇಳುತ್ತಿದ್ದಾರೆ. ಯಥೇಚ್ಛ ಸಲಹೆಗಳು ಬರುತ್ತಿದ್ದು, ಅವುಗಳಿಂದ ಗೊಂದಲ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಕೆಲವರು ಡಿ.ಐ.ಸಿ.ಸಿ.ಐ ಒಂದು ದಲಿತ ವಾರ್ತಾ ವಾಹಿನಿಯನ್ನು ಸ್ಥಾಪಿಸಬೇಕೆಂದೂ ಮತ್ತೆ ಕೆಲವರು ಒಂದು ವಾರ್ತಾ ಪತ್ರಿಕೆ ನಡೆಸಬೇಕೆಂದೂ ಕೋರಿರುತ್ತಾರೆ. ನಮಗೇ ತಿಳಿದಿರುವಂತೆ ವಾರ್ತಾ ವಾಹಿನಿಗಳು ಮತ್ತು ಪತ್ರಿಕೆಗಳನ್ನು ನಡೆಸಲು ದೊಡ್ಡ ಮೊತ್ತದ ಹಣ ಬೇಕಾಗುತ್ತದೆ. ವಾರ್ತಾ ವಾಹಿನಿಗಳ ಮತ್ತು ವಾರ್ತಾ ಪತ್ರಿಕೆಗಳನ್ನು ಕಸುಬುದಾರಿಕೆಯಿಂದ ಮತ್ತು ಲಾಭಕ್ಕಾಗಿ ನಡೆಸದಿದ್ದಲ್ಲಿ ಅವು ಯಶಸ್ವಿಯಾಗುವ ಬದಲು ಮುಚ್ಚಬಹುದಾದ ಪ್ರಸಂಗಗಳು ಏಳಬಹುದು ಎಂಬುದು ಎಲ್ಲರ ಅನುಭವ. ಎಷ್ಟೋ ದಲಿತ ನಿಯತ ಕಾಲಿಕೆಗಳು ಕೆಲವೇ ವರ್ಷಗಳಲ್ಲಿ ಮುಚ್ಚಿ ಹೋಗುವುದನ್ನು ನಾನೇ ನೋಡಿದ್ದೇನೆ.

ಡಿ.ಐ.ಸಿ.ಸಿ.ಐ ದಲಿತ ಸಿ.ಎಸ್.ಆರ್ ಬಗ್ಗೆ ಚಳವಳಿ ಪ್ರಾರಂಬಿಸಿದಾಗ ನಮಗೇ ಆಶ್ಚರ್ಯವಾಗುವಂತೆ ಅನೇಕ ಡಿ.ಐ.ಸಿ.ಸಿ.ಐ ಸದಸ್ಯರು ಈಗಾಗಲೇ ಒಂದಲ್ಲಾ ಒಂದು ರೀತಿಯ ಸಿ.ಎಸ್.ಆರ್ ಅಳವಡಿಸಿಕೊಂಡಿರುವುದು ಕಂಡು ಬಂತು. ಸಾಂಗ್ಲಿಯ ಸದಾಮಾತೆ

ದಲಿತ ಕಾರ್ಪೋರೇಟ್‌ಗಳ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್)

ಅಂಬೇಡ್ಕರ್ – ನೆಹರು ವ್ಯಂಗ್ಯ ಚಿತ್ರದ ವಿವಾದದ ನಂತರ ಅನೇಕ ವಾರ್ತಾ ಪತ್ರಿಕೆಗಳು, ವಾರ್ತಾ ವಾಹಿನಿಗಳು ಮತ್ತು ಅಂಕಣಕಾರರು ದಲಿತರು ಹೆಚ್ಚು ಹೆಚ್ಚು ಅಸಹನೆ ಬೆಳೆಸಿಕೊಳ್ಳುತ್ತಿದ್ದಾರೆಯೇ ಎಂಬ ಆತಂಕಕ್ಕೊಳಗಾಗಿದ್ದಾರೆ. ಇದೇ ಒಂದು ಸಾಧನೆ. ಇಲ್ಲಿಯವರೆಗೂ ವಾರ್ತಾ ಪತ್ರಿಕೆಗಳು, ವಾರ್ತಾವಾಹಿನಿಗಳು ಮತ್ತು ನೂರಾರು ಅಂಕಣಕಾರರು ದಲಿತರು ದೈನಂದಿನ ಜೀವನದಲ್ಲಿ ಎದುರಿಸುತ್ತಿದ್ದ ಸಾಮಾಜಿಕ ಅಸಹನೆ ಬಗ್ಗೆ ಕಾಳಜಿ ತೋರಿಸಿರಲಿಲ್ಲ. ಇದು ಯಾವುದೇ ಚಿಂತಕನಿಗೆ ದಿಗ್ಭ್ರಮೆ ಹುಟ್ಟಿಸುತ್ತದೆ.

ಗುಂಪನ್ನೇ ತೆಗೆದುಕೊಳ್ಳಿ. ಸದಾಮಾತೆ ಗುಂಪು ಒಂದು ತಯಾರಿಕಾ ಸಂಸ್ಥೆಯಾಗಿದ್ದು, ಇಪ್ಪತ್ತು ಸರಬರಾಜುದಾರರು ಆ ಕಂಪನಿಗೆ ಬಿಡಿ ಭಾಗಗಳನ್ನು ಸರಬರಾಜು ಮಾಡುತ್ತಿದ್ದಾರೆ. ಈ ಇಪ್ಪತ್ತು ಜನರಲ್ಲಿ ಹದಿನೆಂಟು ಮಂದಿ ದಲಿತರಾಗಿದ್ದು, ಇವರಲ್ಲಿ ಅವರ ಸಂಬಂಧಿಗಳೇ ಹೆಚ್ಚಿದ್ದಾರೆ. ಲೂದಿಯಾನದ ಮಾಲ್ಕಿಯತ್ ಚಂದ್ ಅವರ ಪ್ರಕರಣವೂ ಅಂತಹುದೆ. ಟಿ. ಶರ್ಟ್ ಮತ್ತು ಇತರ ಸಿದ್ಧ ಉಡುಪುಗಳನ್ನು ತಯಾರು ಮಾಡುವ ಚಂದ್ ತಮ್ಮ ಟಿ. ಶರ್ಟ್ ಮತ್ತು ಇತರ ಸಿದ್ಧ ಉಡುಪುಗಳನ್ನು ತಾವೇ ತಯಾರು ಮಾಡಲು ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ಕೊಳ್ಳುತ್ತಾರೆ. ಅವರ ಸರಬರಾಜುದಾರರು ಕೂಡ ದಲಿತರಾಗಿದ್ದು ಅವರಲ್ಲಿ ಹೆಚ್ಚು ಜನರು ಅವರ ಸಂಬಂಧಿಗಳು. ಅವರ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳನ್ನು ಉದ್ದಿಮೆ ಪ್ರಾರಂಭಿಸಲು ಉತ್ತೇಜನ ನೀಡುವ ದಲಿತ ಉದ್ದಿಮೆದಾರರ ಉದಾಹರಣೆಗಳು ಅನೇಕ.

ಜೊತೆಗೆ ಅನೇಕ ದಲಿತ ಉದ್ದಿಮೆಗಳು ದಲಿತ ಸಂಸ್ಥೆಗಳಿಗೆ ದೇಣಿಗೆ ನೀಡುತ್ತವೆ. ಮತ್ತು ಅವರಲ್ಲನೇಕರು ಶಾಲೆಗಳನ್ನು ಸಹ ತೆರೆದಿರುತ್ತವೆ. ಅನೇಕ ಪ್ರಕರಣಗಳಲ್ಲಿ ದಲಿತ ಉದ್ದಿಮೆದಾರರು ತಮ್ಮ ಬಡ ಸಂಬಂಧಿಗಳ ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ಖರ್ಚು ಮುಂತಾದವನ್ನು ನೋಡಿಕೊಳ್ಳುತ್ತಾರೆ. ಇದನ್ನು ದಲಿತ ಸಿ.ಎಸ್.ಆರ್ ಎಂದು ಕರೆಯಬಹುದೆ?

ಈ ಹಂತದಲ್ಲಿ ದಲಿತ ಸಿ.ಎಸ್.ಆರ್ ಭಾರತದ ಇತರ ಕಂಪನಿಗಳು ಅನುಸರಿಸುತ್ತಿರುವ ಸಿ.ಎಸ್.ಆರ್‌ಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಭಾರತದ ಮುಖ್ಯವಾಹಿನಿಯಲ್ಲಿರುವ ಕಂಪನಿಗಳು ಸಂಪೂರ್ಣ ಭಿನ್ನವಾದ ಹಿನ್ನಲೆಯನ್ನು ಬಳುವಳಿಯಾಗಿ ಪಡೆದಿರುತ್ತವೆ. ಸಾಂಪ್ರದಾಯಕವಾಗಿ ಅವು ಶ್ರೀಮಂತ ಹಿನ್ನಲೆಯವು. ಮತ್ತು ಅವುಗಳಲ್ಲಿ ಹೆಚ್ಚಿನ ಕುಟುಂಬಗಳ ಸದಸ್ಯರು ಮತ್ತು ಸಂಬಂಧಿಗಳು ಈಗಾಗಲೇ ಉತ್ತಮ ಆರ್ಥಿಕ ಸ್ಥಿತಿಯನ್ನು ಹೊಂದಿರುತ್ತಾರೆ. ಆದುದರಿಂದ ಅವರು ತಮ್ಮ ಸಿ.ಎಸ್.ಆರ್‌ಗೆ ಮೀಸಲಾದ ಹಣವನ್ನು ಬೇರೆ ಕಡೆ ಖರ್ಚುಮಾಡುತ್ತಾರೆ.

ಹೆಚ್ಚು ದಲಿತ ಕೈಗಾರಿಕೋದ್ಯಮಿಗಳ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳು ಶ್ರೀಮಂತರೇನೂ ಇರುವುದಿಲ್ಲ. ಆದುದರಿಂದ ಅವರು ತಮ್ಮ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳನ್ನು ಆರ್ಥಿಕವಾಗಿ ಗಟ್ಟಿ ಮಾಡಬೇಕು ಮತ್ತು ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡಬೇಕು. ಇದರಿಂದ ವಿಶಾಲ ಸಮುದಾಯಕ್ಕೆ ಬಹಳ ಸಹಾಯ ವಾಗುತ್ತದೆ. ದಲಿತ ಉದ್ಯಮಿಯೊಬ್ಬರು ತನ್ನ ಸಂಬಂಧಿಕರು ಉದ್ಯಮವನ್ನು ಪ್ರರಂಭಿಸಲು ಸಹಾಯ ಮಾಡಿದರೆಂದರೆ ಅದರ ಲಾಭಗಳು ಅನೇಕ. ಹೀಗೆ ಲಾಭ ಪಡೆದ ದಲಿತ ಉದ್ಯಮಿ ಸರ್ಕಾರಿ ಕೆಲಸಕ್ಕೆ ಮೊರೆಹೋಗುವುದಿಲ್ಲ. ಮತ್ತು ಅವನ ಸ್ಥಳದಲ್ಲಿ ಬಡ ದಲಿತನೊಬ್ಬ ಆ ಕೆಲಸವನ್ನು ಹೊಂದಲು ಸಹಾಯವಾಗುತ್ತದೆ. ಜೊತೆಗೆ ಈ ಉದ್ಯಮಿ ಕೂಡ ತನ್ನ ಕೆಲವು ಸಂಬಂಧಿಕರನ್ನು ತನ್ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾನೆ. ಮತ್ತು ಅವನು ತನ್ನ ಸಂಬಂಧಿಕರು ಉದ್ಯಮವನ್ನು ಪ್ರಾರಂಭಿಸಲು ಸಹಾಯವನ್ನು ಮಾಡಬಹುದು. ಈ ವೃತ್ತ ವಿಸ್ತಾರವಾಗುತ್ತಾ ಹೋಗುತ್ತದೆ. ಮತ್ತು ಅವನ ಸಂಬಂಧಿಕರಲ್ಲಿ ಹೆಚ್ಚು ಹೆಚ್ಚು ಜನ ಸರ್ಕಾರಿ ಕೆಲಸಗಳಿಗೆ ಮೊರೆ ಹೋಗುವುದಿಲ್ಲ. ಇದು ಇನ್ನೂ ಹೆಚ್ಚು ಬಡ ದಲಿತರಿಗೆ ಸರ್ಕಾರದ ಉದ್ಯೋಗ ಪಡೆಯಲು ಅನುಕೂಲ ಮಾಡಿಕೊಡುತ್ತದೆ.

ಹೆಚ್ಚು ಜನ ದಲಿತ ಉದ್ಯಮಿಗಳು ತಮ್ಮ ಸಂಬಂಧಿಕರ ಮಕ್ಕಳ ಶಿಕ್ಷಣದಲ್ಲಿ ಸಹಾಯ ಮಾಡುತ್ತಾರೆ. ಅನೇಕ ದಲಿತ ಉದ್ಯಮಿಗಳು ತಮ್ಮ ಮಕ್ಕಳಿಗೆ ಸರ್ಕಾರಿ ಸ್ಕಾಲರ್‌ಶಿಪ್‌ಗಳನ್ನು ತಿರಸ್ಕರಿಸುವುದನ್ನು ನಾನು ನೋಡಿದ್ದೇನೆ. ಹೀಗೆ ತಿರಸ್ಕರಿಸಲಾದ ಸ್ಕಾಲರ್‌ಶಿಪ್‌ಗಳನ್ನು ಇತರ ಬಡ ದಲಿತ ಮಕ್ಕಳು ಉಪಯೋಗಿಸಬಹುದು. ಅನೇಕ ಉದ್ಯಮಿಗಳು ತಮ್ಮ ಮಕ್ಕಳನ್ನು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಸೇರಿಸುವಾಗ ಮೀಸಲಾತಿಯನ್ನು ಉಪಯೋಗಿಸದಿರುವುದನ್ನು ನಾನು ನೋಡಿದ್ದೇನೆ. ಇದು ಸಹ ಬಡ ದಲಿತ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳನ್ನು ಉಂಟು ಮಾಡುತ್ತಿದೆ.

ನಾವು ತಿಳಿದಿರುವಂತೆ ಡಿ.ಐ.ಸಿ.ಸಿ.ಐನ ಸದಸ್ಯರು ತಮ್ಮ ಹತ್ತಿರದ ಕುಟುಂಬ ಮತ್ತು ಸಂಬಂಧಿಕರ ಮೇಲೆ ಭಾರತದ ಮುಖ್ಯವಾಹಿನಿ ಕಂಪನಿಗಳು ಸಿ.ಎಸ್.ಆರ್ ಹೆಸರಿನಲ್ಲಿ ಖರ್ಚು ಮಾಡುವುದಕ್ಕಿಂತ ಹೆಚ್ಚು ಹಣ ಖರ್ಚುಮಾಡುತ್ತಿದ್ದು ಹೀಗೆ ಖರ್ಚುಮಾಡಿದ ಹಣ ಸಿ.ಎಸ್.ಆರ್ ಎಂದು ಪರಿಗಣಿಸಲ್ಪಡುತ್ತಿಲ್ಲ. ಆದರೆ ಮುಖ್ಯವಾಹಿನಿ ಕಂಪನಿಗಳು ಸ್ವಲ್ಪ ಹಣವನ್ನು ಸಿ.ಎಸ್.ಆರ್‌ಗೆ ಎಂದು ತೆಗೆದಿಡುವುದರಿಂದ ಅದು ಸಿ.ಎಸ್.ಆರ್‌ಗೆ ಖರ್ಚು ಮಾಡಿದ ಹಣವೆಂದು ಪರಿಗಣಿಸಲ್ಪಡುತ್ತದೆ. ಆದರೆ ದಲಿತ ಕಂಪನಿಗಳು ತಮ್ಮ ಹತ್ತಿರದ ಕುಟುಂಬ ಮತ್ತು ಸಂಬಂಧಿಗಳ ಮೇಲೆ ಖರ್ಚು ಮಾಡಿದ ಹಣ ಸಿ.ಎಸ್.ಆರ್ ಎಂದು ಪರಿಗಣಿಸಲ್ಪಡುವುದಿಲ್ಲ. ಏಕೆಂದರೆ ಆ ಹಣವನ್ನು ಆ ಕಂಪನಿಗಳು ಸಿ.ಎಸ್.ಆರ್ ಉದ್ದೇಶಕ್ಕೆಂದೇ ಪ್ರತ್ಯೇಕವಾಗಿ ತೆಗೆದಿಡುವುದಿಲ್ಲ. ಆದುದರಿಂದ ದಲಿತ ಕಂಪನಿಗಳು ತಮ್ಮ ಸಂಬಂಧಿಕರ ಮೇಲೆ ಖರ್ಚು ಮಾಡುವ ಹಣವನ್ನು ಅವರ ಆದಾಯ ಎಂದು ಪರಿಗಣಿಸಲಾಗುತ್ತಿದೆ. ಮತ್ತು ಅದು ಕಂಪನಿಯ ಲೆಕ್ಕಕ್ಕೆ ಸೇರುವುದಿಲ್ಲ.

ಆದುದರಿಂದ ಅನೇಕ ದಶಲಕ್ಷಗಳ ವ್ಯವಹಾರವನ್ನು ಹೊಂದಿರುವ ಡಿ.ಐ.ಸಿ.ಸಿ.ಐ ಸದಸ್ಯರು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

1) ತಮ್ಮ ಕಂಪನಿಯಲ್ಲಿ ಒಂದು ದಲಿತ ಸಿ.ಎಸ್.ಆರ್ ವಿಭಾಗವನ್ನು ತೆರೆಯಬೇಕು.

2) ತಮ್ಮ ಕುಟುಂಬ ವರ್ಗ ಮತ್ತು ಸಂಬಂಧಿಗಳಿಗೆ ಸಹಾಯ ಮಾಡಲು ಖರ್ಚು ಮಾಡಿದ ಹಣದ ಲೆಕ್ಕ ಇಡಬೇಕು.

3) ಈ ಮೂಲಕ ತಮ್ಮ ಕುಟುಂಬ ವರ್ಗದವರು ಮತ್ತು ಸಂಬಂಧಿಗಳು ಸ್ಥಾಪಿಸಿರುವ ಉದ್ಯಮಗಳ ಲೆಕ್ಕ ಇಡಬೇಕು.

4) ಅವರು ದೇಣಿಗೆ ನೀಡಿದ ಹಣದ ಲೆಕ್ಕ ಇಡಬೇಕು.

5) ಈ ಎಲ್ಲಾ ಖರ್ಚನ್ನೂ ತಮ್ಮ ಕಂಪನಿ ಲೆಕ್ಕದಲ್ಲಿ ತೋರಿಸಬೇಕು.

ಹೆಚ್ಚು ದಲಿತ ಉದ್ಯಮಿಗಳು ಮೊದಲ ಬಾರಿಗೆ ಉದ್ಯಮಿಗಳಾಗಿದ್ದಾರೆ. ಅವರ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳು ತಮ್ಮ ಜೀವನ ಉತ್ತಮ ಪಡಿಸಿಕೊಳ್ಳಲು ಹೋರಾಟ ಮಾಡಬೇಕಾದ ಹಿನ್ನೆಲೆ ಅವರದು. ಅವರು ತಮ್ಮ ಕುಟುಂಬದ ಸದಸ್ಯರು ಮತ್ತು ಸಂಬಂಧಿಕರು ಶಕ್ತಿವಂತರಾಗಲು ಮೊದಲು ಗಮನ ನೀಡಬೇಕು. ಪ್ರಾರಂಭದ ದಿನಗಳಲ್ಲಿ ದಲಿತ ಸಿ.ಎಸ್.ಆರ್ ಈ ಮಾರ್ಗದಲ್ಲಿ ಮುಂದುವರೆಯುತ್ತದೆ.

ಆದರೂ ಕೆಲವು ದಲಿತ ಉದ್ಯಮಿಗಳ ಆದಾಯ, ಅವರು ತಮ್ಮ ಕುಟುಂಬ ಮತ್ತು ಸಂಬಂಧಿಗಳಿಗೆ ಸಹಾಯ ಮಾಡಲು ಬೇಕಾದುದಕ್ಕಿಂತ ಹೆಚ್ಚಿದ್ದಲ್ಲಿ ಆ ಆದಾಯವನ್ನು ಉಳಿದ ದಲಿತರ ಮೇಲೆ ಖರ್ಚು ಮಾಡಿದಲ್ಲಿ ಅದು ಇತರರಿಗೂ ಒಂದು ಮಾದರಿ ಆಗ ಬಲ್ಲದು. ಮೇಲ್ಜಾತಿಯವರಿಗೂ ಸಹ ತಮ್ಮ ಸಹಾಯ ಹಸ್ತವನ್ನು ಅವರು ನೀಡಬಹುದು.

* * *

ಅಂಬೇಡ್ಕರ್ – ನೆಹರು ವ್ಯಂಗ್ಯ ಚಿತ್ರದ ವಿವಾದದ ನಂತರ ಅನೇಕ ವಾರ್ತಾ ಪತ್ರಿಕೆಗಳು, ವಾರ್ತಾ ವಾಹಿನಿಗಳು ಮತ್ತು ಅಂಕಣಕಾರರು ದಲಿತರು ಹೆಚ್ಚು ಹೆಚ್ಚು ಅಸಹನೆ ಬೆಳೆಸಿಕೊಳ್ಳುತ್ತಿದ್ದಾರೆಯೇ ಎಂಬ ಆತಂಕಕ್ಕೊಳಗಾಗಿದ್ದಾರೆ. ಇದೇ ಒಂದು ಸಾಧನೆ. ಇಲ್ಲಿಯವರೆಗೂ ವಾರ್ತಾ ಪತ್ರಿಕೆಗಳು, ವಾರ್ತಾ ವಾಹಿನಿಗಳು ಮತ್ತು ನೂರಾರು ಅಂಕಣಕಾರರು ದಲಿತರು ದೈನಂದಿನ ಜೀವನದಲ್ಲಿ ಎದುರಿಸುತ್ತಿದ್ದ ಸಾಮಾಜಿಕ ಅಸಹನೆ ಬಗ್ಗೆ ಕಾಳಜಿ ತೋರಿಸಿರಲಿಲ್ಲ. ಇದು ಯಾವುದೇ ಚಿಂತಕನಿಗೆ ದಿಗ್ಭ್ರಮೆ ಹುಟ್ಟಿಸುತ್ತದೆ.

ಜೊತೆಗೆ ಅವರಲ್ಲಿ ಅನೇಕರು ಈಗ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಹಿಂದೆ ದಲಿತ ಸಂಸತ್ ಸದಸ್ಯರು ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ಹಿಚುಕುತ್ತಿದ್ದಾರೆ ಎಂಬ ಸಲಹೆಯೂ ಇದೆ. ಅವರು ಎನ್.ಸಿ.ಈ.ಆರ್.ಟಿ. ಪಠ್ಯಪುಸ್ತಕದಿಂದ ವಿವಾದಿತ ವ್ಯಂಗ್ಯ ಚಿತ್ರವನ್ನು ತೆಗೆದು ಹಾಕಲು ಸಂಸತ್ ತೆಗೆದುಕೊಂಡ ನಿರ್ಧಾರವನ್ನು ಉದಾಹರಣೆಯಾಗಿ ನೀಡುತ್ತಾರೆ. ಅವರಿಗೆ ಇದು ತುರ್ತಾಗಿ ನೀಡಬೇಕಾದ ವಾರ್ತೆ. ಕೆಲವು ಚಿಂತಕರು ಇದೇ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೊಂದಿದೆ ಎಂಬುದನ್ನು ಅರಿತುಕೊಂಡಿದ್ದಾರೆ. ದಲಿತ ಸಂಸತ್ ಸದಸ್ಯರು ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ಹಿಚುಕುತ್ತಿದ್ದಾರೆಯೆ? ಎಂದು ಕೂಗಾಡುವ ಈ ಚಿಂತಕರು ಭಾರತದ ಮಾಧ್ಯಮದಲ್ಲಿ ದಲಿತ ಅಭಿಪ್ರಾಯವೇ ಇಲ್ಲ ಎಂಬುದರ ಬಗ್ಗೆ ಒಂದು ಪದವನ್ನೂ ಈವರೆಗೆ ಬರೆದಿಲ್ಲ. 1990ರ ಏಪ್ರಿಲ್‌ನಿಂದ 'ಪಯೋನಿಯರ್' ವಾರ್ತಾ ಪತ್ರಿಕೆಯಲ್ಲಿ ಮತ್ತು ತೆಲುಗು ದಿನಪತ್ರಿಕೆ 'ವಾರ್ತಾ'ದಲ್ಲಿ ದಲಿತ ಅಂಕಣಗಳಿರುವಂತೆ ಇತರ ವಾರ್ತಾಪತ್ರಿಕೆಗಳಲ್ಲಿ ಏಕೆ ಈ ಅಂಕಣಗಳಿಲ್ಲ? ಎಂದು ನಾನು ಕೇಳುತ್ತಿದ್ದೇನೆ.

ದಲಿತರು ಅಸಹನೆ ಬೆಳೆಸಿಕೊಳ್ಳುತ್ತಿದ್ದಾರೆಯೇ!

ದಲಿತರಲ್ಲಿ ಯಾವುದೇ ಅಭಿಪ್ರಾಯಗಳಿಲ್ಲ ಅಥವಾ ದಲಿತರ ಅಭಿಪ್ರಾಯಗಳನ್ನು ಇನ್ನೂ ಚೆನ್ನಾಗಿ ತಾವೇ ತಿಳಿಸಬಲ್ಲೆವು ಎಂಬುದು ಹೆಚ್ಚು ಜನರ ಅನಿಸಿಕೆ.

ಇದ್ದಕ್ಕಿದ್ದಂತೆ ಕೆಲವು ವ್ಯಂಗ್ಯ ಚಿತ್ರಕಾರರು ರಕ್ತದ ಕೋಡಿ ಹರಿಸುತ್ತಾ, ತಮ್ಮ ಎದೆಗಳನ್ನು ಬಡಿದುಕೊಳ್ಳುತ್ತಾ ವಾರ್ತಾ ವಾಹಿನಿಗಳಲ್ಲಿಗೆ ಬಂದರು. ಬೇರೆಯವರ ಮೇಲೆ ಲೇವಡಿ ಮಾಡುವ ತಮ್ಮ ಹಕ್ಕು ಅಪಾಯದಲ್ಲಿದೆ ಎಂಬುದು ಅವರ ಚಿಂತೆ. ಅವರು ರಾಜಕಾರಣಿಗಳನ್ನು, ಸಂಸತ್ತುಗಳನ್ನು, ಮೇಲಧಿಕಾರಿಗಳನ್ನು ಲೇವಡಿ ಮಾಡುವ ಅವರ ಹಕ್ಕನ್ನು ನಾನು ಬೆಂಬಲಿಸುತ್ತೇನೆ. ಆದರೆ ನನ್ನ ಚಿಂತೆ ಎಂದರೆ ಅವರಲ್ಲಿ ಯಾರೊಬ್ಬರೂ ಸಹ ಜಾತಿ ಪದ್ಧತಿಯನ್ನು ಈವರೆಗೆ ಏಕೆ ಲೇವಡಿ ಮಾಡಿಲ್ಲ ಎಂಬುದು. ಆ ವ್ಯಂಗ್ಯ ಚಿತ್ರವನ್ನು ಪುಸ್ತಕಗಳಿಂದ ತೆಗೆದು ಹಾಕಲು ಸಂಸತ್ತು ಸಲಹೆ ನೀಡಿದ್ದು ಅವರನ್ನು ನೋಯಿಸಿದೆ ನಿಜ. ಆದರೆ ಈ ವ್ಯಂಗ್ಯ ಚಿತ್ರಕಾರರು ಯಾವಾಗಲಾದರೂ ಜಾತಿ ಪದ್ಧತಿಯಿಂದ ನೋವನ್ನು ಅನುಭವಿಸಿದ್ದಾರೆಯೇ?

ಸಂಸತ್ತಿನಲ್ಲಿ ನಡೆದ ಗದ್ದಲದ ನಂತರ ಮಾಧ್ಯಮದ ಒಂದು ಗುಂಪು ಮತ್ತು ಚಿಂತಕರು ನಡೆದುಕೊಂಡ ರೀತಿ ನನ್ನಲ್ಲಿ ಕೋಪಕ್ಕಿಂತ ನಗೆಯನ್ನು ಹುಟ್ಟಿಸಿದೆ. ಈಗ ಎನ್.ಸಿ.ಈ.ಆರ್.ಟಿ ಪುಸ್ತಕ ಮತ್ತು ಆ ವ್ಯಂಗ್ಯ ಚಿತ್ರದ ವಿಷಯಕ್ಕೆ ಬರೋಣ. ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ.

(ಅ) ಪಠ್ಯ ಪುಸ್ತಕಗಳಲ್ಲಿ ವ್ಯಂಗ್ಯ ಚಿತ್ರಗಳನ್ನು ಹಾಕುವುದರ ಶ್ರೇಷ್ಠತೆ ಬಗ್ಗೆ –

1) 1949ರಲ್ಲಿ ಬಹಳ ಕಡಿಮೆ ಭಾರತೀಯರು ಇಂಗ್ಲಿಷನ್ನು ಅರ್ಥಮಾಡಿಕೊಳ್ಳುತ್ತಿದ್ದರು ಮತ್ತು ಮಾತನಾಡುತ್ತಿದ್ದರು.

2) ಇಂಗ್ಲೀಷನ್ನು ಮಾತನಾಡುವವರು ಭಾರತ ಸಾಮಾಜದ ಪ್ರತಿಷ್ಠಿತ ವರ್ಗಕ್ಕೆ ಸೇರಿದವರಾಗಿದ್ದರು.

3) ಶಂಕರ್ ಈ ವ್ಯಂಗ್ಯ ಚಿತ್ರವನ್ನು ತಾವು ವೈಯಕ್ತಿಕವಾಗಿ ನಡೆಸುತ್ತಿದ್ದ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದರು.

4) 1948ರಲ್ಲಿ ಪ್ರಾರಂಭವಾದ ಶಂಕರ್ಸ್ ವೀಕ್ಲಿ ಆಗ ಕೇವಲ ಒಂದು ವರ್ಷ ಮಾತ್ರ ಹಳೆಯದಾಗಿದ್ದು, ಸುಮಾರು 1000ದಷ್ಟು ಪ್ರತಿಗಳು ಪ್ರಸಾರದಲ್ಲಿದ್ದಿರಬಹುದು.

5) ಶಂಕರ್ಸ್ ವೀಕ್ಲಿಯನ್ನು 1949ರಲ್ಲಿ ಹೆಚ್ಚಾಗಿ ಇಂಗ್ಲಿಷ್ ಮಾಧ್ಯಮದ ಪತ್ರಕರ್ತರು, ಇಂಗ್ಲಿಷ್ ಮಾತನಾಡುವ ಕೆಲ ರಾಜಕಾರಣಿಗಳು ಮತ್ತು ಕೆಲ ವಿದ್ವಾಂಸರು ಮಾತ್ರ ತರಿಸಿಕೊಂಡಿರಬಹುದು.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಶಂಕರ್ ವ್ಯಂಗ್ಯ ಚಿತ್ರ ಅವರ ಕಾಲದ ಪಂಡಿತ್ ನೆಹರು ಹಾಗು ಅಂಬೇಡ್ಕರ್‌ರವರನ್ನು ನೋಡಿರುವಂತ ಕೆಲ ಬುದ್ಧಿವಂತ ಜನರನ್ನು ಗಮನದಲ್ಲಿಟ್ಟುಕೊಂಡಿರುವಂತದ್ದು.

(ಆ) ಆರು ದಶಕಗಳ ನಂತರ ಶಾಲಾ ಮಕ್ಕಳಿಗೆ ಶಂಕರರ ವ್ಯಂಗ್ಯ ಚಿತ್ರ ಏನನ್ನಿಸಬಹುದು –

(1) ಹನ್ನೊಂದನೇ ತರಗತಿಯಲ್ಲಿ ಓದುತ್ತಿರುವ ಎಳೆಯ ಮಕ್ಕಳು ವಯಸ್ಸಾದ ಪ್ರಾಧ್ಯಾಪಕರೂ ಅಲ್ಲ ಅಥವಾ ಪತ್ರಕರ್ತರೂ ಅಲ್ಲ.

2) ಶಾಲಾ ಮಕ್ಕಳು ಸಹ ಬಸವನ ಹುಳು ಎಂಬ ಹೋಲಿಕೆಯನ್ನು ಸಾಮಾನ್ಯ ಭಾಷೆ ಬಳಸುವಾಗ ಅಥವಾ ಡಿಸ್ಕವರಿ ಚಾಲದ ಕಾರ್ಯಕ್ರಮದಿಂದ ತಿಳಿದುಕೊಂಡಿದ್ದಾರೆ. ಬಸವನ ಹುಳು ನಿಧಾನಗತಿಯ ಜೊತೆ ತಳುಕು ಹಾಕಿಕೊಂಡಿದೆ.

3) ಎಳೆಯ ಮನಸ್ಸುಗಳು ಅಂಬೇಡ್ಕರ್ ಅವರ ಹಿಂದೆ ನೆಹರು ಸ್ವಲ್ಪ ಎತ್ತರಕ್ಕೆ ಚಾಟಿ ಹಿಡಿದು ನಿಂತಿರುವುದನ್ನು ಉಚ್ಚ ಶಿಕ್ಷಣ ಪಡೆದ ಹಿರಿಯರು ಓದುವಂತೆ ಓದಿಕೊಳ್ಳಲಾರರು.

4) ಈ ಎಳೆಯ ಮನಸ್ಸುಗಳಿಗೆ ಅಂಬೇಡ್ಕರ್ ಬಸವನ ಹುಳುವಿನ ಮೇಲೆ ಕುಳಿತು ಸಾಗುತ್ತಿರುವುದು ಸಂವಿಧಾನ ಪೂರೈಸುವ ಕೆಲಸಕ್ಕೆ ಅಂಬೇಡ್ಕರ್ ಅವರೇ ತಡೆಯಾಗಿದ್ದಾರೆ ಎಂದು ಅರ್ಥವಾಗುತ್ತದೆ.

5) ಆ ಎಳೆಯರು ಅಂಬೇಡ್ಕರ್ ಅವರ ಬಗ್ಗೆ ತಪ್ಪು ಗ್ರಹಿಕೆಯನ್ನು ಬೆಳೆಸಿಕೊಳ್ಳುತ್ತಾರೆ.

ಇ) ವಿರೋಧ ಯಾವುದಕ್ಕೆ? –

ನಾವಾಗಲಿ ಅಥವಾ ಸಂಸತ್ ಸದಸ್ಯರಾಗಲಿ ವಿರೋಧಿಸಿದ್ದು, ಪುಸ್ತಕದ ಬರವಣಿಗೆಯನ್ನಲ್ಲ ಅಥವಾ ಪುಸ್ತಕವನ್ನೇ ಅಲ್ಲ. ನಮ್ಮ ವಿರೋಧ ವ್ಯಂಗ್ಯ ಚಿತ್ರಕ್ಕೆ ಸಂಬಂಧಿಸಿದ್ದು. ಜೊತೆಗೆ ಹೆಚ್ಚು ವೇಳೆ ರೇಖಾ ಚಿತ್ರಗಳು ಮಾತುಗಳಿಗಿಂತ ಬಹುಬೇಗ ಮತ್ತು ಆಳವಾಗಿ ನಾಟುತ್ತವೆ.

ಯಾರಿಗಾಗಿ ಪುಸ್ತಕವನ್ನು ಬರೆಯಲಾಗಿದೆಯೋ ಅಂತಹ ಶಾಲಾ ಮಕ್ಕಳ ಮನಸ್ಸಿನಲ್ಲಿ ಅಂಬೇಡ್ಕರ್‌ರವರ ಬಗ್ಗೆ ಒಂದು ನಕಾರಾತ್ಮಕ ಭಾವನೆ ಇಲ್ಲದಿದ್ದರೂ ಅನುಮಾನ ಉಂಟಾಗುತ್ತದೆ. ವ್ಯಂಗ್ಯ ಚಿತ್ರವನ್ನು ತಪ್ಪು ಸಂದರ್ಭದಲ್ಲಿ ಉಪಯೋಗಿಸುವ ಮೂಲಕ ಶಾಲಾ ಮಕ್ಕಳಿಗೆ ತಪ್ಪು ಇತಿಹಾಸವನ್ನು ನಿಶ್ಚಯವಾಗಿ ಬೋಧಿಸುತ್ತೇವೆ. ಸಂವಿಧಾನ ಬರೆದು ಮುಗಿಸಿದ ನಂತರ ಡಾ.ಅಂಬೇಡ್ಕರವರು ಸಂವಿಧಾನವನ್ನು ಅತೀ ಕಡಿಮೆ ಸಮಯದಲ್ಲಿ ಬರೆದರು ಎಂಬುದನ್ನು ಎಲ್ಲರೂ ಒಪ್ಪಿಕೊಂಡರು. ಮತ್ತು ಅದೊಂದು ಅತ್ಯುತ್ತಮ ಸಂವಿಧಾನ ಎನ್ನುವುದನ್ನೂ ಒಪ್ಪಿಕೊಂಡರು. ಆದರೂ ಸಂವಿಧಾನ ರಚನೆಯ ಜೊತೆ ಈ ಬಸವನ ಹುಳುವಿನ ರೂಪಕವನ್ನು ಸೇರಿಸಿದ್ದೇಕೆ?

ಯಾರು ತಪ್ಪು ಇತಿಹಾಸವನ್ನು ಬೋಧಿಸುತ್ತಾರೋ ಅವರು ಭಾರತಕ್ಕೆ ತಪ್ಪು ಭವಿಷ್ಯವನ್ನು ಬರೆಯುತ್ತಾರೆ. ನೆನಪಿಡಿ. ■

ಆಲಿಂಗನ

ಸರಸ್ವತಿ ಕೆ.ಬಿ

ಪ್ರೇಮವೆಂಬುದು ಹಕ್ಕಿಯ ಹಾಡೆಂದೂ
ಅದರ ದೈನ್ಯವು ವಿರಹದ ಕೇಡೆಂದು
ನಾನು ತಿಳಿದರೆ ಮರುಳೇ, ನಾನು ಮರೆತಿರುತ್ತೇನೆ...

ಬೆಳದಿಂಗಳ ನರ್ತನಕ್ಕೆ ತತ್ತರಿಸುವ ಚಿಗುರನ್ನು
ಹನಿಯ ಚಪ್ಪಾಳೆಗೆ ಬಾಯ್ಬಿಡುವ ದಳಗಳ ಕಂಪನವನ್ನು
ಕಂದನ ಕಣ್ಣಾಲಿಯ ಮಿಂಚಿಗೆ ಬಾಗುವ ಕೊರಳನ್ನು
ನದಿಯ ಲಯಕ್ಕೆ ಓಡುವ ಮೋಡಗಳ ನೆರಳನ್ನು
ಆಗಸಕ್ಕೆ ಗೆಜ್ಜೆ ಕಟ್ಟುವ ನಿನ್ನ ಆಲಿಂಗನದ ನಾದವನ್ನು
ಆ ಝೇಂಕಾರದಲ್ಲಿ ಬೆವರೊಂದು ಹುಲ್ಲಿನ ತೆನೆಯಾಗುವ ಸೊಬಗನ್ನು ■

ಡಾ. ಜೆ. ಬಾಲಕೃಷ್ಣ

ಮುಠ್ಠಾಳ

ನಸ್ರುದ್ದೀನ್ ಸಂತೆಯ ದಿನ ರಸ್ತೆ ಬದಿಯಲ್ಲಿ ಬಿಕ್ಷೆ ಬೇಡಲು ನಿಲ್ಲುತ್ತಿದ್ದ. ಜನರೆಲ್ಲರೂ ಅವನನ್ನು ಮುಠ್ಠಾಳನೆಂದು ಕರೆಯುತ್ತಿದ್ದರು, ಏಕೆಂದರೆ ಅವನಿಗೆ ಬಿಕ್ಷೆ ನೀಡಲು ನಾಣ್ಯಗಳನ್ನು ಕೊಟ್ಟರೆ ಆತ ಅದರಿಂದ ಅತ್ಯಂತ ಕಡಿಮೆ ಬೆಲೆಯದೇ ಆಯ್ಕೆ ಮಾಡಿಕೊಳ್ಳುತ್ತಿದ್ದ. ಜನ ಅವನನ್ನು ತಮಾಷೆ ಮಾಡಲು ನಾಣ್ಯಗಳನ್ನು ಅವನ ಮುಂದೆ ಚಾಚುತ್ತಿದ್ದರು. ಅವುಗಳಿಂದ ಕಡಿಮೆ ಬೆಲೆಯದು ಆಯ್ಕೆಮಾಡಿಕೊಂಡಾಗ ಎಲ್ಲಾ ಅವನನ್ನು ಗೇಲಿ ಮಾಡುತ್ತಿದ್ದರು. ಆತನನ್ನು ಗಮನಿಸುತ್ತಿದ್ದ ಒಬ್ಬ ಸಹೃದಯಿ ನಸ್ರುದ್ದೀನ್‌ನ ಬಳಿ ಬಂದು, 'ಅಲ್ಲಯ್ಯಾ, ನೀನು ನಿಜವಾಗಿಯೂ ದಡ್ಡನೇ. ಜನ ಹೆಚ್ಚಿನ ಬೆಲೆಯ ನಾಣ್ಯ ಕೊಟ್ಟರೆ ನೀನು ಏಕೆ ಕಡಿಮೆ ಬೆಲೆಯದೇ ಸಾಕೆನ್ನುತ್ತೀಯ? ನೀನು ಹೆಚ್ಚಿನ ಬೆಲೆಯದು ತೆಗೆದುಕೋ ಹಾಗೂ ನಿನಗೆ ಹೆಚ್ಚಿನ ಹಣವೂ ದೊರಕುತ್ತದೆ ಅಲ್ಲದೆ ಜನ ನಿನ್ನನ್ನು ಗೇಲಿ ಮಾಡುವುದೂ ತಪ್ಪುತ್ತದೆ' ಎಂದ. ಅದಕ್ಕೆ ನಸ್ರುದ್ದೀನ್ ನಗುತ್ತಾ, 'ನಿಮ್ಮ ಮಾತು ನಿಜವಿರಬಹುದು, ಆದರೆ ನಾನು ಹೆಚ್ಚಿನ ಬೆಲೆಯ ನಾಣ್ಯ ತೆಗೆದುಕೊಳ್ಳಲು ಪ್ರಾರಂಭಿಸಿದರೆ ಜನ ನಾನು ಬುದ್ಧಿವಂತನಾಗಿರುವನೆಂದು ತಿಳಿದು ನನಗೆ ನಾಣ್ಯ ನೀಡುವುದನ್ನು ನಿಲ್ಲಿಸುತ್ತಾರೆ. ಜನ ನನ್ನನ್ನು ದಡ್ಡನೆಂದೇ ಪರಿಗಣಿಸಿದರೆ ನನಗೇ ಲಾಭ' ಎಂದ ಸಂಗ್ರಹವಾಗಿದ್ದ ಚಿಲ್ಲರೆ ಕಿಸೆಗೆ ಬಿಡುತ್ತಾ.

ಭಿಕ್ಷುಕನ ಅವಶ್ಯಕತೆಗಳು

ಒಂದು ದಿನ ಮುಲ್ಲಾ ನಸ್ರುದ್ದೀನ್ ಮಸೀದಿಯಲ್ಲಿ ಪ್ರಾರ್ಥನೆ ಮುಗಿಸಿ ಹೊರಬಂದಾಗ ಅಲ್ಲೇ ಬಾಗಿಲ ಬಳಿ ಭಿಕ್ಷುಕನೊಬ್ಬ ಕೈ ಚಾಚಿಕೊಂಡು ಕೂತಿದ್ದ. ಅವನನ್ನು ಕಂಡ ನಸ್ರುದ್ದೀನ್, 'ಏನಯ್ಯಾ ನೀನು ದುಂದುವೆಚ್ಚಗಾರನೇ?' ಎಂದು ಕೇಳಿದ.

'ಹೌದು' ಎಂದ ಭಿಕ್ಷುಕ.

'ನೀನು ಸೋಮಾರಿಯಂತೆ ಚಹಾ ಕುಡಿಯುತ್ತಾ ಬೀಡಿ, ಸಿಗರೇಟು ಸೇದುತ್ತೀಯಾ?'

'ಹೌದು'

'ನೀನು ಗೆಳೆಯರ ಜೊತೆ ದಿನಾ ಸಂಜೆ ಮದ್ಯಪಾನ ಮಾಡುತ್ತೀಯಾ?'

'ಹೌದು, ನನಗೆ ಅಂಥವೆಲ್ಲಾ ಇಷ್ಟ' ಎಂದ ಭಿಕ್ಷುಕ ವಿನಮ್ರನಾಗಿ.

'ಛೆ! ಛೆ!' ಎನ್ನುತ್ತಾ ನಸ್ರುದ್ದೀನ್ ಅವನಿಗೆ ಚಿನ್ನದ ನಾಣ್ಯವೊಂದನ್ನು ನೀಡಿದ. ಸ್ವಲ್ಪ ದೂರದಲ್ಲೇ ಮತ್ತೊಬ್ಬ ಭಿಕ್ಷುಕ ಈ ಸಂಭಾಷಣೆಯನ್ನೆಲ್ಲಾ ಕೇಳಿಸಿಕೊಂಡು ಕೂತಿದ್ದ. ಅವನ ಬಳಿ ಬಂದ ನಸ್ರುದ್ದೀನ್ ಅದೇ ಪ್ರಶ್ನೆಗಳನ್ನು ಕೇಳಿದ.

'ಏನಯ್ಯಾ ನೀನು ದುಂದುವೆಚ್ಚಗಾರನೇ?' ಎಂದು ಕೇಳಿದ.

'ಇಲ್ಲ ಸ್ವಾಮಿ' ಎಂದ ಭಿಕ್ಷುಕ.

'ನೀನು ಸೋಮಾರಿಯಂತೆ ಚಹಾ ಕುಡಿಯುತ್ತಾ ಬೀಡಿ, ಸಿಗರೇಟು ಸೇದುತ್ತೀಯಾ?'

'ಖಂಡಿತಾ ಇಲ್ಲ ಸ್ವಾಮಿ'

'ನೀನು ಗೆಳೆಯರ ಜೊತೆ ದಿನಾ ಸಂಜೆ ಮದ್ಯಪಾನ ಮಾಡುತ್ತೀಯಾ?'

'ನನಗೆ ಅಂಥಾ ಕೆಟ್ಟ ಅಭ್ಯಾಸಗಳೆಲ್ಲಾ ಇಲ್ಲ. ಬದಲಿಗೆ ನಾನು ದಿನಾ ಮಸೀದಿಗೆ ಹೋಗಿ ದೇವರ ಪ್ರಾರ್ಥನೆ ಮಾಡುತ್ತೇನೆ' ಎಂದ ಭಿಕ್ಷುಕ ವಿನಮ್ರನಾಗಿ.

'ಛೆ! ಛೆ!' ಎನ್ನುತ್ತಾ ನಸ್ರುದ್ದೀನ್ ಅವನಿಗೆ ತಾಮ್ರದ ನಾಣ್ಯವೊಂದನ್ನು ನೀಡಿದ.

ತಾನೊಬ್ಬ ಉತ್ತಮ ವ್ಯಕ್ತಿ, ದೇವರ ಭಕ್ತ ಎಂದು ಹೇಳಿಕೊಂಡರೆ ಆ ಭಿಕ್ಷುಕನಿಗೆ ನೀಡಿದುದಕ್ಕಿಂತ ಹೆಚ್ಚಿನ ಭಿಕ್ಷೆ ದೊರೆಯಬಹುದೆಂದು ನಿರೀಕ್ಷಿಸಿದ್ದ ಆ ಭಿಕ್ಷುಕನಿಗೆ ನಿರಾಸೆಯಾಯಿತು. ಆತ ನಸ್ರುದ್ದೀನ್‌ನನ್ನು ಕುರಿತು, 'ಅಲ್ಲಾ, ಕೆಟ್ಟ ಚಟಗಳಿರುವ ಅವನಿಗೆ ಚಿನ್ನದ ನಾಣ್ಯ ನೀಡಿದಿರಿ, ನನ್ನಂಥ ದೇವರ ಭಕ್ತನಿಗೆ ತಾಮ್ರದ ನಾಣ್ಯ ಕೊಟ್ಟಿರುವಿರಲ್ಲಾ? ಇದು ನ್ಯಾಯವೇ?' ಎಂದು ಕೇಳಿದ.

ಅದಕ್ಕೆ ಮುಲ್ಲಾ ನಸ್ರುದ್ದೀನ್, 'ಬೇಸರ ಮಾಡಿಕೊಳ್ಳಬೇಡ. ಅವನಿಗೆ ನಿನಗಿಂತ ಹೆಚ್ಚಿನ ಅವಶ್ಯಕತೆಗಳಿವೆ. ಅದಕ್ಕಾಗೇ ಅವನಿಗೆ ಚಿನ್ನದ ನಾಣ್ಯ ನೀಡಿದೆ' ಎಂದ ಮುನ್ನಡೆಯುತ್ತಾ.

ನೀನ್ಯಾರು ನನಗೆ ತಿಳಿದಿಲ್ಲವೆ?

ಆ ಊರಿಗೆ ಹೊಸಬನಾಗಿದ್ದ ಮುಲ್ಲಾ ನಸ್ರುದ್ದೀನ್ ಒಂದು ದಿನ ತನ್ನ ಮನೆಯ ಬಳಿ ಇದ್ದ ಅಂಗಡಿಗೆ ಹೋಗಿ ಮಾತುಕತೆ ಆರಂಭಿಸಿದ.

'ಹೇಗಿದೆ ವ್ಯಾಪಾರ?' ಕೇಳಿದ ನಸ್ರುದ್ದೀನ್.

'ಹೋ, ಚೆನ್ನಾಗಿದೆ' ಹೇಳಿದ ಅಂಗಡಿಯಾತ.

'ಹಾಗಾದರೆ, ನನಗೆ ನೂರು ರೂಪಾಯಿ ಸಾಲ ಕೊಡುವಿರಾ?' ಕೇಳಿದ ನಸ್ರುದ್ದೀನ್.

'ಇಲ್ಲ, ಸಾಧ್ಯವಿಲ್ಲ. ನೀವ್ಯಾರೋ ನನಗೆ ಪರಿಚಯವಿಲ್ಲ' ಎಂದ ಅಂಗಡಿಯಾತ.

'ಇದೆಂಥ ವಿಚಿತ್ರ! ನಮ್ಮೂರಿನಲ್ಲಿ ಸಾಲ ಕೇಳಿದರೆ, ನೀನ್ಯಾರೆಂದು ನಮಗೆ ಚೆನ್ನಾಗಿ ತಿಳಿದಿದೆ, ಅದಕ್ಕೇ ನಿನಗೆ ಸಾಲ ಕೊಡುವುದಿಲ್ಲ ಎನ್ನುತ್ತಾರೆ. ಈ ಊರಿನಲ್ಲಿ ಅದಕ್ಕೆ ತದ್ವಿರುದ್ಧವಾಗಿ ನಾನು ಪರಿಚಯವಿಲ್ಲ ಕೊಡುವುದಿಲ್ಲ ಎನ್ನುತ್ತೀರಲ್ಲಾ?' ಎಂದ ನಸ್ರುದ್ದೀನ್.

ಅಂಬೇಡ್ಕರ್ ಮತ್ತು...

(21ನೇ ಪುಟದಿಂದ)

ವಿಧಾನವಾಗಿತ್ತು. ಆದುದರಿಂದ ಅದು ಮಂದ ಗತಿಯದಾಗಿದ್ದರೂ ಅಲ್ಲಿ ಬಹುಶಃ ಯಶಸ್ಸು ಖಚಿತವಾಗಿತ್ತು. ಭಾರತ ಹಾಗೂ ಇಡೀ ಜಗತ್ತನ್ನು ಆವರಿಸುತ್ತಿರುವ ಜನತಂತ್ರದ ಸತ್ವ ಮೇಲು-ಕೀಳುಗಳ ಭಾವನೆಗಳನ್ನು ಕಿತ್ತು ಹಾಕುತ್ತದೆ ಎಂದು ನಂಬಿದ್ದರು ಮಹಾತ್ಮಾ ಗಾಂಧಿ.

ಜಾತಿಪದ್ಧತಿಯನ್ನು ಕೊನೆಗೊಳಿಸಲು ಅಂಬೇಡ್ಕರ್ ಅವರೂ ಕೂಡ ಹಲವಾರು ವಿಧಾನಗಳನ್ನು ಪರಿಗಣಿಸಿದ್ದರು. ಆಗ ಪ್ರಚಲಿತವಿದ್ದ ಎರಡು ವಿಧಾನಗಳಾದ ಸಹ-ಭೋಜನ ಹಾಗೂ ಅಂತರ್ಜಾತೀಯ ವಿವಾಹಗಳಲ್ಲಿ ಸಹ-ಭೋಜನ ಒಂದು ಅಪರಿಪೂರ್ಣ ವಿಧಾನವೆಂದೂ ಅಂತರ್ಜಾತೀಯ ವಿವಾಹಗಳೇ ನಿಜವಾದ ಪರಿಹಾರ ಎಂದೂ ಅವರು ಹೇಳಿದ್ದರೂ ನಂತರ "ಸಹ-ಭೋಜನ ಹಾಗೂ ಅಂತರ್ಜಾತೀಯ ವಿವಾಹಗಳಿಗಾಗಿ ಹೋರಾಡುವುದು ಹಾಗೂ ಅವುಗಳನ್ನು ಆಯೋಜಿಸುವುದು ಕೃತಕ ವಿಧಾನದಿಂದ ಒಬ್ಬ ವ್ಯಕ್ತಿಗೆ ಒತ್ತಾಯದ ಊಟ ಮಾಡಿಸಿದಂತೆ" ಎಂದಿದ್ದರು.

ಸಾಮಾಜಿಕ-ಆರ್ಥಿಕ ಕಾರಣಗಳೇ ಜಾತಿಪದ್ಧತಿಯ ಮೂಲದಲ್ಲಿರುವುದಾಗಿ ಪರಿಗಣಿಸಿದ ಸಮಾಜವಾದಿಗಳು ಜಾತಿ ಪದ್ಧತಿಯನ್ನು ಕೊನೆಗೊಳಿಸಲು ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳನ್ನು ಪ್ರತಿಪಾದಿಸಿದರು. ಆದರೆ ಧರ್ಮವೇ ಜಾತಿ ಪದ್ಧತಿಯ ಮೂಲದಲ್ಲಿರುವುದಾಗಿ ನಂಬಿದ ಅಂಬೇಡ್ಕರ್ ಹಿಂದೂ ಧರ್ಮವನ್ನು ಪರಿಷ್ಕರಿಸಬೇಕೆಂದು ಹೇಳಿದರು. "ಜನರು ಜಾತಿಯನ್ನು ಆಚರಿಸಲು ಕಾರಣ ಅವರು ಆಳವಾಗಿ ಧಾರ್ಮಿಕರಾಗಿರುವುದರಿಂದ. ಜನ ಜಾತಿಯನ್ನು ಆಚರಿಸುವಲ್ಲಿ ತಪ್ಪು ಮಾಡುವುದಿಲ್ಲ. ನನ್ನ ಪ್ರಕಾರ ತಪ್ಪಿರುವುದು ಜಾತಿಯ ಈ ಪರಿಕಲ್ಪನೆಯನ್ನು ರೂಢಿಸಿರುವ ಅವರ ಧರ್ಮದಲ್ಲಿ" ಎನ್ನುತ್ತಾರೆ ಅಂಬೇಡ್ಕರ್. ಆದುದರಿಂದ ಜಾತಿ ಪದ್ಧತಿಯನ್ನು ಕೊನೆಗಾಣಿಸಲು ಅವರು ಹೇಳಿದ ಪರಿಹಾರ "ಶಾಸ್ತ್ರಗಳ ಪರಿಶುದ್ಧತೆಯ ಬಗೆಗಿರುವ ಜನರ ನಂಬಿಕೆಯನ್ನು ನಷ್ಟಪಡಿಸಬೇಕು.. ..ನೀವು ಶ್ರುತಿ ಹಾಗೂ ಸ್ಮೃತಿಗಳ ಧರ್ಮವನ್ನು ನಷ್ಟಪಡಿಸಬೇಕು. ಇನ್ನಾವುದೂ ಪ್ರಯೋಜನಕಾರಿಯಾಗಲಾರದು. ಇದು ಬಹಳ ಯೋಚಿಸಿದ ನಂತರ ನಾನು ತಲುಪಿರುವ ಅಭಿಪ್ರಾಯ" ಎನ್ನುತ್ತಾರೆ ಅಂಬೇಡ್ಕರ್.

ಆದರೆ ಅಂಬೇಡ್ಕರ್ ಅವರು ಧರ್ಮವನ್ನೇ ವಿರೋಧಿಸಲಿಲ್ಲ. ಶ್ರುತಿ ಹಾಗು ಸ್ಮೃತಿಗಳ ಧರ್ಮವನ್ನು ನಷ್ಟಪಡಿಸಬೇಕೆಂದು ಹೇಳಿದ ಅಂಬೇಡ್ಕರ್ ಹಿಂದೂ ಸಮಾಜವನ್ನು ಪರಿಷ್ಕರಿಸಬೇಕೆಂದು ಹೇಳಿದರು. "ಹಿಂದೂ ಸಮಾಜವನ್ನು ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳ ತತ್ವಗಳನ್ನು ಒಳಗೊಂಡಿರುವ ಧಾರ್ಮಿಕ ಆಧಾರದ ಮೇಲೆ ಪುನರ್ರಚಿಸಬೇಕು" ಎಂದರು. "ನೀವು ನಿಮ್ಮ ಧರ್ಮಕ್ಕೆ, ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳ ತತ್ವಗಳೊಂದಿಗೆ ಸರಿಹೊಂದುವ ಬುನಾದಿಯನ್ನು ಒದಗಿಸಬೇಕು; ಈ ತತ್ವಗಳೊಂದಿಗೆ ಸರಿಹೊಂದುವ ಧಾರ್ಮಿಕ ತತ್ವಗಳಿಗಾಗಿ ನಾವು ವಿದೇಶಿ ಮೂಲಗಳಿಗೇನೂ ಹೋಗಬೇಕಿಲ್ಲ, ಅವು ಉಪನಿಷತ್ತುಗಳಲ್ಲಿಯೇ ದೊರಕುತ್ತವೆ ಎಂದು ಕೇಳಿದ್ದೇನೆ" ಎನ್ನುತ್ತಾರೆ ಅಂಬೇಡ್ಕರ್. ಗಾಂಧಿಯವರ ಕಿವಿಗಳಿಗೆ ಈ ಮಾತುಗಳು ಎಷ್ಟು ಹಿತವೆನಿಸಿರಬಹುದು. ಅಂಬೇಡ್ಕರ್ ಏನಾದರೂ ಅಪರಿಹಾರ್ಯ ಆಶಾವಾದಿಗಳಾಗಿದ್ದರೆ?

ಸಮಾಜವಾದಿ ಮುಖಂಡ ನಾನಾಸಾಹೇಬ ಗೋರೆಯವರು ಅಂಬೇಡ್ಕರ್ ಅವರಿಗೆ ಆತ್ಯಂತಿಕ ಗೌರವವನ್ನು ಸಲ್ಲಿಸುತ್ತಾರೆ. "ನನ್ನ ಬದುಕಿನುದ್ದಕ್ಕೂ ನಾನು ಭಾವನೆಗಳಿಗಿಂತ ಹೆಚ್ಚು ವಿಚಾರಗಳಿಗೆ, ವಿಚಾರಗಳಿಗಿಂತ ಹೆಚ್ಚು ಕ್ರಿಯೆಗೆ ಮಹತ್ವ ಕೊಟ್ಟಿದ್ದೇನೆ. ಆದುದರಿಂದಲೇ ನಾನು ಸಂತ ರಾಮದಾಸರಿಗಿಂತ ಶಿವಾಜಿಯನ್ನು, ರಾನಡೆಯವರಿಗಿಂತ ಜ್ಯೋತಿಬಾ ಫುಲೆ ಅವರನ್ನು, ಜೆ.ಕೃಷ್ಣಮೂರ್ತಿಯವರಿಗಿಂತ ಮದರ್ ಥೆರೆಸಾ ಅವರನ್ನು, ಹಾಗೂ ಅಸ್ಪೃಶ್ಯತೆಯ ಬಗ್ಗೆ ಮೇಲ್ಜಾತಿಯ ಹಿಂದೂಗಳ ಮನಪರಿವರ್ತನೆ ಮಾಡಲು ಪ್ರಯತ್ನಿಸಿದ ಮಹಾತ್ಮಾ ಗಾಂಧೀಜಿಯವರಿಗಿಂತ ಜಾತಿಪದ್ಧತಿಯ ವಿರುದ್ಧ ಬಂಡಾಯವೇಳಲು ದಲಿತರನ್ನು ಪ್ರಚೋದಿಸಿದ ಅಂಬೇಡ್ಕರ್ ಅವರನ್ನು ಶ್ರೇಷ್ಠರೆಂದು ಪರಿಗಣಿಸುತ್ತೇನೆ."

ಆದರೆ ತಮ್ಮ ಬದುಕಿನುದ್ದಕ್ಕೂ ಸಾಮಾಜಿಕ ಅಸಮಾನತೆಗಳ ವಿರುದ್ಧ ಸೆಣಸಿದ ಸಿಂಹಹೃದಯದ ಅಂಬೇಡ್ಕರ್ ಕೊನೆಗೆ ತಮ್ಮ ಆರೋಗ್ಯ ಹಾಗೂ ಎದೆಗಾರಿಕೆಗಳೆರಡನ್ನೂ ಕಳೆದುಕೊಂಡರು. ಹಿಂದೂ ಧರ್ಮವನ್ನು, ಹಿಂದೂ ಸಮಾಜವನ್ನು ಬದಲಿಸುವುದು, ಪರಿಷ್ಕರಿಸುವುದು, ಪರಿವರ್ತಿಸುವುದು ಅಸಾಧ್ಯ ಎಂಬ ತೀರ್ಮಾನಕ್ಕೆ ಬಂದರು.

ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಇಬ್ಬರಿಗೂ 1956 ಪ್ರಳಯಕಾರಿ ವರ್ಷವಾಗಿ ಪರಿಣಮಿಸಿತು. 1956ರ ಪ್ರಾರಂಭದಲ್ಲಿಯೇ ಪ್ರಜಾ ಸಮಾಜವಾದಿ ಪಕ್ಷ ಇಬ್ಭಾಗವಾಯಿತು. 1935ರ ಅಕ್ಟೋಬರ್ 13ರಷ್ಟು ಹಿಂದೆಯೇ ತಾನು ಹಿಂದೂವಾಗಿ ಜನಿಸಿದ್ದರೂ ಹಿಂದೂವಾಗಿ ಸಾಯುವುದಿಲ್ಲ ಎಂದು ಘೋಷಿದಿದ್ದ ಅಂಬೇಡ್ಕರ್ ಅವರು 1956ರ ಅಕ್ಟೋಬರ್ 14ರಂದು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಅಂಗೀಕರಿಸಿದರು. 1956ರ ಡಿಸೆಂಬರ್ 6ರಂದು ಅಂಬೇಡ್ಕರ್ ಅಸುನೀಗಿದರು. ಸಮಾಜವಾದಿಗಳು ಹಾಗೂ ಅಂಬೇಡ್ಕರ್ ಅವರ ನಡುವೆ ದೇಶದ ಭವಿಷ್ಯವನ್ನೇ ಬದಲಿಸಬಹುದಾದ ಮೈತ್ರಿಯನ್ನು ಈ ಪ್ರಳಯಕಾರಿ ವರ್ಷ ಹೊಸಕಿ ಹಾಕಿತು. ಮೊಲ ಪಂದ್ಯದಲ್ಲಿ ದಾರಿ ಬದಲಿಸಿತು, ಮಾಯವಾಯಿತು. ಆಮೆ ಪಂದ್ಯ ಗೆಲ್ಲುವುದೇ? ■

ನಾಗರಿಕತೆಗಳು: ಸಂಘರ್ಷವೋ...

(25ನೇ ಪುಟದಿಂದ)

ಬಡಿದಿರುವುದಿಲ್ಲ. ಅದು ಇನ್ನೊಬ್ಬರನ್ನು ತನ್ನ ನಾಗರಿಕತೆಯ ದೃಷ್ಟಿಕೋನದಿಂದಲೇ ಸಮೀಕ್ಷಿಸುವುದು ಹಾಗೂ ತನ್ನ ತೀರ್ಪಿನ ಬರಹವನ್ನು ಪ್ರಕಟಿಸುವುದು. ಅದು ಇನ್ನೊಂದು ನಾಗರಿಕತೆಯ ಕಟ್ಟಳೆಗಳ ಕುರಿತಂತೆ ವೀಕ್ಷಕರು ಹಾಗೂ ಓದುಗರಲ್ಲಿ ಬಲವಾದ ಪೂರ್ವಗ್ರಹಗಳನ್ನು ಬೆಳೆಸುತ್ತದೆ.

ಅಷ್ಟೇ ಅಲ್ಲ ಮಾಧ್ಯಮವು ಋಣಾತ್ಮಕ ಸುದ್ದಿಗಳನ್ನೆತ್ತಿಕೊಳ್ಳುತ್ತದೆ. ಅದು ಇನ್ನೊಂದು ನಾಗರಿಕತೆಯ ಜನರ ಬಹುಸ್ತರೀಯ ಮಾರ್ಗೋಪಾಯಗಳನ್ನು ಉಪೇಕ್ಷಿಸಿ ಓದುಗ(ಇಲ್ಲಾ ದೃಶ್ಯ ಮಾಧ್ಯಮದ ವೀಕ್ಷಕರು)ರನ್ನು ರೋಚಕಗೊಳಿಸುತ್ತದೆ. ಯಾವುದೇ ಸಂಸ್ಕೃತಿ ಇಲ್ಲಾ ನಾಗರಿಕತೆಯಲ್ಲಿ ಒಂದು ವಿಷಯವಾಗಿ ಒಂದೇ ಅಭಿಪ್ರಾಯವಿರಲಾರದು. ಉದಾಹರಣೆಗೆ ಇಸ್ಲಾಂ ಹಾಗೂ ಪ್ರಜಾಸತ್ತೆಯನ್ನು ತೆಗೆದುಕೊಳ್ಳಬಹುದು. ಎಲ್ಲ ಮುಸ್ಲಿಂ ದೇಶಗಳಲ್ಲಿ ಬಹುಸಂಖ್ಯಾತರ ಅಭಿಪ್ರಾಯ ಪ್ರಜಾಪ್ರಭುತ್ವದ ಪರವಾಗಿರುತ್ತದೆ. ಆದಾಗ್ಯೂ ಹಲವಾರು ಮುಸ್ಲಿಂ ದೇಶಗಳಲ್ಲಿ ಅಮೆರಿಕಾದ ಮೂಲಕ ಇಲ್ಲಾ ಬೇರೆ ಮಾರ್ಗದ ಮೂಲಕ ಅಧಿಕಾರ ಗಿಟ್ಟಿಸಿಕೊಂಡ ಸರ್ವಾಧಿಕಾರಿಗಳಿದ್ದಾರೆ. ಆದರೆ ಮಾಧ್ಯಮ ಹೆಚ್ಚಿನ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವಕ್ಕೆ ಅಡ್ಡಿಯಾಗಿರುವುದು ಇಸ್ಲಾಂ ಎನ್ನುವ ತೀರ್ಮಾನಕ್ಕೆ ಬಂದಿದೆ.

ಅದೇ ರೀತಿ ಲ್ಯಾಟಿನ್ ಅಮೆರಿಕಾದಲ್ಲೂ ಸರ್ವಾಧಿಕಾರಿ ಪ್ರಭುತ್ವಗಳಿವೆ. ಆದರೆ ಅದನ್ನು ಧರ್ಮದೊಂದಿಗೆ ತಳುಕು ಹಾಕುವುದಿಲ್ಲ. ಕಾರಣ ಲ್ಯಾಟಿನ್ ಅಮೆರಿಕಾದ ಧರ್ಮ ಕೆಥೊಲಿಕ್ ಕ್ರಿಶ್ಚಿಯನ್ ಧರ್ಮ. ಇದೇ ಮಾತು ಭಯೋತ್ಪಾದನೆಗೆ ಅನ್ವಯಿಸುತ್ತದೆ. ಒಂದು ಮುಸ್ಲಿಂ ಸಂಘಟನೆ ಭಯೋತ್ಪಾದಕ ದಾಳಿ ನಡೆಸಿದರೆ ತಕ್ಷಣ ಅದನ್ನು ಇಸ್ಲಾಮಿಗೆ ತಳುಕು ಹಾಕಲಾಗುತ್ತದೆ. ಅಂತಹದೇ ದಾಳಿ ಸ್ಪೇನ್ ಇಲ್ಲಾ ಐರ್ಲಂಡ್‌ನಲ್ಲಿ ನಡೆದರೆ ಅದಕ್ಕೆ ಧರ್ಮ ಕಾರಣವಾಗುವುದಿಲ್ಲ. ಕಾರಣ ಅಲ್ಲಿಯ ಧರ್ಮ ಕ್ರಿಶ್ಚಿಯನ್ ಧರ್ಮವಾಗಿರುವುದು.

ಹೀಗೆ ಮಾಧ್ಯಮದ ಪೂರ್ವಗ್ರಹ ಹಾಗೂ ಪಕ್ಷಪಾತದ ದೃಷ್ಟಿಕೋನವು, ಇಸ್ಲಾಂ ಹಿಂಸಾತ್ಮಕ ಹಾಗೂ ಜಿಹಾದಿ ಧರ್ಮವಾಗಿದೆ ಎನ್ನುವ ಅಭಿಪ್ರಾಯವನ್ನು ವಿಶ್ವದಾದ್ಯಂತ ಸೃಷ್ಟಿಸುತ್ತದೆ. ಅದು ಸಂಪೂರ್ಣವಾಗಿ ಶಾಂತಿಯುತವಾದ ಹಾಗೂ ಹಿಂಸಾ ಪ್ರವೃತ್ತಿಯನ್ನು ಕಟುವಾಗಿ ಟೀಕಿಸುವ ಇಸ್ಲಾಮಿನ ಇತರ ಹಲವಾರು ಪರಂಪರೆಗಳ ಅಧ್ಯಯನ ಮಾಡುವ ಗೊಡವೆಗೇ ಹೋಗುವುದಿಲ್ಲ. ಉದಾಹರಣೆಗೆ ಸೂಫಿ ಇಸ್ಲಾಮಿಗೆ ಎಂದೂ ಮಹತ್ವ ನೀಡಲಾಗಿಲ್ಲ. ಒಂದು ವಿಶಿಷ್ಟ ಧರ್ಮವನ್ನು ಗುರಿಯಾಗಿಸಿಕೊಳ್ಳಲಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಪ್ರಾಮಾಣಿಕವಾಗಿ ತಪ್ಪು ತಿಳಿವಳಿಕೆಯಿಂದ ಹೀಗಾಗುವ ಸಾಧ್ಯತೆ ಇದೆ. ಆ ಮಟ್ಟಿಗೆ ಸಂವಾದ ಪ್ರಯೋಜನಕಾರಿಯಾಗಬಹುದು. ಹೀಗೆ ಸರಿಯಾದ ತಿಳಿವಳಿಕೆ ಹಾಗೂ ಭಿನ್ನಾಭಿಪ್ರಾಯಗಳ ಸಾಧ್ಯತೆಯನ್ನು ಪ್ರೋತ್ಸಾಹಿಸುವ ಅಂತರ್‌ನಾಗರಿಕತೆಯ ಸಂವಾದವನ್ನು ನಡೆಸುವುದಕ್ಕೆ ಕೆಲವು ವಿದ್ವಾಂಸರು ಹಾಗೂ ಶಾಂತಿ ಸ್ಥಾಪನೆಯ ಕಾರ್ಯಕರ್ತರು ಬದ್ಧರಾಗಬೇಕು. ಈ ಸಂವಾದವು ಬುದ್ಧಿಜೀವಿಗಳು, ಹೋರಾಟಗಾರರು, ಮಾಧ್ಯಮ ಜನರು ಹಾಗೂ ವಿಶ್ವಸಂಸ್ಥೆ ಮೂಲಕ ರಾಜ್ಯ -ಹೀಗೆ ವಿಭಿನ್ನ ಹಂತಗಳಲ್ಲಿ ನಡೆಯಬೇಕು. ಇಂತಹದೊಂದು ಸಂವಾದ ಅಂತರ್‌ನಾಗರಿಕತೆಯ ಉದ್ವೇಗಗಳನ್ನು ಶಮನಗೊಳಿಸುವಲ್ಲಿ ತುಂಬ ಸಹಕಾರಿಯಾಗಬಲ್ಲದು ಹಾಗೂ 'ಅನ್ಯ'ನನ್ನು ಮತ್ತು ಅನ್ಯನ ನಾಗರಿಕತೆಯ ಒತ್ತಡಗಳನ್ನು ಗ್ರಹಿಸಿಕೊಳ್ಳುವುದಕ್ಕೆ ಪ್ರೇರಕವಾಗಬಲ್ಲದು. ■

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab

Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, AUGUST 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)

When a Problem is too big to solve but too important to ignore.

Malnutrition is one of the largest problems facing our country.

40% of the world's malnutrition manifests in India.



We at Pristine Organics reach low cost nutrition products to more than a lakh of malnourished children and people living with HIV positive in collaboration with a network of 50 Non Governmental Organizations. We also help self help groups and NGO's produce affordable local nutritional solutions for vulnerable segments.

PRISTINE ORGANICS

Join hands to tackle malnutrition a national shame

Contact- Akshata 9538898016 | Email - akshatha@pristineorganics.com